ಮಂಗಳವಾರ, ಮಾರ್ಚ್ 28, 2023 | ₹ 6.00

● www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರತಿಭಟನೆ

ಅದಾನಿ ಪ್ರಕರಣದ ತನಿಖೆಗೆ ಆಗ್ರಹಿಸಿ ನವದೆಹಲಿಯ ವಿಜಯಚೌಕ್‌ನಲ್ಲಿ ನಡೆದ ಪ್ರತಿಭಟನೆಯಲ್ಲಿ ಡಿಎಂಕೆ ಸಂಸದೆ ಕನಿಮೋಳಿ ಕಪ್ಪು ಬಟ್ಟೆ ಧರಿಸಿ ಭಾಗವಹಿಸಿದ್ದರು

ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನಮಂತ್ರಿಗಳು



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

"ಪಿಎಂ–ಮಿತ್ರ ಮೆಗಾ ಜವಳಿ ಪಾರ್ಕ್‌ಗಳು 5F (Farm ನಿಂದ Fibre ನಿಂದ Factory ನಿಂದ Fashion ನಿಂದ Foreign) ಪರಿಕಲ್ಪನೆಗೆ ಅನುಗುಣವಾಗಿ ಜವಳಿ ವಲಯವನ್ನು ಉತ್ತೇಜಿಸುತ್ತವೆ."

ಡಬಲ್ ಇಂಜಿನ್ ಸರ್ಕಾರದಿಂದ ಜವಳಿ ಕ್ಷೇತ್ರದಲ್ಲಿ ನೂತನ ಕ್ರಾಂತಿ

- ಪ್ರಧಾನಮಂತ್ರಿಯವರ ಮೆಗಾ ಇಂಟಿಗ್ರೇಟೆಡ್ ಟೆಕ್ಸ್‌ಟೈಲ್ ರೀಜನ್ ಮತ್ತು ಅಪೇರಲ್ ಪಾರ್ಕ್ (ಪಿಎಂ-ಮಿತ್ರಾ) ಅನ್ನು ಕಲಬುರಗಿಯಲ್ಲಿ 1000 ಎಕರೆ ಪ್ರದೇಶದಲ್ಲಿ ರೂ. 1800 ಕೋಟಿ ವೆಚ್ಚದಲ್ಲಿ ಸ್ಥಾಪಿಸಲಾಗುತ್ತಿದೆ.
- ರೂ. 10,000 ಕೋಟಿ ಬಂಡವಾಳ ಹೂಡಿಕೆಯ ನಿರೀಕ್ಷೆ ಹೊಂದಿರುವ ಈ ಮಹತ್ತರ ಯೋಜನೆಯು ಕಲ್ಯಾಣ ಕರ್ನಾಟಕ ಪ್ರದೇಶದ ಒಂದು ಲಕ್ಷ ಯುವ ಜನತೆಗೆ ಉದ್ಯೋಗಾವಕಾಶ ಸೃಷ್ಟಿಸುವ ಜೊತೆಗೆ 5 ವರ್ಷಗಳಲ್ಲಿ ರೂ.1 ಲಕ್ಷ ಕೋಟಿ ಆದಾಯ ಗಳಿಸುವ ನಿರೀಕ್ಷೆಯಿದೆ.
- ಸದರಿ ಪಾರ್ಕ್ ನೂಲಿನಿಂದ ಫ್ಯಾಶನ್‌ವರೆಗೆ ಸಂಪೂರ್ಣ ಜವಳಿ ಮೌಲ್ಯ ಸರಣಿಯನ್ನು ಒಳಗೊಂಡಿದೆ. ಜೊತೆಗೆ ನೂಲುಗಾರಿಕೆ, ನೇಯ್ಗೆ ಮತ್ತು ತಾಂತ್ರಿಕ ಜವಳಿ ವಲಯಗಳಿಗೆ ವಿಶೇಷ ಒತ್ತು ನೀಡಿಕೆ.
- 'ಕಾರ್ಯಕ್ಕೆ ಹೆಚ್ಚು ಗಮನ ನೀಡಿಕೆ' ಪರಿಕಲ್ಪನೆ ಪ್ರವರ್ಧನೆಗೆ ಸ್ವಯಂ-ಸುಸಜ್ಜಿತ ಟೌನ್‌ಶಿಪ್ ಅನ್ನು ಪಾರ್ಕ್ ಹೊಂದಿರುವುದು.

ಪಿಎಂ-ಮಿತ್ರ ಪಾರ್ಕ್‌ಗೆ ಚಾಲನೆ

ಇವರಿಂದ

ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಪೀಯುಷ್ ಗೋಯಲ್
ಸನ್ಮಾನ್ಯ ವಾಣಿಜ್ಯ ಮತ್ತು ಕೈಗಾರಿಕೆ, ಗ್ರಾಹಕರ ವ್ಯವಹಾರಗಳು ಹಾಗೂ ಆಹಾರ ಮತ್ತು ಸಾರ್ವಜನಿಕ ವಿತರಣೆ ಮತ್ತು ಜವಳಿ ಸಚಿವರು, ಭಾರತ ಸರ್ಕಾರ

ಮಂಗಳವಾರ, 28ನೇ ಮಾರ್ಚ್ 2023 । ಬೆಳಿಗ್ಗೆ 10.00 ಗಂಟೆ । ಕಲಬುರಗಿ, ಕರ್ನಾಟಕ

ಘನ ಉಪಸ್ಥಿತಿ

ಡಾ. ಎಂ. ಮಲ್ಲಿಕಾರ್ಜುನ ಖರ್ಗೆ
ಮಾನ್ಯ ವಿರೋಧ ಪಕ್ಷದ ನಾಯಕರು, ರಾಜ್ಯಸಭೆ ಹಾಗೂ ಸಂಸದರು(ರಾಜ್ಯಸಭೆ), ಕಲಬುರಗಿ

ಶ್ರೀಮತಿ ದರ್ಶನ ವಿ. ಜರ್ದೋಶ್
ಮಾನ್ಯ ರೈಲ್ವೆ ಮತ್ತು ಜವಳಿ ಖಾತೆ ರಾಜ್ಯ ಸಚಿವರು, ಭಾರತ ಸರ್ಕಾರ

ಡಾ. ಮುರುಗೇಶ ಆರ್. ನಿರಾಣಿ
ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರು

ಶ್ರೀ ಶಂಕರ್ ಬ. ಪಾಟೀಲ್ ಮುನೇನಕೊಪ್ಪ
ಮಾನ್ಯ ಕೈಮಗ್ಗ ಮತ್ತು ಜವಳಿ ಹಾಗೂ ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು

ಭಾರತದಲ್ಲಿ ತಯಾರಿಕೆ - ವಿಶ್ವ ನಿರ್ಮಾಣಕ್ಕೆ ಆದ್ಯತೆ

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ವಾಗ್ದಾಳಿ

‘ಪ್ರಧಾನಿಯಿಂದ ಸಂವಿಧಾನ ಸಮಾಧಿ’

ಪ್ರಜಾವಾಣಿ ವಾರ್ತೆ

ಮೈಸೂರಿನಲ್ಲಿ ಸೋಮವಾರ ಸುದ್ದಿಗೋಷ್ಠಿ ನಡೆಸಿದ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ‘ಡೆಕ್ಕನ್ ಹೆರಾಲ್ಡ್’ ಪತ್ರಿಕೆಯನ್ನು ಪ್ರದರ್ಶಿಸಿದರು. ಶಾಸಕ ಜಿ.ಟಿ.ದೇವೇಗೌಡ ಇದ್ದಾರೆ

ಮೈಸೂರು: ‘ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರತಿನಿಧಿಸುವ ಶಿಗ್ಗಾವಿ ಕ್ಷೇತ್ರವಿರುವ ಹಾವೇರಿ ಸೇರಿದಂತೆ ರಾಜ್ಯದ 10 ಜಿಲ್ಲೆಗಳಲ್ಲಿ ಬಡತನ ಹಾಗೂ ಅಪೌಷ್ಟಿಕತೆ ಕಾಡುತ್ತಿದ್ದು, ಅದರ ನಿವಾರಣೆಗೆ ಕ್ರಮ ವಹಿಸದ ಪ್ರಧಾನಿ ನರೇಂದ್ರ ಮೋದಿ, ಜನರನ್ನಷ್ಟೇ ಅಲ್ಲ ಸಂವಿಧಾನವನ್ನೂ ಸಮಾಧಿ ಮಾಡುತ್ತಿದ್ದಾರೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಹರಿಹಾಯ್ದರು.

ಇಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ‘ಡೆಕ್ಕನ್ ಹೆರಾಲ್ಡ್’ನ ಸಂಪಾದಕೀಯವನ್ನು ಪ್ರಸ್ತಾಪಿಸಿದ ಅವರು, ‘ಅಪೌಷ್ಟಿಕತೆಯಿಂದ ನಾಡಿನ ಮಕ್ಕಳ ಬೆಳವಣಿಗೆ ಕುಂಠಿತಗೊಂಡಿದೆ. ಅದನ್ನು ಸರ್ಕಾರದ ವರದಿಯೇ ಹೇಳಿದೆ. ಮೋದಿ ಜನರ ಬಡತನ ಹೋಗಲಾಡಿಸಲು ಸರ್ಕಾರಕ್ಕೆ ಮಾರ್ಗದರ್ಶನ ನೀಡುವ ಬದಲಿಗೆ, ‘ಕಾಂಗ್ರೆಸ್ ನನ್ನನ್ನು ಸಮಾಧಿ ಮಾಡುತ್ತಿದೆ, ಕರ್ನಾಟಕದ ಜನರು ನನ್ನ ಜೀವ ಉಳಿಸಲಿದ್ದಾರೆ’ ಎಂಬ ಹೇಳಿಕೆ ನೀಡಿದ್ದಾರೆ’ ಎಂದು ಟೀಕಿಸಿದರು.

‘ಜನರಿಗೆ ಆತ್ಮಸ್ಥೈರ್ಯ ತುಂಬುವ ರಚನಾತ್ಮಕ ಕಾರ್ಯಕ್ರಮಗಳು ನಿಮ್ಮ ಬಳಿಯಿಲ್ಲ. ಪ್ರಧಾನಿಯು ಸಾರ್ವಜನಿಕವಾಗಿ ನೀಡುತ್ತಿರುವ ಹೇಳಿಕೆಗಳು ಸರಿ ಇಲ್ಲ’ ಎಂದು ವಾಗ್ದಾಳಿ ನಡೆಸಿದರು.

‘ನೆರೆ, ಅತಿವೃಷ್ಟಿಯಾದಾಗ ಕನ್ನಡಿಗರ ಸಂಕಷ್ಟ ಕೇಳಲು ಬರಲಿಲ್ಲ. ರೈತರ ಸಮಸ್ಯೆಗೆ ಪರಿಹಾರ ಕೊಡಲಿಲ್ಲ. ಬೆಳಗಾವಿಯಲ್ಲಿ ಮಹಾರಾಷ್ಟ್ರದ ಕಿಡಿಗೇಡಿಗಳು ಕನ್ನಡಿಗರ ಮೇಲೆ ದಬ್ಬಾಳಿಕೆ ಮಾಡಲು ಹೊರಟಾಗ ಪ್ರಧಾನಿಯು ಸೌಜನ್ಯದ ಹೇಳಿಕೆಯನ್ನೂ ನೀಡಲಿಲ್ಲ. ಈಗ ನಿಮಗೆ ಕನ್ನಡಿಗರ ಮತ ಬೇಕೆ? ರಾಜ್ಯದ ನೀರಾವರಿ ಯೋಜನೆಗಳ ಅನುಷ್ಠಾನಕ್ಕೆ, ನಮ್ಮ ಪಾಲಿನ ನೀರಿನ ಬಳಕೆಗೆ ಯಾವ ಅನುಕೂಲ ಮಾಡಿಕೊಟ್ಟಿದ್ದೀರಿ? ಮೇಕೆದಾಟು, ಮಹದಾಯಿ ಯೋಜನೆಯ ಕೆಲಸ ಆರಂಭಿಸಿದ್ದೀರಾ’ ಎಂದು ಕೇಳಿದರು.

‘ಶಂಕುಸ್ಥಾಪನೆ ಹಾಗೂ ಫಲಾನುಭವಿಗಳ ಸಮ್ಮೇಳನವನ್ನು ಸರ್ಕಾರದ ಹಣದಲ್ಲಿ ನಡೆಸಿ, ಬಿಜೆಪಿ ಬಾವುಟ ಹಾಗೂ ಚಿಹ್ನೆ ಬಳಸುತ್ತಿರುವುದು ಎಷ್ಟು ಸರಿ?’ ಎಂದು ಪ್ರಶ್ನಿಸಿದರು.

‘ಪಂಚರತ್ನ ಯಾತ್ರೆಯು ಏ.10ರವರೆಗೂ ಮುಂದುವರಿಯಲಿದೆ. ಮಾರ್ಚ್ 28ರಿಂದ ಬೆಂಗಳೂರು, ಮೈಸೂರು, ಚಾಮರಾಜನಗರದ ಎಲ್ಲ ತಾಲ್ಲೂಕುಗಳಲ್ಲೂ ನಡೆಯಲಿದೆ’ ಎಂದರು.

‘ಬಿಜೆಪಿಯದ್ದು ಒಡೆದು ಆಳುವ ನೀತಿ’

ಮೈಸೂರು: ‘ಮುಸ್ಲಿಮರ ಮೀಸಲಾತಿ ತೆಗೆದಿರುವುದು ಒಡೆದು ಆಳುವ ನೀತಿಯಾಗಿದೆ. ಮೀಸಲಾತಿ ರದ್ದುಪಡಿಸುವುದರಿಂದ ಮುಸ್ಲಿಮರು ಬೀದಿಗಿಳಿದು ಸಂಘರ್ಷಕ್ಕೆ ಎಡೆ ಮಾಡಿಕೊಟ್ಟರೆ, ಒಕ್ಕಲಿಗರು ಹಾಗೂ ಲಿಂಗಾಯತರ ಮತ ಪಡೆಯಬಹುದು. ಸಮಾಜದಲ್ಲಿ ಬೆಂಕಿ ಹಚ್ಚುವುದೇ ಬಿಜೆಪಿಯವರ ಉದ್ದೇಶ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು.

ಮುಖ್ಯಾಂಶಗಳು

- ನೆರೆಯಿಂದ ಸಂಕಷ್ಟದಲ್ಲಿದ್ದಾಗ ಬಾರದ ಪ್ರಧಾನಿ: ಟೀಕೆ
- ಸರ್ಕಾರಿ ಕಾರ್ಯಕ್ರಮದಲ್ಲಿ ಬಿಜೆಪಿ ಬಾವುಟ, ಚಿಹ್ನೆ ಬಳಕೆ: ಆಕ್ರೋಶ
- ಕಾಗದದ ಮೇಲಷ್ಟೇ ಸರ್ಕಾರದ ಯೋಜನೆಗಳು

‘ಸಿ.ಎಂ ವಿರುದ್ಧ ಸ್ಪರ್ಧೆಗೆ ಹಿಂದೇಟು ಹಾಕಲ್ಲ’

ವಿನಯ ಕುಲಕರ್ಣಿ

ಹಾವೇರಿ: ‘ಶಿಗ್ಗಾವಿ ಹಂಡ್ರೆಡ್ ಪರ್ಸೆಂಟ್ ಕಾಂಗ್ರೆಸ್ ಗೆಲ್ಲುವ ಕ್ಷೇತ್ರ. ಸಿಎಂ ವಿರುದ್ಧ ಸ್ಪರ್ಧೆಗೆ ಹಿಂದೇಟು ಹಾಕುವ ಪ್ರಶ್ನೆಯೇ ಇಲ್ಲ’ ಎಂದು ಮಾಜಿ ಸಚಿವ ವಿನಯ ಕುಲಕರ್ಣಿ ಸ್ಪಷ್ಟಪಡಿಸಿದರು.

‘ಶಿಗ್ಗಾವಿಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿರುದ್ಧ ವಿನಯ ಕುಲಕರ್ಣಿ ಸ್ಪರ್ಧಿಸಲಿದ್ದಾರೆ’ ಎನ್ನುವ ಚರ್ಚೆಯ ಬೆನ್ನಲ್ಲೇ ಸವಣೂರಿನ ದೊಡ್ಡ ಹುಣಸೆಮಠಕ್ಕೆ ಸೋಮವಾರ ಭೇಟಿ ನೀಡಿ ಸ್ವಾಮೀಜಿ ಆಶೀರ್ವಾದ ಪಡೆದು ಮಾಧ್ಯಮದವರೊಂದಿಗೆ ಮಾತನಾಡಿದರು.

‘ಹೈಕಮಾಂಡ್ ನನ್ನ ಜೊತೆ ಮಾತನಾಡಿದೆ. ಶಿಗ್ಗಾವಿಗೆ ನಾನು ಅರ್ಜಿ ಹಾಕಿಲ್ಲ. ಹೈಕಮಾಂಡ್ ಸ್ಪರ್ಧಿಸುವಂತೆ ಹೇಳಿದೆ. ಆದರೆ ನಾನು ಹೈಕಮಾಂಡ್ ಗೆ ಭರವಸೆ ಕೊಟ್ಟಿಲ್ಲ’ ಎಂದರು.

‘ಶಿಗ್ಗಾವಿ ಟಾರ್ಗೆಟ್ ಮಾಡ್ತಿಲ್ಲ. ಯಾವುದೇ ಕ್ಷೇತ್ರದಲ್ಲಿ ನಿಂತರೂ ರಾಜಕಾರಣ ಮಾಡುತ್ತೇವೆ. ಅಷ್ಟಕ್ಕೂ ನನಗೆ ನನ್ನ ಕ್ಷೇತ್ರವಿದೆ; ದುರಾಸೆ ಇಲ್ಲ’ ಎಂದು ಹೇಳಿದರು. ‘ನಾನು ಧಾರವಾಡಕ್ಕೆ ಹೋಗಲು ಸರ್ಕಾರ ಸಾಕಷ್ಟು ಅಡ್ಡಿಪಡಿಸಿದೆ. ಪ್ರಜಾಪ್ರಭುತ್ವದ ವ್ಯವಸ್ಥೆ ದಮನ ಆಗುತ್ತಿದೆ. ಇತ್ತೀಚಿನ ರಾಹುಲ್ ಗಾಂಧಿಯವರ ಮೇಲಿನ ಪ್ರಕರಣ ನೋಡಿದರೆ ರಾಜಕಾರಣ ಬೇಡವೆನಿಸುತ್ತಿದೆ. ಆದಾಗ್ಯೂ ನಮ್ಮ ಜನರಿಗಾಗಿ ರಾಜಕಾರಣ ಮಾಡಬೇಕಿದೆ’ ಎಂದರು.

ಶೃಂಗೇರಿ ಶಾಸಕ ಟಿ.ಡಿ.ರಾಜೇಗೌಡರಿಗೆ ಸೇರಿದ ಕುಕ್ಕರ್ • ಪ್ರಕರಣ ದಾಖಲು

₹35 ಲಕ್ಷ ಮೌಲ್ಯದ ಕುಕ್ಕರ್‌ಗಳ ವಶ

ಪ್ರಜಾವಾಣಿ ವಾರ್ತೆ

ನಾಗಮಂಗಲ (ಮಂಡ್ಯ ಜಿಲ್ಲೆ): ಶೃಂಗೇರಿ ಶಾಸಕ ಟಿ.ಡಿ.ರಾಜೇಗೌಡ ಅವರು ಮತದಾರರಿಗೆ ಹಂಚಲು ಸಾಗಿಸುತ್ತಿದ್ದರು ಎನ್ನಲಾದ ₹ 35 ಲಕ್ಷ ಮೌಲ್ಯದ, 1,595 ಕುಕ್ಕರ್‌ಗಳನ್ನು ಬೆಂಗಳೂರು– ಮೈಸೂರು ರಾಷ್ಟ್ರೀಯ ಹೆದ್ದಾರಿ, ಕದಬಹಳ್ಳಿ ಟೋಲ್ ಬಳಿ ಬಿಂಡಿಗನವಿಲೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಚೆಕ್‌ಪೋಸ್ಟ್ ಮೂಲಕ ಸಾಗುತ್ತಿದ್ದ ಕೆ.ಎ;51, ಎ.ಜಿ–4365 ಕಂಟೇನರ್ ತಪಾಸಣೆ ನಡೆಸಿದಾಗ ವಾಹನದ ತುಂಬೆಲ್ಲಾ ಕುಕ್ಕರ್‌ಗಳು ಪತ್ತೆಯಾದವು. ತಕ್ಷಣವೇ ಲಾರಿ ಹಾಗೂ ಕುಕ್ಕರ್‌ಗಳನ್ನು ಜಪ್ತಿ ಮಾಡಿ ಪ್ರಕರಣ ದಾಖಲು ಮಾಡಿದ್ದಾರೆ. ಶಾಸಕ ಟಿ.ಡಿ.ರಾಜೇಗೌಡ ಅವರು ಬಾಳೆಹೊನ್ನೂರಿನ ಕೃಷ್ಣ ಹಾರ್ಡ್‌ವೇರ್ ಮತ್ತು ಎಲೆಕ್ಟ್ರಿಕ್ ಅಂಗಡಿಯಿಂದ ಕುಕ್ಕರ್‌ಗಳನ್ನು ಖರೀದಿ ಮಾಡಿದ್ದರು ಎಂಬುದು ವಿಚಾರಣೆ ನಂತರ ಗೊತ್ತಾಗಿದೆ. ಎಲೆಕ್ಟ್ರಿಕ್ ಅಂಗಡಿ ಮಾಲೀಕ ಹಾಗೂ ಶಾಸಕ ಟಿ.ಟಿ.ರಾಜೇಗೌಡರ ವಿರುದ್ಧ ಪ್ರಕರಣ ದಾಖಲಾಗಿದೆ.

ನಾಗಮಂಗಲ ತಾಲ್ಲೂಕು ಬಿಂಡಿಗನವಿಲೆ ಪೊಲೀಸರು ಕುಕ್ಕರ್‌ಗಳಿರುವ ಕಂಟೇನರ್ ಅನ್ನು ಜಪ್ತಿ ಮಾಡಿರುವುದು

ಝಳಕಿ: ₹54.49 ಲಕ್ಷ ನಗದು ವಶ

ಚಡಚಣ (ವಿಜಯಪುರ): ಸಮೀಪದ ಝಳಕಿ ಗ್ರಾಮದ ರಾಷ್ಟ್ರೀಯ ಹೆದ್ದಾರಿಯಲ್ಲಿ ವಿಜಾಪುರದಿಂದ ಸೋಲಾಪುರಕ್ಕೆ ತೆರಳುತ್ತಿರುವ ಲಾರಿಯಲ್ಲಿ ದಾಖಲೆ ಇಲ್ಲದೆ ಸಾಗಿಸುತ್ತಿದ್ದ ₹54.49 ಲಕ್ಷ ನಗದು ವಶಪಡಿಸಿಕೊಳ್ಳಲಾಗಿದೆ ಎಂದು ಚಡಚಣ ಸಿಪಿಐ ಸಾಹೇಬಗೌಡ ಪಾಟೀಲ ತಿಳಿಸಿದ್ದಾರೆ.

ಲಾರಿ ಚಾಲಕ ಹಾಗೂ ಕ್ಲೀನರ್ ಅವರನ್ನು ವಿಚಾರಣೆಗೆ ಒಳಪಡಿಸಲಾಗಿದೆ. ಝಳಕಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

₹9.40 ಲಕ್ಷ ವಶ: ವಿಜಯಪುರ-ಹುಬ್ಬಳ್ಳಿ ರಾಷ್ಟ್ರೀಯ ಹೆದ್ದಾರಿ 218ರ ಕೃಷ್ಣಾ ನದಿ ಸೇತುವೆ ಬಳಿ ಚೆಕ್ ಪೋಸ್ಟ್‌ನಲ್ಲಿ ಕಳೆದ ಎರಡು ದಿನಗಳಲ್ಲಿ ದಾಖಲೆಗಳಿಲ್ಲದೇ ಒಯ್ಯಲಾಗುತ್ತಿದ್ದ ಒಟ್ಟು ₹9.40 ಲಕ್ಷ ಹಣವನ್ನು ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದಾರೆ. ಭಾನುವಾರ, ಬಸ್‌ನಲ್ಲಿ ವ್ಯಕ್ತಿಯೊಬ್ಬರು ದಾಖಲೆಗಳಿಲ್ಲದೇ ಒಯ್ಯುತ್ತಿದ್ದ ₹4.40 ಲಕ್ಷ ನಗದು ಹಾಗೂ ದಾಖಲೆಗಳಿಲ್ಲದೇ ಕಾರಿನಲ್ಲಿ ಒಯ್ಯಲಾಗುತ್ತಿದ್ದ ₹5 ಲಕ್ಷ ಹಣವನ್ನು ಸೋಮವಾರ ವಶಪಡಿಸಿಕೊಂಡಿದ್ದಾರೆ.

ಗೋವಾ ಮದ್ಯ ವಶ (ಜೊಯಿಡಾ ವರದಿ): ಗೋವಾದಿಂದ ಅಕ್ರಮವಾಗಿ ಸೀಬರ್ಡ್ ಬಸ್ ನಲ್ಲಿ ಬೆಂಗಳೂರಿಗೆ ಸಾಗಿಸುತ್ತಿದ್ದ ಸುಮಾರು 319 ಲೀಟರ್ ಮದ್ಯವನ್ನು ಭಾನುವಾರ ತಡರಾತ್ರಿ ತಾಲ್ಲೂಕಿನ ಅನಮೋಡ ಅಬಕಾರಿ ತನಿಖಾ ಠಾಣೆ ಅಧಿಕಾರಿಗಳು ವಶಪಡಿಸಿಕೊಂಡಿದ್ದು ಚಾಲಕ ಪರಶುರಾಮ ಕುರಿ, ಕುಮಾರ್ ಹಾಗೂ ಮನು ಕೆ. ಬಿ ಎಂಬುವವರನ್ನು ಬಂಧಿಸಿದ್ದಾರೆ.

ಸಿ.ಟಿ.ರವಿ ಭಾವಚಿತ್ರದ ಕ್ಯಾಲೆಂಡರ್, ಮದ್ಯದ ಟೆಟ್ರಾ ಪ್ಯಾಕ್, ಕತ್ತಿ ಕಾರಿನಲ್ಲಿ ಪತ್ತೆ

ಚಿಕ್ಕಮಗಳೂರು: ನಗರದ ಎಐಟಿ ವೃತ್ತದ ಸಮೀಪ ಭಾನುವಾರ ರಾತ್ರಿ ಅಪಘಾತಕೀಡಾಗಿದ್ದ ಕಾರಿನಲ್ಲಿ ಶಾಸಕ ಸಿ.ಟಿ.ರವಿ ಅವರ ಭಾವಚಿತ್ರದ ಕ್ಯಾಲೆಂಡರ್‌ಗಳು, ಮದ್ಯದ ಟೆಟ್ರಾ ಪ್ಯಾಕ್‌ಗಳು, ಕತ್ತಿ (ಲಾಂಗ್) ಸಿಕ್ಕಿವೆ.

ಚಾಲಕ ಮಂಜುನಾಥ, ಕಾರು ಹಾಗೂ ಅದರಲ್ಲಿಯ ವಸ್ತುಗಳನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾರು ಮತ್ತು ಜೀಪು ಡಿಕ್ಕಿಯಾಗಿ ಅಪಘಾತ ಸಂಭವಿಸಿದೆ. ಹಾನಿಗೀಡಾಗಿದ್ದ ಕಾರನ್ನು ಪಕ್ಕಕ್ಕೆ ತಳ್ಳುವಾಗ ಕಾರಿನಲ್ಲಿ ಮದ್ಯದ ಟೆಟ್ರಾ ಪ್ಯಾಕ್, ಕ್ಯಾಲೆಂಡರ್, ಕತ್ತಿ, ಬಿಜೆಪಿ ಕರಪತ್ರಗಳು ಕಾಣಿಸಿವೆ. ಘಟನಾ ಸ್ಥಳಕ್ಕೆ ಬಂದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಚ್‌.ಪಿ.ಮಂಜೇಗೌಡ, ಇತರರು ಬಿಜೆಪಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಸಿ.ಟಿ.ರವಿ ಅವರನ್ನು ಬಂಧಿಸಬೇಕು ಎಂದು ಒತ್ತಾಯಿಸಿದರು.

‘ಕಾರು ಚಾಲಕನನ್ನು ವಶಕ್ಕೆ ಪಡೆಯಲಾಗಿದೆ. ತನಿಖೆ ನಡೆಯುತ್ತಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಚಿಕ್ಕಮಗಳೂರಿನ ಎಐಟಿ ವೃತ್ತದ ಸಮೀಪ ಅಪಘಾತಕ್ಕೀಡಾದ ಕಾರಿನಲ್ಲಿದ್ದ ಕ್ಯಾಲೆಂಡರ್, ಮದ್ಯದ ಟೆಟ್ರಾ ಪ್ಯಾಕ್‌ಗಳು, ಕತ್ತಿ

‘ಜನವರಿಯಲ್ಲಿ ಹೊಸ ವರ್ಷದ ಕ್ಯಾಲೆಂಡರ್ ಅನ್ನು ಹಲವರಿಗೆ ನೀಡಿದ್ದೆವು. ಅದನ್ನು ಅವರು ಇಟ್ಟುಕೊಂಡಿರಬಹುದು. ಕಾರಿನಲ್ಲಿ ಸಿಕ್ಕಿರುವ ವಸ್ತುಗಳಿಗೂ ನನಗೂ ಸಂಬಂಧ ಇಲ್ಲ’ ಎಂದು ಶಾಸಕ ಸಿ.ಟಿ.ರವಿ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

₹22 ಲಕ್ಷಕ್ಕೂ ಅಧಿಕ ಮೌಲ್ಯದ ಟೀ ಶರ್ಟ್ ವಶಕ್ಕೆ

ಪ್ರಜಾವಾಣಿ ವಾರ್ತೆ

ಮುದ್ದೇಬಿಹಾಳ: ತಾಲ್ಲೂಕಿನ ಯರಗಲ್ಲದಲ್ಲಿರುವ ಬಾಲಾಜಿ ಸಕ್ಕರೆ ಕಾರ್ಖಾನೆ ಗೋದಾಮಿನಲ್ಲಿ ಸಂದೇಹಾಸ್ಪದವಾಗಿ ಶೇಖರಿಸಿದ್ದ ಲಕ್ಷಾಂತರ ರೂಪಾಯಿ ಮೌಲ್ಯದ ಟೀ ಶರ್ಟ್ ಹಾಗೂ ಗೋಡೆ ಗಡಿಯಾರಗಳನ್ನು ಚುನಾವಣಾ ಅಧಿಕಾರಿಗಳು ಸೋಮವಾರ ಸಂಜೆ ವಶಕ್ಕೆ ಪಡೆದಿದ್ದಾರೆ.

ದಾಳಿಯಲ್ಲಿ ₹22 ಲಕ್ಷ ಮೌಲ್ಯದ ರಶೀದಿ ಸಿಕ್ಕಿದ್ದು, ಸರಕಿನ ಮೌಲ್ಯ ಇನ್ನೂ ಸ್ಪಷ್ಟವಾಗಿ ಗೊತ್ತಾಗಬೇಕಿದೆ. ಇವುಗಳ ಮೇಲೆ ಮಾಜಿ ಸಚಿವ ಎಸ್‌. ಆರ್‌.ಪಾಟೀಲರ ಭಾವಚಿತ್ರ, ಹೆಸರಿವೆ. ಪಾಟೀಲರು ದೇವರ ಹಿಪ್ಪರಗಿ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಾರೆ ಎಂಬ ವದಂತಿ ಹಬ್ಬಿದೆ. ಹೀಗಾಗಿ ಮತದಾರರಿಗೆ ಹಂಚಲ ಸಂಗ್ರಹಿಸಲಾಗಿತ್ತು ಎನ್ನಲಾಗಿದೆ.

ಜೆಡಿಎಸ್ ಕಿರುಹೊತ್ತಿಗೆಯಲ್ಲಿ ಭವಾನಿ ಭಾವಚಿತ್ರ

ರಾಜಕೀಯ ವಲಯದಲ್ಲಿ ಬಿರುಸಿನ ಚರ್ಚೆ

ಪ್ರಜಾವಾಣಿ ವಾರ್ತೆ

ಹಾಸನ: ಜೆಡಿಎಸ್ ಟಿಕೆಟ್ ಗೊಂದಲ ಮುಂದುವರಿದಿರುವ ನಡುವೆ ಜಿಲ್ಲೆಯ ಅಭಿವೃದ್ಧಿ ಕುರಿತು ಪಕ್ಷದಿಂದ ಬಿಡುಗಡೆ ಮಾಡಲಾಗಿರುವ ಕಿರುಹೊತ್ತಿಗೆಯಲ್ಲಿ ಭವಾನಿ ರೇವಣ್ಣ ಅವರ ಭಾವಚಿತ್ರ ಇರುವುದು ತೀವ್ರ ಚರ್ಚೆಗೆ ಗ್ರಾಸವಾಗಿದೆ.

ಈ ಕಿರುಹೊತ್ತಿಗೆಯನ್ನು ಜಿಲ್ಲೆಯ ಏಳೂ ವಿಧಾನಸಭಾ ಕ್ಷೇತ್ರಗಳಲ್ಲಿ ಚುನಾವಣಾ ಪ್ರಚಾರಕ್ಕೆ ಬಳಸಲಾಗುತ್ತಿದೆ. ಇದರಲ್ಲಿ ಜಿಲ್ಲೆಯ ಕ್ಷೇತ್ರಗಳಲ್ಲಿ ಸ್ಪರ್ಧಿಸಲಿರುವ ಜೆಡಿಎಸ್ ಅಭ್ಯರ್ಥಿಗಳ ಭಾವಚಿತ್ರಗಳಿವೆ. ಹೊಳೆನರಸೀಪುರದ ಎಚ್‌.ಡಿ. ರೇವಣ್ಣ, ಬೇಲೂರಿನ ಕೆ.ಎಸ್. ಲಿಂಗೇಶ್, ಶ್ರವಣಬೆಳಗೊಳ ಕ್ಷೇತ್ರದ ಸಿ.ಎನ್. ಬಾಲಕೃಷ್ಣ, ಸಕಲೇಶಪುರ ಕ್ಷೇತ್ರದ ಎಚ್‌.ಕೆ. ಕುಮಾರಸ್ವಾಮಿ, ಈಗಾಗಲೇ ಘೋಷಿಸಿರುವ ಅರಕಲಗೂಡು ಕ್ಷೇತ್ರದ ಎ. ಮಂಜು, ಅರಸೀಕೆರೆ ಕ್ಷೇತ್ರದ ಬಾಣಾವರ ಅಶೋಕ್ ಅವರ ಚಿತ್ರಗಳಿವೆ. ಇದರ ಜೊತೆಗೆ ಭವಾನಿ ರೇವಣ್ಣ ಅವರ ಚಿತ್ರವನ್ನೂ ಪ್ರಕಟಿಸಲಾಗಿದೆ.

ಜೆಡಿಎಸ್ ಬಿಡುಗಡೆ ಮಾಡಿರುವ ಕಿರುಹೊತ್ತಿಗೆ

ಈ ಬಗ್ಗೆ ಪ್ರತಿಕ್ರಿಯಿಸಿದ ಶಾಸಕ ಎಚ್‌. ಡಿ. ರೇವಣ್ಣ, ‘ಭವಾನಿ ಅವರು ಹಿಂದೆ ಜಿಲ್ಲಾ ಪಂಚಾಯಿತಿ ಆರೋಗ್ಯ ಮತ್ತು ಶಿಕ್ಷಣ ಸ್ಥಾಯಿ ಸಮಿತಿ ಅಧ್ಯಕ್ಷರಾಗಿ ಉತ್ತಮ ಕೆಲಸ ಮಾಡಿದ್ದರು. ಎಸ್ಸೆಸ್ಸೆಲ್ಸಿ ಫಲಿತಾಂಶದಲ್ಲಿ ಹಾಸನ ಜಿಲ್ಲೆಯನ್ನು ರಾಜ್ಯದಲ್ಲಿಯೇ ಮೊದಲ ಸ್ಥಾನಕ್ಕೆ ಕೊಂಡೊಯ್ದಿದ್ದರು. ಆರೋಗ್ಯ ಇಲಾಖೆಯಲ್ಲಿ ಸಹ ಜನ ಮೆಚ್ಚುಗೆಯ ಕೆಲಸವನ್ನು ಮಾಡಿದ್ದಾರೆ. ಹಾಗಾಗಿ ಅವರ ಫೋಟೊ ಹಾಕಲಾಗಿದೆ ಅಷ್ಟೇ’ ಎಂದು ತಿಳಿಸಿದರು.

ಪುಸ್ತಕದಲ್ಲಿ ಬಾಣಾವರ ಅಶೋಕ್ ಹಾಗೂ ಎ. ಮಂಜು ಭಾವಚಿತ್ರ ಇರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ಈ ಇಬ್ಬರೂ ಅಭ್ಯರ್ಥಿಗಳನ್ನು ಈಗಾಗಲೇ ಎಚ್‌.ಡಿ. ಕುಮಾರಸ್ವಾಮಿ ಘೋಷಣೆ ಮಾಡಿದ್ದಾರೆ. ಹೀಗಾಗಿ ಹಾಕಲಾಗಿದೆ. ಎಚ್‌.ಡಿ.ದೇವೇಗೌಡರು ಸೇರಿದಂತೆ ಎಲ್ಲ ನಾಯಕರೂ ಚರ್ಚಿಸಿ ಉಳಿದ ಕ್ಷೇತ್ರಗಳ ಅಭ್ಯರ್ಥಿಗಳನ್ನು ಆಯ್ಕೆ ಮಾಡುತ್ತೇವೆ’ ಎಂದರು.

ಯುವ ಮತದಾರರ ಸೆಳೆಯುವ ಹೊಣೆ ರಕ್ಷ ರಾಮಯ್ಯಗೆ

ಬೆಂಗಳೂರು: ಮೊದಲ ಬಾರಿಗೆ ಮತದಾನ ಮಾಡುತ್ತಿರುವ ಯುವ ಸಮೂಹವನ್ನು ಸೆಳೆಯಲು ರಾಷ್ಟ್ರೀಯ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಎಂ.ಎಸ್.ರಕ್ಷ ರಾಮಯ್ಯ ಅವರಿಗೆ ಕಾಂಗ್ರೆಸ್ ಹೈಕಮಾಂಡ್ ಜವಾಬ್ದಾರಿ ನೀಡಿದೆ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಜೊತೆ ಸಮಾಲೋಚನೆ ನಡೆಸಿದ ಬಳಿಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರ ನಿರ್ದೇಶನದಂತೆ ರಕ್ಷ ರಾಮಯ್ಯ ಅವರಿಗೆ ಈ ಹೊಣೆ ನೀಡಲಾಗಿದೆ ಎಂದು ಎಐಸಿಸಿ ಕಾರ್ಯದರ್ಶಿ ಅಭಿಷೇಕ್ ದತ್ ತಿಳಿಸಿದ್ದಾರೆ.

ಕಾಂಗ್ರೆಸ್‌ಗೆ ಬೆಂಬಲ: ದಸಂಸ ಐಕ್ಯ ಹೋರಾಟ ಸಮಿತಿ ನಿರ್ಧಾರ

ಮೈಸೂರು: ‘ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಬೆಂಬಲ ನೀಡಲು ದಲಿತ ಸಂಘರ್ಷ ಸಮಿತಿಗಳ ಐಕ್ಯ ಹೋರಾಟ ಚಾಲನಾ ಸಮಿತಿ ನಿರ್ಧರಿಸಿದೆ’ ಎಂದು ಸಮಿತಿಯ ಮುಖಂಡ ಗುರುಪ್ರಸಾದ್ ಕೆರಗೋಡು ತಿಳಿಸಿದರು.

ಇಲ್ಲಿ ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ‘ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಆಶಯಗಳ ವಿರುದ್ಧವಾಗಿರುವ, ಜನವಿರೋಧಿ ಆಡಳಿತ ನೀಡುತ್ತಿರುವ ಬಿಜೆಪಿಯನ್ನು ತಿರಸ್ಕರಿಸುವಂತೆ ಜನರಲ್ಲಿ ಮನವಿ ಮಾಡಲಿದ್ದೇವೆ’ ಎಂದು ಹೇಳಿದರು.

‘ಡಾ.ಬಿ.ಆರ್. ಅಂಬೇಡ್ಕರ್ ಆರಂಭಿಸಿದ ರಿಪಬ್ಲಿಕ್ ಪಾರ್ಟಿ ಆಫ್ ಇಂಡಿಯಾದ (ಆರ್‌ಪಿಐ) ರಾಷ್ಟ್ರೀಯ ಕಾರ್ಯಾಧ್ಯಕ್ಷ ಡಾ.ಎಂ.ವೆಂಕಟಸ್ವಾಮಿ ಬಿಜೆಪಿ ಬೆಂಬಲಿಸುವುದಾಗಿ ಹೇಳಿರುವುದು ದುರಂತ ಮತ್ತು ಖಂಡನೀಯ. ಹೊಟ್ಟೆಪಾಡಿಗಾಗಿ ರಾಜಕಾರಣ ಮಾಡುವುದಾದರೆ ನೇರವಾಗಿ ಬಿಜೆಪಿ ಸೇರಲಿ’ ಎಂದು ತಿರುಗೇಟು ನೀಡಿದರು.

‘ರಾಜ್ಯ ಸರ್ಕಾರ ಒಳ ಮೀಸಲಾತಿ ಘೋಷಿಸಿ ದಲಿತರನ್ನು ವಂಚಿಸಿದೆ. ಮುಸ್ಲಿಮರ ಮೀಸಲಾತಿ ಹಿಂಪಡೆದಿರುವುದು ಸಂವಿಧಾನ ವಿರೋಧಿಯಾಗಿದೆ. ಇದರ ವಿರುದ್ಧ ದಮನಿತ, ಶೋಷಿತ, ಹಿಂದುಳಿದ ಸಮಾಜ ಒಗ್ಗೂಡಬೇಕು. ಸಾಂವಿಧಾನಿಕ ಹಕ್ಕು ಕಾಪಾಡಬೇಕಾದರೆ ಕಾಂಗ್ರೆಸ್ ಬೆಂಬಲಿಸಬೇಕು’ ಎಂದು ಕೋರಿದರು.

ದಸಂಸ ರಾಜ್ಯ ಸಂಚಾಲಕ ಡಿ.ಜಿ. ಸಾಗರ್, ಮುಖಂಡರಾದ ಮಾವಳ್ಳಿ ಶಂಕರ್, ಇಂದೂಧರ ಹೊನ್ನಾಪುರ, ಎನ್‌.ಮುನಿಸ್ವಾಮಿ, ಎನ್‌. ವೆಂಕಟೇಶ್, ಅರ್ಜುನ್ ಭದ್ರ, ಜಿಗಣಿ ಶಂಕರ್, ಬೆಟ್ಟಯ್ಯಕೋಟೆ, ಚುಂಚನಹಳ್ಳಿ ಮಲ್ಲೇಶ್, ಆಲಗೂಡು ಶಿವಕುಮಾರ್, ಕಲ್ಲಹಳ್ಳಿ ಕುಮಾರ್ ಇದ್ದರು.

ಬಿಜೆಪಿ ಅಭ್ಯರ್ಥಿಗಳ ಆಯ್ಕೆ ಕಸರತ್ತು ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭಾ ಚುನಾವಣೆಗೆ ಅಭ್ಯರ್ಥಿಗಳ ಆಯ್ಕೆಗೆ ಬಿಜೆಪಿ ಪ್ರಾಥಮಿಕ ಹಂತದ ಕಸರತ್ತು ಆರಂಭಿಸಿದೆ. ಕ್ಷೇತ್ರವಾರು ಜಿಲ್ಲಾ ಮಟ್ಟದಲ್ಲಿ ಹೆಸರುಗಳನ್ನು ಸೂಚಿಸಲು ಸೋಮವಾರ ರಾತ್ರಿ ಮಾರ್ಗಸೂಚಿ ಬಿಡುಗಡೆ ಮಾಡಿದೆ.

ಅಭ್ಯರ್ಥಿಗಳ ಆಯ್ಕೆಗೆ ಅನುಸರಿಸಬೇಕಾದ ಮಾನದಂಡ ಏನಿರಬೇಕು ಎಂದು ಸೂಚಿಸಲಾಗಿದೆ. ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಮತ್ತು ಪದಾಧಿಕಾರಿ ಹಾಗೂ ಕೇಂದ್ರ ನಾಯಕರು ಈ ಸಂಬಂಧ ಸುದೀರ್ಘ ಸಮಾಲೋಚನೆ ನಡೆಸಿದರು.

ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪ್ರಮುಖರ ಸಮಿತಿ ಸಭೆ ಅಭ್ಯರ್ಥಿಗಳ ಆಯ್ಕೆ ಸಂಬಂಧ ಚರ್ಚಿಸಿ 2–3 ಹೆಸರು ಕಳಿಸಬೇಕು. ರಾಜ್ಯ ಪ್ರಮುಖ ನಾಯಕರ ಸಭೆ ಪಟ್ಟಿಯನ್ನು ಅಂತಿಮಗೊಳಿಸಿ ಪಕ್ಷದ ರಾಷ್ಟ್ರೀಯ ಸಮಿತಿಗೆ ಕಳುಹಿಸಲಿದೆ.

ಅಲ್ಲದೇ, ಚುನಾವಣೆಯಲ್ಲಿ ಗೆಲ್ಲಬಲ್ಲ ಹಾಲಿ ಶಾಸಕರು ಮತ್ತು ಟಿಕೆಟ್‌ಗಾಗಿ ಹೆಚ್ಚಿನ ಸ್ಪರ್ಧೆ ಇಲ್ಲದ ಕ್ಷೇತ್ರಗಳ ಸುಮಾರು 130 ಕ್ಕೂ ಹೆಚ್ಚು ಸಂಭಾವ್ಯ ಅಭ್ಯರ್ಥಿಗಳ ಪಟ್ಟಿಯೊಂದನ್ನು ಈಗಾಗಲೇ ಸಿದ್ಧಪಡಿಸಿದ್ದು, ವಿಧಾನಸಭಾ ಚುನಾವಣಾ ದಿನಾಂಕ ಘೋಷಣೆ ಆದ ಬಳಿಕ ಪಟ್ಟಿ ಬಿಡುಗಡೆ ಮಾಡಲಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

‘ಭಾನುವಾರ ಅಮಿತ್ ಶಾ ಅವರು ಭಾಗವಹಿಸಿದ್ದ ಸಭೆಯಲ್ಲಿ ಟಿಕೆಟ್ ಹಂಚಿಕೆ ಬಗ್ಗೆ ಹೆಚ್ಚಿನ ಚರ್ಚೆ ನಡೆಯಲಿಲ್ಲ. ‘ಸಂಭಾವ್ಯ ಅಭ್ಯರ್ಥಿಗಳ ಪಟ್ಟಿಯನ್ನು ಕಳಿಸಿಕೊಡಿ. ನಾವೇ ಅಂತಿಮಗೊಳಿಸುತ್ತೇವೆ. ಪ್ರತಿಕೂಲ ಸನ್ನಿವೇಶ ಇದ್ದ ರಾಜ್ಯಗಳಲ್ಲೂ ಮತದಾರರ ಮನಗೆದ್ದು ಮತ್ತೆ ಅಧಿಕಾರ ಹಿಡಿಯುವಲ್ಲಿ ಯಶಸ್ವಿಯಾಗಿದ್ದೇವೆ. ಕರ್ನಾಟಕದಲ್ಲೂ ಮತ್ತೆ ಅಧಿಕಾರ ಹಿಡಿಯುವುದು ನಿಶ್ಚಿತ. ಈ ಬಗ್ಗೆ ಯಾವುದೇ ಸಂಶಯ ಬೇಡ. ಹೀಗಾಗಿ ಧೈರ್ಯದಿಂದ ಚುನಾವಣೆ ಎದುರಿಸಿ’ ಎಂದು ರಾಜ್ಯ ನಾಯಕರಿಗೆ ಸಲಹೆ ನೀಡಿದ್ದಾಗಿ ಮೂಲಗಳು ತಿಳಿಸಿವೆ.

ಈ ಬಾರಿ ಒಟ್ಟು ಸೀಟುಗಳಲ್ಲಿ ಶೇ 20 ರಷ್ಟು ಹೊಸಬರಿಗೆ ಟಿಕೆಟ್ ನೀಡಲು ತೀರ್ಮಾನಿಸಲಾಗಿದೆ. ಬೆಂಗಳೂರು ನಗರದಲ್ಲಿ ಪಕ್ಷ ಗೆಲ್ಲಬಹುದಾದ ಕಡೆಗಳಲ್ಲಿ ಪ್ರಭಾವಿ ಅಭ್ಯರ್ಥಿಗಳಿಲ್ಲದೇ ನಿರಂತರವಾಗಿ ಸೋಲುತ್ತಾ ಬಂದಿರುವ ಆಯ್ದ ಕ್ಷೇತ್ರಗಳಲ್ಲಿ ಈ ಬಾರಿ ಹೊಸಬರು ಮತ್ತು ಯುವಕರಿಗೆ ನೀಡುವ ಚಿಂತನೆ ನಡೆದಿದೆ ಎಂದು ಮೂಲಗಳು ತಿಳಿಸಿವೆ.

ಕಾಂಗ್ರೆಸ್: ಧರ್ಮಸಿಂಗ್ ಅಳಿಯ ಬಂಡಾಯ

ಪ್ರಜಾವಾಣಿ ವಾರ್ತೆ



ಚಂದ್ರಾ ಸಿಂಗ್

ಜನವಾಡ (ಬೀದರ್ ಜಿಲ್ಲೆ): ‘ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸುವೆ. ಬೆಂಬಲಿಗರ ಒತ್ತಾಸೆಯಿಂದ ಕಣಕ್ಕಿಳಿಯುವೆ. ಎಷ್ಟೇ ಒತ್ತಡ ಬಂದರೂ ನಿರ್ಧಾರ ಬದಲಿಸಲ್ಲ’ ಎಂದು ಕಾಂಗ್ರೆಸ್ ಮುಖಂಡ ಚಂದ್ರಾ ಸಿಂಗ್ ತಿಳಿಸಿದರು.

ಬೀದರ್ ತಾಲ್ಲೂಕಿನ ಕಮಠಾಣ ಹೊರವಲಯದಲ್ಲಿ ಸೋಮವಾರ ನಡೆದ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಹಾಗೂ ಬೆಂಬಲಿಗರ ಸಭೆಯಲ್ಲಿ ಮಾತನಾಡಿದ ಅವರು, ‘ಬೀದರ್ ದಕ್ಷಿಣ ಕ್ಷೇತ್ರದ ಅಭಿವೃದ್ಧಿಯೇ ನನ್ನ ಗುರಿ. ಕಾರ್ಯಕರ್ತರ ಏಳ್ಗೆ ಮತ್ತು ಕ್ಷೇತ್ರದ ಅಭಿವೃದ್ಧಿಗೆ ನಾನು ಬದ್ಧ’ ಎಂದರು.

‘ಮಾಜಿ ಮುಖ್ಯಮಂತ್ರಿ ದಿ.ಎನ್. ಧರ್ಮಸಿಂಗ್ ಅವರ ಅಳಿಯ ಎಂಬುದನ್ನೇ ನೆಪವಾಗಿಸಿಕೊಂಡು ನನಗೆ ಟಿಕೆಟ್ ನಿರಾಕರಿಸಲಾಗುತ್ತಿದೆ. ಅವರ ಅಳಿಯ ಎಂದು ಟಿಕೆಟ್ ಕೇಳುತ್ತಿಲ್ಲ. 12 ವರ್ಷ ಪಕ್ಷ ಸಂಘಟಿಸಿ ಟಿಕೆಟ್ ಕೇಳಿದ್ದೇನೆ. ಆದರೂ, ಕಾಂಗ್ರೆಸ್ ನಾಯಕರು ಟಿಕೆಟ್ ಮಾರಿಕೊಂಡಿದ್ದಾರೆ’ ಎಂದು ಅವರು ಆರೋಪಿಸಿದರು.

‘ಬೀದರ್ ದಕ್ಷಿಣ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರ ಶಕ್ತಿ ಏನು ಎಂಬುದನ್ನು ತೋರಿಸಬೇಕಿದೆ. ಕೂರಲು, ನಿಲ್ಲಲು, ನಡೆದಾಡಲು ಆಗದ ಅಶೋಕ ಖೇಣಿ ಈ ಬಾರಿ 5 ಸಾವಿರ ಮತಗಳನ್ನೂ ಪಡೆಯುವುದಿಲ್ಲ. ಎರಡು ಬಾರಿ ಸಚಿವರಾಗಿ ಮತ್ತು ಮೂರು ಬಾರಿ ಶಾಸಕರಾಗಿ ಬಂಡೆಪ್ಪ ಕಾಶೆಂಪುರ ಏನು ಮಾಡಿದ್ದಾರೆ’ ಎಂದು ಅವರು ಪ್ರಶ್ನಿಸಿದರು.

‘ಕೋವಿಡ್ ಬಂದಾಗ ಬಂಡೆಪ್ಪ ಖಾಶೆಂಪುರ ಮನೆ ಬಿಟ್ಟು ಹೊರಬರಲಿಲ್ಲ. ಅಶೋಕ ಖೇಣಿ ಅಮೆರಿಕದಲ್ಲಿ ಇದ್ದರು. ಬಿಜೆಪಿ ಕೇವಲ ಆಶ್ವಾಸನೆ ನೀಡುತ್ತದೆ. ಇಲ್ಲಿನ ಬಿಜೆಪಿ ಅಭ್ಯರ್ಥಿ ಆಗುವವರು ಬ್ರೋಕರ್ ಆಗಿ ಕೆಲಸ ಮಾಡುತ್ತಾರೆ’ ಎಂದು ಅವರು ಆರೋಪಿಸಿದರು.

ಏ.5ಕ್ಕೆ ಕೋಲಾರಕ್ಕೆ ರಾಹುಲ್ ಗಾಂಧಿ?

ಕೋಲಾರ: ಕಾಂಗ್ರೆಸ್ ನಡೆಸಲು ಉದ್ದೇಶಿಸಿರುವ ‘ಸತ್ಯಮೇವ ಜಯತೇ’ ಬೃಹತ್ ಸಮಾವೇಶದಲ್ಲಿ ಪಾಲ್ಗೊಳ್ಳಲು ರಾಹುಲ್ ಗಾಂಧಿ ಏ.5ಕ್ಕೆ ಕೋಲಾರಕ್ಕೆ ಭೇಟಿ ನೀಡಲಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

‘ರಾಹುಲ್ ಗಾಂಧಿ ಅವರ ಕೋಲಾರ ಭೇಟಿಯ ಬಗ್ಗೆ ಬೆಂಗಳೂರಿನಲ್ಲಿ ನಡೆದ ಸಭೆಯಲ್ಲಿ ಸಮಾಲೋಚನೆ ನಡೆದಿದೆ. ಸಮಾವೇಶದ ರೂಪುರೇಷೆಯ ಬಗ್ಗೆಯೂ ಚರ್ಚೆ ನಡೆದಿದೆ. ಸಭೆಯಲ್ಲಿ ಸ್ಥಳೀಯ ನಾಯಕರೂ ಭಾಗವಹಿಸಿದ್ದರು. ಈ ಬಗ್ಗೆ ಕೆಪಿಸಿಸಿ ಸದ್ಯದಲ್ಲೇ ಮಾಹಿತಿ ನೀಡಲಿದೆ’ ಎಂದು ಜಿಲ್ಲೆಯ ಶಾಸಕರೊಬ್ಬರು ‘ಪ್ರಜಾವಾಣಿ’ಗೆ ಹೇಳಿದರು. 2019ರ ಲೋಕಸಭೆ ಚುನಾವಣೆ ವೇಳೆ ಕೋಲಾರದಲ್ಲಿ ನಡೆದ ಸಭೆಯಲ್ಲಿ ನೀಡಿದ್ದ ಹೇಳಿಕೆಯಿಂದಾಗಿ ರಾಹುಲ್ ಗಾಂಧಿ ಅವರು ಎರಡು ವರ್ಷ ಶಿಕ್ಷೆಗೆ ಗುರಿಯಾಗಿದ್ದು, ಸಂಸತ್ ಸದಸ್ಯ ಸ್ಥಾನದಿಂದ ಅನರ್ಹರಾಗಿದ್ದಾರೆ.

ಹೀಗಾಗಿ, ಇದಕ್ಕೆ ತಿರುಗೇಟು ನೀಡಲು ಕೋಲಾರದಲ್ಲೇ ಬೃಹತ್ ಸಮಾವೇಶ ನಡೆಸುವ ಯೋಜನೆ ಇದೆ ಎನ್ನಲಾಗಿದೆ. ಜೊತೆಗೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ವರುಣಾ ಅಲ್ಲದೇ, ಕೋಲಾರದಲ್ಲೂ ಸ್ಪರ್ಧಿಸುವ ಇಂಗಿತ ವ್ಯಕ್ತಪಡಿಸಿರುವುದರಿಂದ ಈ ಸಮಾವೇಶ ನೆರವಾಗಲಿದೆ ಎಂದು ಮೂಲಗಳು ತಿಳಿಸಿವೆ.

ಅಭಿನವ ಚಾರುಕೀರ್ತಿ ಭಟ್ಟಾರಕ ನಾಮಕರಣ

ಶ್ರವಣಬೆಳಗೊಳ: ನೂತನ ಸ್ವಾಮೀಜಿ ಪಟ್ಟಾಭಿಷೇಕ

ಪ್ರಜಾವಾಣಿ ವಾರ್ತೆ

ಶ್ರವಣಬೆಳಗೊಳ (ಹಾಸನ ಜಿಲ್ಲೆ): ಇಲ್ಲಿನ ದಿಗಂಬರ ಜೈನ ಮಠದ ನೂತನ ಪೀಠಾಧ್ಯಕ್ಷರ ಪಟ್ಟಾಭಿಷೇಕ ಸೋಮವಾರ ನೆರವೇರಿತು. ಪಟ್ಟಾಭಿಷಿಕ್ತರಾದ ನೂತನ ಪೀಠಾಧ್ಯಕ್ಷರಿಗೆ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಎಂದು ನಾಮಕರಣ ಮಾಡಲಾಯಿತು.

ಭಾನುವಾರ ಬೆಳಿಗ್ಗೆಯಿಂದಲೇ ಶ್ರೀಮಠದಲ್ಲಿ ಗಣಧರವಲಯ ಆರಾಧನೆಯೊಂದಿಗೆ ಪೂಜಾ ವಿಧಿ-ವಿಧಾನಗಳು ಆರಂಭಗೊಂಡಿದ್ದವು. ಸೋಮವಾರ ಬೆಳಿಗ್ಗೆ ಸುಪ್ರಭಾತದೊಂದಿಗೆ ಆಗಮಕೀರ್ತಿ ಸ್ವಾಮೀಜಿಯವರಿಗೆ ಮಂಗಲ ಸ್ನಾನ, ಜಿನಮಂದಿರ ದರ್ಶನ, ಪಟ್ಟಬಂಧ, ಮಂಗಲ ಕಳಶಗಳ ಸ್ಥಾಪನೆ, ಜಪ, ಧ್ಯಾನ, ಸಕಲೀಕರಣ ನೆರವೇರಿದವು.

ಪಟ್ಟಾಭಿಷೇಕದ ಸಿಂಹಾಸನಾರೋಹಣ ಆಗುತ್ತಿದ್ದಂತೆ ಪಟ್ಟಣಶೆಟ್ಟರ ಮನೆತನದವರಾದ ಎಸ್‌.ಎ.ಸುದರ್ಶನ್ ಅವರು ನೂತನ ಶ್ರೀಗಳಿಗೆ ಪಟ್ಟದ ಉಂಗುರ, ಸುವರ್ಣಪಿಂಛಿ, ಶಿಖಾ ಮೊಹರು, ಸುವರ್ಣ ಪಾದುಕೆ ಅರ್ಪಿಸಿ ಪಾದಪೂಜೆ ನೆರವೇರಿಸಿದರು. ಪ್ರಶಸ್ತಿ ವಾಚನ, ಭಕ್ತಿಕಾಣಿಕೆ ಸಮರ್ಪಿಸಲಾಯಿತು.

ಆಶೀರ್ವಚನ ನೀಡಿದ ನೂತನ ಶ್ರೀಗಳು, ‘ಸಾವಿರಾರು ಮುನಿಗಳ ತಪಸ್ಸಿನ ಪವಿತ್ರ ಭೂಮಿಯಾಗಿರುವ ಇದು ಬಾಹುಬಲಿಯ ಸಾನ್ನಿಧ್ಯದಲ್ಲಿ ವಿಶ್ವಮೈತ್ರಿಯನ್ನು ಬಯಸುವ ಆದರ್ಶ ಕ್ಷೇತ್ರವಾಗಿದೆ. ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರು 54 ವರ್ಷ ನಿರಂತರವಾಗಿ ಸೇವೆ ಸಲ್ಲಿಸಿದ್ದಾರೆ. ಅವರು ಕಟ್ಟಿರುವ ಕನಸಿನ ಎಲ್ಲಾ ಸಂಸ್ಥೆಗಳನ್ನು ಚಾಚೂ ತಪ್ಪದೇ ಮುಂದುವರಿಸಿ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಯ ಸಂಕಲ್ಪ ಮಾಡುವೆ’ ತಿಳಿಸಿದರು.



ಶ್ರವಣಬೆಳಗೊಳದ ದಿಗಂಬರ ಜೈನ ಮಠದ ನೂತನ ಪೀಠಾಧಿಪತಿ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಅವರ ಪಟ್ಟಾಭಿಷೇಕ ಸೋಮವಾರ ನಡೆಯಿತು

> **ಎಲ್ಲರನ್ನೂ ಗೌರವದಿಂದ ನೋಡುವುದು ಮಾನವ ಧರ್ಮ**
>
> **ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ,** ಶ್ರವಣಬೆಳಗೊಳ ಮಠದ ನೂತನ ಸ್ವಾಮೀಜಿ

ಧರ್ಮಸ್ಥಳ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ನೂತನ ಶ್ರೀಗಳಿಗೆ ಪತ್ರದ ಮೂಲಕ ಶುಭ ಸಂದೇಶ ತಿಳಿಸಿದರು. ಮಧ್ಯಾಹ್ನ ನೂತನ ಶ್ರೀಗಳ ಪಲ್ಲಕ್ಕಿ ಉತ್ಸವ ನೆರವೇರಿತು.

ಕಾರ್ಕಳ ಮಠದ ಲಲಿತಕೀರ್ತಿ ಭಟ್ಟಾರಕ ಸ್ವಾಮೀಜಿ, ಕನಕಗಿರಿ ಜೈನ ಮಠದ ಭುವನಕೀರ್ತಿ ಭಟ್ಟಾರಕ ಸ್ವಾಮೀಜಿ, ಅರಹಂತಗಿರಿ ಮಠದ ಧವಲಕೀರ್ತಿ ಭಟ್ಟಾರಕ ಸ್ವಾಮೀಜಿ, ಕಂಬದಹಳ್ಳಿಯ ಭಾನುಕೀರ್ತಿ ಭಟ್ಟಾರಕ ಸ್ವಾಮೀಜಿ, ಮೂಡುಬಿದಿರೆ ಮಠದ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ, ಜಿನಕಂಚಿ ಮಠದ ಲಕ್ಷ್ಮಿಸೇನ ಭಟ್ಟಾರಕ ಸ್ವಾಮೀಜಿ, ವರೂರು ಮಠದ ಧರ್ಮಸೇನ ಭಟ್ಟಾರಕ ಸ್ವಾಮೀಜಿ, ಹೊಂಬುಜ ಮಠದ ಡಾ.ದೇವೇಂದ್ರಕೀರ್ತಿ ಭಟ್ಟಾರಕ ಸ್ವಾಮೀಜಿ, ಸೋಂದಾ ಮಠದ ಭಟ್ಟಾಕಲಂಕ ಭಟ್ಟಾರಕ ಸ್ವಾಮೀಜಿ, ಎನ್‌.ಆರ್‌.ಪುರ ಮಠದ ಲಕ್ಷ್ಮಿಸೇನ ಭಟ್ಟಾರಕ ಸ್ವಾಮೀಜಿ, ಲಕ್ಕವಳ್ಳಿ ಮಠದ ವೃಷಭಸೇನ ಭಟ್ಟಾರಕ ಸ್ವಾಮೀಜಿ, ನಾಂದಿಣಿ ಮಠದ ಜಿನಸೇನ ಭಟ್ಟಾರಕ ಸ್ವಾಮೀಜಿ, ಆರತಿಪುರ ಮಠದ ಸಿದ್ಧಾಂತಕೀರ್ತಿ ಭಟ್ಟಾರಕ ಸ್ವಾಮೀಜಿ, ಕೊಲ್ಹಾಪುರ ಮಠದ ಲಕ್ಷ್ಮಿಸೇನ ಭಟ್ಟಾರಕ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಸಂಕ್ಷಿಪ್ತ ಸುದ್ದಿ

ಗುಬ್ಬಿ ಶ್ರೀನಿವಾಸ್ ರಾಜೀನಾಮೆ ಅಂಗೀಕಾರ

ಬೆಂಗಳೂರು: ತುಮಕೂರು ಜಿಲ್ಲೆ ಗುಬ್ಬಿ ಕ್ಷೇತ್ರದ ಜೆಡಿಎಸ್ ಶಾಸಕ ಎಸ್‌.ಆರ್‌. ಶ್ರೀನಿವಾಸ್ (ವಾಸು) ಸೋಮವಾರ ಬೆಳಿಗ್ಗೆ ಶಾಸಕ ಸ್ಥಾನಕ್ಕೆ ನೀಡಿದ ರಾಜೀನಾಮೆ ಅಂಗೀಕಾರವಾಗಿದೆ.

ವಿಧಾನಸೌಧದಲ್ಲಿ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಅವರನ್ನು ಭೇಟಿ ಮಾಡಿ ರಾಜೀನಾಮೆ ಸಲ್ಲಿಸಿದರು. ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಅವರ ಜತೆ ಮುನಿಸಿಕೊಂಡಿದ್ದರು.

ರಾಜೀನಾಮೆ ಸಲ್ಲಿಕೆ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ‘31ರಂದು ಕಾಂಗ್ರೆಸ್ ಪಕ್ಷ ಸೇರಲಿದ್ದೇನೆ. ಜೆಡಿಎಸ್ ಶಾಸಕರಾದ ಕೆ.ಎಂ.ಶಿವಲಿಂಗೇಗೌಡ, ಎ.ಟಿ. ರಾಮಸ್ವಾಮಿ ಅವರೂ ಸೇರಲಿದ್ದಾರೆ’ ಎಂದು ಹೇಳಿದರು.

‘ಗುಬ್ಬಿ ಕ್ಷೇತ್ರದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ನನ್ನ ಜತೆಗಿದ್ದಾರೆ. ಒಗ್ಗಟಿನಿಂದ ಕೆಲಸ ಮಾಡಿ ಮತ್ತೆ ಗೆಲ್ಲುತ್ತೇವೆ. ಜೆಡಿಎಸ್ ಬಿಡಲು ನೋವಾಗಿದೆ. ಎಚ್‌.ಡಿ.ದೇವೇಗೌಡರು ಮಗನಂತೆ ನೋಡಿಕೊಂಡಿದ್ದರು’ ಎಂದು ತಿಳಿಸಿದರು.

ರೆಡ್ಡಿ ಹೊಸ ಪಕ್ಷಕ್ಕೆ ಫುಟ್‌ಬಾಲ್ ಚಿಹ್ನೆ, ಅನಾವರಣ

ಬೆಂಗಳೂರು: ತಮ್ಮ ನೇತೃತ್ವದ ನೂತನ ‘ಕಲ್ಯಾಣ ರಾಜ್ಯ ಪ್ರಗತಿ ಪಕ್ಷ’ಕ್ಕೆ (ಕೆಆರ್‌ಪಿಪಿ) ಕೇಂದ್ರ ಚುನಾವಣಾ ಆಯೋಗವು ಫುಟ್‌ಬಾಲ್ ಚಿಹ್ನೆ ನೀಡಿದೆ ಎಂದು ಪಕ್ಷದ ಅಧ್ಯಕ್ಷ ಜಿ.ಜನಾರ್ದನ ರೆಡ್ಡಿ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಪಕ್ಷದ ಪ್ರಣಾಳಿಕೆ ಬಿಡುಗಡೆ ಜತೆಯಲ್ಲೇ ಫುಟ್‌ಬಾಲ್ ಪ್ರತಿಕೃತಿಯನ್ನು ಅನಾವರಣಗೊಳಿಸಿ ಮಾತನಾಡಿದ ಅವರು, ‘ ಶತ್ರುಗಳು, ಸ್ನೇಹಿತರು, ರಾಜಕೀಯ ಪಕ್ಷದವರು ನನ್ನನ್ನು ಫುಟ್‌ಬಾಲ್‌ನಂತೆ ಆಡಿಸಿದ್ದರು. ಅದಕ್ಕಾಗಿಯೇ ಫುಟ್‌ಬಾಲ್ ಚಿಹ್ನೆಯನ್ನೇ ಪಡೆದುಕೊಂಡಿದ್ದೇನೆ. ಯಾವುದೇ ಪಕ್ಷದ ಜತೆಗೂ ಚುನಾವಣಾ ಪೂರ್ವ ಮೈತ್ರಿ ಮಾಡಿಕೊಂಡಿಲ್ಲ’ ಎಂದು ಹೇಳಿದರು.

ಜ.25ರಂದು ನೂತನ ಪಕ್ಷ ಘೋಷಿಸಲಾಗಿತ್ತು. ಈವರೆಗೆ 12 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಪ್ರಕಟಿಸಲಾಗಿದೆ. 50 ಕ್ಷೇತ್ರಗಳಲ್ಲಿ ಪಕ್ಷದ ಚಟುವಟಿಕೆಗಳು ನಡೆಯುತ್ತಿವೆ. ಶೀಘ್ರದಲ್ಲಿ 19 ಕ್ಷೇತ್ರಗಳ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡಲಾಗುವುದು. 30 ಕ್ಷೇತ್ರಗಳಲ್ಲಿ ಕೆಆರ್‌ಪಿಪಿ ಗೆಲುವು ನಿಶ್ಚಿತ ಎಂದರು.

ಪ್ರಣಾಳಿಕೆಯಲ್ಲಿ ಏನಿದೆ?: ಐದು ಎಕರೆಗಿಂತ ಕಡಿಮೆ ಜಮೀನು ಹೊಂದಿರುವ ರೈತರಿಗೆ ವಾರ್ಷಿಕ ₹15,000 ನೆರವು, ಐದು ಎಕರೆ ವರೆಗೆ ಜಮೀನು ಹೊಂದಿರುವ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಉಚಿತವಾಗಿ ಕೊಳವೆ ಬಾವಿ ಒದಗಿಸುವುದು, ವಸತಿ ರಹಿತ ಕುಟುಂಬಗಳಿಗೆ ಹೆಣ್ಣುಮಕ್ಕಳ ಹೆಸರಿನಲ್ಲಿ 2ಬಿಎಚ್‌ಕೆ ಮನೆ, ಆರ್ಥಿಕವಾಗಿ ದುರ್ಬಲ ವರ್ಗದ ಮಕ್ಕಳಿಗೆ ಸ್ನಾತಕೋತ್ತರ ಪದವಿವರೆಗೂ ಉಚಿತ ಶಿಕ್ಷಣದ ಭರವಸೆಗಳನ್ನು ನೀಡಲಾಗಿದೆ.

124 ಕಾಂಗ್ರೆಸ್ ಅಭ್ಯರ್ಥಿಗಳಿಗೆ ಗೆಲುವಿನ ‘ಪಾಠ’

ಬೆಂಗಳೂರು: ವಿಧಾನಸಭೆ ಚುನಾವಣೆಗೆ ಪಕ್ಷ ಟಿಕೆಟ್ ನೀಡಿರುವ 124 ಕ್ಷೇತ್ರಗಳ ಅಭ್ಯರ್ಥಿಗಳಿಗೆ ‘ಕೈ’ ನಾಯಕರು ಸೋಮವಾರ ಗೆಲುವಿಗೆ ಅನುಸರಿಸಬೇಕಾದ ತಂತ್ರಗಳ ಕುರಿತು ಸೋಮವಾರ ಪಾಠ ಬೋಧಿಸಿದರು.

ನಗರದ ಹೊರವಲಯದ ರೆಸಾರ್ಟ್‌ನಲ್ಲಿ ಎರಡು ಗಂಟೆ ನಡೆದ ಸಭೆಯಲ್ಲಿ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರು ಅಭ್ಯರ್ಥಿಗಳಿಗೆ ಸಲಹೆ, ಸೂಚನೆಗಳನ್ನು ನೀಡಿದರು.

‘ಕ್ಷೇತ್ರದಲ್ಲಿ ಬಂಡಾಯಕ್ಕೆ ಅವಕಾಶ ನೀಡದಂತೆ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಹೋಗಬೇಕು ಎಂದು ಹೇಳಿದ ಮುಖಂಡರು, ಗೆಲುವಿನ ತಂತ್ರಗಳ ಜೊತೆಗೆ ಬಿಜೆಪಿ ಬಗ್ಗೆ ಹುಷಾರಾಗಿರಬೇಕು’ ಎಂದು ಸಲಹೆ ನೀಡಿದರು.

ಮಂಗಳವಾರ, ಮಾರ್ಚ್ 28, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 86 | ಪುಟ 18

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ

ಬೇಸಿಗೆ ರಜೆಯಲ್ಲಿ ಮಕ್ಕಳ ಮನೋಲೋಕ ಅರಳಲಿ

ಆಳ-ಅಗಲ

ಪ್ಯಾನ್-ಆಧಾರ್ ಜೋಡಣೆಗೆ ಶುಲ್ಕ ಸರ್ಕಾರ ಸಂಗ್ರಹಿಸಿದ್ದೆಷ್ಟು...

ಸಚಿವ ವಜಾ: ನೇತನ್ಯಾಹು ವಿರುದ್ಧ ಆಕ್ರೋಶ 10

ತುಮಕೂರು: ನಿವೃತ್ತ ತಹಶೀಲ್ದಾರ್‌ಗೆ ನಾಲ್ಕು ವರ್ಷ ಶಿಕ್ಷೆ 4

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
57,653 ▼	16,985 ▼	₹61,340 (ಬೆಂಗಳೂರು)	₹71,800 (ಬೆಂಗಳೂರು)	82.31 ▲

ಶಿಕಾರಿಪುರ: ಹಿಂಸೆಗೆ ತಿರುಗಿದ ಬಂಜಾರ ಸಮುದಾಯದ ಪ್ರತಿಭಟನೆ

ಯಡಿಯೂರಪ್ಪ ಮನೆ ಮೇಲೆ ದಾಳಿ

ಪ್ರಜಾವಾಣಿ ವಾರ್ತೆ

ಶಿಕಾರಿಪುರ (ಶಿವಮೊಗ್ಗ): ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗದ ವರದಿಯನ್ನು ಕೇಂದ್ರಕ್ಕೆ ಶಿಫಾರಸು ಮಾಡುವ ರಾಜ್ಯ ಸರ್ಕಾರದ ನಿರ್ಧಾರವನ್ನು ವಿರೋಧಿಸಿ ಜಿಲ್ಲೆಯ ಶಿಕಾರಿಪುರ ಪಟ್ಟಣದಲ್ಲಿ ಸೋಮವಾರ ಬಂಜಾರ ಸಮುದಾಯದವರು ನಡೆಸಿದ ಪ್ರತಿಭಟನೆ ಹಿಂಸಾಚಾರಕ್ಕೆ ತಿರುಗಿತು.

ಈ ವೇಳೆ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ನಿವಾಸದ ಮೇಲೆ ಉದ್ರಿಕ್ತರು ಕಲ್ಲು ತೂರಿದ್ದು, ಕಿಟಕಿಯ ಗಾಜುಗಳು ಒಡೆದಿವೆ. ಉದ್ರಿಕ್ತರ ಗುಂಪು ಚದುರಿಸಲು ಪೊಲೀಸರು ಲಾಠಿ ಪ್ರಹಾರ ನಡೆಸಿ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತಂದರು. ಉದ್ರಿಕ್ತರು ತೂರಿದ ಕಲ್ಲೇಟಿನಿಂದ ಇನ್‌ಸ್ಪೆಕ್ಟರ್ ಸೇರಿದಂತೆ ಐವರು ಪೊಲೀಸರು ಗಾಯಗೊಂಡಿದ್ದಾರೆ.

ತಾಲ್ಲೂಕು ಬಂಜಾರ ಸಮಾಜದ ನೇತೃತ್ವದಲ್ಲಿ ಮುಂಜಾನೆ ಶಿಕಾರಿಪುರದ ಅಂಬೇಡ್ಕರ್ ವೃತ್ತದಲ್ಲಿ ಜಮಾಯಿಸಿದ್ದ ಸಾವಿರಾರು ಜನ ಪ್ರತಿಭಟನಕಾರರು, 'ಸದಾಶಿವ ಆಯೋಗದ ವರದಿ ಆಧಾರದಲ್ಲಿ ಒಳಮೀಸಲಾತಿಯ ವರ್ಗೀಕರಣಕ್ಕೆ ಶಿಫಾರಸು ಮಾಡುವ ಮೂಲಕ ನಮ್ಮ ಬದುಕು ಕಿತ್ತುಕೊಳ್ಳಲಾಗಿದೆ' ಎಂದು ಆರೋಪಿಸಿ, ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಯಡಿಯೂರಪ್ಪ ಅವರ ಭಾವಚಿತ್ರವಿರುವ ಫ್ಲೆಕ್ಸ್ ಸುಟ್ಟು ಹಾಕಿ ಆಕ್ರೋಶ ವ್ಯಕ್ತಪಡಿಸಿದರು.

5ನೇ ಪುಟ ನೋಡಿ

ಶಿಕಾರಿಪುರದಲ್ಲಿ ಸೋಮವಾರ ಬಿ.ಎಸ್‌.ಯಡಿಯೂರಪ್ಪ ಅವರ ಮನೆಯತ್ತ ತೆರಳಲು ಬ್ಯಾರಿಕೇಡ್ ಕಿತ್ತು ಪ್ರತಿಭಟನಕಾರರು ಮುನ್ನುಗ್ಗಿದಾಗ ಪೊಲೀಸರು ತಡೆದು, ಲಾಠಿ ಪ್ರಹಾರ ನಡೆಸಿದರು

> **ಶಿಕಾರಿಪುರದ ಅಭಿವೃದ್ಧಿಗಾಗಿ ದುಡಿದಿದ್ದೇನೆ. ಮನೆ ಮೇಲೆ ದಾಳಿ ಮಾಡಿರುವುದರಿಂದ ನೋವಾಗಿದೆ. ಘಟನೆಗೆ ಕಾರಣ ಎಂದು ಯಾರ ವಿರುದ್ಧವೂ ನಾನು ದೂರುವುದಿಲ್ಲ**
> **ಬಿ.ಎಸ್. ಯಡಿಯೂರಪ್ಪ**
> ಬಿಜೆಪಿ ಸಂಸದೀಯ ಮಂಡಳಿ ಸದಸ್ಯ

> **ಒಳ ಮೀಸಲಾತಿ ಹಂಚಿಕೆ ಕುರಿತು ಬಂಜಾರ, ಭೋವಿ, ಕೊರಮ, ಕೊರಚ ಸಮುದಾಯಗಳಿಗೆ ತೃಪ್ತಿ ಇದೆ. ಮುಖ್ಯಮಂತ್ರಿ ನ್ಯಾಯಬದ್ಧವಾಗಿಯೇ ಹಂಚಿಕೆ ಮಾಡಿದ್ದಾರೆ**
> **ಪ್ರಭು ಚವ್ಹಾಣ**
> ಪಶುಸಂಗೋಪನಾ ಸಚಿವ

ಸದಾಶಿವ ಆಯೋಗದ ವರದಿ ಇನ್ನೂ ಜಾರಿಯಾಗಿಲ್ಲ: ಬೊಮ್ಮಾಯಿ

ಚಿಕ್ಕಬಳ್ಳಾಪುರ: 'ಸದಾಶಿವ ಆಯೋಗದ ವರದಿ ಇನ್ನೂ ಜಾರಿಯಾಗಿಲ್ಲ. ಭೋವಿ, ಲಂಬಾಣಿ, ಕೊರಮ, ಕೊರಚ ಸಮುದಾಯಗಳು ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಇರುತ್ತವೆ. ಈ ಸಮುದಾಯಗಳನ್ನು ಎಸ್‌ಸಿ ಪಟ್ಟಿಯಿಂದ ತೆಗೆಯುವ ಪ್ರಶ್ನೆಯೇ ಇಲ್ಲ. ಈ ಸಮುದಾಯಗಳನ್ನು ಎಸ್‌ಸಿ ಪಟ್ಟಿಯಲ್ಲಿ ಉಳಿಸಿಕೊಂಡೇ ಕೇಂದ್ರಕ್ಕೆ ಶಿಫಾರಸು ಮಾಡಲಾಗಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು

> **ಸ್ಥಳೀಯ ಕಾಂಗ್ರೆಸ್ ನಾಯಕರ ಪ್ರಚೋದನೆಯಿಂದ ಶಿಕಾರಿಪುರದಲ್ಲಿ ಬಿ.ಎಸ್.ಯಡಿಯೂರಪ್ಪ ಅವರ ಮನೆ ಮೇಲೆ ಕಲ್ಲು ತೂರಾಟ ನಡೆದಿದೆ**
> **ಬಸವರಾಜ ಬೊಮ್ಮಾಯಿ**
> ಮುಖ್ಯಮಂತ್ರಿ

'ಬಿಜೆಪಿ ಸರ್ಕಾರ ಸಾಮಾಜಿಕ ನ್ಯಾಯ ನೀಡುತ್ತಿರುವುದನ್ನು ಕಾಂಗ್ರೆಸ್‌ನವರಿಗೆ ಸಹಿಸಿಕೊಳ್ಳಲು ಆಗುತ್ತಿಲ್ಲ. ಹಿಂಸೆಗೆ ಪ್ರಚೋದಿಸುತ್ತಿದ್ದಾರೆ. ರಾಜಕೀಯ ಲಾಭಕ್ಕಾಗಿ ಹಿಂಸೆಗೆ ಇಳಿಸುವುದು ಶೋಭೆ ತರುವುದಿಲ್ಲ' ಎಂದು ಹೇಳಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಬಂಜಾರ ಸಮುದಾಯವು ಯಾವುದೇ ರೀತಿಯ ಪ್ರಚೋದನೆಗೆ ಒಳಗಾಗಬಾರದು. ಯಾವುದೇ ವಿಷಯ ಇದ್ದರೂ ಕುಳಿತು ಪರಿಹರಿಸಿಕೊಳ್ಳೋಣ. ಹಿಂಸೆಗೆ ಅವಕಾಶ ಬೇಡ' ಎಂದು ಮನವಿ ಮಾಡಿದರು.

'ಪರಿಶಿಷ್ಟ ಜಾತಿಗೆ ಶೇ 3ರಷ್ಟು ಬದಲು ಶೇ 4.5 ಮೀಸಲಾತಿ ಕೊಟ್ಟಿದ್ದೇವೆ. ತಾಂಡಾದ ಜನರಿಗೆ 2 ಲಕ್ಷ ಹಕ್ಕುಪತ್ರ ನೀಡಿದ್ದೇವೆ. ತಾಂಡಾ ಅಭಿವೃದ್ಧಿ ನಿಗಮ ಸ್ಥಾಪಿಸಿದ್ದು, ತಾಂಡಾಗಳಿಗೆ ಮೂಲ ಸೌಲಭ್ಯಗಳನ್ನು ಕೊಟ್ಟಿದ್ದು ಬಿ.ಎಸ್. ಯಡಿಯೂರಪ್ಪ. ಮೊದಲಿನಿಂದಲೂ ಬಿಜೆಪಿ ಬಂಜಾರ ಸಮುದಾಯದ ರಕ್ಷಣೆ ಮಾಡಿದೆ. ಮುಂದೆಯೂ ಮಾಡುತ್ತದೆ' ಎಂದು ಹೇಳಿದರು.

ಶಾಸಕ ಮಾಡಾಳ್ ಬಂಧನ

ನಿರೀಕ್ಷಣಾ ಜಾಮೀನು ಅರ್ಜಿ ವಜಾಗೊಂಡ ಬೆನ್ನಲ್ಲೇ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದ (ಕೆಎಸ್‌ಡಿಎಲ್) ಕಚ್ಚಾವಸ್ತು ಪೂರೈಕೆದಾರರಿಂದ ಲಂಚ ಪಡೆದ ಆರೋಪ ಎದುರಿಸುತ್ತಿರುವ ಚನ್ನಗಿರಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕ ಕೆ. ಮಾಡಾಳ್ ವಿರೂಪಾಕ್ಷಪ್ಪ ಅವರನ್ನು ಲೋಕಾಯುಕ್ತ ಪೊಲೀಸರು ಸೋಮವಾರ ರಾತ್ರಿ ಬಂಧಿಸಿದ್ದಾರೆ.

ಲಂಚ ಪ್ರಕರಣದ ಮೊದಲನೇ ಆರೋಪಿಯಾಗಿದ್ದ ವಿರೂಪಾಕ್ಷಪ್ಪ ಅವರಿಗೆ ಹೈಕೋರ್ಟ್ ಏಕಸದಸ್ಯ ಪೀಠ ಮಧ್ಯಂತರ ನಿರೀಕ್ಷಣಾ ಜಾಮೀನು ಮಂಜೂರು ಮಾಡಿತ್ತು. ನಿರೀಕ್ಷಣಾ ಜಾಮೀನು ಕೋರಿದ್ದ ಮೂಲ ಅರ್ಜಿಯನ್ನು ತಿರಸ್ಕರಿಸಿ ಸೋಮವಾರ ಮಧ್ಯಾಹ್ನ ಆದೇಶ ಪ್ರಕಟಿಸಿದ್ದ ನ್ಯಾಯಾಲಯ, ಮಧ್ಯಂತರ ನಿರೀಕ್ಷಣಾ ಜಾಮೀನು ರದ್ದುಗೊಳಿಸಿತ್ತು. ನ್ಯಾಯಾಲಯದ ಆದೇಶ ಹೊರಬಿದ್ದ ಬೆನ್ನಲ್ಲೇ ಶಾಸಕರನ್ನು ಬಂಧಿಸಲಾಗಿದೆ.

ಕೆಎಸ್‌ಡಿಎಲ್‌ಗೆ ಕಚ್ಚಾವಸ್ತು ಪೂರೈಸುವ ಗುತ್ತಿಗೆ ಪಡೆದಿದ್ದ ಶ್ರೇಯಸ್ ಕಶ್ಯಪ್ ಎಂಬುವವರಿಂದ ₹ 40 ಲಕ್ಷ ಲಂಚ ಪಡೆಯುತ್ತಿದ್ದ ವಿರೂಪಾಕ್ಷಪ್ಪ ಅವರ ಮಗ, ಬೆಂಗಳೂರು ಜಲಮಂಡಳಿಯ ಮುಖ್ಯ ಲೆಕ್ಕಾಧಿಕಾರಿ ಪ್ರಶಾಂತ್ ಮಾಡಾಳ್ ಅವರನ್ನು ಮಾರ್ಚ್ 2ರಂದು ಲೋಕಾಯುಕ್ತ ಪೊಲೀಸರು ಬಂಧಿಸಿದ್ದರು. ಪ್ರಶಾಂತ್ ಖಾಸಗಿ ಕಚೇರಿಯಲ್ಲಿ ₹ 1.62 ಕೋಟಿ ಲಂಚದ ಹಣ ಹಾಗೂ ವಿರೂಪಾಕ್ಷಪ್ಪ ಅವರ ಮಲಗುವ ಕೋಣೆಯಲ್ಲಿ ₹ 6.10 ಕೋಟಿ ನಗದು ಪತ್ತೆಯಾಗಿತ್ತು.

ಕೆ.ಮಾಡಾಳ್ ವಿರೂಪಾಕ್ಷಪ್ಪ

ಕೆಎಸ್‌ಡಿಎಲ್ ಅಧ್ಯಕ್ಷರೂ ಆಗಿದ್ದ ವಿರೂಪಾಕ್ಷಪ್ಪ, ಮಗನ ಬಂಧನವಾಗುತ್ತಿದ್ದಂತೆಯೇ ತಲೆಮರೆಸಿಕೊಂಡಿದ್ದರು. ಮಾರ್ಚ್ 7ರಂದು ಹೈಕೋರ್ಟ್, ಮಧ್ಯಂತರ ನಿರೀಕ್ಷಣಾ ಜಾಮೀನು ಮಂಜೂರು ಮಾಡಿತ್ತು. ಮಾರ್ಚ್ 9ರಂದು ವಿರೂಪಾಕ್ಷಪ್ಪ ತನಿಖಾ ತಂಡದ ಎದುರು ಹಾಜರಾಗಿದ್ದರು. ಆರು ದಿನ ವಿಚಾರಣೆ ನಡೆಸಿದರೂ, ತನಿಖೆಗೆ ಸಹಕಾರ ನೀಡಿರಲಿಲ್ಲ.

ಶಾಸಕರಿಗೆ ತುರ್ತಾಗಿ ಮಧ್ಯಂತರ ನಿರೀಕ್ಷಣಾ ಜಾಮೀನು ಮಂಜೂರು ಮಾಡಿರುವುದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಲೋಕಾಯುಕ್ತ ಪೊಲೀಸರು ಮೇಲ್ಮನವಿ ಸಲ್ಲಿಸಿದ್ದರು. ನ್ಯಾಯಮೂರ್ತಿಗಳಾದ ಅನಿರುದ್ಧ ಬೋಸ್ ಮತ್ತು ಸುಧಾಂಶು ಧುಲಿಯಾ ಅವರನ್ನು ಒಳಗೊಂಡ ನ್ಯಾಯಪೀಠ ಸೋಮವಾರ ಅರ್ಜಿಯ ವಿಚಾರಣೆ ನಡೆಸಿತು.

ಪ್ರತಿವಾದಿ ವಿರೂಪಾಕ್ಷಪ್ಪ ಅವರಿಗೆ ನೋಟಿಸ್ ಜಾರಿಗೆ ಆದೇಶಿಸಿತ್ತು. ಅದಾದ ಕೆಲ ಹೊತ್ತಿನಲ್ಲೇ ಹೈಕೋರ್ಟ್ ಏಕಸದಸ್ಯ ಪೀಠ ನಿರೀಕ್ಷಣಾ ಜಾಮೀನು ಕೋರಿದ್ದ ಅರ್ಜಿಯನ್ನು ತಿರಸ್ಕರಿಸಿ ತೀರ್ಪು ನೀಡಿತ್ತು.

7ನೇ ಪುಟ ನೋಡಿ

ನಿರೀಕ್ಷಣಾ ಜಾಮೀನು ಅರ್ಜಿ ವಜಾ

ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದ (ಕೆಎಸ್‌ಡಿಎಲ್) ಟೆಂಡರ್ ಪ್ರಕ್ರಿಯೆಯಲ್ಲಿ ಲಂಚ ಪಡೆದ ಪ್ರಕರಣದಲ್ಲಿನ ಮೊದಲ ಆರೋಪಿ ಕೆ.ಮಾಡಾಳ್ ವಿರೂಪಾಕ್ಷಪ್ಪ ಅವರ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಸಂಬಂಧ ಕಾಯ್ದಿರಿಸಿದ್ದ ಕ್ರಿಮಿನಲ್ ಅರ್ಜಿಯ ಮೇಲಿನ ಆದೇಶವನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ' ಮೇಲ್ಮನವಿ ವಿಚಾರಣೆ ನಡೆಸುವ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಕೆ.ನಟರಾಜನ್ ಸೋಮವಾರ ಮಧ್ಯಾಹ್ನ ಪ್ರಕಟಿಸಿದರು.

7ನೇ ಪುಟ ನೋಡಿ

'ಪ್ರವರ್ಗ 3ಬಿ' ಅಡಿ 22 ಉಪಜಾತಿ ಸೇರಿಸಲು ಸರ್ಕಾರಕ್ಕೆ ಸಲಹೆ

'ಲಿಂಗಾಯತ, ವೀರಶೈವರೆಲ್ಲ ಒಂದೇ'

• ರಾಜೇಶ್ ರೈ ಚಟ್ಲ

ಬೆಂಗಳೂರು: ಮೀಸಲಾತಿಯಿಂದ ವಂಚಿತರಾಗುತ್ತಿದ್ದ 22 ಲಿಂಗಾಯತ/ವೀರಶೈವ ಉಪ ಜಾತಿಗಳನ್ನು ಹಿಂದುಳಿದ ವರ್ಗಗಳ ಮೀಸಲಾತಿ ಪಟ್ಟಿಯ 'ಪ್ರವರ್ಗ 3ಬಿ' ಅಡಿ ಸೇರಿಸಲು ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಸಲಹೆ ನೀಡಿದೆ. ಆದರೆ, ಈ ಪೈಕಿ ಮೂರು (ಕುಡುಒಕ್ಕಲಿಗ/ಕುಡು ಒಕ್ಕಲ, ನೊಳಂಬ ಮತ್ತು ಲಾಳಗೊಂಡ) ಉಪಜಾತಿಗಳನ್ನು ಮಾತ್ರ ಹೊಸದಾಗಿ ಸೃಜಿಸಿರುವ '2ಡಿ'ಗೆ ಸೇರಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

'ಪ್ರವರ್ಗ 3ಬಿ'ಗೆ ನೀಡಿದ್ದ ಶೇ 5ರ ಮೀಸಲಾತಿ ಪ್ರಮಾಣವನ್ನು ಶುಕ್ರವಾರ (ಮಾರ್ಚ್ 24) ನಡೆದಿದ್ದ ಸಚಿವ ಸಂಪುಟ ಸಭೆಯಲ್ಲಿ ಶೇ 7ಕ್ಕೆ ಹೆಚ್ಚಿಸಿರುವ ಸರ್ಕಾರ, 'ಪ್ರವರ್ಗ 3 ಬಿ'ಯ ಬದಲು ಹೊಸತಾಗಿ '2ಡಿ' ಎಂದು ಮರುನಾಮಕರಣ ಮಾಡಿದೆ.

'ಲಿಂಗಾಯತ ಮತ್ತು ವೀರಶೈವ ಲಿಂಗಾಯತರಲ್ಲಿ ಹಲವು ಉಪಜಾತಿಗಳಿವೆ. ಕೆಲವು ಈಗಾಗಲೇ 'ಪ್ರವರ್ಗ 3ಬಿ' ಅಡಿ ಗುರುತಿಸಲ್ಪಟ್ಟಿದೆ. ಅದೇ ಸಮುದಾಯದ ಕೆಲ ಉಪ ಜಾತಿಗಳು ಈ ಪಟ್ಟಿಯಲ್ಲಿ ಸೇರದಿರುವುದರಿಂದ ಈ ಸಮುದಾಯದ ವಿದ್ಯಾರ್ಥಿಗಳು, ಅಭ್ಯರ್ಥಿಗಳು ಮೀಸಲಾತಿ ಸೌಲಭ್ಯದಿಂದ ವಂಚಿತಾಗುತ್ತಿರುವುದರಿಂದ ಈ ಸಲಹೆ ನೀಡಲಾಗಿದೆ' ಎಂದು ಕೆ.ಜಯಪ್ರಕಾಶ್ ಹೆಗ್ಡೆ ನೇತೃತ್ವದ ಆಯೋಗ ಸರ್ಕಾರಕ್ಕೆ ಸಲ್ಲಿಸಿದ ದ್ವಿತೀಯ ವರದಿಯಲ್ಲಿ ತಿಳಿಸಿದೆ.

ಈ ಹಿಂದೆ ಕೆಲವು ಉಪ ಜಾತಿಗಳನ್ನು ಪ್ರವರ್ಗ 3ಬಿ ಅಡಿಯಲ್ಲಿ ಸೇರಿಸಿ ಸರ್ಕಾರ ಆದೇಶ ಹೊರಡಿಸಿತ್ತು. ಆದರೆ, ನಂತರ ಆ ಆದೇಶವನ್ನು ಹಿಂಪಡೆದ ಕಾರಣ ಜಾತಿ ಪ್ರಮಾಣಪತ್ರ ದೊರೆಯುತ್ತಿಲ್ಲ ಎಂದು ಹಲವರು ಆಯೋಗದ ಗಮನಕ್ಕೆ ತಂದಿದ್ದರು. ಅಂತಹ ಗೊಂದಲವನ್ನು ಪರಿಹರಿಸುವ ಉದ್ದೇಶದಿಂದ ಈ ಸಲಹೆ ನೀಡಿ, ಪರಿಹಾರ ಕಂಡುಕೊಳ್ಳಲು ನಿರ್ಧರಿಸಲಾಗಿದೆ ಎಂದೂ ವರದಿಯಲ್ಲಿ ತಿಳಿಸಲಾಗಿದೆ.

5ನೇ ಪುಟ ನೋಡಿ

22 ಲಿಂಗಾಯತ/ವೀರಶೈವ ಉಪ ಜಾತಿ

1. ಕುಡುಒಕ್ಕಲಿಗ/ಕುಡುಒಕ್ಕಲ 2. ಆದಿಬಣಜಿಗ, 3. ನೊಳಂಬ, 4. ಮಲ್ಲವ/ಮಲೆಗೌಡ, 5. ಲಿಂಗಾಯತ ರಡ್ಡಿ/ಶೈವರಡ್ಡಿ, 6. ಗೌಡ ಲಿಂಗಾಯತ, 7. ಶಿವಸಿಂಪಿ, 8. ಬಣಗಾರ, 9. ಶಿವಚಾರ ನಗರ್ತ, 10. ಲಾಳಗೊಂಡ, 11. ಹೂಗಾರ, 12. ಜಂಗಮ, 13. ಬೇಡುವ ಜಂಗಮ, 14. ಬಣಜಿಗ, 15. ಗಾಣಿಗ, 16. ನಗರ್ತ, 17. ಆದಿ ವೀರಶೈವ, 18. ಕುರುಹಿನಶೆಟ್ಟಿ/ನೇಯ್ಗೆ/ನೇಕಾರ/ಜಾಡ, 19. ರೆಡ್ಡಿ, 20. ಸಾದರ, 21. ಆರಾಧ್ಯ, 22. ಗುರುವ/ಗುರವ

ಪ್ರಜಾವಾಣಿ ವಿಶೇಷ

'ಹೆಚ್ಚಿನ ಮೊತ್ತದ ಕಾರ್ಪೊರೇಟ್ ಸಾಲದ ಮೇಲೆ ನಿಗಾಕ್ಕೆ ಸೂಚನೆ' 11

ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ವಿವಿಧ ವಿರೋಧ ಪಕ್ಷಗಳ ಸಂಸದರು ಕಪ್ಪುಬಟ್ಟೆ ಧರಿಸಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

ಚಿನಕುರಳಿ

ಪ್ರಕಾಶ್ ಶೆಟ್ಟಿ

ಕಾಂಗ್ರೆಸ್ ನೇತೃತ್ವದ ಪ್ರತಿಭಟನೆಗೆ ಜತೆಯಾದ ಟಿಎಂಸಿ

ವಿಪಕ್ಷಗಳಿಂದ ಕರಾಳ ದಿನಾಚರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರ ಬಿಜೆಪಿ ಸರ್ಕಾರವು ದೇಶದ ಪ್ರಜಾಪ್ರಭುತ್ವಕ್ಕೆ ಧಕ್ಕೆ ತರುತ್ತಿದೆ ಎಂದು ಆರೋಪಿಸಿ ಎಲ್ಲಾ ವಿರೋಧ ಪಕ್ಷಗಳು ಸಂಸತ್ತಿನ ಒಳಗೆ ಮತ್ತು ಸಂಸತ್ತಿನ ಹೊರಗೆ ಕರಾಳ ದಿನವನ್ನು ಆಚರಿಸಿದವು. ಕಪ್ಪು ಬಟ್ಟೆ ಧರಿಸಿದ್ದ ವಿರೋಧ ಪಕ್ಷಗಳ ಸಂಸದರು ಸಂಸತ್ತಿನ ಎರಡೂ ಸದನಗಳಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ಲೋಕಸಭೆಯಲ್ಲಿ ಕಾಂಗ್ರೆಸ್‌ನ ಇಬ್ಬರು ಸಂಸದರು ಕಾಗದಗಳನ್ನು ಹರಿದು, ಸ್ಪೀಕರ್ ಅವರ ಕುರ್ಚಿಯತ್ತ ತೂರಿದರು. ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಗದ್ದಲ ಮುಂದುವರಿಯಿತು. ಹೀಗಾಗಿ ಕಲಾಪವನ್ನು ಮಧ್ಯಾಹ್ನದವರೆಗೂ ಮುಂದೂಡಲಾಯಿತು. ಮಧ್ಯಾಹ್ನದ ನಂತರವೂ ಕಲಾಪ ನಡೆದದ್ದು ಕೇವಲ ಏಳು ನಿಮಿಷ. ರಾಜ್ಯಸಭೆಯಲ್ಲೂ ಪ್ರತಿಭಟನೆ ನಡೆದ ಕಾರಣ, ಕಲಾಪವನ್ನು ಮಧ್ಯಾಹ್ನದವರೆಗೆ ಮುಂದೂಡಲಾಗಿತ್ತು. ಮಧ್ಯಾಹ್ನವೂ ಯಾವುದೇ ಕಲಾಪ ನಡೆಯಲಿಲ್ಲ.

ಕಲಾಪ ಮುಂದೂಡಿದ ನಂತರ ಗಾಂಧಿ ಪ್ರತಿಮೆ ಬಳಿಯಿಂದ ವಿಜಯ ಚೌಕ್‌ವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದರು. ಅದಾನಿ ಸಮೂಹದ ಷೇರಿನ ಮೌಲ್ಯ ತಿರುಚಿದ ಆರೋಪವನ್ನು ಜಂಟಿ ಸಂಸದೀಯ ಸಮಿತಿ ತನಿಖೆಗೆ ಒಪ್ಪಿಸಬೇಕು ಎಂದು ವಿರೋಧ ಪಕ್ಷಗಳು ಒತ್ತಾಯಿಸಿದವು. ಜತೆಗೆ ರಾಹುಲ್ ಗಾಂಧಿ ಅವರ ಸದಸ್ಯತ್ವ ಅನರ್ಹಗೊಳಿಸಿದ್ದನ್ನೂ ಖಂಡಿಸಿದವು.

ಎಲ್ಲಾ ವಿರೋಧ ಪಕ್ಷಗಳು ಈ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದವು. ಕಾಂಗ್ರೆಸ್ ನೇತೃತ್ವದಲ್ಲಿ ಈವರೆಗೆ ನಡೆದಿದ್ದ ಪ್ರತಿಭಟನೆಗಳಿಂದ ದೂರ ಉಳಿದಿದ್ದ ಟಿಎಂಸಿ, ಈ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದು ವಿಶೇಷವಾಗಿತ್ತು.

ಇನ್ನಷ್ಟು ಸುದ್ದಿಗಳು 10

ಕ್ಷೇಮ ಕುಶಲ ಪುರವಣಿ ಓದಿರಿ

ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿ.,

ನಂ.14, ರಜತಾ ಭವನ, 1ನೇ ಮುಖ್ಯರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು–560104.
ದೂ. 23300497 41159606 , ಫ್ಯಾಕ್ಸ್ : 23359600 ಇ–ಮೇಲ್ : vjn@jscbl.com

ಟೆಂಡರ್ ಮತ್ತು ಹರಾಜು ಮಾರಾಟ ಸೂಚನೆ

2002ರ ಹಣಕಾಸು ಆಸ್ತಿಗಳ ಭದ್ರತಾ ಮತ್ತು ಪುನರ್ ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆಯ ಅಡಿಯಲ್ಲಿ ಹರಾಜು ಮಾರಾಟ ಮುಂದುವರಿದಂತೆ

ಶ್ರೀ ಆನಂದ್. ಬಿ. ಬಿನ್ ಶ್ರೀ ಬಸವಯ್ಯ

ಶ್ರೀ ಜಿ.ಎಂ. ಯಶಸ್‌ಕುಮಾರ್ ಬಿನ್ ಶ್ರೀ ಗಂಗಾಧರಮೂರ್ತಿ ಚನ್ನಿಗಪ್ಪ

ಸಾಲಗಾರರಾದ ಮೆ॥ ಐಕಾನ್ ಮೈನಿಂಗ್ ಕಂಪನಿ, ಪ್ರತಿನಿಧಿಸುವ ಪಾಲುದಾರರು: (1) ಶ್ರೀ ಜಿ.ಎಂ. ಯಶಸ್‌ಕುಮಾರ್ ಬಿನ್ ಗಂಗಾಧರಮೂರ್ತಿ ಚನ್ನಿಗಪ್ಪ, ನಂ. 45, 1ನೇ ಮಹಡಿ, ತಿಮ್ಮಯ್ಯ ಪ್ರೈವೇಟ್ ಲೇಔಟ್, ಬಸವೇಶ್ವರನಗರ, ಬೆಂಗಳೂರು–560079, ವಿಳಾಸ: ನಂ. 322, 3–ಎ ಕ್ರಾಸ್, 2ನೇ ಬ್ಲಾಕ್, 3ನೇ ಹಂತ, ಬಸವೇಶ್ವರನಗರ, ಬೆಂಗಳೂರು–560079 **ಹಾಗೂ ಮೆ॥ ಐಕಾನ್ ಮೈನಿಂಗ್ ಕಂಪನಿ, ಪ್ರತಿನಿಧಿಸುವ ಪಾಲುದಾರರು: (2) ಶ್ರೀ ಆನಂದ್. ಬಿ.** ಬಿನ್ ಬಸವಯ್ಯ, ನಂ. 45, 1ನೇ ಮಹಡಿ, ತಿಮ್ಮಯ್ಯ ಪ್ರೈವೇಟ್ ಲೇಔಟ್, ಬಸವೇಶ್ವರನಗರ, ಬೆಂಗಳೂರು–560079, ವಿಳಾಸ: ನಂ. 331/ಎ, 1ನೇ ಮೇನ್, ಲವಕುಶನಗರ, ಲಗ್ಗೆರೆ, ಬೆಂಗಳೂರು–560058, ಇವರುಗಳು **ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿ., ವಿಜಯನಗರ, ಬೆಂಗಳೂರು** ರವರಿಂದ ಪಡೆದ ಸಾಲ ಮರುಪಾವತಿ ಮಾಡುವಲ್ಲಿ ವಿಫಲರಾಗಿರುತ್ತಾರೆ. ಷರತ್ತು ಮತ್ತು ನಿಯಮಗಳ ಒಪ್ಪಂದದ ಅನುಸಾರ ಒಟ್ಟು ಮೊತ್ತ **ರೂ. 6,30,87,177/– (ಆರು ಕೋಟಿ ಮೂವತ್ತು ಲಕ್ಷದ ಎಂಭತ್ತೇಳು ಸಾವಿರದ ಒಂದು ನೂರ ಎಪ್ಪತ್ತೇಳು ರೂಪಾಯಿಗಳು ಮಾತ್ರ)** ದಿನಾಂಕ **27.03.2023** ರಂದು ಇದ್ದಂತೆ ಜೊತೆಗೆ ನಂತರ ಅನ್ವಯವಾಗುವ ದರದಲ್ಲಿ ಬಡ್ಡಿ ಮತ್ತು ಖರ್ಚು ವೆಚ್ಚಗಳು.

ಸರ್ಫೇಸಿ ಕಾಯ್ದೆ 2002 ರ ಸೆಕ್ಷನ್ 13 (2) ರ ಅಡಿಯಲ್ಲಿ ಮತ್ತು ಕಾಯಿದೆಯ ಸೆಕ್ಷನ್ 13 (4) ರ ಅಡಿಯಲ್ಲಿ ನೀಡಲಾಗಿರುವ ಅಧಿಕಾರಗಳನ್ನು ಅನುಸರಿಸಲು ಮತ್ತು ಚಲಾಯಿಸಲು ಬ್ಯಾಂಕ್ ನೋಟಿಸ್ ನೀಡಿರುತ್ತಾರೆ, ಅಧಿಕೃತ ಅಧಿಕಾರಿ ಅಡಮಾನದ ಆಸ್ತಿಯನ್ನು ಸ್ವಾಧೀನಪಡಿಸಿಕೊಂಡಿದ್ದಾರೆ ಮತ್ತು ಅದರ ವಿವರಗಳನ್ನು ಕೆಳಗೆ ಸಂಪೂರ್ಣವಾಗಿ ವಿವರಿಸಲಾಗಿದೆ, ಮತ್ತು ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002 ರ ಸಂಬಂಧಿತ ನಿಯಮಗಳೊಂದಿಗೆ ಓದಿದ ಸರ್ಫೇಸಿ ಕಾಯ್ದೆಯ ನಿಬಂಧನೆಗಳ ಅಡಿಯಲ್ಲಿ ಈ ಕೆಳಗಿನ ಆಸ್ತಿಯನ್ನು ಮಾರಾಟ ಮಾಡಲು ಬ್ಯಾಂಕ್ ನಿರ್ಧರಿಸಿದೆ.

ಸ್ವತ್ತಿನ ವಿವರ	ಟೆಂಡರ್ ತೆರೆಯುವ ದಿನಾಂಕ, ಸಮಯ ಮತ್ತು ಹರಾಜಿನ ಸ್ಥಳ	ಮೀಸಲು ಬೆಲೆ
ಪರಿವರ್ತಿತ ಭೂಮಿಯ ಸರ್ವೆ ನಂ. 9/1, 4 ಎಕರೆ, 11 ಗುಂಟೆ ವಿಸ್ತೀರ್ಣ (17,300.312 ಚದರ ಮೀಟರ್), ಕುಲುವನಹಳ್ಳಿ ಗ್ರಾಮ, ತ್ಯಾಮಗೊಂಡ್ಲು ಹೋಬಳಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ (ನೆಲಮಂಗಲ ತಾಲ್ಲೂಕು, ಕುಲವನಹಳ್ಳಿ ಗ್ರಾಮ ಪಂಚಾಯಿತಿಯಿಂದ ನೀಡಲಾದ ಸ್ವತ್ತಿನ ಖಾತಾ ನಂ. 217/9/1 ಹೊಂದಿರುವ ಕಛೇರಿ ಆದೇಶ ನಂ. ಎಎಲ್‌ಎನ್(ಎನ್)/ಎಸ್ ಆರ್/33,34,55 & 36/01–02, ದಿನಾಂಕ: 24.05.2003ರಂತೆ ಪರಿವರ್ತನೆಗೊಂಡಿದೆ), ಚಕ್ಕುಬಂದಿ: ಪೂರ್ವಕ್ಕೆ: ಎನ್‌ಹೆಚ್–48, ಪಶ್ಚಿಮಕ್ಕೆ: ಸರ್ವೆ ನಂ. 9/1ರಲ್ಲಿನ ಉಳಿಕೆ ಭೂಮಿ, ಉತ್ತರಕ್ಕೆ: ಸರ್ವೆ ನಂ. 9/1ರಲ್ಲಿನ ಉಳಿಕೆ ಭೂಮಿ, ದಕ್ಷಿಣಕ್ಕೆ: ಸರ್ವೆ ನಂ. 9/2ರ ಭೂಮಿ.	04.05.2023 ಗುರುವಾರ ಬೆಳಿಗ್ಗೆ 11.00 ಕ್ಕೆ ಜನತಾ ಸೇವಾ ಕೋ–ಆಪರೇಟೀವ್ ಬ್ಯಾಂಕ್ ಲಿ., ವಿಜಯನಗರ ಶಾಖೆ, ಬೆಂಗಳೂರು.	ರೂ.12,50,00,000/– (ರೂಪಾಯಿ ಹನ್ನೆರಡು ಕೋಟಿ ಐವತ್ತು ಲಕ್ಷ ಮಾತ್ರ) ಇಎಂಡಿ : 10% ರಂತೆ ಮೀಸಲು ಬೆಲೆ ರೂ. 1,25,00,000/– (ರೂಪಾಯಿ ಒಂದು ಕೋಟಿ ಇಪ್ಪತ್ತೈದು ಲಕ್ಷ ಮಾತ್ರ)

ಬಹಿರಂಗ ಹರಾಜಿನ ನಿಯಮ ಮತ್ತು ಷರತ್ತುಗಳು: –

(1) ಟೆಂಡರ್ ಫಾರಂಗಳನ್ನು **ಜನತಾ ಸೇವಾ ಕೋ–ಆಪರೇಟೀವ್ ಬ್ಯಾಂಕ್ ಲಿ., ನಂ.14, "ರಜತಾ ಭವನ" 1ನೇ ಮುಖ್ಯರಸ್ತೆ, ಹಕ್ಕ ರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು.** (ದೂ. 080–23300497, 41159606) ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು. (2) ಇಚ್ಛಿಸುವ ಬಿಡ್‌ದಾರರು ಅವರ ಬಿಡ್‌ಗಳನ್ನು ನಿಗದಿತ ಟೆಂಡರ್ ಫಾರಂಗಳಲ್ಲಿ ಮೊಹರಾದ ಲಕೋಟೆಯಲ್ಲಿ ಮೀಸಲು ಬೆಲೆಯ ಶೇ.10% ಮೊತ್ತವನ್ನು **ಜನತಾ ಸೇವಾ ಕೋ–ಆಪರೇಟೀವ್ ಬ್ಯಾಂಕ್ ಲಿ., ಬೆಂಗಳೂರು** ಪರವಾಗಿ ಪಡೆದ ಡಿಮ್ಯಾಂಡ್ ಡ್ರಾಫ್ಟ್/ಬ್ಯಾಂಕರ್ಸ್ ಚೆಕ್/ಪೇ ಆರ್ಡರ್‌ಗಳನ್ನು ಈ ಟೆಂಡರ್–ಹರಾಜು ಮಾರಾಟ ಸೂಚನೆ ಪ್ರಕಟವಾದ ದಿನಾಂಕದ ನಂತರ ಪಡೆದಿರಬೇಕು. (3) ಅನಿಗದಿತ ರೂಪದಲ್ಲಿರುವ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದಿಲ್ಲ, ಇಎಂಡಿಯೊಂದಿಗೆ ಟೆಂಡರ್‌ಗಳನ್ನು **ಜನತಾ ಸೇವಾ ಕೋ–ಆಪರೇಟೀವ್ ಬ್ಯಾಂಕ್ ಲಿ., ಬೆಂಗಳೂರು,** ಇವರಿಗೆ ದಿನಾಂಕ **03.05.2023** ಮತ್ತು ಸಮಯ **ಸಂಜೆ 5.00** ಗಂಟೆಯ ಒಳಗೆ ಸಲ್ಲಿಸಬೇಕು. ಇಎಂಡಿ ರಹಿತವಾದ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. (4) ಆಸ್ತಿಯನ್ನು ಮೀಸಲು ಬೆಲೆಗಿಂತ ಕಡಿಮೆ ಮಾರಾಟ ಮಾಡಲಾಗುವುದಿಲ್ಲ. (5) ಒಂದು ವೇಳೆ ಬಿಡ್ಡರ್‌ಗಳು ಯಶಸ್ವಿಯಾಗದಿದ್ದಲ್ಲಿ ಇಎಂಡಿ ಮೊತ್ತವನ್ನು ಬಡ್ಡಿರಹಿತವಾಗಿ ಹಿಂತಿರುಗಿಸಲಾಗುವುದು. (6) ಯಶಸ್ವಿ ಬಿಡ್‌ದಾರರು ಹರಾಜು ಮಾರಾಟದ ನಿಯಮ ಮತ್ತು ನಿಬಂಧನೆಗಳನ್ನು ಪಾಲಿಸಲು ವಿಫಲರಾದಲ್ಲಿ ಇಎಂಡಿ ಮೊತ್ತವನ್ನು ಯಾವುದೇ ಸೂಚನೆಯನ್ನು ನೀಡದೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. (7) ಮೊಹರಾದ ಟೆಂಡರ್‌ಗಳನ್ನು ಅಧಿಕೃತ ಅಧಿಕಾರಿಯವರು ಹಾಜರಿರುವ ಟೆಂಡರ್‌ದಾರರ ಸಮ್ಮುಖದಲ್ಲಿ **ದಿನಾಂಕ: 04.05.2023ರಂದು ಬೆಳಿಗ್ಗೆ 11.00 ಗಂಟೆಗೆ** ತೆರೆಯುವರು. (8) ಟೆಂಡರ್‌ಗಳನ್ನು ತೆರೆದ ನಂತರ, ಉದ್ದೇಶಿತ ಬಿಡ್‌ದಾರರಿಗೆ ಅಧಿಕೃತ ಅಧಿಕಾರಿಯ ವಿವೇಚನೆಯಿಂದ ಅವಕಾಶ ನೀಡಬಹುದು, ಆಫರ್ ಬೆಲೆಯನ್ನು ಹೆಚ್ಚಿಸಲು ತಮ್ಮ ನಡುವೆ ತೀವ್ರವಾದ ಬಿಡ್ಡಿಂಗ್ ಮಾಡಬಹುದು. (9) ಯಶಸ್ವಿ ಬಿಡ್‌ದಾರರು ಮಾರಾಟದ ಬೆಲೆಯ ಶೇ. 25% (ಇಎಂಡಿ ಹಣವನ್ನು ಸೇರಿ) ಹಣವನ್ನು ತಕ್ಷಣ ಹರಾಜಿನ ದಿನದಂದು ನಗದು ಅಥವಾ ಡಿಮ್ಯಾಂಡ್ ಡ್ರಾಫ್ಟ್ ರೂಪದಲ್ಲಿ ಪಾವತಿಸಬೇಕು ಮತ್ತು ಬಾಕಿ ಉಳಿದ ಮಾರಾಟದ ಮೊತ್ತವನ್ನು ಮಾರಾಟ ದೃಢೀಕರಣಗೊಂಡ 15 ದಿನಗಳ ಒಳಗೆ ಪಾವತಿಸಬೇಕು. ಒಂದು ವೇಳೆ ಯಶಸ್ವಿ ಬಿಡ್‌ದಾರರು ಹಣ ಪಾವತಿಸದಿದ್ದಲ್ಲಿ ಈವರೆಗೆ ಪಾವತಿಸಿರುವ ಎಲ್ಲಾ ಮೊತ್ತವನ್ನು ಯಾವುದೇ ಸೂಚನೆಯನ್ನು ನೀಡದೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಆಸ್ತಿಯನ್ನು ಮರುಮಾರಾಟ ಮಾಡಲಾಗುವುದು. (10) ಯಶಸ್ವಿ ಬಿಡ್ಡರ್ ಅನ್ವಯವಾಗುವಂತೆ ಕಾನೂನು ಬದ್ಧ ವೆಚ್ಚಗಳಾದ ತೆರಿಗೆಗಳು/ಶುಲ್ಕ/ಆಸ್ತಿ ತೆರಿಗೆ/ಬೆಸ್ಕಾಂ ಶುಲ್ಕ/ ನೀರಿನ ಶುಲ್ಕ ವರ್ಗಾವಣೆ ವೆಚ್ಚಗಳಾದ ನೋಂದಣಿ ಮತ್ತು ಮುದ್ರಾಂಕ ಶುಲ್ಕವನ್ನು ಅನ್ವಯವಾಗುವ ಕಾನೂನಿನಂತೆ ಪಾವತಿಸಿದಲ್ಲಿ ಆಸ್ತಿಯನ್ನು ಅವರ ಪರವಾಗಿ ವರ್ಗಾಯಿಸಿ ಕೊಡಲಾಗುವುದು. (11) ಅಧಿಕೃತ ಅಧಿಕಾರಿಯವರು ಯಾವುದೇ ಟೆಂಡರ್‌ನ್ನು ಸ್ವೀಕರಿಸುವ/ತಿರಸ್ಕರಿಸುವ ಅಥವಾ ಹರಾಜು ಮಾರಾಟವನ್ನು ಯಾವುದೇ ಕಾರಣಗಳನ್ನು ನೀಡದೆ ಮುಂದೂಡುವ ಅಥವಾ ರದ್ದುಮಾಡುವ ಅಧಿಕಾರವನ್ನು ಹೊಂದಿರುತ್ತಾರೆ. ಯಾವುದೇ ಸೂಚನೆಯನ್ನು ನೀಡದೆ, ಜಾಹೀರಾತಿನಲ್ಲಿ ನೀಡಿರುವ ನಿಯಮ ಮತ್ತು ನಿಬಂಧನೆಗಳನ್ನು ಬದಲಾಯಿಸುವ ಅಧಿಕಾರವು ಅಧಿಕೃತ ಅಧಿಕಾರಿಯವರ ನಿರ್ಣಯಕ್ಕೆ ಒಳಪಟ್ಟಿದೆ. (12) ಮಾರಾಟವು ಬ್ಯಾಂಕ್ ದೃಢೀಕರಣಕ್ಕೆ ಒಳಪಟ್ಟಿರುತ್ತದೆ. (13) ಈ ಮಾರಾಟವು ಇಚ್ಛಿಸುವ ಬಿಡ್‌ದಾರರು ಆಸ್ತಿಯನ್ನು **ಬೆಳಿಗ್ಗೆ 10.00 ಘಂಟೆಯಿಂದ ಸಂಜೆ 5.00ರವರೆಗೆ,** ಷೆಡ್ಯೂಲಿನಲ್ಲಿ ತಿಳಿಸಿರುವ ವಿಳಾಸದಲ್ಲಿ ಅವರ ಸ್ವಂತ ಖರ್ಚಿನಲ್ಲಿ ಪರಿಶೀಲಿಸಬಹುದಾಗಿದೆ. (14) ಆಸ್ತಿಯನ್ನು **'ಎಲ್ಲಿ ಹೇಗಿದೆಯೋ ಹಾಗೆ'** ಮತ್ತು **'ಎಲ್ಲಿ ಏನಿದೆಯೋ ಹಾಗೆ'** ಆಧಾರದ ಮೇಲೆ ಮಾರಾಟ ಮಾಡಲಾಗುವುದು. ಇಚ್ಛಿಸುವ ಬಿಡ್‌ದಾರರು ಆಸ್ತಿಯ ಮೇಲಿನ ಋಣಭಾರಗಳು (ಎನ್‌ಕಂಬರೆನ್ಸ್) ಟೈಟಲ್ ಮಾಲೀಕತ್ವ ಶಾಸನಬದ್ಧ ಮಂಜೂರಾತಿಗಳು ಮುಂತಾದವುಗಳನ್ನು ಪರಿಶೀಲಿಸಬೇಕು.

ಹೆಚ್ಚಿನ ವಿವರಗಳಿಗಾಗಿ ಉದ್ದೇಶಿತ ಬಿಡ್ಡುದಾರರು ಅಧಿಕೃತ ಅಧಿಕಾರಿ, ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿ., ನಂ.14, "ರಜತಾ ಭವನ" 1ನೇ ಮುಖ್ಯರಸ್ತೆ, ಹಕ್ಕ ರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು. (ದೂ. 080–23300497, 41159606) ಇ–ಮೇಲ್: vjn@jscbl.com.

ದಿನಾಂಕ : 27.03.2023
ಸ್ಥಳ : ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ
ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿ.,

ಹಿರಿಯ ವಿದ್ಯಾರ್ಥಿಗಳ ಸಂಘಕ್ಕೆ ಆಯ್ಕೆ

ಬೆಂಗಳೂರು: ಬೆಂಗಳೂರು ಮೆಡಿಕಲ್ ಕಾಲೇಜು ಹಿರಿಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷರಾಗಿ ಡಾ. ಆರ್. ಕೆ. ಸರೋಜ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಇವರು 60 ವರ್ಷಗಳ ಇತಿಹಾಸವಿರುವ ಸಂಘಕ್ಕೆ ಅಧ್ಯಕ್ಷರಾಗಿ ಆಯ್ಕೆಯಾದ 2ನೇ ಮಹಿಳೆಯಾಗಿದ್ದಾರೆ.

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ.: 12/MYS/2023
ದಿನಾಂಕ: 21.03.2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರಸಂ.	ಕಾಮಗಾರಿಯ ವಿವರ	ಅಂದಾಜು ಮೌಲ್ಯ
1	1) ತುಮಕೂರು – **ಅರಸೀಕೆರೆ ವಿಭಾಗ:** ಹೊನ್ನವಳ್ಳಿ ಮತ್ತು ಆದಿಹಳ್ಳಿ ನಿಲ್ದಾಣಗಳ ನಡುವೆ, ಎತ್ತಿನಹೊಳೆ ಗ್ರಾವಿಟಿ ಕೆನಾಲ್ ಕ್ರಾಸಿಂಗ್‌ಗಾಗಿ ಕಿ.ಮೀ. 155/100–200 ರಲ್ಲಿ 1x24.40 ಮೀ (ಅಪ್ ಮತ್ತು ಡೌನ್ ಲೈನ್) ಅಳತೆಯ ಪಿಎಸ್‌ಸಿ ಬಾಕ್ಸ್ ಗಿರ್ಡರ್‌ನ ನಿರ್ಮಾಣ. **2) ಮೈಸೂರು–ಅರಸೀಕೆರೆ ವಿಭಾಗ:** ಹಬ್ಬನಘಟ್ಟ–ಅರಸೀಕೆರೆ ಜಂ. ನಿಲ್ದಾಣಗಳ ನಡುವೆ ಎತ್ತಿನಹೊಳೆ ಗ್ರಾವಿಟಿ ಕೆನಾಲ್ ಕ್ರಾಸಿಂಗ್‌ಗಾಗಿ ಕಿ.ಮೀ. 155/300–400 ರಲ್ಲಿ ಪ್ರಸ್ತಾವನೆಯಂತೆ 2x5.7ಮೀx5.5ಮೀ ಅಳತೆಯ ಆರ್‌ಸಿಸಿ ಬಾಕ್ಸ್‌ನ ನಿರ್ಮಾಣ ಕಾರ್ಯ. **ಉಪ–ಕಾಮಗಾರಿ–1:** ಬ್ರಿಡ್ಜ್ ಕಾಮಗಾರಿ (ಉಪ–ರಚನೆ & ರಕ್ಷಣಾ ಕಾರ್ಯಗಳು). **ಉಪ–ಕಾಮಗಾರಿ–2:** ಪಿಎಸ್‌ಸಿ ಬಾಕ್ಸ್ ಗಿರ್ಡರ್‌ನ ಕ್ಯಾಸ್ಟಿಂಗ್ & ಲಾಂಚಿಂಗ್ ಕೆಲಸ. **ಉಪ–ಕಾಮಗಾರಿ–3:** ಇತರ ಸ್ಟೀಲ್ ಫ್ಯಾಬ್ರಿಕೇಷನ್ ಕೆಲಸಗಳ ಜೊತೆಗೆ ಸ್ಟೀಲ್ ಗಿರ್ಡರ್‌ನ ಫ್ಯಾಬ್ರಿಕೇಷನ್ ಮತ್ತು ಲಾಂಚಿಂಗ್ ಕಾರ್ಯ. **ಉಪ–ಕಾಮಗಾರಿ–4:** ಇತರೆ ಕಾಮಗಾರಿಗಳು.	ರೂ. 11,58,82,059/-
2	**ಮೈಸೂರು ವಿಭಾಗ:** ಟ್ಯಾಂಪಿಂಗ್‌ಗೆ ಸಿದ್ಧವಾಗಿರುವ ಬಳ್ಳೇಕೆರೆ ಡಿಪೋನಲ್ಲಿ ಆರ್‌ಡಿಎಸ್‌ಓ ನಿರ್ದಿಷ್ಟತೆಯನುಸಾರ ಮಶೀನ್ ಕ್ರಷ್ಡ್ ಟ್ರ್ಯಾಕ್ ಬಾಲಾಸ್ಟ್‌ಗಳ ತಯಾರಿಕೆ, ಪೂರೈಕೆ ಮತ್ತು ಸ್ಟಾಕಿಂಗ್ ಕಾಮಗಾರಿ.	ರೂ. 15,24,12,585/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **13.04.2023, 11:00 ಗಂಟೆಯವರೆಗೆ**

ಇ–ಟೆಂಡರು ಸೂಚನೆ ಸಂ.: 13/MYS/2023
ದಿನಾಂಕ: 23.03.2023

ಕ್ರಸಂ.	ಕಾಮಗಾರಿಯ ವಿವರ	ಅಂದಾಜು ಮೌಲ್ಯ
1	**ಚಿಕ್ಕಜಾಜೂರು–ಹುಬ್ಬಳ್ಳಿ:** ದ್ವಿಪಥೀಕರಣ ಯೋಜನೆ: ದೇವರಗುಡ್ಡ – ಹಾವೇರಿ ನಿಲ್ದಾಣಗಳ ಮಧ್ಯೆ ವಿಭಾಗೀಯ ವೇಗವನ್ನು 110 ಕಿಮೀ. ಪ್ರತಿ ಗಂಟೆಗೆ ಹೆಚ್ಚಿಸುವದಕ್ಕೆ ಸಂಬಂಧಿಸಿದಂತೆ ಉಳಿದಿರುವ ಟ್ರ್ಯಾಕ್ ಕಾಮಗಾರಿ.	ರೂ. 57,07,300/-
2	**ಚಿಕ್ಕಜಾಜೂರು–ಹರಿಹರ –** ಕರಜಗಿ ವಿಭಾಗ: ಎಸ್‌ಎಸ್‌ಇ/ಪಿ.ವೇ/ಆರ್‌ಎನ್‌ಆರ್ ಅಡಿಯಲ್ಲಿ ಥ್ರೂ ರೈಲ್ ರಿನ್ಯೂವಲ್ (ಪಿ) ಕಿಮೀ. 320/400 ರಿಂದ ಕಿಮೀ. 322/000 (ಡೌನ್), ಕಿಮೀ. 337/800 – ಕಿಮೀ. 338/200 (ಅಪ್), ಕಿಮೀ. 367/000 ರಿಂದ ಕಿಮೀ. 368/400 (ಅಪ್), ಕಿಮೀ. 370/050–371/950 (ಅಪ್), ಕಿಮೀ. 374/900 ರಿಂದ ಕಿಮೀ. 375/900 (ಅಪ್), ಕಿಮೀ. 380/300 ರಿಂದ 382/200 (ಅಪ್), ಕಿಮೀ. 385/400 ರಿಂದ 385/700 (ಅಪ್) & 388/800–389/600 (ಅಪ್), 386/200 ರಿಂದ ಕಿಮೀ. 388/100 (ಅಪ್), ಕಿಮೀ. 388/100 ರಿಂದ ಕಿಮೀ. 388/200 (ಅಪ್), ಕಿಮೀ. 398/500 ರಿಂದ ಕಿಮೀ. 400/200(ಅಪ್), ಒಟ್ಟು ಉದ್ದ 13.0 ಕಿಮೀ.	ರೂ. 85,33,541/-
3	1. ಚಿಕ್ಕಜಾಜೂರು– **ದರ್ಶನ್‌ನಗರ ವಿಭಾಗ** – ಕಿಮೀ. 38/400 ರಿಂದ 39/400 ವರೆಗೆ 1.00 ಕಿಮೀ. ದೂರಕ್ಕೆ ಜಿಯೋ ಟೆಕ್ಸ್ ಜಿಯೋ ಗ್ರಿಡ್ (2 ಲೇಯರ್ಸ್) ನೊಂದಿಗೆ ಬ್ಯಾಡ್ ಫಾರ್ಮೇಶನ್ ಬ್ಲಾಂಕೆಟಿಂಗ್‌ಗೆ ಬೇಕಾದ ಥ್ರೂ ಫಾರ್ಮೇಶನ್ ಟ್ರೀಟ್‌ಮೆಂಟ್. **2. ಬೀರೂರು–ಚಿಕ್ಕಜಾಜೂರು ವಿಭಾಗ:** ಕಿಮೀ. 229/771 ರಿಂದ 230/072 (ಅಪ್ & ಡೌನ್) ವರೆಗೆ 600 ಮೀ. ದೂರಕ್ಕೆ ಜಿಯೋ ಟೆಕ್ಸ್ ಜಿಯೋ ಗ್ರಿಡ್ (2 ಲೇಯರ್ಸ್) ನೊಂದಿಗೆ ಬ್ಯಾಡ್ ಫಾರ್ಮೇಶನ್ ಬ್ಲಾಂಕೆಟಿಂಗ್‌ಗೆ ಬೇಕಾದ ಥ್ರೂ ಫಾರ್ಮೇಶನ್ ಟ್ರೀಟ್‌ಮೆಂಟ್.	ರೂ. 2,76,48,127/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **17.04.2023, 11:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಇಂಜಿನಿಯರ್/ಸಂಯೋಜನೆ
ಮೈಸೂರು

PUB/752/AAD/PRB/SWR/2022-23

S.W.Railways SWRRLY SWRRLY

ಬಿಬಿಎಂಪಿಯಿಂದ ಅಂಬೇಡ್ಕರ್ ಹಾಗೂ ಪೌರಕಾರ್ಮಿಕರ ದಿನಾಚರಣೆ

'ಕಾಯಮಾತಿ: ಶೀಘ್ರ ಅಧಿಸೂಚನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪೌರಕಾರ್ಮಿಕರ ಕಾಯಂಗಾಗಿ ನೇಮಕಾತಿ ಪ್ರಕ್ರಿಯೆಗೆ ಕೆಲವೊಂದು ಬದಲಾವಣೆಗಳನ್ನು ಮಾಡಲಾಗುತ್ತಿದೆ. ಇದು ಪೂರ್ಣವಾದ ಕೂಡಲೇ ಅಧಿಸೂಚನೆ ಹೊರಡಿಸಿ, ನೇಮಕಾತಿ ಪ್ರಕ್ರಿಯೆ ಆರಂಭಿಸಲಾಗುವುದು' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

ಬಿಬಿಎಂಪಿ ವತಿಯಿಂದ ಹಮ್ಮಿಕೊಂಡಿದ್ದ ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ಪೌರಕಾರ್ಮಿಕರ ದಿನಾಚರಣೆಗೆ ಸೋಮವಾರ ಚಾಲನೆ ನೀಡಿ ಅವರು ಮಾತನಾಡಿದರು.

'3,500 ಪೌರಕಾರ್ಮಿಕ ನೇಮಕಾತಿ ನಡೆಯುತ್ತಿದೆ. ಇನ್ನೂ 11,500 ಮಂದಿ ನೇಮಕಾತಿಗೆ ನಿಯಮಗಳ ಬದಲಾವಣೆ ಮಾಡಲಾಗುತ್ತಿದೆ. ಶೀಘ್ರವೇ ಈ ನೇಮಕಾತಿಗೂ ಅಧಿಸೂಚನೆ ಆಗುತ್ತದೆ ಎಂದರು.

'ಬಿಬಿಎಂಪಿ ಒಂದೇ ಕುಟುಂಬ. ಕೆಲಸಕ್ಕಾಗಿ ವಿಭಾಗಗಳಿರಬಹುದು, ಸಂಘಗಳಿರಬಹುದು. ಇಂದು ನಾವು ಮಾನವತಾವಾದಿ ಅಂಬೇಡ್ಕರ್ ಅವರ ಹಬ್ಬ ಆಚರಿಸುತ್ತಿದ್ದೇವೆ. ಅವರ ಕನಸು ನನಸಾಗಲು ಕೆಲಸ ಮಾಡಬೇಕು. ಕ್ಷಿಪ್ರಗತಿಯಲ್ಲಿ ಈ ನಿಟ್ಟಿನಲ್ಲಿ ಮುನ್ನಡೆಯಬೇಕು. ಇಂದು ಒಗ್ಗಟ್ಟಾಗಿ ಎಲ್ಲ ಸೇರಿದ್ದೇವೆ. ಇದು ನಮ್ಮ ಶಕ್ತಿ. ನಮ್ಮಲ್ಲಿ ಕಷ್ಟ, ನ್ಯೂನತೆಗಳು ಇರುತ್ತವೆ. ಎಲ್ಲವನ್ನೂ ಸರಿಪಡಿಸಲು ಸಾಧ್ಯವಿಲ್ಲ. ನೀವು ಭಾವನೆಯಿಂದ ಬೇಡಿಕೆ ಇಟ್ಟರೆ ಅದನ್ನು ನಾವು ಪರಿಹರಿಸಲು ಪ್ರಯತ್ನಿಸುತ್ತಿದ್ದೇವೆ' ಎಂದು ತುಷಾರ್ ಗಿರಿನಾಥ್ ಹೇಳಿದರು.

ಅಭಿನಂದನೆ: ಬಿಬಿಎಂಪಿ ವ್ಯಾಪ್ತಿಯಲ್ಲಿ ಸ್ವಚ್ಛತಾ ವಿಭಾಗದಲ್ಲಿ ಉತ್ತಮವಾಗಿ ಕರ್ತವ್ಯ ನಿರ್ವಹಿಸುತ್ತಿರುವ 15 ಪೌರಕಾರ್ಮಿಕರಿಗೆ ಅಭಿನಂದಿಸಿ ಸನ್ಮಾನಿಸಲಾಯಿತು.

ಆಡಳಿತಾಧಿಕಾರಿ ರಾಕೇಶ್ ಸಿಂಗ್, ವಿಶೇಷ ಆಯುಕ್ತರಾದ ಜಯರಾಮ್ ರಾಯಪುರ, ಡಾ. ಹರೀಶ್ ಕುಮಾರ್, ಡಾ. ಆರ್.ಎಲ್ ದೀಪಕ್, ಪಿ.ಎನ್. ರವೀಂದ್ರ ಇದ್ದರು.

ಬಿಬಿಎಂಪಿ ವ್ಯಾಪ್ತಿಯ ಸ್ವಚ್ಛತಾ ವಿಭಾಗದಲ್ಲಿ ಉತ್ತಮ ಕರ್ತವ್ಯ ನಿರ್ವಹಿಸುತ್ತಿರುವ 15 ಪೌರಕಾರ್ಮಿಕರನ್ನು ಸನ್ಮಾನಿಸಲಾಯಿತು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಹಿರಿಯ ಸಹಾಯಕ ನಿರ್ದೇಶಕರು ಶಿಕ್ಷಣ ರವರ ಕಚೇರಿ,
ಕೇಂದ್ರ ಕಚೇರಿ ಬೃ.ಬೆಂ.ಮ.ಪಾ, ನರಸಿಂಹರಾಜ ಚೌಕ, ಬೆಂಗಳೂರು – 560002.

ಸಂಖ್ಯೆ: ಬೃಬೆಂಮಪಾ/2022–23/ಐಎನ್‌ಡಿ791 ದಿನಾಂಕ: 27.03.2023

ಟೆಂಡರ್ ಪ್ರಕಟಣೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಅರ್ಹ ಬಿಡ್ಡರುದಾರರಿಂದ ಶೈಕ್ಷಣಿಕ ವರ್ಷ 2023–24ನೇ ಸಾಲಿಗೆ ಬೃ.ಬೆಂ.ಮ.ಪಾಲಿಕೆ ಶಾಲೆ ಮತ್ತು ಕಾಲೇಜುಗಳಿಗೆ ಸಾಕ್ಸ್‌ನೊಂದಿಗೆ ಕಪ್ಪು ಬಣ್ಣದ ಶೂಗಳು, ಸಾಕ್ಸ್‌ನೊಂದಿಗೆ ಕ್ಯಾನ್ವಾಸ್ ಶೂಗಳು ಮತ್ತು ಬ್ಯಾಗ್‌ಗಳನ್ನು ಸರಬರಾಜು ಮಾಡಲು ಟೆಂಡರ್‌ಗಳನ್ನು ಆಹ್ವಾನಿಸಿದೆ.
ಬಿಡ್ ಪ್ರಕ್ರಿಯೆ ವೇಳಾಪಟ್ಟಿಯು ಈ ಕೆಳಕಂಡಂತಿರುತ್ತವೆ

1.	ಟೆಂಡರ್ ಉಲ್ಲೇಖ ಸಂಖ್ಯೆಗಳು 1) ಶೈಕ್ಷಣಿಕ ವರ್ಷ 2023–24ನೇ ಸಾಲಿಗೆ ಬೃ.ಬೆಂ.ಮ.ಪಾಲಿಕೆ ಶಾಲೆ ಮತ್ತು ಕಾಲೇಜು–ಗಳಿಗೆ ಸಾಕ್ಸ್‌ನೊಂದಿಗೆ ಕಪ್ಪು ಬಣ್ಣದ ಶೂಗಳನ್ನು ಸರಬರಾಜು ಮಾಡಲು ಟೆಂಡರ್. 2) ಶೈಕ್ಷಣಿಕ ವರ್ಷ 2023–24ನೇ ಸಾಲಿಗೆ ಬೃ.ಬೆಂ.ಮ.ಪಾಲಿಕೆ ಶಾಲೆಗಳು ಮತ್ತು ಪಿಯು ಕಾಲೇಜುಗಳಿಗೆ ಸಾಕ್ಸ್‌ನೊಂದಿಗೆ ಕ್ಯಾನ್ವಾಸ್ ಶೂಗಳನ್ನು ಸರಬರಾಜು ಮಾಡಲು ಟೆಂಡರ್. 3) ಶೈಕ್ಷಣಿಕ ವರ್ಷ 2023–24ನೇ ಸಾಲಿಗೆ ಬೃ.ಬೆಂ.ಮ.ಪಾಲಿಕೆ ಶಾಲೆಗಳು ಮತ್ತು ಕಾಲೇಜು–ಗಳಿಗೆ ಸ್ಕೂಲ್ ಬ್ಯಾಗ್ಸ್‌ಗಳನ್ನು ಸರಬರಾಜು ಮಾಡಲು ಟೆಂಡರ್.	1) ಬೃಬೆಂಮಪಾ/2022–23/ಐಎನ್‌ಡಿ791 2) ಬೃಬೆಂಮಪಾ/2022–23/ಐಎನ್‌ಡಿ792 3) ಬೃಬೆಂಮಪಾ/2022–23/ಐಎನ್‌ಡಿ793
2.	ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್–ನಿಂದ ಡೌನ್‌ಲೋಡ್ ಮಾಡಿಕೊಳ್ಳಲು ಪ್ರಾರಂಭಿಸುವ ದಿನಾಂಕ	27.03.2023 ರಿಂದ
3.	ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಆನ್‌ಲೈನ್ ವಿಚಾರಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ	30.03.2023ರ ಸಂಜೆ 5:00 ಗಂಟೆಯವರೆಗೆ
4.	ಬಿಡ್ ಪೂರ್ವಭಾವಿ ಸಭೆಯ ದಿನಾಂಕ:	ಸ್ಥಳ: ಹಿರಿಯ ಸಹಾಯಕ ನಿರ್ದೇಶಕರು ಶಿಕ್ಷಣ ರವರ ಕಚೇರಿ, ಕೇಂದ್ರ ಕಚೇರಿ ಬೃ.ಬೆಂ.ಮ.ಪಾ, ನರಸಿಂಹರಾಜ ಚೌಕ, ಬೆಂಗಳೂರು ಇಲ್ಲಿ ದಿನಾಂಕ 30.03.2023ರ ಬೆಳಿಗ್ಗೆ 11:00 ಗಂಟೆಗೆ ನಡೆಸಲಾಗುವುದು.
5.	ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ	10.04.2023ರ ಸಂಜೆ 5:00 ಗಂಟೆಯವರೆಗೆ
6.	ಆನ್‌ಲೈನ್ ತಾಂತ್ರಿಕ ಬಿಡ್‌ಗಳ ತೆರೆಯುವ ದಿನಾಂಕ ಮತ್ತು ಸಮಯ	11.04.2023ರ ಸಂಜೆ 5:10 ಗಂಟೆಗೆ
7.	ಸಂವಹನ ವಿಳಾಸ:	ಹಿರಿಯ ಸಹಾಯಕ ನಿರ್ದೇಶಕರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು. ದೂ:080-22112585/080-22975824/080-22975728 Email: eoeducation@yahoo.in

1) ಟೆಂಡರ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **http://eproc.karnataka.gov.in** ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು.
2) ಹೆಚ್ಚಿನ ಮಾಹಿತಿಗಳನ್ನು ಟೆಂಡರ್ ದಸ್ತಾವೇಜಿನಲ್ಲಿ ಪಡೆದುಕೊಳ್ಳಬಹುದು.

ಸಹಿ/– ಹಿರಿಯ ಸಹಾಯಕ ನಿರ್ದೇಶಕರು, ಬೃ.ಬೆಂ.ಮ.ಪಾ

ಕರಗ ಉತ್ಸವ: ಸೌಲಭ್ಯ ಕಲ್ಪಿಸಲು ಒತ್ತಾಯ

ಬೆಂಗಳೂರು: 'ಹಲಸೂರುಪೇಟೆಯ (ತಿಗಳರಪೇಟೆ) ಧರ್ಮರಾಯಸ್ವಾಮಿ ದೇವಸ್ಥಾನದ ವತಿಯಿಂದ ಏಪ್ರಿಲ್ 6ರ ರಾತ್ರಿಯಿಂದ 7ರ ಮುಂಜಾನೆಯವರೆಗೂ ನಡೆಯುವ ವಿಶ್ವವಿಖ್ಯಾತ ಹೂವಿನ ಕರಗ ಮಹೋತ್ಸವಕ್ಕೆ ಅಗತ್ಯವಿರುವ ಮೂಲಸೌಲಭ್ಯ ಕಲ್ಪಿಸಬೇಕು' ಎಂದು ವಿಧಾನ ಪರಿಷತ್ ಸದಸ್ಯ ಪಿ.ಆರ್. ರಮೇಶ್ ಒತ್ತಾಯಿಸಿದ್ದಾರೆ.

ಈ ಬಗ್ಗೆ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿರುವ ಅವರು, 'ಬಿಬಿಎಂಪಿ ವ್ಯಾಪ್ತಿಯ ಶಿವಾಜಿನಗರ ವಿಧಾನಸಭೆಯ ಪೂರ್ವವಲಯ, ಚಾಮರಾಜಪೇಟೆಯ ಪಶ್ಚಿಮವಲಯ, ಗಾಂಧಿನಗರ ಮತ್ತು ಚಿಕ್ಕಪೇಟೆ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಈ ಕರಗ ಉತ್ಸವ ಸಂಚರಿಸುತ್ತದೆ. ಈ ಭಾಗದಲ್ಲಿ ಸಂಚಾರಿ ಶೌಚಾಲಯ, ರಸ್ತೆ ಗುಂಡಿ, ಪಾದಚಾರಿ ಮಾರ್ಗ ಮತ್ತು ಚರಂಡಿಯ ಮತ್ತು ರಸ್ತೆ ಸ್ವಚ್ಛತೆಗೆ ಆದ್ಯತೆ ನೀಡುವಂತೆ ಬಿಬಿಎಂಪಿಗೆ ನಿರ್ದೇಶನ ನೀಡಬೇಕು. ಈ ಎಲ್ಲ ಕಾರ್ಯಗಳನ್ನು ತ್ವರಿತಗತಿಯಲ್ಲಿ ಕೈಗೊಳ್ಳಬೇಕು' ಎಂದು ಹೇಳಿದ್ದಾರೆ.

'ಏಪ್ರಿಲ್ 6ರ ರಾತ್ರಿ ನಡೆಯುವ ಕರಗ ಉತ್ಸವವು ಕೆ.ಆರ್. ಮಾರುಕಟ್ಟೆ ಮತ್ತು ಮೆಜೆಸ್ಟಿಕ್ ಸಮೀಪದಲ್ಲಿದ್ದು, ಆ ದಿನ ರಾತ್ರಿ ಈ ಪ್ರದೇಶಕ್ಕೆ ಸಂಪರ್ಕ ಕಲ್ಪಿಸುವ ಮೆಟ್ರೊ, ಬಿಎಂಟಿಸಿ ಬಸ್‌ಗಳ ಸಂಚಾರಕ್ಕೆ ಅವಕಾಶ ನೀಡಬೇಕು. ಕರಗ ಉತ್ಸವ ಸಂಚರಿಸುವ ಪ್ರದೇಶದಲ್ಲಿ ಹೆಚ್ಚು ಜನದಟ್ಟಣೆಯಾಗುವುದರಿಂದ ಪೊಲೀಸ್ ಬಂದೋಬಸ್ತ್ ಕಲ್ಪಿಸಬೇಕು. ಈ ಭಾಗದಲ್ಲಿ ವಿದ್ಯುತ್ ಸಂಪರ್ಕ ಕಡಿತವಾಗದಂತೆ ನಿರ್ದೇಶನ ನೀಡಬೇಕು. ಸಾಂಕ್ರಾಮಿಕ ರೋಗಗಳು ಹರಡದಂತೆ ಆರೋಗ್ಯ ಇಲಾಖೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕು' ಎಂದು ಪತ್ರದಲ್ಲಿ ತಿಳಿಸಿದ್ದಾರೆ.

IN THE HIGH COURT OF KARNATAKA AT BENGALURU
[SUBSTITUTED SERVICE OF NOTICE TO THE RESPONDENT No. 8A BY WAY OF PAPER PUBLICATION VIDE COURT ORDER DATED: 17/03/2023]

RP No. 336/2022
(VIDEO CONFERENCING / PHYSICAL HEARING)

PETITIONER/S : MR. R. SREENIVAS
Vs.
RESPONDENT/S : SRI. HONNANNA AND OTHERS

TO, **RESPONDENT NO. 8A**
SRI. SRIKANTAIAH, Adult by Age, Husband of Late Smt. L. Nagarathna, Residing At: 96/A, 3rd Cross, 2nd Main Road, Bapujinagar, Mysore Road, Bangalore - 560 026. **...Respondent/s**

Whereas the above named Petitioner has filed a RP on this Court Under Section 114 r/w Order 47 Rule 1 of CPC, as in the copy annexed hereunto.

Notice is hereby given to you to appear in this Court in person or through an Advocate duly instructed or through some one authorized by law to act for you, in this matter **on 13/04/2023 AT 10:30 A.M** in case you intend to contest the Petition. If you fail to appear, the petition will be dealt with, heard and decided in your absence.

GIVEN under my hand and the seal of the Court, this the 17th Day of March 2023.

By order of the Court,
Assistant Registrar

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಶ್ರೀ ಶ್ರೀ ಶ್ರೀ ಅಗ್ನಿಬನ್ನಿರಾಯಸ್ವಾಮಿ


ಶ್ರೀ ಬಸವರಾಜ ಎಸ್ ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಅಗ್ನಿಬನ್ನಿರಾಯಸ್ವಾಮಿ ಜಯಂತಿ

ದಿನಾಂಕ : 28.03.2023 ಮಂಗಳವಾರ, ಸಂಜೆ 5.00 ಗಂಟೆಗೆ
ಸ್ಥಳ : ನಯನ ರಂಗಮಂದಿರ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು

ಉದ್ಘಾಟನೆ:
ಶ್ರೀ ಬಸವರಾಜ ಎಸ್ ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ವಿಶೇಷ ಆಹ್ವಾನಿತರು:
ಶ್ರೀಮತಿ ನಿರ್ಮಲಾ ಸೀತಾರಾಮನ್ — ಮಾನ್ಯ ಕೇಂದ್ರ ಹಣಕಾಸು ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವರು
ಶ್ರೀ ಎಂ. ರಾಜೀವ್ ಚಂದ್ರಶೇಖರ್ — ಮಾನ್ಯ ಕೇಂದ್ರ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ, ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವರು

ಗೌರವ ಉಪಸ್ಥಿತಿ:
ಶ್ರೀ ವಿ ಸುನಿಲ್ ಕುಮಾರ್ — ಮಾನ್ಯ ಇಂಧನ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ಅಧ್ಯಕ್ಷತೆ:
ಶ್ರೀ ಉದಯ್ ಬಿ. ಗರುಡಾಚಾರ್ — ಮಾನ್ಯ ಶಾಸಕರು, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ

ಇಂಧನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ರವರು ಸಾಂಸ್ಕೃತಿಕ ಸಮಾರಂಭದಲ್ಲಿ ಭಾಗವಹಿಸಿರುವುದು.

ಮುಖ್ಯ ಅತಿಥಿಗಳು:
ಶ್ರೀ ಸಿದ್ದರಾಮಯ್ಯ — ಮಾನ್ಯ ವಿರೋಧ ಪಕ್ಷದ ನಾಯಕರು, ವಿಧಾನಸಭೆ ಹಾಗೂ ಮಾಜಿ ಮುಖ್ಯಮಂತ್ರಿಗಳು
ಶ್ರೀ ಆರ್. ಅಶೋಕ್ — ಮಾನ್ಯ ಕಂದಾಯ ಸಚಿವರು
ಶ್ರೀ ವಿ. ಸೋಮಣ್ಣ — ಮಾನ್ಯ ವಸತಿ, ಮೂಲಸೌಲಭ್ಯ ಅಭಿವೃದ್ಧಿ ಸಚಿವರು
ಡಾ॥ ಸಿ.ಎನ್. ಅಶ್ವತ್ಥ್ ನಾರಾಯಣ್ — ಮಾನ್ಯ ಉನ್ನತ ಶಿಕ್ಷಣ, ಐ.ಟಿ. ಮತ್ತು ಬಿ.ಟಿ ಹಾಗೂ ವಿಜ್ಞಾನ – ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಜೀವನೋಪಾಯ ಹಾಗೂ ಉದ್ಯಮಶೀಲತೆ ಸಚಿವರು
ಶ್ರೀ ಬಿ.ಎ. ಬಸವರಾಜು — ಮಾನ್ಯ ನಗರಾಭಿವೃದ್ಧಿ ಸಚಿವರು
ಶ್ರೀ ಎಸ್.ಟಿ. ಸೋಮಶೇಖರ್ — ಮಾನ್ಯ ಸಹಕಾರ ಸಚಿವರು
ಶ್ರೀ ಎನ್. ನಾಗರಾಜು, (ಎಂ.ಟಿ.ಬಿ.) — ಮಾನ್ಯ ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ ಸಾರ್ವಜನಿಕ ಉದ್ಯಮಗಳ ಸಚಿವರು
ಶ್ರೀ ಎಂ. ಮುನಿರತ್ನ — ಮಾನ್ಯ ತೋಟಗಾರಿಕೆ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು
ಶ್ರೀ ಕೆ. ಗೋಪಾಲಯ್ಯ — ಮಾನ್ಯ ಅಬಕಾರಿ ಸಚಿವರು
ಶ್ರೀ ಬಿ.ಕೆ. ಹರಿಪ್ರಸಾದ್ — ಮಾನ್ಯ ವಿರೋಧ ಪಕ್ಷದ ನಾಯಕರು ವಿಧಾನ ಪರಿಷತ್
ಶ್ರೀ ಎಸ್.ಆರ್. ವಿಶ್ವನಾಥ್ — ಮಾನ್ಯ ಅಧ್ಯಕ್ಷರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಶಾಸಕರು, ಯಲಹಂಕ ವಿಧಾನಸಭಾ ಕ್ಷೇತ್ರ
ಶ್ರೀ ಪ್ರಕಾಶ್ ಕೆ. ರಾಥೋಡ್ — ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು, ವಿಧಾನ ಪರಿಷತ್
ಶ್ರೀ ಸತೀಶ್ ರೆಡ್ಡಿ ಎಂ., — ಮಾನ್ಯ ಆಡಳಿತ ಪಕ್ಷದ ಮುಖ್ಯ ಸಚೇತಕರು, ವಿಧಾನಸಭೆ ಹಾಗೂ ಶಾಸಕರು, ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರ
ಶ್ರೀ ಎಂ. ಕೃಷ್ಣಪ್ಪ, — ಮಾನ್ಯ ಅಧ್ಯಕ್ಷರು, ಒಕ್ಕಲಿಗರ ಅಭಿವೃದ್ಧಿ ನಿಗಮ ಹಾಗೂ ಶಾಸಕರು, ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ
ಡಾ. ವೈ.ಎ. ನಾರಾಯಣಸ್ವಾಮಿ — ಮಾನ್ಯ ಸರ್ಕಾರದ ಮುಖ್ಯ ಸಚೇತಕರು, ವಿಧಾನ ಪರಿಷತ್

ಅತಿಥಿಗಳು: ಬೆಂಗಳೂರು ನಗರದ ಮಾನ್ಯ ಲೋಕಸಭಾ ಸದಸ್ಯರು, ರಾಜ್ಯಸಭಾ ಸದಸ್ಯರು, ವಿಧಾನಸಭಾ ಸದಸ್ಯರು, ವಿಧಾನ ಪರಿಷತ್ ಸದಸ್ಯರು ಹಾಗೂ ಚುನಾಯಿತ ಪ್ರತಿನಿಧಿಗಳು

ತಮಗೆ ಆತ್ಮೀಯ ಸ್ವಾಗತ

ಡಾ. ಎನ್. ಮಂಜುಳಾ ಭಾ.ಆ.ಸೇ. — ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ವಿಶ್ವನಾಥ. ಪಿ. ಹಿರೇಮಠ ಕ.ಆ.ಸೇ. — ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು"– ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

Wanted

WANTED FEMALE Office Assistant Below 40 Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

PUBLIC NOTICE

JANATHA EDUCATION SOCIETY®
Tender Notification
Purchase of Computers
Sealed tenders are invited from reputed authorized distributors of Dell for the supply and installation of i5, i7 & i7 workstations & DELL LED Monitors.
The tender documents can be obtained from Society office during office hours from 28/03/2023 to 03/04/2023. Interested Distributors must submit their sealed tenders in accordance with the tender document not later than 08/04/2023 before 2:00 PM.
Janatha Education society reserves the right to accept or reject any or all tenders without assigning any reason. For any queries or clarifications, please contact below address/ numbers.
Sri. H C Balakrishna, Hon. President — Sri. H G Balagopal, Hon. Secretary
Dr. Rajkumar Road, Next to Orion Mall, 2nd stage, Rajajinagar, Bengaluru-55
Contact : 080-23371952 | 6366733434

PERSONAL

Change of Name

I,CHETAN RAMESH BABU residing-at #68,11th Cross, 3rd Main,Prashanthnagar, Bangalore-560079 have_changed my-Name-to CHETAN BABU R vide_Affidavit Dtd:27.03.2023 Sworn_Before Notary G.R.Rajanna,Bangalore

I, DAVAIAH THELAPANDA MANICHA have changed my name to DEVAIAH THELAPANDA MANICHA vide affidavit dated: 27/3/2023 before notary Shreeshail.B. Gobbani Bangalore

I, SREEJA PRATHAP PANIKER have changed my name to SREEJA VISHWANATHAN PILLAI vide affidavit dated: 20/3/2023 Before Notary Manohar Jeerige Bangalore.

I, MUDDU MAHADEV have changed my name to MUDDU MAHADEV VEERABHADRASWAMY vide affidavit dated: 20/3/2023 before notary Shreeshail.B. Gobbani Bangalore

I,RAJANI V D/o Vijaykumar.M.C and W/o.Sravan Kumar Koyyala Residing Near G.G Samudaya Bhavana, Appaji Parisara Chitradurga- 577501 After My Marriage I Have Changed My Name to RAJANI SRAVAN KUMAR KOYYALA vide Affidavit Dated 21.3.2023 Sworn Before Notary M.Nagendraiah, Chitradurga

I,KALPANA D/o Shankar Dundappa Wali and W/o Sharadkumar.S Patil R/a Flat#304, Block-2, Wing-C, Suncity Gloria Apartment, Sarjapura Main Road, Opposite Decathalon, Doddakanneli, Bengaluru- 560035 Have Changed My Name to KALPANA S PATIL vide Affidavit Dated 25-3-2023 Before Notary Harisha.G. Bangalore

TRAVEL CORNER

ಆಸಕ್ತಿಯುಳ್ಳ ಮತ್ತು ಅರ್ಹ ಬಿಡ್ದುದಾರರು ಮೇಲ್ಕಂಡ ವೆಬ್‌ಸೈಟ್‌ನಲ್ಲಿ ನೊಂದಣಿ ಮಾಡಿಕೊಳ್ಳಬೇಕು. ಇ–ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ನೊಂದಣಿ ಮಾಡಿಕೊಂಡ ಬಿಡ್ದುದಾರರು ಲಾಗಿನ್ ಐಡಿ ಮತ್ತು ಪಾಸ್‌ವರ್ಡ್‌ಗಳನ್ನು ಪಡೆಯಬಹುದು. ಟೆಂಡರ್ ದಸ್ತಾವೇಜು ಮಾದರಿ ಮತ್ತು ಬ್ಲಾಕ್‌ನ ಕುರಿತಾದ ಸಾರಾಂಶಗಳು ಎಂಎಸ್‌ಟಿಸಿ ನಿಯಮಿತದ ವೆಬ್‌ಸೈಟ್ (https://www.mstcecommerce.com/ auctionhome/mlcl/index.jsp) ನಲ್ಲಿ ಉಚಿತವಾಗಿ ಲಭ್ಯವಿದೆ. ಬಿಡ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ನೊಂದಣಿ ಮಾಡಿಕೊಂಡ ಬಿಡ್ದುದಾರರು ಟೆಂಡರ್ ದಸ್ತಾವೇಜಿನಲ್ಲಿ ಸೂಚಿಸಿರುವ ಹಣ ಪಾವತಿಸುವ ಮೂಲಕ ಸಂಬಂಧಪಟ್ಟ ಗಣಿ ಬ್ಲಾಕ್‌ನ ಟೆಂಡರ್ ದಸ್ತಾವೇಜುಗಳನ್ನು ಎಂಎಸ್‌ಟಿಸಿ ನಿಯಮಿತದ ವೆಬ್‌ಸೈಟ್‌ನಿಂದ ಪಡೆಯಬಹುದು.

ಟೆಂಡರ್ ದಸ್ತಾವೇಜನ್ನು ಖರೀದಿಸುವಲ್ಲಿ ಶೇಕಡ 18 ರಷ್ಟು ಜಿಎಸ್‌ಟಿ ಅನ್ವಯಿಸುತ್ತದೆ. ಅನ್ವಯಿಸುವ ಜಿ.ಎಸ್.ಟಿಯನ್ನು ಟೆಂಡರ್ ನಲ್ಲಿ ಭಾಗವಹಿಸಲು ಇಚ್ಛಿಸುವ ಬಿಡ್ದುದಾರರು ಪಾವತಿಸತಕ್ಕದ್ದು. ಅನ್ವಯವಾಗುವ ಜಿಎಸ್‌ಟಿಯನ್ನು ರಿವರ್ಸ್ ಚಾರ್ಜ್ ಕಾರ್ಯ ವಿಧಾನದಡಿಯಲ್ಲಿ ಸಂಭಾವ್ಯ ಬಿಡ್ಡರ್ ಸ್ವತಃ ಪಾವತಿಸಬೇಕಾಗುತ್ತದೆ. ಅನ್ವಯವಾಗುವ ಜಿ.ಎಸ್.ಟಿಯನ್ನು ಪಾವತಿಸುವುದು ಬಿಡ್ದುದಾರರದ್ದೇ ಕಾನೂನಾತ್ಮಕ ಮತ್ತು ಶಾಸನಬದ್ಧ ಹೊಣೆಯಾಗಿರುತ್ತದೆ. ಈ ಸಂಬಂಧ ಇಲಾಖೆ ಅಥವಾ ಎಂ.ಎಸ್.ಟಿ.ಸಿ ಯು ಭಾದ್ಯರಾಗುವುದಿಲ್ಲ.

ಟೆಂಡರ್ ದಸ್ತಾವೇಜುಗಳ ಮಾರಾಟವು ದಿನಾಂಕ: 30.03.2023 ರಿಂದ ಪ್ರಾರಂಭವಾಗುತ್ತದೆ. ದಿನಾಂಕ: 02.05.2023 ಟೆಂಡರ್ ಮಾರಾಟದ ಕೊನೆಯ ದಿನವಾಗಿರುತ್ತದೆ. ತಾಂತ್ರಿಕ ಹಾಗೂ ಬಿಡ್ ಮೊತ್ತ ನಮೂದಿಸಿದ ಪ್ರಸ್ತಾವನೆಯನ್ನು ಎಂ.ಎಸ್.ಟಿ.ಸಿ ವೆಬ್‌ಸೈಟ್‌ನಲ್ಲಿ ದಿನಾಂಕ: 08.05.2023 ರ 17.00 ಗಂಟೆಗೆ ಅಥವಾ ಅದಕ್ಕೂ ಮುಂಚಿತವಾಗಿ ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್‌ಗಳ ಮೂಲ ಭೌತಿಕ ಪ್ರತಿಗಳನ್ನು ಟೆಂಡರ್ ಆಹ್ವಾನಿಸುವ ಪ್ರಾಧಿಕಾರಕ್ಕೆ ಅಂದರೆ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ ಇವರಿಗೆ ದಿನಾಂಕ: 08.05.2023 ರ 17.00 ಗಂಟೆಗೆ ಅಥವಾ ಅದಕ್ಕೂ ಮುಂಚಿತವಾಗಿ ಸಲ್ಲಿಸಬೇಕಾಗುತ್ತದೆ.

ಸಹಿ/–
ನಿರ್ದೇಶಕರು,

DIPR/CP/5483/Zenkar/2022-23

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ,
ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001. website: www.kiadb.in

ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–73/114/2022–23 ದಿನಾಂಕ: 24.03.2023

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ

(ಜಿ.ಓ.ಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆ.ಐ.ಎ.ಡಿ.ಬಿಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ತಾಂತ್ರಿಕ ಕೌಶಲ್ಯತೆಗಳು, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವ ಸಂಪನ್ಮೂಲ ಹೊಂದಿರುವ ಹಾಗೂ ಇದೇ ರೀತಿಯ ಕಾಮಗಾರಿಯಲ್ಲಿ ಸಾಕಷ್ಟು ಅನುಭವ ಹೊಂದಿರುವ ಕೆ.ಸಿ.ಇ.ಐ ನಿಂದ ಪಡೆದ ದರ್ಜೆ–1 (ವಿದ್ಯುತ್) ಪರವಾನಗಿ ಹೊಂದಿರುವ ಅರ್ಹ ಗುತ್ತಿಗೆದಾರರಿಂದ ದ್ವಿ–ಲಕ್ಕೋಟೆ ಪದ್ಧತಿಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮ 2000 ರನ್ವಯ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು: ಧಾರವಾಡ ಜಿಲ್ಲೆ, ಕೋಟೂರು ಬೇಲೂರು ಕೈಗಾರಿಕಾ ಪ್ರದೇಶದ ರಸ್ತೆಗಳಿಗೆ ಬೀದಿ ದೀಪಗಳನ್ನು ಅಳವಡಿಸುವ ಕಾಮಗಾರಿ.

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 21.04.2023 ಸಂಜೆ 4.30 ಗಂಟೆವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು

DIPR/CP/5484/Zen/2022-23

ಕರ್ನಾಟಕ ಸರ್ಕಾರ

ಕಾರ್ಯಕಾರಿ ಅಭಿಯಂತರವರ ಕಚೇರಿ, ಲೋಕೋಪಯೋಗಿ ಇಲಾಖೆ, ಉಡುಪಿ ವಿಭಾಗ, ಉಡುಪಿ

Email: eepwdudp02@gmail.com, website:www.kpwd.gov.in

ನಂ/ಪಿಡಬ್ಲೂಡಿ/ಯುಡಿಎನ್/ಎನ್ಐಟಿ–90/2022–23/ಎಇ2 ದಿನಾಂಕ : 24.03.2023

ಅಲ್ಪಾವಧಿ ಟೆಂಡರು ಪ್ರಕಟಣೆ

ಈ ಕೆಳಕಂಡ ಕಾಮಗಾರಿಗೆ 'ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್' https://www.eproc.karnataka.gov.in ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದೆ.

ಕ್ರ.ಸಂ.	ಕಾಮಗಾರಿಯ ಹೆಸರು	ಟೆಂಡರಿಗಿರಿಸಿದ ಅಂದಾಜು ಮೊಬಲಗು (ರೂ.ಗಳಲ್ಲಿ)	ಇಎಂಡಿ (ರೂ.ಗಳಲ್ಲಿ)	ಟೆಂಡರ್ ಸ್ವೀಕರಿಸುವ ಕೊನೆ ದಿನಾಂಕ	ಅರ್ಹ ಗುತ್ತಿಗೆದಾರರು
1	ಬೈಂದೂರು ವಿಧಾನಸಭಾ ಕ್ಷೇತ್ರದ ಆಜ್ರಿ ಗ್ರಾಮದ ಬೆಳುವಾಣ ಗುಡ್ಡೆಮನೆ ಮಹಾಲಿಂಗೇಶ್ವರ ಎಂಬಲ್ಲಿ ಹಾಗೂ ಯಡಮೊಗೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಕುಂಡ್ಲುಮನೆ ಹತ್ತಿರ, ಯಡಮೊಗ್ಗೆ ಗ್ರಾಮದ ರಾಂಪೈಜೆಡ್ಡು ಎಂಬಲ್ಲಿ, ಹಕ್ಲಾಡಿ ಗ್ರಾಮದ ಸಂತಗದ್ದೆ ಎಂಬಲ್ಲಿ, ಮಚ್ಚಟ್ಟು ಗ್ರಾಮದ ತೋಂಬಟ್ಟು ಸೂರಿಬೈಲು ಎಂಬಲ್ಲಿ ಕಾಲುಸಂಕ ನಿರ್ಮಾಣ. (168751)	ರೂ. 58,85,179.00	ರೂ. 1,38,900.00	03.04.2023	3ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರು
2	ಬೈಂದೂರು ವಿಧಾನಸಭಾ ಕ್ಷೇತ್ರದ ಕಂಬದಕೋಣೆ (ಕಾಲೋಡು) ಗ್ರಾಮದ ಕಪ್ಪಾಡಿ–ಕೊಡ್ಗಿಮನೆ ಬಳಿ ಹಾಗೂ ಗಂಗೊಳ್ಳಿ ಗ್ರಾಮದ ಲೈಟ್‌ಹೌಸ್ ಅಂಗನವಾಡಿ ಬಳಿ, ಹಾಗೂ ಯಳಜಿತ್ ಗ್ರಾಮದ ಸಾಂತೇರಿ ಬಾಳಿಗದ್ದೆ ನಾರಾಯಣ ಪೂಜಾರಿ ಮನೆ ಬಳಿ ನಿರ್ಮಾಣ. (168154)	ರೂ. 63,31,817.00	ರೂ. 1,49,500.00	03.04.2023	3ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರು
	ಕುಂದಾಪುರ ತಾಲ್ಲೂಕು ಅಮಾಸೆಬೈಲು ಗ್ರಾಮ ಪಂಚಾಯತ್ ವ್ಯಾಪ್ತಿಯ ರಟ್ಟಾಡಿ ಗ್ರಾಮದ ರಟ್ಟಾಡಿ ರಾಮಚಂದ್ರ ಬಾಯರಿ ಮನೆ ಸಮೀಪ ಕಾಲುಸಂಕ ರಚನೆ. (I.No.165970) (**3ನೇ ಕರೆ**)	ರೂ. 5,87,444.60	ರೂ. 17,400.00	03.04.2023	4ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರು
	ಕುಂದಾಪುರ ತಾಲ್ಲೂಕು ಕಾಳಾವರ ಗ್ರಾಮ ಪಂಚಾಯತ್ ವ್ಯಾಪ್ತಿಯ ಕಿರಾಬಳಿಬೆಟ್ಟುವಿನ ಹೋಳೆಗೆ ಕಾಲುಸಂಕ ರಚನೆ. (I.No.165987) (**3ನೇ ಕರೆ**)	ರೂ. 13,05,269.55	ರೂ. 38,600.00	03.04.2023	4ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರು

ಕೆಲಸದ ಕುರಿತಾದ ಯಾವುದೇ ಇತರ ವಿವರಗಳನ್ನು ಕಚೇರಿಯ ವೇಳೆಯಲ್ಲಿ ಈ ಕಚೇರಿಯಲ್ಲಿ ಪಡೆಯಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರು,
ಲೋಕೋಪಯೋಗಿ ಇಲಾಖೆ, ಉಡುಪಿ ವಿಭಾಗ, ಉಡುಪಿ.

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಚೇರಿ, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ ಚಿಕ್ಕೋಡಿ

ದೂರವಾಣೀ ಸಂಖ್ಯೆ: 08338–275101 ಇ–ಮೇಲ್ : ee.rdws.ckd@gmail.com

ಸಂಖ್ಯೆ: ಕಾಇಂ/ಗ್ರಾಕುನೀ&ನೈ/ವಿಚಿ/ತಾಂಶಾಕೆಡಬ್ಲ್ಯೂ4/ಟೆಂಡರ್/88/2022–23/ ದಿನಾಂಕ: 24–03–2023

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ ವಿಭಾಗ, ಚಿಕ್ಕೋಡಿ ವ್ಯಾಪ್ತಿಯ ಸನ್ 2021–22ನೇ ಸಾಲಿನ ಜಲ ಜೀವನ್ ಮೀಷನ್ ಯೋಜನೆಯಡಿ ಅನುಮೋದಿತ ಕಾಮಗಾರಿಗಳನ್ನು ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾಗಿದೆ. ವಿವರಗಳನ್ನು https://eproc.karnataka.gov.in ರಲ್ಲಿ ಪಡೆಯಬಹುದಾಗಿರುತ್ತದೆ.

1	ಪೂರ್ವಭಾವಿ ಸಭೆ ಮತ್ತು ದಿನಾಂಕ ಹಾಗೂ ಸ್ಥಳ ಪರಿಶೀಲನೆ	:	27–03–2023ರ ಬೆಳಿಗ್ಗೆ 11:00 ಗಂಟೆಗೆ ಮಾನ್ಯ ಕಾರ್ಯನಿರ್ವಾಹಕ ಅಭಿಯಂತರರು ಗ್ರಾ.ಕು.ನೀ.&ನೈ ವಿಭಾಗ ಚಿಕ್ಕೋಡಿ, 591201
2	ಭರ್ತಿ ಮಾಡಲಾದ ಟೆಂಡರ್ ದಾಖಲಾತಿಗಳನ್ನು ಅನ್‌ಲೈನ್‌ನಲ್ಲಿ ಸ್ವೀಕರಿಸುವ ಕೊನೆಯ ದಿನಾಂಕ	:	31–03–2023ರ ಸಂಜೆ 04:00 ಗಂಟೆಯವರೆಗೆ
3	ತಾಂತ್ರಿಕ ಬಿಡ್ ತೆರೆಯುವ ದಿನಾಂಕ	:	01–04–2023ರ ಸಂಜೆ 05:30 ಗಂಟೆಗೆ

ಕ್ರ. ಸಂ	ಕಾಮಗಾರಿಯ ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ (ರೂ.ಗಳಲ್ಲಿ)	ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿಪಡಿಸಿದ ಕಾಲಾವಧಿ (ಮಳೆಗಾಲ ಸೇರಿ)
1	Providing FHTCs to Galataga Village in Chikodi Taluka Belagavi District by Augmentation of MVS to Galataga Village. (Indent No. 60911)	552.47	829000/–	6 ತಿಂಗಳು
2	Providing 2405 FHTCs to Kudachi rural. Gautam nagar, Chinchalikodi and nirashritara colony by Augmentation of SVS to kudachi rural villages raybag taluka in Belagavi District (Indent No. 60974)	576.10	865000/–	6 ತಿಂಗಳು

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಗ್ರಾ.ಕು.ನೀ.&ನೈ. ವಿಭಾಗ, ಚಿಕ್ಕೋಡಿ

DIPO/RO No. 2172/2022-23

ಪಿಇಎಸ್ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ್ದ ಸಂವಾದದಲ್ಲಿ ಕೇಂದ್ರ ಸಚಿವೆ ಸ್ಮೃತಿ ಇರಾನಿ

‘ಮೋದಿಗೆ ರಾಹುಲ್ ಸವಾಲಾಗುವುದು ಅಸಾಧ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಹುಲ್ ಗಾಂಧಿ ಒಬ್ಬ ಗೊಂದಲದ ಮನಸ್ಥಿತಿಯ ವ್ಯಕ್ತಿ. ಅಂಥವರು 2024ರ ಚುನಾವಣೆಯಲ್ಲಿ ಪ್ರಧಾನಿ ಮೋದಿ ಅವರಿಗೆ ಹೇಗೆ ಸವಾಲು ಒಡ್ಡಬಲ್ಲರು’ ಎಂದು ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಸ್ಮೃತಿ ಇರಾನಿ ಪ್ರಶ್ನಿಸಿದರು.

ನಗರದ ಪಿಇಎಸ್ ವಿಶ್ವವಿದ್ಯಾಲಯದಲ್ಲಿ ಸೋಮವಾರ ಭಾರತೀಯ ಜನತಾ ಯುವ ಮೋರ್ಚಾ ಹಮ್ಮಿಕೊಂಡಿದ್ದ ಮೊದಲ ಬಾರಿ ಮತದಾನದ ಹಕ್ಕು ಪಡೆದ ವಿದ್ಯಾರ್ಥಿಗಳ ಜತೆಗಿನ ಸಂವಾದದಲ್ಲಿ ‘ರಾಹುಲ್ ಗಾಂಧಿ ಅನರ್ಹತೆ’ ಕುರಿತ ಪ್ರಶ್ನೆಗೆ ಅವರು ಪ್ರತಿಕ್ರಿಯಿಸಿದರು.

‘ಸದನಕ್ಕೆ ಯಾವಾಗಲೂ ಗೈರುಹಾಜರಾಗುವ ಸಂಸದರಿಂದ ಬದಲಾವಣೆ ನಿರೀಕ್ಷಿಸಲು ಸಾಧ್ಯವಿಲ್ಲ. ಅವರು ಅವಮಾನಿಸಿರುವುದು ಒಂದು ಸಮುದಾಯವನ್ನು. ಅಲ್ಲದೆ, ನ್ಯಾಯಾಲಯದಲ್ಲಿ ತಮ್ಮನ್ನು ಸಮರ್ಥಿಸಿಕೊಂಡಿಲ್ಲ. ನ್ಯಾಯಾಲಯದ ಸಾಮರ್ಥ್ಯದ ಅರಿವೂ ಅವರಿಗಿಲ್ಲ. ನ್ಯಾಯಾಂಗಕ್ಕಿಂತ ತಾವು ದೊಡ್ಡವರೆಂದು ಭಾವಿಸಿಕೊಂಡಿರಬಹುದು. ಅವರ ಅನರ್ಹತೆಯ ವಿಷಯದಲ್ಲಿ ಪ್ರಧಾನಿ, ಬಿಜೆಪಿಯ ಪಾತ್ರವಿಲ್ಲ. ಕಾನೂನಿನ ಪ್ರಕಾರ ಲೋಕಸಭೆಯ ಸ್ಪೀಕರ್ ಕ್ರಮ ಕೈಗೊಂಡಿದ್ದಾರೆ’ ಎಂದರು.

‘ದೇಶದಲ್ಲಿ ಕಾನೂನು ರೂಪಿಸುವವರೇ ಎಷ್ಟೋ ವಿಚಾರಗಳನ್ನು ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ. ಆದರೆ, ಮತದಾರರಿಗೆ ನೀತಿ ಬೋಧನೆ ಏಕೆ?’ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಪ್ರತಿಯೊಬ್ಬರಿಗೂ ಅವರದೇ ಆಯ್ಕೆಗಳಿರುತ್ತವೆ. ಪ್ರತಿಯೊಬ್ಬರೂ ಜಾಗೃತ ಸಮಾಜದ ಭಾಗವಾಗಿರುವ ಕಾರಣ ಮತ ಚಲಾವಣೆಯನ್ನು ಹಕ್ಕು ಎಂದು ಭಾವಿಸುವ ಬದಲು, ಜವಾಬ್ದಾರಿಯೆಂದು ಪರಿಗಣಿಸಬೇಕು’ ಎಂದು ಸಲಹೆ ನೀಡಿದರು.

ಬಹುಕ್ಷೇತ್ರಗಳ ಸ್ಪರ್ಧೆ, ಮೀಸಲಾತಿ ಸಮರ್ಥನೆ: ಒಂದಕ್ಕಿಂತ ಹೆಚ್ಚು ಕ್ಷೇತ್ರಗಳಲ್ಲಿ ಸ್ಪರ್ಧಿಸುವುದರಿಂದ ಜನರ ತೆರಿಗೆ ಹಣ ವ್ಯರ್ಥವಾಗುತ್ತದೆ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ಜನನಾಯಕರು ಸಂಸತ್ ಪ್ರವೇಶಿಸಲು ಇಂತಹ ಅವಕಾಶಗಳ ಅಗತ್ಯವಿದೆ. ಅದನ್ನು ಗಮನಿಸಿಯೇ ಹಿರಿಯರು ಅವಕಾಶ ಕೊಟ್ಟಿದ್ದಾರೆ. ಅಮೇಠಿಯಲ್ಲಿ ಸೋಲು ಕಂಡ ರಾಹುಲ್ ವಯನಾಡಿನ ಮೂಲಕ ಲೋಕಸಭೆ ಪ್ರವೇಶಿಸಿದರು’ ಎಂದರು.

‘ಶೋಷಿತರು, ದುರ್ಬಲರು, ಆರ್ಥಿಕವಾಗಿ ಹಿಂದುಳಿದವರು ಮುಖ್ಯವಾಹಿನಿಗೆ ಬರಲು ಇನ್ನಷ್ಟು ಸಮಯದ ಅವಶ್ಯ ಇದೆ. ಅಲ್ಲಿಯವರೆಗೂ ಮೀಸಲಾತಿ ಇರುತ್ತದೆ’ ಎಂದು ಹೇಳಿದರು.

ಪಿಇಎಸ್ ವಿಶ್ವವಿದ್ಯಾಲಯದ ಕುಲಪತಿ ಎಂ.ಆರ್.ದೊರೆಸ್ವಾಮಿ, ಸಂಸದ ತೇಜಸ್ವಿ ಸೂರ್ಯ, ಪಿಇಎಸ್ ಸಿಇಒ ಡಿ.ಜವಾಹರ್ ಇದ್ದರು.

ಪಿಇಎಸ್ ವಿಶ್ವವಿದ್ಯಾಲಯ ಆಯೋಜಿಸಿದ್ದ ಯುವ ಸಂವಾದದಲ್ಲಿ ಪಿಇಎಸ್ ವಿಶ್ವವಿದ್ಯಾಲಯದ ಕುಲಪತಿ ಡಾ.ಎಂ.ಆರ್.ದೊರೆಸ್ವಾಮಿ ಅವರು ಕೇಂದ್ರ ಸಚಿವೆ ಸ್ಮೃತಿ ಇರಾನಿ ಅವರಿಗೆ ನೆನಪಿನ ಕಾಣಿಕೆ ನೀಡಿ ಗೌರವಿಸಿದರು. ಸಂಸದ ತೇಜಸ್ವಿ ಸೂರ್ಯ ಇದ್ದರು ಪ್ರಜಾವಾಣಿ ಚಿತ್ರ.

ಮುಟ್ಟಿನ ರಜೆಗಿಲ್ಲ ಸಹಮತ

ಮುಟ್ಟಿನ ರಜೆ ಜಾರಿಯ ಕುರಿತು ಸಹಮತ ವ್ಯಕ್ತಪಡಿಸದ ಸಚಿವೆ ಸ್ಮೃತಿ, ವಾರಾಂತ್ಯದ ರಜೆಗಳು, ಆಯ್ಕೆಯ ರಜೆಗಳು, ಹಬ್ಬದ ರಜೆಗಳನ್ನು ಕಳೆದರೆ ತಿಂಗಳಿಗೆ 17 ದಿನಗಳು ಮಾತ್ರ ಕೆಲಸ ಮಾಡುತ್ತೇವೆ. ಮಹಿಳೆಯರಿಗೆ 26 ವಾರಗಳು ಹೆರಿಗೆ ರಜೆ, ಶಿಶುಪಾಲನಾ ರಜೆಗಳಿವೆ. ಇದರ ಜತೆಗೆ ಮುಟ್ಟಿನ ರಜೆ ಘೋಷಣೆ ಮಾಡಿದರೆ ಸಂಸ್ಥೆ ಮಹಿಳೆಯರನ್ನು ಹೇಗೆ ಕೆಲಸಕ್ಕೆ ತೆಗೆದುಕೊಳ್ಳುತ್ತದೆ. ಇಂತಹ ನೀತಿಗಳು ಮಹಿಳೆಯರ ಉದ್ಯೋಗವನ್ನು ಕಿತ್ತುಕೊಳ್ಳಬಹುದು. ಸಮಾನ ಕೆಲಸ, ಸಮಾನ ಅವಕಾಶಗಳಿಗೆ ಇಂತಹ ರಜೆಗಳು ಅಡ್ಡಿಯಾಗುತ್ತವೆ ಎಂದರು.

ಮಾಡಾಳ್ ಪ್ರಕರಣದ ಪ್ರಶ್ನೆಗಿಲ್ಲ ಉತ್ತರ

ಚನ್ನಗಿರಿ ಕ್ಷೇತ್ರದ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಲಂಚ ಪ್ರಕರಣ ಕುರಿತು ವಿದ್ಯಾರ್ಥಿಯೊಬ್ಬ ಕೇಳಿದ ಪ್ರಶ್ನೆಗೆ ಸ್ಮೃತಿ ಇರಾನಿ ಉತ್ತರಿಸುವ ಮೊದಲೇ ಸಂವಾದದ ನಿರ್ವಹಣೆ ಮಾಡುತ್ತಿದ್ದ ಸಂಸದ ತೇಜಸ್ವಿ ಸೂರ್ಯ, ಬೇರೊಬ್ಬ ವಿದ್ಯಾರ್ಥಿಗೆ ಮುಂದಿನ ಪ್ರಶ್ನೆ ಕೇಳಲು ಅನುವು ಮಾಡಿಕೊಟ್ಟರು. ಇದರಿಂದ ಪ್ರಶ್ನೆ ಕೇಳಿದ ವಿದ್ಯಾರ್ಥಿ ಬೇಸರದಿಂದ ಕುಳಿತುಕೊಂಡರು.

‘ಅಸಹಿಷ್ಣುತೆಯ ಭಾಗ ಬಿಬಿಸಿ ಸಾಕ್ಷ್ಯಚಿತ್ರ’

ಕೋವಿಡ್ ನಿರ್ವಹಣೆ, ರಷ್ಯಾ–ಉಕ್ರೇನ್ ಯುದ್ಧದ ಕುರಿತ ತಟಸ್ಥತೆ, ಆರ್ಥಿಕ ಪ್ರಗತಿ ಪರಿಣಾಮ ಭಾರತ ವಿಶ್ವ ಗುರುವಾಗುವತ್ತ ಸಾಗಿದೆ. ಜತೆಗೆ ಕೆಲ ರಾಷ್ಟ್ರಗಳ ಅಸಹಿಷ್ಣತೆಯೂ ಹೆಚ್ಚಿದೆ. ಅದರ ಪರಿಣಾಮವೇ ಬಿಬಿಸಿ ಸಾಕ್ಷ್ಯ ಚಿತ್ರ ಮತ್ತಿತರ ಪ್ರಕರಣಗಳು ಎಂದು ಸಚಿವೆ ಹೇಳಿದರು.

ಇದೇ ಸಮಯದಲ್ಲಿ ಕಾಂಗ್ರೆಸ್ ಗ್ಯಾರಂಟಿ ಕುರಿತು ಉತ್ತರಿಸಿದ ಅವರು, ಅಮೇಥಿ ಜನರಿಗೆ ಮೂರು ತಲೆ ಮಾರು ಇಂತಹ ಗ್ಯಾರಂಟಿ ನೀಡಿಯೇ ಆಯ್ಕೆಯಾಗಿದ್ದರು. ಪ್ರಧಾನಿಯೂ ಆದರು. ಆದರೆ, ತಾವು ಆಯ್ಕೆಯಾದಾಗ ಶೇ 80ರಷ್ಟು ಜನರಿಗೆ ಶೌಚಾಲಯಗಳೇ ಇರಲಿಲ್ಲ ಎಂದರು.

ಸುದ್ದಿ 2 ನಿಮಿಷ

ಭೂ ಒತ್ತುವರಿ: ಪ್ರಕರಣ ದಾಖಲು

ಬೆಂಗಳೂರು: ಕೆ.ಆರ್. ಪುರ ಹೋಬಳಿ ಚಿನ್ನಪ್ಪನಹಳ್ಳಿ ಗ್ರಾಮದ ಸರ್ವೆ ನಂ. 20ರಲ್ಲಿ 19 ಎಕರೆ 19 ಗುಂಟೆ ಸರ್ಕಾರಿ ಖರಾಬು ಭೂಮಿಯನ್ನು ಪ್ರಭಾವಿಗಳು ಒತ್ತುವರಿ ಮಾಡಿಕೊಂಡು ಬಡಾವಣೆ ನಿರ್ಮಿಸಿರುವ ಬಗ್ಗೆ ಸ್ವಯಂಪ್ರೇರಿತವಾಗಿ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯ ಪ್ರಕರಣ ದಾಖಲಿಸಿಕೊಂಡಿದೆ.

ಮಾರ್ಚ್ 20ರಂದು ‘ಸರ್ಕಾರಿ ಜಮೀನು ಒತ್ತುವರಿ: ಕ್ರಮಕ್ಕೆ ಸೂಚನೆ’ ಶೀರ್ಷಿಕೆಯಡಿ ‘ಪ್ರಜಾವಾಣಿ’ಯಲ್ಲಿ ಸುದ್ದಿ ಪ್ರಕಟವಾಗಿತ್ತು. ಇದು ಭೂ ಒತ್ತುವರಿಗೆ ಸಂಬಂಧಿಸಿದ್ದಾಗಿರುವುದರಿಂದ ವಿಶೇಷ ನ್ಯಾಯಾಲಯ ಪ್ರಕರಣ ದಾಖಲಿಸಿಕೊಂಡಿದೆ. ಪೂರ್ವ ತಹಶೀಲ್ದಾರ್ ಅವರಿಗೆ ವಿವರವಾದ ವರದಿ ಸಲ್ಲಿಸುವಂತೆ ಸೂಚಿಸಿ, ವಿಚಾರಣೆಯನ್ನು ಮೇ 25ಕ್ಕೆ ಮುಂದೂಡಿದೆ ಎಂದು ಸರ್ಕಾರಿ ಅಭಿಯೋಜಕರು ತಿಳಿಸಿದ್ದಾರೆ.

‘ಬ್ರಾಹ್ಮಣರಿಗೆ ಹೆಚ್ಚಿನ ಅವಕಾಶ ಕಲ್ಪಿಸಿ’

ಬೆಂಗಳೂರು: ‘ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಬ್ರಾಹ್ಮಣ ಸಮುದಾಯದ ಅಭ್ಯರ್ಥಿಗಳಿಗೆ ಹೆಚ್ಚಿನ ಅವಕಾಶ ಕಲ್ಪಿಸಬೇಕು’ ಎಂದು ಧಾರ್ಮಿಕ ಚಿಂತಕ ಪಾವಗಡ ಪ್ರಕಾಶ್‌ರಾವ್ ಒತ್ತಾಯಿಸಿದರು.

ಮಲ್ಲೇಶ್ವರ ಬ್ರಾಹ್ಮಣ ಸಭಾ ಮತ್ತು ಮಲ್ಲೇಶ್ವರ ಬ್ರಾಹ್ಮಣ ಸಭಾ ಟ್ರಸ್ಟ್‌ನಿಂದ ಸತ್ಯಾತ್ಮತೀರ್ಥ ಶ್ರೀಪಾದ ಸ್ವಾಮೀಜಿ ಅವರ ಸುವರ್ಣ ಜನ್ಮೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ ಗುರುವಂದನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಈ ಚುನಾವಣೆಯಲ್ಲಿ ಬ್ರಾಹ್ಮಣ ಮಹಾಸಭಾ ಪ್ರಮುಖ ಪಾತ್ರ ವಹಿಸಬೇಕು ಎಂದು ಕರೆ ನೀಡಿದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ್ ಹಾರನಹಳ್ಳಿ ಮಾತನಾಡಿ, ಸನಾತನ ಧರ್ಮ ಉಳಿಯಲು ಯತಿವರ್ಯರ ಪಾತ್ರ ಅತ್ಯಂತ ಮಹತ್ವದ್ದಾಗಿದ್ದು, ತ್ಯಾಗಕ್ಕೆ ಹೆಸರಾದ ಧರ್ಮ ಉಳಿಸಲು ಪ್ರತಿಯೊಬ್ಬರೂ ಶ್ರಮಿಸಬೇಕು ಎಂದು ಹೇಳಿದರು.

ಪರಮೇಶ್ವರ ಬೆಂಬಲಿಸಲು ನಿರ್ಣಯ

ಕೊರಟಗೆರೆ: ಕೊರಟಗೆರೆ ವಿಧಾನಸಭಾ ಕ್ಷೇತ್ರದಲ್ಲಿ 2013ರಲ್ಲಿ ಡಾ.ಜಿ. ಪರಮೇಶ್ವರ ಅವರ ಸೋಲಿಗೆ ಕುರುಬ ಸಮುದಾಯ ಕಾರಣ ಎಂಬ ಕಳಂಕ ಹೋಗಲಾಡಿಸಲು ಈ ಬಾರಿ ಚುನಾವಣೆಯಲ್ಲಿ ಸಮುದಾಯ ಅವರನ್ನು ಬೆಂಬಲಿಸಬೇಕು. ಆ ಮೂಲಕ ಸಮುದಾಯದ ಮೇಲಿದ್ದ ಕಳಂಕ ಹೋಗಲಾಡಿಸಬೇಕಿದೆ ಎಂದು ಕುರುಬ ಸಮುದಾಯದ ಮುಖಂಡರು ನಿರ್ಣಯ ಕೈಗೊಂಡಿದ್ದಾರೆ.

ಪಟ್ಟಣದಲ್ಲಿ ಭಾನುವಾರ ಸಂಜೆ ತಾಲ್ಲೂಕು ಕುರುಬ ಸಮಾಜ ಹಮ್ಮಿಕೊಂಡಿದ್ದ ಕುರುಬರ ಜಾಗೃತಿ ಸಮಾವೇಶದಲ್ಲಿ ಎಲ್ಲ ಮುಖಂಡರು ಎರಡೂ ಕೈಗಳನ್ನು ಮೇಲೆತ್ತುವ ಮೂಲಕ ಪರಮೇಶ್ವರ ಅವರಿಗೆ ಬೆಂಬಲ ಘೋಷಿಸಿದರು.

‘ಬೆಂಗಳೂರಿನ 5 ಕ್ಷೇತ್ರಗಳಲ್ಲಿ ಲಿಂಗಾಯತರಿಗೆ ಅವಕಾಶ ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಬೆಂಗಳೂರಿನ 28 ವಿಧಾನಸಭೆ ಕ್ಷೇತ್ರಗಳ ಪೈಕಿ ಕನಿಷ್ಠ 5 ಕ್ಷೇತ್ರಗಳಲ್ಲಿ ವೀರಶೈವ ಲಿಂಗಾಯತ ಸಮುದಾಯದ ಅಭ್ಯರ್ಥಿಗಳಿಗೆ ಅವಕಾಶ ನೀಡಬೇಕು ಎಂದು ಅಖಿಲ ಭಾರತ ವೀರಶೈವ ಮಹಾಸಭಾದ ಬೆಂಗಳೂರು ನಗರ ಜಿಲ್ಲಾ ಘಟಕ ಆಗ್ರಹಿಸಿದೆ.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವೀರಶೈವ ಮಹಾಸಭಾದ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಜಿ.ಎಸ್. ಮೃತ್ಯುಂಜಯ, ‘ಬೆಂಗಳೂರು ಮಹಾನಗರದಲ್ಲಿ ವೀರಶೈವ ಲಿಂಗಾಯತರು ಸುಮಾರು 30 ಲಕ್ಷಕ್ಕೂ ಅಧಿಕ ಜನಸಂಖ್ಯೆ ಹೊಂದಿದ್ದು, ಬೆಂಗಳೂರಿನ 28 ಕ್ಷೇತ್ರಗಳ ಪೈಕಿ 17 ವಿಧಾನಸಭೆ ಕ್ಷೇತ್ರಗಳಲ್ಲಿ ನಮ್ಮ ಸಮುದಾಯ ನಿರ್ಣಾಯಕ ಪಾತ್ರ ವಹಿಸುತ್ತದೆ. ಆದ್ದರಿಂದ ಎಲ್ಲ ಪಕ್ಷದವರು ನಮ್ಮ ಸಮುದಾಯದ ಅಭ್ಯರ್ಥಿಗಳಿಗೆ ಅವಕಾಶ ಕಲ್ಪಿಸಬೇಕು’ ಎಂದು ಒತ್ತಾಯಿಸಿದರು.

‘ಎರಡು ದಿನಗಳ ಹಿಂದೆ ಕಾಂಗ್ರೆಸ್ ಬಿಡುಗಡೆ ಮಾಡಿರುವ ಮೊದಲ ಪಟ್ಟಿಯಲ್ಲಿ ಬೆಂಗಳೂರು ನಗರ ಜಿಲ್ಲೆಯಲ್ಲಿ ವೀರಶೈವ ಲಿಂಗಾಯತ ಸಮುದಾಯದ ಯಾರಿಗೂ ಟಿಕೆಟ್ ನೀಡಿಲ್ಲ. ಮುಂದಿನ ಪಟ್ಟಿಯಲ್ಲಾದರೂ ನಮ್ಮ ಸಮುದಾಯಕ್ಕೆ ಆದ್ಯತೆ ನೀಡಬೇಕು. ಬಿಜೆಪಿ ಮತ್ತು ಜೆಡಿಎಸ್ ಸಹ ಲಿಂಗಾಯತರಿಗೆ ಕನಿಷ್ಠ 5 ವಿಧಾನಸಭೆ ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಅವಕಾಶ ನೀಡಬೇಕು. ಯಾವ ಪಕ್ಷ ನಮ್ಮ ಬೇಡಿಕೆಗಳನ್ನು ಈಡೇರಿಸುತ್ತದೆಯೋ ಅಂತಹ ಪಕ್ಷಗಳಿಗೆ ನಮ್ಮ ಸಮುದಾಯ ಬೆಂಬಲ ನೀಡಲಿದೆ’ ಎಂದರು.

ಎರಡನೇ ದಿನ ಪ್ರಯಾಣಿಕರ ಸಂಖ್ಯೆಯಲ್ಲಿ ಕೊಂಚ ಏರಿಕೆ

ವೈಟ್‌ಫೀಲ್ಡ್ ಮೆಟ್ರೊ: 18 ಸಾವಿರ ಜನ ಪ್ರಯಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐ.ಟಿ ಕಾರಿಡಾರ್ ಎಂದೇ ಕರೆಯಲಾಗುತ್ತಿರುವ ವೈಟ್‌ಫೀಲ್ಡ್ ಮೆಟ್ರೊ ರೈಲು ಕಾರ್ಯಾಚರಣೆ ಆರಂಭವಾಗಿದ್ದು, ಸೋಮವಾರ 18 ಸಾವಿರ ಜನ ಪ್ರಯಾಣ ಮಾಡಿದ್ದಾರೆ.

ಭಾನುವಾರ ಬೆಳಿಗ್ಗೆ 7ರಿಂದ ವಾಣಿಜ್ಯ ಸಂಚಾರ ಆರಂಭವಾಗಿದ್ದು, ಭಾನುವಾರ ರಾತ್ರಿ 11ರವರೆಗೆ 16,319 ಜನ ಪ್ರಯಾಣ ಮಾಡಿದ್ದರು. ಎರಡನೇ ದಿನ ಪ್ರಯಾಣಿಕರ ಸಂಖ್ಯೆಯಲ್ಲಿ ಕೊಂಚ ಏರಿಕೆಯಾಗಿದೆ. ಬೆಳಿಗ್ಗೆ 5ರಿಂದ ರಾತ್ರಿ 9 ಗಂಟೆ ತನಕ 18 ಸಾವಿರ ಮಂದಿ ಪ್ರಯಾಣ ಮಾಡಿದ್ದಾರೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಮಾಹಿತಿ ನೀಡಿದರು.

ಪ್ರತಿನಿತ್ಯ 1 ಲಕ್ಷಕ್ಕೂ ಹೆಚ್ಚು ಜನ ಈ ಮಾರ್ಗದಲ್ಲಿ ಪ್ರಯಾಣ ಮಾಡಲಿದ್ದಾರೆ ಎಂದು ಅಧಿಕಾರಿಗಳು ಅಂದಾಜಿಸಿದ್ದರು. ಆದರೆ, ಮೊದಲ ಎರಡನೇ ದಿನ ಕಡಿಮೆ ಜನ ಪ್ರಯಾಣ ಮಾಡಿದ್ದಾರೆ. ಮುಂದಿನ ದಿನಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನ ಬಳಕೆ ಮಾಡಲಿದ್ದಾರೆ ಎಂದರು.

ಸದ್ಯ ಪ್ರತಿ 12 ನಿಮಿಷಗಳ ಅಂತರದಲ್ಲಿ ರೈಲು ಸೇವೆ ಒದಗಿಸಲಾಗುತ್ತಿದ್ದು, ಪ್ರಯಾಣಿಕರ ದಟ್ಟಣೆ ಆಧರಿಸಿ ಅಂತರ ಕಡಿಮೆ ಮಾಡಲಾಗುವುದು ಎಂದರು.

ವೈಟ್‌ಫೀಲ್ಡ್ ಮೆಟ್ರೊ

ಪೂರ್ಣಗೊಳ್ಳದ ಮಾರ್ಗ: ಆಟೊ ಪ್ರಯಾಣ ದುಬಾರಿ

ವೈಟ್‌ಫೀಲ್ಡ್ ಮಾರ್ಗ ಪೂರ್ಣ ಪ್ರಮಾಣದಲ್ಲಿ ಆರಂಭವಾಗದೆ ಇರುವುದು ಪ್ರಯಾಣಿಕರಿಗೆ ಕಿರಿಕಿರಿ ಉಂಟಾಗಿದೆ.

ಬೈಯಪ್ಪನಹಳ್ಳಿ ಮತ್ತು ಕೆ.ಆರ್.ಪುರ ನಡುವಿನ ಎರಡು ಕಿಲೋ ಮೀಟರ್ ಮಾರ್ಗದಲ್ಲಿ ಕಾಮಗಾರಿ ನಡೆಯುತ್ತಿದ್ದು, ಅಧಿಕಾರಿಗಳ ಪ್ರಕಾರ ಜೂನ್ ಅಂತ್ಯದ ತನಕ ಕಾಯಬೇಕಿದೆ. ವೈಟ್‌ಫೀಲ್ಡ್ ಕಡೆಗೆ ಸಾಗಬೇಕಾದವರು ಬೈಯಪ್ಪನಹಳ್ಳಿಯಲ್ಲಿ ಇಳಿದು ಬಸ್, ಆಟೊ ಅಥವಾ ಟ್ಯಾಕ್ಸಿಯಲ್ಲಿ ಕೆ.ಆರ್.ಪುರ ತನಕ ಪ್ರಯಾಣ ಮಾಡಬೇಕಿದೆ.

ಇದು ಪ್ರಯಾಣಿಕರಿಗೆ ಕಿರಿಕಿರಿ ಉಂಟು ಮಾಡುತ್ತಿದೆ. ಅಲ್ಲದೇ ದುಬಾರಿ ಪ್ರಯಾಣದ ಬಿಸಿ ಅನುಭವಿಸಬೇಕಿದೆ.

‘ಎರಡು ಕಿಲೋ ಮೀಟರ್ ದೂರಕ್ಕೆ ಆಟೊ ಚಾಲಕರು ಮನ ಬಂದಂತೆ ದರ ಕೇಳುತ್ತಿದ್ದಾರೆ. ₹100–₹120 ತನಕ ದರ ಪಡೆಯುತ್ತಿದ್ದಾರೆ. ತುರ್ತಾಗಿ ಹೋಗಬೇಕಿರುವ ಪ್ರಯಾಣಿಕರು ಬೇರೆ ದಾರಿ ಇಲ್ಲದೆ ದುಬಾರಿ ಪಾವತಿಸಿ ತೆರಳುವಂತಾಗಿದೆ’ ಎಂದು ಪ್ರಯಾಣಿಕರು ಬೇಸರ ವ್ಯಕ್ತಪಡಿಸುತ್ತಾರೆ.

ಸಿಜೆಐಗೆ ಕಳವಳದ ಪತ್ರ ಬರೆದಿದ್ದ ವಕೀಲರ ಸಂಘ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಅವರ ನಿರೀಕ್ಷಣಾ ಜಾಮೀನು ಅರ್ಜಿಯನ್ನು ದಿನಬೆಳಗಾಗುವುದರೊಳಗೆ ವಿಚಾರಣೆ ನಡೆಸಿ ನಿರೀಕ್ಷಣಾ ಜಾಮೀನು ಮಂಜೂರು ಮಾಡಲಾಗಿದೆ’ ಎಂದು ನ್ಯಾಯಮೂರ್ತಿ ಕೆ.ನಟರಾಜನ್ ಅವರ ವಿಚಾರಣಾ ಪ್ರಕ್ರಿಯೆಗೆ ಬೆಂಗಳೂರು ವಕೀಲರ ಸಂಘ ತೀವ್ರ ಆಘಾತ ವ್ಯಕ್ತಪಡಿಸಿತ್ತು.

ಇದೇ 7ರಂದು ಪ್ರಕರಣದ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠವು, ಆರೋಪಿ ಮಾಡಾಳ್ ವಿರೂಪಾಕ್ಷಪ್ಪ ಅವರಿಗೆ ಮಧ್ಯಂತರ ನಿರೀಕ್ಷಣಾ ಜಾಮೀನು ಮಂಜೂರು ಮಾಡಿತ್ತು. ಮಧ್ಯಂತರ ಜಾಮೀನು ನೀಡಿದ ಕೆಲವೇ ಗಂಟೆಗಳಲ್ಲಿ ಸಂಘದ ಅಧ್ಯಕ್ಷ ವಿವೇಕ್ ರೆಡ್ಡಿ, ಪ್ರಧಾನ ಕಾರ್ಯದರ್ಶಿ ಟಿ.ಜಿ.ರವಿ ಮತ್ತು ಖಜಾಂಚಿ ಎಂ.ಟಿ.ಹರೀಶ್ ಸಂಘವು ತುರ್ತು ಸಭೆ ನಡೆಸಿದ್ದರು.

ನಂತರ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರಿಗೆ ಗಂಭೀರವಾದ ಪತ್ರವೊಂದನ್ನು ಬರೆದಿದ್ದರಲ್ಲದೆ, ‘ಇಂದು ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ನಡೆಸಿರುವ ಪ್ರಕ್ರಿಯೆ ನ್ಯಾಯಾಂಗದ ಬಗ್ಗೆ ಶ್ರೀಸಾಮಾನ್ಯರಿಗಿರುವ ನಂಬಿಕೆಯನ್ನು ಹುಸಿ ಮಾಡಿದೆ’ ಎಂದು ಆತಂಕ ವ್ಯಕ್ತಪಡಿಸಿದ್ದರು.

‘ಹೈಕೋರ್ಟ್‌ನ ಸಾಮಾನ್ಯ ಪ್ರಕ್ರಿಯೆಯ ಅನುಸಾರ ಹೊಸ ಪ್ರಕರಣಗಳು ಅದರಲ್ಲೂ ನಿರೀಕ್ಷಣಾ ಜಾಮೀನು ಕೋರಿಕೆಯ ಕ್ರಿಮಿನಲ್ ಅರ್ಜಿಗಳು ದಾಖಲಾದರೆ ಅವು ನ್ಯಾಯಪೀಠದ ಮುಂದೆ ವಿಚಾರಣೆಗೆ ನಿಗದಿಯಾಗಲು ವಾರಗಟ್ಟಲೆ ಸಮಯ ತೆಗೆದುಕೊಳ್ಳುತ್ತವೆ. ಆದರೆ, ದೊಡ್ಡವರ ಪ್ರಕರಣಗಳನ್ನು ಮಾತ್ರ ದಿನಬೆಳಗಾಗುವದರೊಳಗೆ ಪುರಸ್ಕರಿಸಲಾಗುತ್ತಿದೆ’ ಎಂದು ಆ ಪತ್ರದಲ್ಲಿ ವಿವರಿಸಲಾಗಿತ್ತು.

‘ಇವತ್ತು ಮಾಡಾಳ್ ವಿರೂಪಾಕ್ಷಪ್ಪ ಅವರ ಅರ್ಜಿ ವಿಚಾರಣೆಯಲ್ಲಿ ಕೈಗೊಂಡ ನಿಲುವನ್ನೇ ಶ್ರೀಸಾಮಾನ್ಯರ ವಿಷಯದಲ್ಲೂ ಅನುಸರಿಸುವಂತಾಗಬೇಕು. ಅದಕ್ಕಾಗಿ ಸದ್ಯ ಹೈಕೋರ್ಟ್‌ನಲ್ಲಿ ವಿಚಾರಣೆಗೆ ಕಾದು ಕುಳಿತಿರುವ ಎಲ್ಲ ನಿರೀಕ್ಷಣಾ ಜಾಮೀನು ಅರ್ಜಿಗಳನ್ನು ಒಂದೇ ದಿನದಲ್ಲಿ ನ್ಯಾಯಪೀಠದ ಎದುರು ವಿಚಾರಣೆಗೆ ನಿಗದಿಯಾಗುವಂತೆ ಪೋಸ್ಟ್ ಮಾಡಲು ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳು ರಿಜಿಸ್ಟ್ರಾರ್ ಕಚೇರಿಗೆ ನಿರ್ದೇಶಿಸುವಂತಾಗಬೇಕು’ ಎಂದು ಸಂಘವು ಮನವಿ ಮಾಡಿತ್ತು.

‘ನ್ಯಾಯದೇಗುಲ ಎಲ್ಲರಿಗೂ ಸಮಾನವಾಗಿರಬೇಕು. ಉಳ್ಳವರ ಪ್ರಕರಣಗಳನ್ನು ತೀರ್ಮಾನಿಸುವಂತೆಯೇ ಬಡಬೋರೇಗೌಡನ ಅರ್ಜಿಯನ್ನೂ ಪುರಸ್ಕರಿಸುವಂತಾಗಬೇಕು’ ಎಂದು ಸಂಘವು ಕೋರಿತ್ತು.

ಕ್ಯಾನ್ಸರ್ ಔಷಧ ದರ ನಿಗದಿ: ಮೇಲ್ಮನವಿ ವಜಾ

ಬೆಂಗಳೂರು: ಕ್ಯಾನ್ಸರ್‌ಗೆ ಚಿಕಿತ್ಸೆ ನೀಡುವ 42 ಔಷಧಗಳ ದರ ನಿಗದಿಪಡಿಸಿ ಕೇಂದ್ರ ಸರ್ಕಾರ ಹೊರಡಿಸಿದ್ದ ಆದೇಶವನ್ನು ಪ್ರಶ್ನಿಸಲಾಗಿದ್ದ ಮೇಲ್ಮನವಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಏಕಸದಸ್ಯ ನ್ಯಾಯಪೀಠದ ಆದೇಶವನ್ನು ಪ್ರಶ್ನಿಸಿ ಹೆಲ್ತ್ ಕೇರ್ ಗ್ಲೋಬಲ್ ಎಂಟರ್‌ಪ್ರೈಸಸ್ ಲಿಮಿಟೆಡ್ ಸಲ್ಲಿಸಿದ್ದ ಮೇಲ್ಮನವಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಾದ-ಪ್ರತಿವಾದ ಆಲಿಸಿದ ಬಳಿಕ, ‘ಏಕಸದಸ್ಯ ನ್ಯಾಯಪೀಠ ನೀಡಿರುವ ತೀರ್ಪು ಸರಿಯಾಗಿಯೇ ಇದೆ. ಅದರಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯವಿಲ್ಲ’ ಎಂಬ ಕಾರಣ ನೀಡಿ ಮೇಲ್ಮನವಿ ವಜಾಗೊಳಿಸಿತು.

‘ಕ್ಯಾನ್ಸರ್ ಚಿಕಿತ್ಸೆಯ ಔಷಧ ದರಗಳು ದುಬಾರಿಯಾಗಿವೆ’ ಎಂಬ ಕಾರಣಕ್ಕೆ ಕೇಂದ್ರ ಸರ್ಕಾರ 2019ರಲ್ಲಿ 42 ಕ್ಯಾನ್ಸರ್ ಔಷಧಗಳ ವ್ಯಾಪಾರದ ಮಾರ್ಜಿನ್‌ಗೆ ಶೇ 30ರಷ್ಟು ಮಿತಿ ನಿಗದಿಪಡಿಸಿತ್ತು. ಇದನ್ನು ಪ್ರಶ್ನಿಸಲಾಗಿದ್ದ ಅರ್ಜಿಯನ್ನು ವಜಾಗೊಳಿಸಿದ್ದ ಏಕಸದಸ್ಯ ನ್ಯಾಯಪೀಠ, ‘ರಾಷ್ಟ್ರೀಯ ಫಾರ್ಮಾಸುಟಿಕಲ್ಸ್ ಬೆಲೆ ನಿಗದಿ ನೀತಿ 2012ರಂತೆ ಲಾಭದ ಮೇಲೆ ಕೇಂದ್ರ ಸರ್ಕಾರ ಮಿತಿ ಹೇರಿರುವುದು ಸರಿಯಾಗಿಯೇ ಇದೆ’ ಎಂದು ಹೇಳಿತ್ತು.

ಈ ಆದೇಶ ಪ್ರಶ್ನಿಸಿದ್ದ ಮೇಲ್ಮನವಿದಾರರು, ‘ಕ್ಯಾನ್ಸರ್ ನಿಗ್ರಹ ಔಷಧಗಳಿಗೆ ಬೆಲೆ ನಿಗದಿ ಮಾಡುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಇಲ್ಲ. ಶೇ 30ರಷ್ಟು ವ್ಯಾಪಾರ ಮಾರ್ಜಿನ್ ನಿಗದಿ ಏಕಪಕ್ಷೀಯ ಮತ್ತು ಅನ್ಯಾಯದ ಹಾಗೂ ಸಂವಿಧಾನದ 19(1)(ಜಿ)ಗೆ ವಿರುದ್ಧವಾಗಿದೆ’ ಎಂಬ ವಾದ ಮಂಡಿಸಿದ್ದರು.

ಎಡೆಯೂರು ರಥೋತ್ಸವ ಇಂದು

ಪ್ರಜಾವಾಣಿ ವಾರ್ತೆ

ಕುಣಿಗಲ್: ತಾಲ್ಲೂಕಿನ ಎಡೆಯೂರು ಸಿದ್ದಲಿಂಗೇಶ್ವರ ರಥೋತ್ಸವ ಮಂಗಳವಾರ (28ರಂದು) ಮಧ್ಯಾಹ್ನ 12ಗಂಟೆಗೆ ನಡೆಯಲಿದೆ.

ಸಂಜೆ ಉತ್ತಮ ರಾಸುಗಳಿಗೆ ಬಹುಮಾನ ವಿತರಣೆ ನಡೆಯಲಿದೆ. ಮಾರ್ಚ್ 29ರಂದು ಬಿಲ್ವವೃಕ್ಷ ವಾಹನೋತ್ಸವ ಹಾಗೂ 30ರಂದು ಬೆಳ್ಳಿ ಪಲ್ಲಕ್ಕಿ ಉತ್ಸವ ನಡೆಯಲಿದೆ ಎಂದು ಸಮಿತಿಯ ಕಾರ್ಯ ನಿರ್ವಹಣಾಧಿಕಾರಿ ನಾಗರಾಜು ತಿಳಿಸಿದ್ದಾರೆ.

ಪ್ರತಿಭಟನೆ ಮೀಸಲಾತಿ ಮರುಹಂಚಿಕೆಯಲ್ಲಿ ಮುಸ್ಲಿಂ ಸಮುದಾಯಕ್ಕೆ ಅನ್ಯಾಯವಾಗಿದೆ ಎಂದು ಆರೋಪಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಎಸ್‌ಡಿಪಿಐ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು - ಪ್ರಜಾವಾಣಿ ಚಿತ್ರ

ಭೋವಿ ಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ನೇತೃತ್ವದಲ್ಲಿ ಸಭೆ

ಒಳಮೀಸಲಾತಿ: ನ್ಯಾಯಾಲಯದಲ್ಲಿ ಪ್ರಶ್ನಿಸಲು ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿಗಳ ವರ್ಗೀಕರಣ (ಒಳಮೀಸಲಾತಿ) ಮಾಡಿ ಕೇಂದ್ರಕ್ಕೆ ಶಿಫಾರಸು ಮಾಡಿರುವ ಕ್ರಮವನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲು ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟ ನಿರ್ಧರಿಸಿದೆ.

ಭೋವಿ ಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಮುಂದಿನ ನಡೆಗಳ ಬಗ್ಗೆ ಒಕ್ಕೂಟ ನಿರ್ಣಯ ಕೈಗೊಂಡಿತು.

ಒಳ ಮೀಸಲಾತಿಗೆ ಸಂವಿಧಾನದಲ್ಲಿ ಅವಕಾಶವಿಲ್ಲ. ಇದು ಸುಪ್ರೀಂ ಕೋರ್ಟ್ ತೀರ್ಪಿಗೆ ವಿರುದ್ಧವಾಗಿದೆ. ಈ ವಿಷಯವನ್ನು ಸರ್ಕಾರಕ್ಕೆ ಮನವರಿಕೆ ಮಾಡಿಕೊಡಲು ಶಾಂತಿಯುತ ಹೋರಾಟ ನಡೆಸಲಾಗುವುದು ಎಂದು ಒಕ್ಕೂಟ ತಿಳಿಸಿದೆ.

‘ವಸ್ತುನಿಷ್ಠ ಅಧ್ಯಯನ ಇಲ್ಲದೆ ಸ್ಪಶ್ಯರು, ಅಸ್ಪೃಶ್ಯರು, ಎಡಗೈ, ಬಲಗೈ, ಎಲ್ಲಾ ಸೌಲಭ್ಯ ಪಡೆದವರು, ಮುಂದುವರೆದವರು, ಅಭಿವೃದ್ಧಿ ಆಗಿರುವವರು’ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ ಉಪ ಸಮಿತಿಯ ವರದಿಯಲ್ಲಿ ಉಲ್ಲೇಖಿಸಿರುವುದು ಸರಿಯಲ್ಲ. ಇದನ್ನು ವಾಪಸ್ ಪಡೆಯಬೇಕು. ಅವಾಸ್ತವಿಕ ಅಂಶಗಳ ಮೂಲಕ ಪರಿಶಿಷ್ಟ ಸಹೋದರ ಸಮುದಾಯಗಳ ನಡುವಿನ ಏಕತೆ ಒಡೆಯಲಾಗಿದೆ. ಈ ಉಪ ಸಮಿತಿಯ ವರದಿ ತಿರಸ್ಕರಿಸಬೇಕು’ ಎಂದು ಒತ್ತಾಯಿಸಿದೆ.

ಭೋವಿ, ಲಂಬಾಣಿ, ಕೊರಚ, ಕೊರಮ ಸಮುದಾಯಗಳನ್ನು ಪರಿಶಿಷ್ಟ ಜಾತಿಯ ಪಟ್ಟಿಯಿಂದ ಕೈಬಿಡುವ ಪ್ರಸ್ತಾಪಗಳು ರಾಜ್ಯ ಸರ್ಕಾರದ ಮುಂದಿಲ್ಲ ಎಂಬ ಲಿಖಿತ ಉತ್ತರವನ್ನು ರಾಷ್ಟ್ರೀಯ ಪರಿಶಿಷ್ಟ ಜಾತಿ ಆಯೋಗಕ್ಕೆ ಪತ್ರದ ಮೂಲಕ ರವಾನಿಸಿರುವುದು ಸ್ವಾಗತಾರ್ಹ. ಬೇರೆ ಬೇಡಿಕೆಗಳ ಬಗ್ಗೆ ರಾಜ್ಯವ್ಯಾಪಿ ಜನ ಜಾಗೃತಿ ಅಭಿಯಾನ, ಐಕ್ಯತೆ ಪ್ರದರ್ಶನ ಮತ್ತು ಅಹಿಂಸಾತ್ಮಕ ಪ್ರಜಾಸತ್ತಾತ್ಮಕ ಹೋರಾಟ ನಡೆಸಲಾಗುವುದು ಎಂದು ತಿಳಿಸಿದೆ.

ಸಾಹಿತಿ ಬಿ.ಟಿ.ಲಲಿತಾ ನಾಯಕ್, ಒಕ್ಕೂಟದ ಕಾರ್ಯಾಧ್ಯಕ್ಷ ರಾಘವೇಂದ್ರ ನಾಯಕ್, ಪ್ರಧಾನ ಕಾರ್ಯದರ್ಶಿ ಅನಂತ ನಾಯ್ಕ್, ಮುಖಂಡರಾದ ಪ್ರಕಾಶ್ ರಾಥೋಡ್, ಸೀತಾರಾಂ, ಆದರ್ಶ ಯಲ್ಲಪ್ಪ, ಕಿರಣಕುಮಾರ್ ಕೊತ್ತಗೆರೆ, ರವಿ ಪೂಜಾರ್ ಸಭೆಯಲ್ಲಿ ಭಾಗವಹಿಸಿದ್ದರು.

ಕಣ್ಮುಚ್ಚಿ ಕೂರುವುದಿಲ್ಲ: ಸಚಿವ ನಾರಾಯಣಸ್ವಾಮಿ

ಬೆಂಗಳೂರು: ‘ನಾವು ಸಾಮಾಜಿಕವಾಗಿ ನೀಡಿರುವ ಮೀಸಲಾತಿಯನ್ನು ವಿರೋಧಿಸಿ ಹಿಂಸೆಗೆ ಪ್ರಚೋದನೆ ನೀಡಿ, ರಾಜಕಾರಣ ಮಾಡಲು ಮುಂದಾದರೆ ಬಿಜೆಪಿ ಮತ್ತು ದಲಿತ ಸಂಘಟನೆಗಳು ಕಣ್ಮುಚ್ಚಿ ಕೂರುವುದಿಲ್ಲ’ ಎಂದು ಕೇಂದ್ರ ಸಚಿವ ಎ.ನಾರಾಯಣಸ್ವಾಮಿ ಎಚ್ಚರಿಕೆ ನೀಡಿದ್ದಾರೆ.

ಬಿಜೆಪಿ ಕಚೇರಿಯಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಿಕಾರಿಪುರದಲ್ಲಿ ಪಕ್ಷದ ಹಿರಿಯ ನಾಯಕ ಬಿ.ಎಸ್.ಯಡಿಯೂರಪ್ಪ ಅವರ ಮನೆ ಮೇಲೆ ದಾಳಿ ನಡೆಸಲಾಗಿದೆ. ಈ ದಾಳಿಯ ಹಿಂದೆ ಕಾಂಗ್ರೆಸ್ ಅಭ್ಯರ್ಥಿ ಆಗಲು ಹೊರಟಿರುವ ನಾಯಕರೊಬ್ಬರ ಪ್ರಚೋದನೆ ಇದೆ ಎಂದು ಅವರು ಆರೋಪಿಸಿದರು.

ಪರಿಶಿಷ್ಟ ಜಾತಿ ಪಟ್ಟಿಯಿಂದ ಲಂಬಾಣಿ ಮತ್ತಿತರ ಜಾತಿಯನ್ನು ಕೈಬಿಡಲಾಗುತ್ತಿದೆ ಎಂಬ ವದಂತಿಯನ್ನು ಕಾಂಗ್ರೆಸ್ ಹಬ್ಬಿಸುತ್ತಿದೆ. ಯಡಿಯೂರಪ್ಪ ಅವರ

ಮನೆ ಮೇಲಿನ ದಾಳಿಯನ್ನು ಬಿಜೆಪಿ ಖಂಡಿಸುತ್ತದೆ. ಇಂಥ ಘಟನೆ ಮರುಕಳಿಸಬಾರದು ಎಂದರು.

ಬಿಎಸ್‌ವೈ ಮನೆ ಮೇಲೆ ದಾಳಿ ಖಂಡನೀಯ: ಸುರ್ಜೇವಾಲಾ

ಬೆಂಗಳೂರು: ‘ಯಡಿಯೂರಪ್ಪ ಅವರ ಮನೆ ಮೇಲೆ ದಾಳಿ ನಡೆದಿರುವುದು ಖಂಡನೀಯ. ಬಿಜೆಪಿಯ ದ್ವೇಷ ಹಾಗೂ ವಿಭಜನೆಯ ರಾಜಕೀಯ ಪರಿಶಿಷ್ಟ ಜಾತಿ ಹಾಗೂ ಸಮುದಾಯಗಳಲ್ಲಿ ಅಶಾಂತಿಗೆ ಕಾರಣವಾಗಿದೆ’ ಎಂದು ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಮೀಸಲಾತಿ ವಿಚಾರದಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಜನರನ್ನು ಮೂರ್ಖರನ್ನಾಗಿಸುತ್ತಿದೆ. ಒಕ್ಕಲಿಗರು, ಲಿಂಗಾಯತರು, ಮುಸ್ಲಿಂ ಸಮುದಾಯಗಳಿಗೆ ದ್ರೋಹ ಮಾಡುತ್ತಿದೆ’ ಎಂದರು.

‘ಬಿಜೆಪಿಯ ಬೇರೊಬ್ಬರು ಯಡಿಯೂರಪ್ಪ ಅವರನ್ನು ಗುರಿಯಾಗಿಸಲು ಅವರ ಮನೆ ಮುತ್ತಿಗೆ ಹಾಕಲು ಜನರನ್ನು ಕಳುಹಿಸುತ್ತಿದ್ದಾರೆ. ಇದು ಬಿಜೆಪಿಯ ಆಂತರಿಕ ಸಮಸ್ಯೆ. ರಾಜಕೀಯ ಲಾಭಕ್ಕಾಗಿ ಈ ಸಂಘರ್ಷವನ್ನು ಹೊತ್ತಿಸಲಾಗುತ್ತಿದೆ’ ಎಂದರು.

ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್ ಆಯೋಜನೆ

ಒಂದು ತಿಂಗಳ ಸಂಗೀತೋತ್ಸವಕ್ಕೆ ಸಜ್ಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಗೀತ ಪ್ರೇಮಿಗಳಿಗೆ ಒಂದು ತಿಂಗಳು ರಸದೌತಣ ನೀಡಲು ಶ್ರೀರಾಮಸೇವಾ ಮಂಡಳಿಯ ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್ ಸಜ್ಜಾಗಿದೆ.

1939ರಲ್ಲಿ ಎಸ್.ವಿ.ನಾರಾಯಣಸ್ವಾಮಿ ಅವರು ಸ್ಥಾಪಿಸಿದ ಸಂಸ್ಥೆ 85 ವರ್ಷಗಳಿಂದ ಸಂಗೀತ ಕ್ಷೇತ್ರಕ್ಕೆ ತನ್ನದೇ ಆದ ಕೊಡುಗೆ ನೀಡುತ್ತಾ ಬಂದಿದೆ. 85ನೇ ವರ್ಷ ಆಗಿರುವುದರಿಂದ ‘ಚಂದ್ರಶಿಲಾ ಮಹೋತ್ಸವ’ ಎಂದು ಆಚರಣೆ ಮಾಡಲಾಗುತ್ತಿದೆ ಎಂದು ಮಂಡಳಿಯ ಮ್ಯಾನೇಜಿಂಗ್ ಟ್ರಸ್ಟಿ ಎಸ್.ಎನ್. ವರದರಾಜ್ ‘ಪ್ರಜಾವಾಣಿ’ಗೆ ತಿಳಿಸಿದರು.

ಚಾಮರಾಜಪೇಟೆಯ ಹಳೆಕೋಟೆ ಪ್ರೌಢಶಾಲೆ ಆವರಣದಲ್ಲಿ ಮಾರ್ಚ್ 30ರಿಂದ ಆರಂಭವಾಗಲಿದ್ದು, ಏಪ್ರಿಲ್ 30ರವರೆಗೆ ಸಂಗೀತ ಸುಧೆ ಹರಿಯಲಿದೆ. ಖ್ಯಾತ ಸಂಗೀತಗಾರರು ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸಲಿದ್ದಾರೆ. ಹಿಂದೂಸ್ತಾನಿ, ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯಕರು, ವೀಣೆ, ಪಿಟೀಲು, ಕೊಳಲು ಸೇರಿ ವಿವಿಧ ವಾದ್ಯಗಳ ವಾದಕರು ಸಂಗೀತ ಕಛೇರಿ ನಡೆಸಿಕೊಡಲಿದ್ದಾರೆ ಎಂದು ವಿವರಿಸಿದರು.

ಮಾರ್ಚ್ 30ರಂದು ಸಂಜೆ 5.30ಕ್ಕೆ ಉದ್ಘಾಟನೆ ಕಾರ್ಯಕ್ರಮ ನಡೆಯಲಿದ್ದು, ಸಂಜೆ 6.45ರಿಂದ ಬಾಂಬೆ ಜಯಶ್ರೀ ಮತ್ತು ಸಂಗಡಿಗರಿಂದ ಸಂಗೀತ ಕಛೇರಿ ನಡೆಯಲಿವೆ.

ಒಂದು ತಿಂಗಳ ಸಂಗೀತೋತ್ಸವದಲ್ಲಿ ಪ್ರವೀಣ್ ಗೋಡ್ಖಿಂಡಿ, ಸ್ಫೂರ್ತಿ ರಾವ್, ಹರೀಶ್ ಶಿವರಾಮಕೃಷ್ಣನ್, ರಂಜನಿ ಮತ್ತು ಗಾಯತ್ರಿ, ದುಶ್ಯಂತ್ ಶ್ರೀಧರ್, ಮಲ್ಲಾಡಿ ಸಹೋದರರು, ಸಿಕ್ಕಿಲ್ ಗುರುಚರಣ್, ತ್ರಿಚೂರು ಸಹೋದರರು, ಪ್ರಿಯಾ ಸಹೋದರಿಯರು, ಬೆಂಗಳೂರು ಎಸ್. ಶಂಕರ್, ವಾರಿಜಾಶ್ರೀ, ಜಯತೀರ್ಥ ಮೇವುಂಡಿ, ಮೈಸೂರು ನಾಗರಾಜ್ ಮತ್ತು ಮೈಸೂರು ಮಂಜುನಾಥ್, ರಯಾಸ್ ಮತ್ತು ಹಫೀಜ್ ಬಾಲೇಖಾನ್, ವಿದ್ಯಾಭೂಷಣ, ವೆಂಕಟೇಶ್ ಕುಮಾರ್, ಶಿವಮಣಿ, ಯು. ರಾಜೇಶ್ ಮತ್ತು ಹರ್ಮೀತ್, ಎಂ.ಎಸ್. ಶೀಲಾ, ಸುಧಾ ರಘುನಾಥನ್ ಸೇರಿ ಸಂಗೀತ ಕ್ಷೇತ್ರದ ಪ್ರಮುಖ ಗಾಯಕರು ಹಾಗೂ ಕಲಾವಿದರು ಕಛೇರಿ ನಡೆಸಿಕೊಡಲಿದ್ದಾರೆ ಎಂದು ಮಾಹಿತಿ ನೀಡಿದರು.

www.ramanavamitickets.com ವೆಬ್‌ಸೈಟ್ ಮೂಲಕ ಟಿಕೆಟ್‌ಗಳನ್ನು ಕಾಯ್ದಿರಿಸಬಹುದು. ಮಾಹಿತಿಗೆ ಮಂಡಳಿಯ ಪ್ರಧಾನ ಕಾರ್ಯದರ್ಶಿ ಮತ್ತು ಮ್ಯಾನೇಜಿಂಗ್ ಟ್ರಸ್ಟಿ ಎಸ್.ಎನ್. ವರದರಾಜ್ (9448079079) ಅಥವಾ ಕಾರ್ಯನಿರ್ವಾಹಕ ಅಧಿಕಾರಿ ಎಸ್. ಅಭಿಜಿತ್ ವರದರಾಜ್ (9483518012) ಅವರನ್ನು ಸಂಪರ್ಕಿಸಬಹುದು ಎಂದು ತಿಳಿಸಿದರು.



ಮುಖ್ಯಾಂಶಗಳು

- ಸಂಗೀತ ಪ್ರೇಮಿಗಳಿಗೆ ರಸದೌತಣ
- 85 ವರ್ಷಗಳಿಂದ ಸಂಗೀತ ಕ್ಷೇತ್ರಕ್ಕೆ ಕೊಡುಗೆ
- ಹಳೆಕೋಟೆ ಪ್ರೌಢಶಾಲೆ ಆವರಣದಲ್ಲಿ ಮಾರ್ಚ್ 30ರಿಂದ ಆರಂಭ

ವಿಶೇಷ ಯೋಜನೆ

85ನೇ ವರ್ಷದ ಎರಡು ವಿಶೇಷ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ. ‘ಕಲಾ ಸಾಕೇತ’ ಹೆಸರಿನಲ್ಲಿ ಸಂಸ್ಥೆ ಸ್ಥಾಪಿಸಲಾಗಿದ್ದು, ಸರ್ಕಾರದ ನೆರವಿನೊಂದಿಗೆ 50 ವಿದ್ಯಾರ್ಥಿಗಳಿಗೆ ಸಂಗೀತ ತರಬೇತಿ ನೀಡಲಾಗುತ್ತದೆ. ಮುಂದೊಂದು ದಿನ ಸಂಗೀತ ಕೌಶಲಾಭಿವೃದ್ಧಿಯ ಕೇಂದ್ರ ಇದಾಗಲಿದೆ ಎಂದರು.

ಚಿತ್ರದುರ್ಗದಲ್ಲಿ ಈಗಾಗಲೇ ‘ಗೋ ಸಾಕೇತ’ ಹೆಸರಿನಲ್ಲಿ ಗೋ ತಳಿ ಸಂರಕ್ಷಣಾ ಕೇಂದ್ರ ತೆರೆಯಲಾಗಿದ್ದು, ಅಮೃತ ಮಹಲ್ ತಳಿ ಸಂರಕ್ಷಣೆ ಮಾಡಲಾಗುತ್ತಿದೆ ಎಂದು ಹೇಳಿದರು.

ದೂಳು: ಮತ್ತೆ ಲ್ಯಾಂಡ್ ಆದ ಸಿ.ಎಂ ಹೆಲಿಕಾಪ್ಟರ್

ಚಿಕ್ಕಬಳ್ಳಾಪುರ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಯಾಣಿಸುತ್ತಿದ್ದ ಹೆಲಿಕಾಪ್ಟರ್ ಟೇಕಾಫ್ ಆಗಿ ಮತ್ತೆ ಲ್ಯಾಂಡ್ ಆದ ಪ್ರಸಂಗ ಸೋಮವಾರ ನಡೆಯಿತು.

ಚಿಕ್ಕಬಳ್ಳಾಪುರದ ಎಸ್‌ಜೆಸಿಐಟಿ ಕಾಲೇಜು ಆವರಣದ ಹೆಲಿಪ್ಯಾಡ್‌ಗೆ ಬಂದಿಳಿದ ಬೊಮ್ಮಾಯಿ ಅವರು ಸೂಲಾಲಪ್ಪನದಿಣ್ಣೆಯ ಕಾರ್ಯಕ್ರಮ ಪೂರ್ಣಗೊಳಿಸಿ ಅರೂರು ಬಳಿ ವೈದ್ಯಕೀಯ ಶಿಕ್ಷಣ ಕಾಲೇಜು ಉದ್ಘಾಟಿಸಲು ಕಾರಿನಲ್ಲಿ ತೆರಳಿದರು. ಅಲ್ಲಿಂದ ವಾಪಸ್ ಹೆಲಿಪ್ಯಾಡ್‌ಗೆ ಬಂದರು.

ಈ ವೇಳೆ ಹೆಲಿಕಾಪ್ಟರ್ ಟೇಕಾಫ್ ಆಗುವ ವೇಳೆ ದೊಡ್ಡ ಪ್ರಮಾಣದಲ್ಲಿ ದೂಳು ಎದ್ದಿತ್ತು. ಹಾಗಾಗಿ ಹೆಲಿಕಾಪ್ಟರ್ ಮತ್ತೆ ಲ್ಯಾಂಡ್ ಆಗಬೇಕಾಯಿತು. ಈ ವೇಳೆ ಹೆಲಿಕಾಪ್ಟರ್‌ನಲ್ಲಿದ್ದ ವೈದ್ಯಕೀಯ ಶಿಕ್ಷಣ ಇಲಾಖೆ ಆಯುಕ್ತ ನವೀನ್ ರಾಜ್ ಸಿಂಗ್ ಕೆಳಕ್ಕಿಳಿದರು. ನಂತರ ಹೆಲಿಕಾಪ್ಟರ್ ಆಗಸಕ್ಕೆ ಹಾರಿತು.

‘ಆತ್ಮನಿರ್ಭರ ಗ್ರಾಮ ಪಂಚಾಯಿತಿ ಕೃತಿ ಎಲ್ಲರಿಗೂ ತಲುಪಲಿ’

ಬೆಂಗಳೂರು: ‘ಗ್ರಾಮಗಳನ್ನು ಸುಸ್ಥಿರ ಹಾಗೂ ಸ್ವಾವಲಂಬಿಗಳನ್ನಾಗಿ ರೂಪಿಸುವ ನಿಟ್ಟಿನಲ್ಲಿ ತಂತ್ರಜ್ಞಾನಗಳನ್ನು ಬಳಸುವ ಬಗ್ಗೆ ಮಾರ್ಗದರ್ಶನ ನೀಡುವ ‘21ನೇ ಶತಮಾನದ ಆತ್ಮನಿರ್ಭರ ಗ್ರಾಮ ಪಂಚಾಯಿತಿ’ ಪುಸ್ತಕವು ಎಲ್ಲ ಗ್ರಾಮ ಪಂಚಾಯಿತಿಗಳಿಗೂ ತಲುಪಬೇಕಾದ ಅಗತ್ಯವಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಡಾ. ಶಂಕರ ಕೆ. ಪ್ರಸಾದ್ ಬರೆದಿರುವ ಪುಸ್ತಕದ ಕುರಿತು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ ಬಸವರಾಜ ಬೊಮ್ಮಾಯಿ, ಹಾವೇರಿ ಜಿಲ್ಲೆಯ ಎಲ್ಲ ಗ್ರಾಮ ಪಂಚಾಯಿತಿಗಳಿಗೆ ಪುಸ್ತಕ ತಲುಪಿಸಲು ಕ್ರಮ ಕೈಗೊಳ್ಳುವಂತೆ ಸಿಬ್ಬಂದಿಗೆ ಸೂಚಿಸಿದರು.

‘ಪುಸ್ತಕದಲ್ಲಿರುವ ತಂತ್ರಜ್ಞಾನಗಳು ರಾಜ್ಯದ ಎಲ್ಲ ಗ್ರಾಮಗಳಲ್ಲೂ ಅನುಷ್ಠಾನಕ್ಕೆ ಬರಬೇಕು. ತಂತ್ರಜ್ಞಾನಗಳನ್ನು ಬಳಸಿಕೊಂಡು ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸಲು ಮಾರ್ಗದರ್ಶಿಯಾಗಿದೆ’ ಎಂದರು.

ಗ್ರಾಮ ಪಂಚಾಯಿತಿ ಉದ್ಯಮಗಳಲ್ಲಿ ದಕ್ಷತೆ, ಹೊಣೆಗಾರಿಕೆ ಮತ್ತು ಪಾರದರ್ಶಕತೆ ತರುವ ದೂರದೃಷ್ಟಿ ಇರಿಸಿಕೊಂಡು ಡಿಜಿಟಲ್ ತಾಂತ್ರಿಕತೆಯ ಪರಿಣತ ಡಾ. ಪ್ರಸಾದ್ ಅವರು ಸ್ಥಳೀಯ ಸರ್ಕಾರದ ವಿವಿಧ ರಂಗಗಳ ತಮ್ಮ ಎರಡು ದಶಕಗಳ ಒಡನಾಟದ ಅನುಭವದ ಆಧಾರದಲ್ಲಿ ಈ ಪುಸ್ತಕವನ್ನು ರಚಿಸಿದ್ದಾರೆ.



‘21ನೇ ಶತಮಾನದ ಆತ್ಮನಿರ್ಭರ ಗ್ರಾಮ ಪಂಚಾಯಿತಿ ಪುಸ್ತಕವನ್ನು ಲೇಖಕ ಡಾ. ಶಂಕರ ಕೆ. ಪ್ರಸಾದ್ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ನೀಡಿದರು.

ಸಂಕ್ಷಿಪ್ತ ಸುದ್ದಿ

ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿರುವ 'ಕೆನರಾ ಬ್ಯಾಂಕ್ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್'ನಲ್ಲಿ (ಸಿಬಿಎಸ್‌ಎಂಎಸ್) 2022-23ನೇ ಸಾಲಿನಲ್ಲಿ ಖಾಲಿ ಉಳಿದಿರುವ ಎಂಬಿಎ-ಸಂಜೆ ಕೋರ್ಸ್‌ಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಆನ್‌-ಲೈನ್ ಮೂಲಕ ಅರ್ಜಿ ಭರ್ತಿ ಮಾಡಲು ಮಾರ್ಚ್ 31 ಕೊನೆಯ ದಿನವಾಗಿದೆ. ಅರ್ಜಿಯ ಪ್ರತಿಯನ್ನು ಸಿಬಿಎಸ್‌ಎಂಎಸ್ ವಿಭಾಗಕ್ಕೆ ಸಲ್ಲಿಸಲು ಏಪ್ರಿಲ್ 1 ಕೊನೆಯ ದಿನವಾಗಿದೆ. ಎಂಬಿಎ-ಸಂಜೆ ಪರೀಕ್ಷೆ ಬರೆಯುವ ಅಭ್ಯರ್ಥಿಗಳ ಪಟ್ಟಿಯನ್ನು ಏಪ್ರಿಲ್ 3ರಂದು ಪ್ರಕಟಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಮಾಹಿತಿಗಾಗಿ ಬೆಂಗಳೂರು ವಿಶ್ವವಿದ್ಯಾಲಯದ ವೆಬ್‌ಸೈಟ್ www.bangaloreuniversity.ac.in ವೀಕ್ಷಿಸಬಹುದು.

ಪಿಎಚ್‌.ಡಿ ಪ್ರವೇಶ: ಅವಧಿ ಮುಂದೂಡಿಕೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಪಿಎಚ್‌.ಡಿ. ಪದವಿ ಪ್ರವೇಶಕ್ಕೆ ವೆಬ್‌ಸೈಟ್ ಮೂಲಕ ಅರ್ಜಿ ಸಲ್ಲಿಸುವ ದಿನಾಂಕವನ್ನು ತಾಂತ್ರಿಕ ಕಾರಣಗಳಿಂದ ಮುಂದೂಡಲಾಗಿದೆ.

ಆನ್‌ಲೈನ್‌ನಲ್ಲಿ ಏಪ್ರಿಲ್ 17ರಿಂದ ಅರ್ಜಿಗಳು ಲಭ್ಯವಾಗಲಿವೆ. ದಂಡ ಶುಲ್ಕ ಇಲ್ಲದೆಯೇ ಅರ್ಜಿ ಸಲ್ಲಿಸಲು ಮೇ 2 ಕೊನೆಯ ದಿನವಾಗಿದೆ. ₹200 ದಂಡ ಸಹಿತ ಅರ್ಜಿ ಸಲ್ಲಿಸಲು ಮೇ 10 ಕೊನೆಯ ದಿನವಾಗಿದೆ. ವಿವರಗಳಿಗೆ https://eng.bangaloreuniversity.ac.in ವೀಕ್ಷಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

'ಸುರಕ್ಷ 75 ಮಿಷನ್ 2023' ಯೋಜನೆಯ ಪುಸ್ತಕ ಬಿಡುಗಡೆ ಮಾಡಿದ ಮುಖ್ಯಮಂತ್ರಿ ಬೊಮ್ಮಾಯಿ

ಪಾದಚಾರಿ ಸುರಕ್ಷತೆ: 75 ಜಂಕ್ಷನ್ ಅಭಿವೃದ್ಧಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಜಂಕ್ಷನ್‌ಗಳನ್ನು ಪಾದಚಾರಿಗಳಿಗೆ ಸುರಕ್ಷಿತವಾಗಿಸಲು ಬಿಬಿಎಂಪಿ ರೂಪಿಸಿರುವ 'ಸುರಕ್ಷ 75 ಮಿಷನ್ 2023' ಯೋಜನೆಯ ಕಾಫಿ ಟೇಬಲ್ ಪುಸ್ತಕವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಿಡುಗಡೆ ಮಾಡಿದರು.

ರೇಸ್‌ಕೋರ್ಸ್ ರಸ್ತೆಗೆ 'ರೆಬಲ್ ಸ್ಟಾರ್ ಡಾ. ಎಂ.ಎಚ್. ಅಂಬರೀಶ್ ರಸ್ತೆ' ಎಂದು ಹೆಸರಿಡುವ ಕಾರ್ಯಕ್ರಮದಲ್ಲಿ ಯೋಜನೆಯ ವಿವರಗಳನ್ನು ಬಿಡುಗಡೆ ಮಾಡಲಾಯಿತು.

ಬೆಂಗಳೂರಿನ 75 ಜಂಕ್ಷನ್‌ಗಳನ್ನು ಮರುವಿನ್ಯಾಸಗೊಳಿಸುವ ಯೋಜನೆ ಇದಾಗಿದೆ. ಎಲ್ಲ ರಸ್ತೆ ಬಳಕೆದಾರರಿಗೆ, ವಿಶೇಷವಾಗಿ ಪಾದಚಾರಿಗಳು ಮತ್ತು ಸೈಕ್ಲಿಸ್ಟ್‌ಗಳು ಸೇರಿದಂತೆ ರಸ್ತೆ ಅಪಘಾತಗಳಿಂದ ಸುರಕ್ಷಿತಗೊಳಿಸುವ ಉದ್ದೇಶ ಈ ಯೋಜನೆಯದ್ದಾಗಿದೆ.

ಹೆಚ್ಚು ಅಪಘಾತಗಳಾಗುವ ಜಂಕ್ಷನ್‌ಗಳನ್ನು ಸಂಚಾರಿ ಸುರಕ್ಷತಾ ಸುವ ಗುರಿಯನ್ನು ಹೊಂದಿರುವ 'ಸುರಕ್ಷ 75 ಮಿಷನ್ 2023' ಬಿಬಿಎಂಪಿ, ಬೆಂಗಳೂರು ಟ್ರಾಫಿಕ್ ಪೊಲೀಸ್, ವಿಶ್ವ ಸಂಪನ್ಮೂಲ ಸಂಸ್ಥೆ ಭಾರತ (ಡಬ್ಲ್ಯೂಆರ್‌ಐ) ಸಹಯೋಗದೊಂದಿಗೆ, ಬ್ಲೂಮ್‌ಬರ್ಗ್ ಫಿಲಾಂತ್ರೊಪಿಸ್ ಜಾಗತಿಕ ರಸ್ತೆ ಸುರಕ್ಷತಾ ಉಪಕ್ರಮ (ಬಿಐಜಿಆರ್‌ಎಸ್) ಅಡಿಯಲ್ಲಿ ಈ ಯೋಜನೆಯನ್ನು ಆರಂಭಿಸಲಾಗಿದೆ.

ಬಿಬಿಎಂಪಿಯು ಕಳೆದ ಎರಡು ವರ್ಷಗಳಲ್ಲಿ ಟೌನ್‌ಹಾಲ್ ಜಂಕ್ಷನ್, ಮೌರ್ಯ ಜಂಕ್ಷನ್ ಮತ್ತು ಬಾಳೇಕುಂದ್ರಿ ವೃತ್ತ ಸೇರಿದಂತೆ ಹಲವಾರು ಜಂಕ್ಷನ್‌ಗಳನ್ನು ಪಾದಚಾರಿ ಪ್ರವೇಶ ಮತ್ತು ಸ್ಪಷ್ಟವಾದ ವಾಕ್‌ವೇಗಳನ್ನು ನಿರ್ಮಿಸುವ ಮೂಲಕ ಸುಧಾರಿಸಿದೆ. ಇದೇ ರೀತಿಯ ಅಭಿವೃದ್ಧಿ ಎಂಟೂ ವಲಯದಲ್ಲಿ ಆಯ್ದ 75 ಜಂಕ್ಷನ್‌ಗಳಲ್ಲಿ 'ಸುರಕ್ಷ' ಅಭಿವೃದ್ಧಿಯಾಗಲಿದೆ ಎಂದು ಬಿಬಿಎಂಪಿ ಹೇಳಿದೆ.

ಸುರಕ್ಷಿತ, ಪರಿಣಾಮಕಾರಿ, ಅಂತರ್ಗತ ಮತ್ತು ಸಾರ್ವತ್ರಿಕವಾಗಿ ಪ್ರವೇಶಿಸಬಹುದಾದ ಜನ-ಸ್ನೇಹಿ ಮತ್ತು ಸಮಗ್ರ ಛೇದಕ ರೂಪಾಂತರಗಳನ್ನು ರಚಿಸಲಾಗುತ್ತದೆ. 'ಸುರಕ್ಷ 75 ಮಿಷನ್ 2023' ಅಡಿಯಲ್ಲಿ ಬಿಬಿಎಂಪಿಯ ಟ್ರಾಫಿಕ್ ಎಂಜಿನಿಯರಿಂಗ್ ಸೆಲ್ ಜೊತೆಗೆ ಡಬ್ಲ್ಯೂಆರ್‌ಐ 'ಜ್ಞಾನ ಪಾಲುದಾರರಾಗಿ' ರಸ್ತೆ ಸುರಕ್ಷತಾ ಕೋಶವನ್ನು ಸ್ಥಾಪಿಸಿದ್ದು, ಸುರಕ್ಷಿತ ಜಂಕ್ಷನ್ ಮಾರ್ಗಸೂಚಿ ಮತ್ತು ಸಂವಾದಾತ್ಮಕ ನಕ್ಷೆಯೊಂದಿಗೆ ನೈಜ-ಸಮಯದ ಡ್ಯಾಶ್‌ಬೋರ್ಡ್ ಲಾಗುತ್ತದೆ ಎಂದು ಯೋಜನೆಯನ್ನು ವಿವರಿಸಲಾಗಿದೆ.

ನಗರದಾದ್ಯಂತ 75 ಜಂಕ್ಷನ್‌ಗಳನ್ನು ಬಿಬಿಎಂಪಿ ಮತ್ತು ಬೆಂಗಳೂರು ಸಂಚಾರ ಪೊಲೀಸರು ನಾಲ್ಕು ವರ್ಷಗಳಲ್ಲಿ ಅಪಘಾತಗಳಿಂದ ವಿಶ್ಲೇಷಿಸಿದ ಪಾದಚಾರಿಗಳ ಸಾವಿನ ಆಧಾರ, ಸಂಚಾರ ದಟ್ಟಣೆ ಮೇಲೆ ಗುರುತಿಸಲಾಗಿದೆ ಎಂದು ಬಿಬಿಎಂಪಿ ಮಾಹಿತಿ ನೀಡಿದೆ.

'ಸುರಕ್ಷ– 75'ರಲ್ಲಿ ಅಭಿವೃದ್ಧಿಯಾಗಿರುವ ಬಾಳೇಕುಂದ್ರಿ ವೃತ್ತ

ಸುರಕ್ಷ 75 ಜಂಕ್ಷನ್‌ಗಳು

ಪೂರ್ವ ವಲಯ: ಶಾಸಕರ ಭವನ ವೃತ್ತ, ಬಸವೇಶ್ವರ ವೃತ್ತ, ರಾಜಭವನ ವೃತ್ತ, ಮಿನ್ಸ್ಕ್ ಸ್ಕ್ವೇರ್, ಎಸ್‌ಜಿಪಿ ರಸ್ತೆ, ಶಿವಾನಂದ, ವಿಂಡ್ಸರ್ ಮ್ಯಾನರ್, ಅನಿಲ್ ಕುಂಬ್ಳೆ ವೃತ್ತ, ಟ್ರಿನಿಟಿ ವೃತ್ತ, ಹೊಸೂರು ರಸ್ತೆ, ದೊಮ್ಮಲೂರು-ಎಚ್‌ಎಎಲ್ ಹಳೆ ವಿಮಾನ ರಸ್ತೆ, ಕಾರ್ಪೊರೇಷನ್ ಬಸ್ ನಿಲ್ದಾಣ, ಹೆಣ್ಣೂರು ವೃತ್ತ.

ದಕ್ಷಿಣ ವಲಯ: ಮಾಗಡಿ ರಸ್ತೆ ಟೋಲ್‌ಗೇಟ್, ಬಿಜಿಎಸ್ ಇಎಲ್- ಮೈಸೂರು ರಸ್ತೆ, ಕೆ.ಆರ್. ಮಾರುಕಟ್ಟೆ, ಮಕ್ಕಳ ಕೂಟ ವೃತ್ತ, ಬನಶಂಕರಿ ದೇವಸ್ಥಾನ, ಕಿಮ್ಸ್, ಸುಭಾಷ್ ಚಂದ್ರಬೋಸ್ ವೃತ್ತ, ದೇವೇಗೌಡ ಪೆಟ್ರೋಲ್ ಬಂಕ್, ಫೋರಂ ಮಾಲ್, ಲಾಲ್‌ಬಾಗ್ ರಸ್ತೆ-ಹೊಸೂರು ರಸ್ತೆ.

ಪಶ್ಚಿಮ ವಲಯ: ಕಾರ್ಡ್ ರಸ್ತೆ-ಬಸವೇಶ್ವರನಗರ, ಮೈಸೂರು ಸ್ಯಾಂಡಲ್ ಸೋಪ್ ಫ್ಯಾಕ್ಟರಿ, ಯಶವಂತಪುರ, ಆನಂದರಾವ್ ವೃತ್ತ, ಸಂಗೊಳ್ಳಿ ರಾಯಣ್ಣ ವೃತ್ತ, ವಿಜಯನಗರ ಬಸ್ ನಿಲ್ದಾಣ, ನಾಯಂಡಹಳ್ಳಿ, ಕಂಠೀರವ ಸ್ಟುಡಿಯೊ, ಬಳ್ಳಾರಿ ರಸ್ತೆ-ಚಾಯ್ಸ್ ರಸ್ತೆ, ಕೆ.ಜಿ. ಸರ್ಕಲ್, ವಾಟಾಳ್ ನಾಗರಾಜ್ ರಸ್ತೆ-ರಾಜಾಜಿನಗರ ರಸ್ತೆ.

ಮಹದೇವಪುರ ವಲಯ: ಬೆನ್ನಿಗಾನಹಳ್ಳಿ- ಕೆ.ಆರ್. ಪುರ, ಸುಬ್ರಮಣ್ಯ ಸ್ವಾಮಿ ದೇವಸ್ಥಾನ, ವರ್ತೂರು ಕೋಡಿ, ಹೊರ ವರ್ತುಲ ರಸ್ತೆ – ಎಂಬಸ್ಸಿ ಟೆಕ್ ವಿಲೇಜ್, ಸರ್ಜಾಪುರ ಸಿಗ್ನಲ್- ಇಬ್ಬಲೂರು ಕೆರೆ, ಬಿ. ಚನ್ನಸಂದ್ರ ಸೇತುವೆ, ಐಟಿಪಿಎಲ್ ಫ್ಯಾಕ್ಟರಿ, ಕುಂದಲಹಳ್ಳಿ, ದೊಡ್ಡನೆಕ್ಕುಂದಿ, ಕೆ.ಆರ್.ಪುರ, ಮಹದೇವಪುರ, ಮಾರತ್ತಹಳ್ಳಿ.

ಯಲಹಂಕ ವಲಯ: ಹೆಬ್ಬಾಳ, ಯಲಹಂಕ ನ್ಯೂ ಟೌನ್, ಯಲಹಂಕ ಸಂಚಾರ ಪೊಲೀಸ್ ಠಾಣೆ, ಎನ್‌ಇಎಸ್ ಬಸ್ ನಿಲ್ದಾಣ, ಯಲಹಂಕ ರಸ್ತೆ- ವಿದ್ಯಾರಣ್ಯಪುರ ಮುಖ್ಯರಸ್ತೆ, ಹಾಸ್ಟೆಲ್ ಬಸ್ ನಿಲ್ದಾಣ, ಬಳ್ಳಾರಿ- ಪಾಲನಹಳ್ಳಿ ರಸ್ತೆ, ಬಳ್ಳಾರಿ- ಕೋಗಿಲು ಮುಖ್ಯರಸ್ತೆ.

ರಾಜರಾಜೇಶ್ವರಿನಗರ ವಲಯ: ಜಯಣ್ಣ ವೃತ್ತ– ಕೆಂಚೇನಹಳ್ಳಿ, ಗೊರಗುಂಟೆಪಾಳ್ಯ, ಶ್ರೀಗಂಧಕಾವಲ್, ನೈಸ್ ರಸ್ತೆ– ಕೆಂಗೇರಿ ರಸ್ತೆ, ಸುಮನಹಳ್ಳಿ, ರಿಂಗ್ ರೋಡ್ ವೃತ್ತ, ಕೆಂಗೇರಿ ಬಸ್ ಟರ್ಮಿನಲ್.

ಬೊಮ್ಮನಹಳ್ಳಿ ವಲಯ: ಎಚ್.ಎಸ್.ಆರ್ ಲೇಔಟ್ 27ನೇ ಮುಖ್ಯರಸ್ತೆ, ಸಾರಕ್ಕಿ, ಬನ್ನೇರುಘಟ್ಟ ರಸ್ತೆ– ಡಿಬಿಎ 80 ಅಡಿ ರಸ್ತೆ, ಬನ್ನೇರುಘಟ್ಟ ರಸ್ತೆ– ಅರಕೆರೆ ರಸ್ತೆ, ಗಾರೆಬಾವಿಪಾಳ್ಯ ದೇವಸ್ಥಾನ, ಹೊಂಗಸಂದ್ರ ಎಂಎಸ್, ಕೂಡ್ಲು ಗೇಟ್ ಸಿಟಿ ಬಸ್ ನಿಲ್ದಾಣ, ಮಡಿವಾಳ ಚೆಕ್‌ಪೋಸ್ಟ್– ಹೊಸೂರು ರಸ್ತೆ.

ದಾಸರಹಳ್ಳಿ ವಲಯ: ನಾಗಸಂದ್ರ ಎಂಎಸ್, 8ನೇ ಮೈಲಿ ವೃತ್ತ, ದಾಸರಹಳ್ಳಿ ಎಂಎಸ್, ಜಾಲಹಳ್ಳಿ ಕ್ರಾಸ್ ರಸ್ತೆ– ತುಮಕೂರು ರಸ್ತೆ.

ಮರಣದಂಡನೆಗೆ ಗುರಿಯಾಗಿದ್ದ ಅಪರಾಧಿ ಖುಲಾಸೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೊಲೆ ಪ್ರಕರಣದಲ್ಲಿ ಮರಣದಂಡನೆ ಶಿಕ್ಷೆಗೆ ಗುರಿಯಾಗಿದ್ದ ಅಪರಾಧಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ಖುಲಾಸೆಗೊಳಿಸಿದೆ.

ಅಪರಾಧಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಕೆ.ಎಂ.ಜೋಸೆಫ್, ಅನಿರುದ್ಧ ಬೋಸ್ ಮತ್ತು ಹೃಷಿಕೇಶ್ ರಾಯ್ ಅವರನ್ನೊಳಗೊಂಡ ತ್ರಿಸದಸ್ಯ ನ್ಯಾಯಪೀಠ, 'ಕೊಲೆ ವೇಳೆ ಆತನಿಗೆ 12 ವರ್ಷ 6 ತಿಂಗಳು ವಯಸ್ಸಾಗಿತ್ತು ಎಂಬುದು ಶಾಲಾ ದಾಖಲಾತಿ ಪುಸ್ತಕ ದಿಂದ ದೃಢಪಟ್ಟಿದೆ. ಜೊತೆಗೆ ಆತ ಈಗಾಗಲೇ 28 ವರ್ಷಗಳ ಜೈಲು ಶಿಕ್ಷೆ ಪೂರೈಸಿದ್ದಾನೆ. ಹೀಗಾಗಿ ಖುಲಾಸೆಗೊಳಿಸಲಾಗುತ್ತಿದೆ' ಎಂದು ಹೇಳಿದೆ.

'1994ರಲ್ಲಿ ಪುಣೆಯಲ್ಲಿ ನಡೆದಿದ್ದ ಘಟನೆಯಲ್ಲಿ ಗರ್ಭಿಣಿ ಸೇರಿದಂತೆ ಐವರು ಮಹಿಳೆಯರು ಹಾಗೂ ಇಬ್ಬರು ಮಕ್ಕಳನ್ನು ಹತ್ಯೆ ಮಾಡಲಾಗಿತ್ತು. ವಿಚಾರಣಾಧೀನ ನ್ಯಾಯಾಲಯವು ಮರಣದಂಡನೆ ಶಿಕ್ಷೆ ವಿಧಿಸಿತ್ತು. ಹೈಕೋರ್ಟ್, ಸುಪ್ರೀಂ ಕೋರ್ಟ್ ಈ ತೀರ್ಪನ್ನು ಎತ್ತಿಹಿಡಿದಿದ್ದವು. ಇದನ್ನು ನಾವು ರದ್ದುಪಡಿಸುತ್ತಿದ್ದೇವೆ' ಎಂದು ನ್ಯಾಯಪೀಠ ತಿಳಿಸಿದೆ.

ಅಶಿಸ್ತು: ಇಬ್ಬರು ಕಾನ್‌ಸ್ಟೆಬಲ್ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಶಿಸ್ತು ತೋರಿದ ಆರೋಪದ ಅಡಿ ಸುಬ್ರಹ್ಮಣ್ಯ ನಗರ ಠಾಣೆಯ ಇಬ್ಬರು ಪೊಲೀಸ್ ಕಾನ್‌ಸ್ಟೆಬಲ್‌ಗಳನ್ನು ಸೋಮವಾರ ಅಮಾನತು ಮಾಡಲಾಗಿದೆ.

ಕಾನ್‌ಸ್ಟೆಬಲ್ ವಿಜಯ್ ರಾಥೋಡ್, ಠಾಣಾ ಬರಹಗಾರ ಶಿವಕುಮಾರ್ ಅಮಾನತುಗೊಂಡ ಸಿಬ್ಬಂದಿ.

'ಠಾಣೆಯ ಇನ್‌ಸ್ಪೆಕ್ಟರ್ ಶರಣಗೌಡ ಅವರು ರಜೆ ನೀಡುತ್ತಿಲ್ಲ. ತಮಗೆ ಹಣ ಮಾಡಿಕೊಡುವಂತೆ ಕೆಳಗಿನ ಸಿಬ್ಬಂದಿ, ಅಧಿಕಾರಿಗಳಿಗೆ ಕಿರುಕುಳ ನೀಡುತ್ತಿದ್ದಾರೆ' ಎಂದು ಆರೋಪಿಸಿ ಶಿವಕುಮಾರ್ ಅವರು ರಾಷ್ಟ್ರಪತಿ, ಪ್ರಧಾನ ಮಂತ್ರಿ, ಮುಖ್ಯಮಂತ್ರಿ ಸೇರಿದಂತೆ ಹಲವರಿಗೆ ಪತ್ರ ಬರೆದಿದ್ದರು ಎಂಬ ಆರೋಪದ ಮೇರೆಗೆ ಅಮಾನತು ಮಾಡಲಾಗಿದೆ.

'ಯಾರೂ ಹಣ ಮಾಡಿ ಕೊಡುತ್ತಾರೆಯೇ ಅವರಿಗೆ ಮಾತ್ರ ರಜೆ ನೀಡುತ್ತಾರೆ. ಎಲ್ಲ ಸೌಲಭ್ಯಗಳನ್ನು ಕೊಡುತ್ತಾರೆ. ಠಾಣಾ ಸರಹದ್ದು ಗಸ್ತಿಗೆ ಎಂದು ಮಂಜೂರು ಆಗಿರುವ ದ್ವಿಚಕ್ರ ವಾಹನಗಳನ್ನು ಬೀಟ್ ಸಿಬ್ಬಂದಿಗೆ ನೀಡಲು ₹ 5 ಸಾವಿರ ಕೇಳುತ್ತಾರೆ. ಅವರ ಮಕ್ಕಳನ್ನು ಈಜುಕೊಳಕ್ಕೆ ಬಿಡಲು ಸರ್ಕಾರಿ ವಾಹನ ಹೊಯ್ಸಳ ಬಳಸಿಕೊಳ್ಳುತ್ತಾರೆ. ಅಲ್ಲದೆ ಪೊಲೀಸ್ ಸಿಬ್ಬಂದಿಯನ್ನು ತಮ್ಮ ವೈಯಕ್ತಿಕ ಕೆಲಸಕ್ಕೆ ಬಳಸಿಕೊಳ್ಳುತ್ತಾರೆ' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದರು.

'ಮಹಿಳಾ ಸಿಬ್ಬಂದಿ ರಜೆ ಕೇಳಲು ತೆರಳಿದರೆ ಬೇರೆ ದೃಷ್ಟಿಯಲ್ಲಿ ನೋಡುತ್ತಾರೆ. ಸಿಬ್ಬಂದಿಗೆ ಸಾರ್ವಜನಿಕರ ಎದುರು ಅವಮಾನ ಮಾಡುತ್ತಾರೆ. ನಾನು ಠಾಣೆಗೆ ಬಂದು ಇಷ್ಟು ದಿನ ಕಳೆದಿದೆ. ಎಷ್ಟು ದುಡ್ಡು ಮಾಡಿಕೊಟ್ಟಿದ್ದೀಯಾ' ಎಂದು ಪ್ರಶ್ನಿಸುತ್ತಾರೆ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದರು. ಈ ಪತ್ರವು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು. ಬಳಿಕ, ಮಲ್ಲೇಶ್ವರ ಎಸಿಪಿ ಅವರ ನೇತೃತ್ವದಲ್ಲಿ ವಿಚಾರಣೆ ನಡೆಸಲಾಗಿತ್ತು.

'ಶಿವಕುಮಾರ್ ಒಬ್ಬರೇ ಅಂಚೆ ಕಚೇರಿಗೆ ತೆರಳಿ ಅಲ್ಲೇ ವಿಳಾಸ ಬರೆದು ಪತ್ರವನ್ನು ಪೋಸ್ಟ್ ಮಾಡಿ ಬಂದಿರುವ ವಿಡಿಯೊ ಸಿಕ್ಕಿದೆ. ಪರಿಶೀಲನೆ ನಡೆಸಿದಾಗ ವಾರದ ರಜೆ ಸೇರಿದಂತೆ ಎಲ್ಲ ರಜೆಯನ್ನೂ ಶಿವಕುಮಾರ್‌ಗೆ ನೀಡಿರುವುದು ಕಂಡುಬಂದಿದೆ. ಇಲಾಖೆ ಶಿಸ್ತು ಹಾಗೂ ಕಾರ್ಯ ವ್ಯಾಪ್ತಿ ಮೀರಿ ಕೆಲಸ ಮಾಡಿದ್ದಾರೆ ಎಂಬುದು ಮೇಲ್ನೋಟಕ್ಕೆ ಕಂಡುಬಂದಿದೆ' ಎಂದು ಇಲಾಖೆ ಮೂಲಗಳು ತಿಳಿಸಿವೆ.

'ವಿಜಯ್ ರಾಥೋಡ್ ಅವರು ಇನ್‌ಸ್ಪೆಕ್ಟರ್ ಅವರ ವಿರುದ್ಧ ವಾಟ್ಸ್‌ಆ್ಯಪ್ ಗ್ರೂಪ್‌ಗಳಲ್ಲಿ ಅವಹೇಳನಕಾರಿಯಾಗಿ ಸಂದೇಶ ಕಳುಹಿಸಿ ಅಶಿಸ್ತು ತೋರಿದ್ದಾರೆ ಎಂಬ ಕಾರಣಕ್ಕೆ ಅಮಾನತು ಮಾಡಲಾಗಿದೆ' ಎಂದು ಮೂಲಗಳು ಹೇಳಿವೆ.

ವಿಜಯ್ ರಾಥೋಡ್ ಠಾಣೆಯ ಮಹಿಳಾ ಸಿಬ್ಬಂದಿ ಹಾಗೂ ಪೋಕ್ಸೊ ಕಾಯ್ದೆ ಅಡಿ ದೂರು ನೀಡಲು ಬಂದವರಿಗೆ ಕಿರುಕುಳ ನೀಡಿದ್ದ ಆರೋಪದಡಿ ಈ ಹಿಂದೆ ಅಮಾನತುಗೊಂಡಿದ್ದರು.

ವೈದ್ಯಕೀಯ ಸೀಟು: ₹ 12 ಲಕ್ಷ ವಂಚನೆ

ನವದೆಹಲಿ (ಪಿಟಿಐ): ಬೆಂಗಳೂರಿನ ವೈದ್ಯಕೀಯ ಕಾಲೇಜೊಂದರಲ್ಲಿ ಸೀಟು ಕೊಡಿಸುತ್ತೇನೆಂದು ಹೇಳಿ ₹ 12 ಲಕ್ಷ ಪಡೆದು ಎಂಬಿಬಿಎಸ್ ಆಕಾಂಕ್ಷಿ ವಿದ್ಯಾರ್ಥಿಯ ತಂದೆಗೆ ವಂಚಿಸಿದ್ದ ಸಲಹೆಗಾರರನ್ನು ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ದೆಹಲಿಯ ರಾಣಿಬಾಗ್ ನಿವಾಸಿ ಲಕ್ಕಿ ಸಿದ್ದು ಬಂಧಿತ ಆರೋಪಿ. ಪಂಜಾಬ್‌ನ ಲುಧಿಯಾನದಲ್ಲೂ ₹ 47 ಲಕ್ಷ ವಂಚನೆ ಪ್ರಕರಣ ಸಂಬಂಧ ಈತನ ವಿರುದ್ಧ ಪ್ರಕರಣ ದಾಖಲಾಗಿತ್ತು. ಈತನ ವಿರುದ್ಧ ದಾಬ್ರಿ ಪೊಲೀಸ್ ಠಾಣೆಯಲ್ಲೂ ಪ್ರಕರಣ ದಾಖಲಾಗಿತ್ತು. ಎರಡು ವರ್ಷದಿಂದ ಆರೋಪಿ ನಾಪತ್ತೆಯಾಗಿದ್ದ.

ಎಂಬಿಬಿಎಸ್ ಸೀಟು ಕೊಡಿಸುತ್ತೇನೆ ಎಂದು ಹೇಳಿ ವಿದ್ಯಾರ್ಥಿಯ ತಂದೆಗೆ ಕರೆ ಮಾಡಿ ₹ 30 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದ. ಅದಾದ ಮೇಲೆ ₹ 12 ಲಕ್ಷಕ್ಕೆ ತೀರ್ಮಾನವಾಗಿತ್ತು ಎಂದು ಮೂಲಗಳು ತಿಳಿಸಿವೆ.

'ತಮ್ಮ ನಿವಾಸದಲ್ಲಿ ಆರೋಪಿ ₹ 10 ಲಕ್ಷ ಪಡೆದುಕೊಂಡಿದ್ದ. ಬೆಂಗಳೂರಿಗೆ ತಮ್ಮ ಮಗನನ್ನು ಕರೆದೊಯ್ಯುವಂತೆ ಸೂಚಿಸಿದ್ದ. ಉಳಿದ ₹ 2 ಲಕ್ಷವನ್ನು ದೂರುದಾರರ ಸಹೋದರನ ಮೂಲಕ ತಲುಪಿಸುವಂತೆಯೂ ತಿಳಿಸಿದ್ದ. ಬೆಂಗಳೂರಿಗೆ ತೆರಳಿ ಪರಿಶೀಲನೆ ನಡೆಸಿದಾಗ ಆರೋಪಿ ತಿಳಿಸಿದ ವೈದ್ಯಕೀಯ ಕಾಲೇಜಿನಲ್ಲಿ ಸೀಟು ಲಭ್ಯವಾಗಿರಲಿಲ್ಲ. ಬಳಿಕ ದೂರು ನೀಡಿದ್ದರು' ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

'ರಾಣಿಬಾಗ್‌ನ ನಿವಾಸದಲ್ಲಿ ಆರೋಪಿ ಬಂಧಿಸಲಾಗಿದೆ. ಆರೋಪಿಯು ನೀಟ್ ಫಲಿತಾಂಶ ಪಡೆದುಕೊಂಡು ರ‍್ಯಾಂಕ್ ವಿದ್ಯಾರ್ಥಿಗಳಿಗೆ ಕರೆ ಮಾಡಿ ಎಂಬಿಬಿಎಸ್ ಹಾಗೂ ಪಿಜಿ ಕೋರ್ಸ್‌ಗಳಿಗೆ ಸೀಟು ಕೊಡಿಸುವುದಾಗಿ ಭರವಸೆ ನೀಡುತ್ತಿದ್ದ. ಇದಕ್ಕೆ ಕಮಿಷನ್ ಪಡೆದುಕೊಳ್ಳುತ್ತಿದ್ದ. ಹಣ ಪಡೆದ ಬಳಿಕ ಮೊಬೈಲ್ ಸಂಖ್ಯೆ ಬದಲಾವಣೆ ಮಾಡುತ್ತಿದ್ದ' ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಗೃಹ ಸಚಿವರ ವಾಹನಕ್ಕೆ ಅಡ್ಡ ಬಂದ ಯುವಕರ ಬಂಧನ

ಬೆಂಗಳೂರು: ಕಬ್ಬನ್‌ರಸ್ತೆ ಮಾರ್ಗವಾಗಿ ಎಚ್‌ಎಎಲ್ ವಿಮಾನದತ್ತ ಭಾನುವಾರ ರಾತ್ರಿ ತೆರಳುತ್ತಿದ್ದ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ವಾಹನ ಸಂಚಾರಕ್ಕೆ ಅಡ್ಡ ಬಂದ ಯುವಕರಾದ ಜಿಬ್ರಾನ್ (22) ಹಾಗೂ ಇಮ್ರಾನ್ (22) ವಿರುದ್ಧ ಕಮರ್ಷಿಯಲ್ ಸ್ಟ್ರೀಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಇಬ್ಬರು ವಿದ್ಯಾರ್ಥಿಗಳನ್ನು ಬಂಧಿಸಲಾಗಿದೆ. ಇಬ್ಬರು ನೀಲಸಂದ್ರದ ನಿವಾಸಿಗಳು. ಆರ್‌.ಟಿ.ನಗರದ ಕಾಲೇಜಿನಲ್ಲಿ ಓದುತ್ತಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ. ಪೊಲೀಸರ ಕರ್ತವ್ಯಕ್ಕೆ ಅಡ್ಡಿ ಹಾಗೂ ಗಣ್ಯರ ಜೀವಕ್ಕೆ ಅಪಾಯ ತಂದೊಡ್ಡಿದ್ದ ಆರೋಪದ ಅಡಿ ಇಬ್ಬರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಭಾನುವಾರ ನಗರದಲ್ಲಿ ಹಲವು ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದ ಅಮಿತ್ ಶಾ ರಾತ್ರಿ 10.45ರ ಸುಮಾರಿಗೆ ದೆಹಲಿಗೆ ಹೋಗಲು ಎಚ್‌ಎಎಲ್ ಏರ್‌ಪೋರ್ಟ್‌ ನತ್ತ ಹೊರಟಿದ್ದರು. ಬೆಂಗಾವಲು ವಾಹನಗಳು ಜೊತೆಗಿದ್ದವು. ಈ ಮಾರ್ಗದಲ್ಲಿ ಸಂಚರಿಸದಂತೆ ಸಾರ್ವಜನಿಕರ ವಾಹನಗಳನ್ನು ಪೊಲೀಸರು ತಡೆದು ನಿಲ್ಲಿಸಿದ್ದರು. ಕಬ್ಬನ್ ರಸ್ತೆಯ ಮಣಿಪಾಲ್ ಸೆಂಟರ್ ವೃತ್ತದಲ್ಲಿ ಒಂದೇ ಬೈಕ್‌ನಲ್ಲಿ ಹೊರಟಿದ್ದ ಇಬ್ಬರು ವಿದ್ಯಾರ್ಥಿಗಳು ಪೊಲೀಸರನ್ನು ತಪ್ಪಿಸಿ ರಸ್ತೆಗೆ ನುಗ್ಗಿದ್ದರು. ಅಮಿತ್ ಶಾ ಅವರಿದ್ದ ವಾಹನದ ಎದುರೇ ಬೈಕ್ ಚಲಾಯಿಸಿ ಸಂಚಾರಕ್ಕೆ ಅಡ್ಡಿಪಡಿಸಿದ್ದರು. ಕೂಡಲೇ ಪೊಲೀಸರು ಅವರನ್ನು ವಶಕ್ಕೆ ಪಡೆದಿದ್ದರು.

'ಭದ್ರತಾ ಲೋಪವಾಗಿಲ್ಲ. ಇಬ್ಬರೂ ಹೆಲ್ಮೆಟ್ ಧರಿಸಿರಲಿಲ್ಲ. ಡಿಎಲ್ ಇರಲಿಲ್ಲ. ಭದ್ರತಾ ಕಾರ್ಯಕ್ಕೆ ನಿಯೋಜನೆ ಗೊಂಡಿದ್ದ ಪೊಲೀಸರನ್ನು ಗಮನಿಸಿದ ವಿದ್ಯಾರ್ಥಿಗಳು ಭಯದಿಂದ ತಪ್ಪಿಸಿಕೊಳ್ಳಲು ರಸ್ತೆಯಲ್ಲಿ ಬೈಕ್ ಚಲಾಯಿಸಿದರು. ಅದೇ ವೇಳೆಗೆ ಗೃಹ ಸಚಿವರ ಕಾರು ಬಂತು. ಮತ್ತಷ್ಟು ಭಯದಿಂದ ಬೈಕ್ ಓಡಿಸಿದರು. ನಿರ್ಲಕ್ಷ್ಯ ತೋರಿದ ವಿದ್ಯಾರ್ಥಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಪಿಎಸ್‌ಐ ಅಕ್ರಮ: ಪಿಎಸ್‌ಐ ನವೀನ್ ಬಂಧನ

ಬೆಂಗಳೂರು: ಪೊಲೀಸ್ ಸಬ್‌ಇನ್‌ಸ್ಪೆಕ್ಟರ್ ನೇಮಕಾತಿ ಅಕ್ರಮ ಪ್ರಕರಣದಲ್ಲಿ ಸಿಐಡಿ ಪೊಲೀಸರು ಮತ್ತೊಬ್ಬ ಪ್ರಮುಖ ಆರೋಪಿಯನ್ನು ಬಂಧಿಸಿದ್ದಾರೆ.

ಬ್ಯಾಡರಹಳ್ಳಿ ಪೊಲೀಸ್ ಠಾಣೆಯ ಪಿಎಸ್‌ಐ ಆಗಿದ್ದ ನವೀನ್ ಎಂಬುವವರನ್ನು ಸೋಮವಾರ ಬಂಧಿಸಲಾಗಿದೆ. ಅಕ್ರಮ ಪ್ರಕರಣದಲ್ಲಿ ನವೀನ್ ಪಾತ್ರಕ್ಕೆ ಸಂಬಂಧಿಸಿದಂತೆ ತನಿಖಾ ತಂಡಕ್ಕೆ ದಾಖಲೆಗಳು ಲಭಿಸಿದ ಬಳಿಕ ನಾಪತ್ತೆಯಾಗಿದ್ದ.

ಕಳೆದ ಮೇ ತಿಂಗಳಿಂದ ನವೀನ್‌ಗಾಗಿ ಸಿಐಡಿ ತಂಡವು ಹುಡುಕಾಟ ನಡೆಸುತ್ತಿತ್ತು. ಪದೇ ಪದೇ ಫೋನ್ ನಂಬರ್ ಬದಲಾವಣೆ ಮಾಡುತ್ತಿದ್ದ ಕಾರಣಕ್ಕೆ ಬಂಧನ ಸಾಧ್ಯವಾಗಿರಲಿಲ್ಲ. ಸೋಮವಾರ ನಂದಿನಿ ಲೇಔಟ್‌ನ ಮನೆಯೊಂದರಲ್ಲಿ ಬಂಧಿಸಲಾಗಿದೆ. ಈತ ಮಧ್ಯವರ್ತಿಯಾಗಿ ಕೆಲಸ ಮಾಡಿದ್ದ ಎಂದು ಸಿಐಡಿ ಮೂಲಗಳು ತಿಳಿಸಿವೆ.

ಸಿಐಡಿ ಡಿವೈಎಸ್ಪಿ ಅಂಜುಮಾಲಾ ಟಿ.ನಾಯಕ್, ಪತ್ತೆದಳದ ವಿಭಾಗದ ಸಬ್‌ಇನ್‌ಸ್ಪೆಕ್ಟರ್‌ಗಳಾದ ಅಭಿಜಿತ್ ಆದಿತ್ಯ ಹಾಗೂ ಶ್ರೀಕಾಂತ್ ನೇತೃತ್ವದ ತಂಡವು ಆರೋಪಿಯನ್ನು ಬಂಧಿಸಿದೆ.

ನಗರದ ಕೆಎಲ್‌ಇ ಔಷಧ ವಿಜ್ಞಾನ ಮಹಾವಿದ್ಯಾಲಯದ ಎನ್‌ಎಸ್‌ಎಸ್ ವಾರ್ಷಿಕ ಶಿಬಿರ ವಾದಕುಂಟೆ ಗ್ರಾಮದಲ್ಲಿ ನಡೆಯಿತು.

ಎನ್‌ಎಸ್‌ಎಸ್ ವಾರ್ಷಿಕ ಶಿಬಿರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೆಎಲ್‌ಇ ಔಷಧ ವಿಜ್ಞಾನ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ಘಟಕವು 2022-23ನೇ ಸಾಲಿನ ವಾರ್ಷಿಕ ಶಿಬಿರವನ್ನು ಹಸಿರುವಳ್ಳಿ ಗ್ರಾಮ ಪಂಚಾಯಿತಿಯ ವಾದಕುಂಟೆ ಗ್ರಾಮದಲ್ಲಿ ಇತ್ತೀಚೆಗೆ ಹಮ್ಮಿಕೊಂಡಿತ್ತು.

ವಾದಕುಂಟೆ ಗ್ರಾಮದ ಜನರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ, ಮಧುಮೇಹದ ಬಗ್ಗೆ ಅರಿವು ಹಾಗೂ ಬೀದಿ ನಾಟಕ, ಅನಿಮಿಯಾ ಮುಕ್ತ ಭಾರತದ ಕಡೆಗೆ ಒಂದು ಹೆಜ್ಜೆ, ಸಸಿ ನೆಡುವ ಮೂಲಕ ಪರಿಸರದ ಕುರಿತು ಜಾಗೃತಿ, ಹೆಣ್ಣು ಮಕ್ಕಳನ್ನು ಉಳಿಸಿ ಹಾಗೂ ಬೆಳಸಿ, ಡಿಜಿಟಲ್ ಭಾರತ, ಆತ್ಮನಿರ್ಭರ ಭಾರತ, ಉಜ್ವಲ ಭಾರತ ಸೇರಿ ಪ್ರಧಾನ ಮಂತ್ರಿ ಯೋಜನೆಗಳ ಬಗ್ಗೆ ಗ್ರಾಮಸ್ಥರಲ್ಲಿ ಜಾಗೃತಿ ಮೂಡಿಸಲಾಯಿತು. ತಂಬಾಕು ನಿರ್ಮೂಲನೆ, ಫಿಟ್ ಇಂಡಿಯಾ, ಪರಿಸರ ಸಂರಕ್ಷಣೆಯ ಕುರಿತು ಜಾಥಾ, ಶಾಲಾ ಮಕ್ಕಳಿಗೆ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ನಡೆಸಲಾಯಿತು.

'ಕ್ಯಾಂಪಸ್ ಟು ಕಮ್ಯೂನಿಟಿ'ಯ ಸ್ಕೂಲ್ ಬೆಲ್ ಸಹಯೋಗದಲ್ಲಿ ಕೆಎಲ್‌ಇ ಎನ್‌ಎಸ್‌ಎಸ್ ವಿದ್ಯಾರ್ಥಿಗಳು ಶಾಲೆಗೆ ಸುಣ್ಣ-ಬಣ್ಣ ಹಚ್ಚಿ ಆಕರ್ಷಕ ಚಿತ್ರಗಳನ್ನು ಬಿಡಿಸಿದ್ದಾರೆ. ಇದು ಹಳ್ಳಿಗರ ಪ್ರಶಂಸೆಗೆ ಪಾತ್ರವಾಗಿದೆ. ಈ ಶಿಬಿರವು ಕೆಎಲ್‌ಇ ಮಹಾವಿದ್ಯಾಲಯದ ಎನ್‌ಎಸ್‌ಎಸ್ ಅಧಿಕಾರಿ ಡಾ. ಮಮತಾ ಅವರ ನೇತೃತ್ವದಲ್ಲಿ ನಡೆಯಿತು. ಶಾಲಾ ಮುಖ್ಯಶಿಕ್ಷಕ ಬಿ.ಎಸ್ ಸುದರ್ಶನ ಮತ್ತು ಕೆಎಲ್‌ಇ ಔಷಧ ವಿಜ್ಞಾನ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಎ.ಜೆ ರಾಜಮ್ಮ ಇದ್ದರು.

ಎಂ.ಇಡಿ ಪ್ರವೇಶಕ್ಕೆ ಅಧಿಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2022-23ನೇ ಶೈಕ್ಷಣಿಕ ಸಾಲಿನ ಬೆಂಗಳೂರು ನಗರ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿರುವ ಸಂಯೋಜಿತ ಕಾಲೇಜುಗಳಲ್ಲಿ ಎಂ.ಇಡಿ ಕೋರ್ಸ್ ಪ್ರವೇಶಾತಿ ಸೀಟುಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿಗಳನ್ನು https://uucms.karnataka.gov.in/login/Index ಮೂಲಕ ಸಲ್ಲಿಸಬಹುದಾಗಿದೆ. ದಂಡ ಶುಲ್ಕ ₹100 ಸಹಿತ ಅರ್ಜಿ ಸಲ್ಲಿಸಲು ಮಾರ್ಚ್ 30 ಕೊನೆಯ ದಿನವಾಗಿದೆ.

ಗುಂಡಿನ ದಾಳಿ: 3 ವಿದ್ಯಾರ್ಥಿಗಳು ಸೇರಿ 6 ಮಂದಿ ಸಾವು

ನ್ಯಾಶ್‌ವಿಲ್ಲೆ(ಅಮೆರಿಕ)(ರಾಯಿಟರ್ಸ್): ಇಲ್ಲಿನ ಖಾಸಗಿ ಶಾಲೆಯೊಂದರಲ್ಲಿ 28 ವರ್ಷದ ಯುವತಿಯೊಬ್ಬಳು ಗುಂಡಿನ ದಾಳಿ ನಡೆಸಿದ್ದು, ಮೂವರು ವಿದ್ಯಾರ್ಥಿಗಳು ಹಾಗೂ ಮೂವರು ಸಿಬ್ಬಂದಿ ಮೃತಪಟ್ಟಿದ್ದಾರೆ ಎಂದು ಪೊಲೀಸರು ಸೋಮವಾರ ಹೇಳಿದ್ದಾರೆ.

ದಾಳಿ ನಡೆಸಿರುವ ಯುವತಿಯನ್ನು ಪೊಲೀಸರು ಗುಂಡಿಟ್ಟು ಸಾಯಿಸಿದ್ದಾರೆ ಎಂದೂ ವಿವರಿಸಿದ್ದಾರೆ. ಯುವತಿ ಈ ಕೃತ್ಯ ಎಸಗಿರುವುದಕ್ಕೆ ಕಾರಣ ತಿಳಿದುಬಂದಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಎರಡು ರೈಫಲ್ ಹಾಗೂ ಒಂದು ಪಿಸ್ತೂಲಿನೊಂದಿಗೆ ಬಂದ ಯುವತಿಯು ಗುಂಡಿನ ದಾಳಿ ನಡೆಸಿದ್ದಾಳೆ. ಈ ಶಾಲೆಯಲ್ಲಿ ನರ್ಸರಿಯಿಂದ ಆರನೇ ತರಗತಿವರೆಗಿನ ವಿದ್ಯಾರ್ಥಿಗಳು ಕಲಿಯುತ್ತಿದ್ದರು ಎಂದಿದ್ದಾರೆ.

ಶಾಲೆಯನ್ನು ಸುತ್ತುವರಿದ ಶಸ್ತ್ರಧಾರಿ ಪೊಲೀಸರು ಉಳಿದ ಮಕ್ಕಳನ್ನು ಸುರಕ್ಷಿತವಾಗಿ ಹೊರಗೆ ಕರೆತಂದಿದ್ದಾರೆ ಎಂದೂ ಹೇಳಿದ್ದಾರೆ.

450 ಹೆಲ್ಮೆಟ್, 35 ಕ್ರೀಡಾ ಕಿಟ್ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಮತದಾರರಿಗೆ ಹಂಚಿಕೆ ಮಾಡಲು ದಾಸ್ತಾನು ಮಾಡಿದ್ದ ಹೆಲ್ಮೆಟ್, ಪಡಿತರ ಕಿಟ್ ಹಾಗೂ ದಾಖಲೆಯಿಲ್ಲದೆ ಸಾಗಣೆ ಮಾಡುತ್ತಿದ್ದ ನಗದನ್ನು ಪೊಲೀಸರು ಜಪ್ತಿ ಮಾಡಿದ್ದಾರೆ.

ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ಶ್ರೀನಿವಾಸ ಗ್ರಾಮದ ಹಯಗ್ರೀವ ಪಬ್ಲಿಕ್ ಶಾಲೆಯಲ್ಲಿ ಮತದಾರರಿಗೆ ಹಂಚಿಕೆ ಮಾಡಲು ದಾಸ್ತಾನು ಮಾಡಿದ್ದ ₹ 3.60 ಲಕ್ಷ ಮೌಲ್ಯದ 450 ಹೆಲ್ಮೆಟ್ ಹಾಗೂ ₹ 1.40 ಲಕ್ಷ ಮೌಲ್ಯದ 35 ಕ್ರಿಕೆಟ್ ಕಿಟ್, ₹ 25 ಸಾವಿರ ಮೌಲ್ಯದ ಬ್ಲಾಂಕೆಟ್‌ಗಳನ್ನು ಯಲಹಂಕ ಪೊಲೀಸರು ವಶ ಪಡಿಸಿಕೊಂಡಿದ್ದಾರೆ.

ಇದೇ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹೆಗಡೆ ನಗರದ 12ನೇ ಕ್ರಾಸ್‌ನ 1ನೇ ಮುಖ್ಯರಸ್ತೆಯಲ್ಲಿ ಪಕ್ಷವೊಂದರ ಕಾರ್ಯಕರ್ತ ಸೈಯ್ಯದ್ ಸಾಧಿಕ್ ಎಂಬಾತ ಹಂಚಿಕೆ ಮಾಡುತ್ತಿದ್ದ ₹ 90 ಸಾವಿರ ಮೌಲ್ಯದ 151 ಪಡಿತರ ಕಿಟ್‌ಗಳನ್ನು ಸಂಪಿಗೆಹಳ್ಳಿ ಪೊಲೀಸರು ಜಪ್ತಿ ಮಾಡಿದ್ದಾರೆ.

ಬೆಂಗಳೂರಿನಿಂದ ಚಿಕ್ಕಬಳ್ಳಾಪುರ ಕಡೆಗೆ ಕಾರಿನಲ್ಲಿ ಸಾಗಣೆ ಮಾಡುತ್ತಿದ್ದ ದಾಖಲೆಯಿಲ್ಲದ ₹ 1.42 ಲಕ್ಷ ನಗದನ್ನು ದೇವನಹಳ್ಳಿ ಪೊಲೀಸರು ಜಪ್ತಿ ಮಾಡಿದ್ದಾರೆ.

ಪೂಜನಹಳ್ಳಿ ಗೇಟ್‌ನ ಟೋಲ್–2ರಲ್ಲಿ ವಾಹನ ತಪಾಸಣೆ ವೇಳೆ ಸರಕು ಸಾಗಣೆ ವಾಹನದಲ್ಲಿ ದಾಖಲಾತಿಯಿಲ್ಲದೆ ಸಾಗಣೆ ಮಾಡುತ್ತಿದ್ದ ₹ 6.45 ಲಕ್ಷ ಮೌಲ್ಯದ ತಂಬಾಕು ಪೊಟ್ಟಣವನ್ನು ದೇವನಹಳ್ಳಿ ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ.

ಮದ್ಯ ವಶ: ಈಶಾನ್ಯ ವಿಭಾಗದ ಸಂಪಿಗೆಹಳ್ಳಿ, ಅಮೃತಹಳ್ಳಿ, ಕೊತ್ತನೂರು, ಬಾಗಲೂರು, ವಿದ್ಯಾರಣ್ಯಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಅಕ್ರಮವಾಗಿ ಮದ್ಯ ಮಾರಾಟದ ಸ್ಥಳಗಳ ಮೇಲೆ ದಾಳಿ ನಡೆಸಿದ ಪೊಲೀಸರು 35 ಲೀಟರ್ ಮದ್ಯ ವಶಕ್ಕೆ ಪಡೆದುಕೊಂಡಿದ್ದಾರೆ. ಐವರ ವಿರುದ್ಧ ಅಬಕಾರಿ ಕಾಯ್ದೆ ಉಲ್ಲಂಘನೆ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಫುಟ್‌ಪಾತ್‌ಗೆ ಬೈಕ್ ಡಿಕ್ಕಿ: ಎಲೆಕ್ಟ್ರಿಷಿಯನ್ ಸಾವು

ಬೆಂಗಳೂರು: ರಾಜಾಜಿನಗರ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಸ್ಕೂಟರ್ ಸವಾರನ ನಿಯಂತ್ರಣ ತಪ್ಪಿ ಫುಟ್‌ಪಾತ್ ಕಟ್ಟೆಗೆ ಡಿಕ್ಕಿಯಾದ ಪರಿಣಾಮ ಎಲೆಕ್ಟ್ರಿಷಿಯನ್ ಮೃತಪಟ್ಟಿದ್ದಾರೆ.

ರಾಮನಗರ ಟೌನ್‌ನ ನಿವಾಸಿ ಗಗನ್ (21) ಮೃತಪಟ್ಟವರು.

ಭಾನುವಾರ ರಾತ್ರಿ 11.45ರ ವೇಳೆಗೆ ಗಗನ್ ಅವರು ದೊಡ್ಡಬಳ್ಳಾಪುರಕ್ಕೆ ಸ್ಕೂಟರ್‌ನಲ್ಲಿ ತೆರಳುತ್ತಿದ್ದರು. ಸ್ಕೂಟರ್ ವೇಗವಾಗಿ ಚಲಿಸುತ್ತಿತ್ತು. ಹೊರವರ್ತುಲ ರಸ್ತೆಯ ಸತ್ಯಸಾಯಿ ಬಾಬಾ ದೇವಸ್ಥಾನದ ಬಳಿ ಸ್ಕೂಟರ್ ಫುಟ್‌ಪಾತ್‌ಗೆ ಡಿಕ್ಕಿಯಾದ ಪರಿಣಾಮ ಗಂಭೀರವಾಗಿ ಗಾಯಗೊಂಡಿದ್ದ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ನಂಬರ್ ಪ್ಲೇಟ್ ಬದಲಿಸಿ ಹೈದರಾಬಾದ್ ವ್ಯಕ್ತಿಗೆ ಆರು ವಾಹನ ಮಾರಾಟ

ಫೈನಾನ್ಸ್ ಕಂಪನಿ ನಕಲಿ ದಾಖಲೆ ಸೃಷ್ಟಿ: ಬಂಧನ

ಪ್ರಜಾವಾಣಿ ವಾರ್ತೆ

ಪ್ರದೀಪ್



ಮನ್ಸೂರ್

ಬೆಂಗಳೂರು: ನಕಲಿ ದಾಖಲೆ ಸೃಷ್ಟಿಸಿ ಫೈನಾನ್ಸ್ ಕಂಪನಿಗಳಲ್ಲಿ ಸಾಲದ ಮೇಲೆ ಕಾರು ಖರೀದಿಸಿ ಮಾರಾಟ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಅಪರಾಧ ಪತ್ತೆ ದಳದ ಪೊಲೀಸರು ಬಂಧಿಸಿದ್ದಾರೆ.

ಆರ್.ಪ್ರದೀಪ್‌ಕುಮಾರ್ (32) ಹಾಗೂ ಮನ್ಸೂರ್ ಮಿರ್ಜಾ (38) ಬಂಧಿತರು.ಬಂಧಿತರಿಂದ ₹ 80 ಲಕ್ಷ ಮೌಲ್ಯದ 7 ಮಹೀಂದ್ರ ಕ್ಸೈಲೋ ವಾಹನಗಳನ್ನು ಜಪ್ತಿ ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಮಹೀಂದ್ರ ಫೈನಾನ್ಸ್ ಕಂಪನಿಯ ವ್ಯವಸ್ಥಾಪಕ ಮೋಹನ್‌ಕುಮಾರ್ ನೀಡಿದ ದೂರು ಆಧರಿಸಿ, ತನಿಖೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ.

2018ರಲ್ಲಿ ಆರ್.ಪ್ರದೀಪ್‌ಕುಮಾರ್ ಎಂಬಾತ ಬೆಂಗಳೂರು ಟ್ರಾನ್ಸ್‌ಪೋರ್ಟ್‌ ಸಲ್ಯೂಷನ್ ಎಂಬ ಕಂಪನಿ ಸ್ಥಾಪಿಸಿದ್ದು, ಕಂಪನಿಗೆ ವಾಹನ ಖರೀದಿಸಲು ಸಾಲ ನೀಡುವಂತೆ ಕೋರಿಕೊಂಡಿದ್ದರು. ಇದಕ್ಕೆ ಸಂಬಂಧಿಸಿದಂತೆ ಮನೆ, ಕಚೇರಿ ದಾಖಲೆ ಸಲ್ಲಿಸಿದ್ದರು. ದಾಖಲೆ ಪರಿಶೀಲಿಸಿ 6 ವಾಹನಗಳಿಗೆ ಮಹೀಂದ್ರ ಫೈನಾನ್ಸ್ ಕಂಪನಿಯವರು ಸಾಲ ಮಂಜೂರು ಮಾಡಿದ್ದರು. ಬಳಿಕ, ಪ್ರದೀಪ್‌ಕುಮಾರ್ ಸಾಲದ ಕಂತು ಪಾವತಿಸಿರಲಿಲ್ಲ. ಮನೆ ಹಾಗೂ ಕಚೇರಿಯನ್ನು ಪರಿಶೀಲಿಸಿದಾಗ ಅವರು ನಾಪತ್ತೆಯಾಗಿದ್ದರು. ಬಳಿಕ ಮೈಕೋ ಲೇಔಟ್ ಠಾಣೆಗೆ ದೂರು ನೀಡಲಾಗಿತ್ತು. ಈ ಪ್ರಕರಣವನ್ನು ಸಿಸಿಬಿಗೆ ವರ್ಗಾವಣೆ ಮಾಡಲಾಗಿತ್ತು.

'ವಾಹನದ ಸಾಲ ತೀರಿಸಿರುವುದಾಗಿ ಮಹೀಂದ್ರ ಫೈನಾನ್ಸ್ ಕಂಪನಿ ದಾಖಲೆಗಳನ್ನು ಸೃಷ್ಟಿಸಿ ತಿದ್ದಿ ಮಾರಾಟ ಮಾಡಲು ಆರೋಪಿಗಳು ಮುಂದಾಗಿದ್ದರು. ಎಲೆಕ್ಟ್ರಾನಿಕ್ ಸಿಟಿಯ ಆರ್‌ಟಿಒ ಕಚೇರಿಯಿಂದ ಎನ್‌ಒಸಿ ಪಡೆಯಲು ದಾಖಲೆಗಳು ಬಂದಿದ್ದವು. ಆಗ ಆರ್‌ಟಿಒ ಕಚೇರಿ ಅಧಿಕಾರಿಗಳ ಸೂಚನೆಯಂತೆ ಮೋಹನ್‌ಕುಮಾರ್ ಅವರು ಪರಿಶೀಲಿಸಿದಾಗ ನಕಲಿ ದಾಖಲೆಗಳನ್ನು ಸೃಷ್ಟಿಸಿರುವುದು ಪತ್ತೆಯಾಗಿತ್ತು. ವಾಹನಗಳ ಸಾಲ ತೀರಿಸಲಾಗಿದೆ ಎಂಬ ದಾಖಲೆ ಸೃಷ್ಟಿಸಿ ಹೈದರಾಬಾದ್‌ನಲ್ಲಿ ಒಂದು ವಾಹನ ಮಾರಾಟ ಮಾಡಿದ್ದರು' ಎಂದು ಮೂಲಗಳು ತಿಳಿಸಿವೆ. 'ಆರು ವಾಹನಗಳಿಗೆ ನಕಲಿ ನಂಬರ್ ಪ್ಲೇಟ್ ಅಳವಡಿಸಿ ಹೈದರಾಬಾದ್‌ನ ಮನ್ಸೂರ್ ಎಂಬಾತನ ಸಹಾಯ ಪಡೆದು ಪ್ರದೀಪ್‌ಕುಮಾರ್ ಮಾರಾಟ ಮಾಡಿದ್ದರು. ಹೈದರಾಬಾದ್‌ನ ಎಚ್‌ಡಿಬಿ, ಎಚ್‌ಡಿಎಫ್‌ಸಿ ಫೈನಾನ್ಸ್ ಕಂಪನಿಗಳಿಗೂ ಆರೋಪಿಗಳು ವಂಚಿಸಿದ್ದರು' ಎಂದು ಮೂಲಗಳು ತಿಳಿಸಿವೆ.

ನಗರದಲ್ಲಿ ಇಂದು

ಬ್ರಹ್ಮರಥೋತ್ಸವ: ಬೆಳಿಗ್ಗೆ 10ಕ್ಕೆ ದಕ್ಷಿಣೇಶ್ವಸ್ವಾಮಿಗೆ ರುದ್ರಾಭಿಷೇಕ, ಸಂಜೆ 6ಕ್ಕೆ ದಕ್ಷಿಣೇಶ್ವರಸ್ವಾಮಿ ಉತ್ಸವ, ಆಯೋಜನೆ: ಕಾಕೋಳು ವೇಣುಗೋಪಾಲಸ್ವಾಮಿ ದೇವಸ್ಥಾನ ಟ್ರಸ್ಟ್, ಸ್ಥಳ: ರಾಜಾನುಕುಂಟೆ ಸಮೀಪದ ಕಾಕೋಳು, ಯಲಹಂಕ

ರಾಜ್ಯಮಟ್ಟದ ದೇಸಿ ರಂಗೋತ್ಸವ, ವಿಚಾರಸಂಕಿರಣ, ಯುವ ಜನತೆಗೆ ಉಚಿತ ಅಭಿನಯ ಮತ್ತು ನಿರ್ದೇಶನ ತರಬೇತಿ ಕಮ್ಮಟದ ಉದ್ಘಾಟನೆ: ಶ್ರೀನಿವಾಸ್ ಜಿ. ಕಪ್ಪಣ್ಣ, ಅಧ್ಯಕ್ಷತೆ: ಪುಸ್ತಕಮನೆ ಹರಿಹರ ಪ್ರಿಯ, ಅತಿಥಿಗಳು: ಬೈರಮಂಗಲ ರಾಮೇಗೌಡ, ಶ್ರೀಧರ್, ಉಪಸ್ಥಿತಿ: ಎ.ಆರ್. ಗೋವಿಂದಸ್ವಾಮಿ, 'ರಂಗಭೂಮಿ ಮತ್ತು ಆಧುನಿಕ ಸಂಕೇತಾತ್ಮಕ ನಾಟಕಗಳು' ಕುರಿತು ವಿಚಾರಸಂಕಿರಣ: ಮಂಡನೆ: ವಡ್ಡಗೆರೆ ನಾಗರಾಜಯ್ಯ, ಆಯೋಜನೆ: ದೇಸಿರಂಗ ತಂಡ, ಸ್ಥಳ: ಗೋವಿಂದಸ್ವಾಮಿ ಅಂಗಳ, ಶ್ರೀನಿಧಿ ಲೇಔಟ್, ಕೋಣನಕುಂಟೆ, ಬೆಳಿಗ್ಗೆ 10ರಿಂದ

ವಿಶ್ವ ಮಹಿಳಾ ದಿನಾಚರಣೆ: ಉದ್ಘಾಟನೆ: ಕೆ. ವಿದ್ಯಾಕುಮಾರಿ, ಅತಿಥಿಗಳು: ಜಿ. ಶ್ರೀಧರ್, ವಸುಂಧರಾ ಕದಲೂರು, ಅಧ್ಯಕ್ಷತೆ: ಎಂ. ವೆಂಕಟೇಶ, ಆಯೋಜನೆ: ಭಾಷಾಂತರ ನಿರ್ದೇಶನಾಲಯ ನೌಕರರ ಸಂಘ, ಸ್ಥಳ: ಕೆಎಎಸ್ ಅಧಿಕಾರಿಗಳ ಸಂಘ, ಇನ್‌ಫೆಂಟ್ರಿ ರಸ್ತೆ, ಬೆಳಿಗ್ಗೆ 11

'ವಿಶ್ವ ಮಹಿಳಾ ದಿನಾಚರಣೆ, ಉಚಿತ ಕ್ಯಾನ್ಸರ್ ಜಾಗೃತಿ ಮತ್ತು ತಪಾಸಣಾ ಶಿಬಿರ': ಉದ್ಘಾಟನೆ: ಆಶಾ ಪ್ರಸನ್ನ ಕುಮಾರ್, ಅತಿಥಿಗಳು: ಕೊಂಡಜ್ಜಿ ಬ. ಷಣ್ಮುಖಪ್ಪ, ನಿರ್ಮಲಾ ಯಲಿಗಾರ್, ವಿನುತಾ ಹರೀಶ್, ರೇಖಾ ನಿರಂಜನ್, ಅಧ್ಯಕ್ಷತೆ: ಪಿ.ಜಿ.ಆರ್ ಸಿಂಧ್ಯ, ಆಯೋಜನೆ ಮತ್ತು ಸ್ಥಳ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಅರಮನೆ ರಸ್ತೆ, ಬೆಳಿಗ್ಗೆ 11.30

ಮುತ್ಯಾಲಮ್ಮ ದೇವಿಯ ರಥೋತ್ಸವ: ಬೆಳಿಗ್ಗೆ 9ಕ್ಕೆ ವನದೇವಿ ಅಮ್ಮನವರ ಮೆರವಣಿಗೆ, ಮಧ್ಯಾಹ್ನ 1ಕ್ಕೆ ಪಾಟರಿಟೌನ್ ಮುನೇಶ್ವರ ದೇವಸ್ಥಾನದಲ್ಲಿ ಅನ್ನ ಸಂತರ್ಪಣೆ, ಆಯೋಜನೆ ಮತ್ತು ಸ್ಥಳ: ಮುತ್ಯಾಲಮ್ಮ ದೇವಿ ಟೆಂಪಲ್ ಟ್ರಸ್ಟ್, ಕೆ ಸ್ಟ್ರೀಟ್ ಸೆಪ್ಪಿಂಗ್ ರಸ್ತೆ, ಶಿವಾಜಿನಗರ

ಯುವ ಸಂವಾದ: ಜ್ಯೋತಿರಾದಿತ್ಯ ಸಿಂಧಿಯಾ, ತೇಜಸ್ವಿಸೂರ್ಯ, ಸ್ಥಳ: ಈಸ್ಟ್ ಪಾಯಿಂಟ್ ಕಾಲೇಜ್ ಆಫ್ ಎಂಜಿನಿಯರಿಂಗ್ ಆ್ಯಂಡ್ ಟೆಕ್ನಾಲಜಿ, ಆವಲಹಳ್ಳಿ, ಮಧ್ಯಾಹ್ನ 1

'ಕಾವ್ಯ ಕಾರಣ': ಉದ್ಘಾಟನೆ: ಕೆ.ವೈ ನಾರಾಯಣಸ್ವಾಮಿ, ಪ್ರಾಸ್ತಾವಿಕ ನುಡಿ: ಹುಲಿಕುಂಟೆ ಮೂರ್ತಿ, ಭಾಗವಹಿಸುವ ಕವಿಗಳು: ಉಮಾ ಪಿ., ಮಂಜುಳಾ ಕಿರುಗಾವಲು, ದಯಾ ಗಂಗನಘಟ್ಟ, ದಿವ್ಯಾ ಅಂಜನಪ್ಪ, ಅಶ್ವಿನಿ ಬೋಧ್, ರಿನಿ ಎಲ್ಯೆಜಾ ಅನಿಯನ್, ಗೋವಿಂದಪ್ಪ ಪಾವಗಡ, ಆಶಿಕ್ ಮುಲ್ಕಿ, ಶಂಕರ್ ಸಿಹಿಮೊಗ್ಗೆ, ಗೋವಿಂದಸ್ವಾಮಿ, ಮುರುಳಿ ಮೋಹನ್ ಕಾಟಿ, ಭರತ್ ಆರ್., ಆಯೋಜನೆ: ಬೆಂಗಳೂರು ಆರ್ಟ್ ಫೌಂಡೇಷನ್, ಸ್ಥಳ: ವರ್ಣ ಆರ್ಟ್ ಗ್ಯಾಲರಿ, ಕನ್ನಡ ಭವನ, ಸಂಜೆ 5.30

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, ಮಹಿಳಾ ವಕೀಲರಿಗೆ ಅಭಿನಂದನಾ ಸಮಾರಂಭ: ಅತಿಥಿಗಳು: ನ್ಯಾ. ಎಂ.ಜಿ. ಉಮಾ, ನಾಗರತ್ನ ಎ., ಶ್ವೇತಾ ಶ್ರೀವಾತ್ಸವ್, ಮಯೂರಿ ಕ್ಯಾತಾರಿ, ರೋಹಿಣಿ ಮೋಹನ್, ವಿಜಯಲಕ್ಷ್ಮಿ ಶಿಬರೂರು, ಅಧ್ಯಕ್ಷತೆ: ವಿವೇಕ್ ಸುಬ್ಬಾರೆಡ್ಡಿ, ಆಯೋಜನೆ: ವಕೀಲರ ಸಂಘ, ಸ್ಥಳ: ವಕೀಲರ ಭವನ, ಸಿಟಿ ಸಿವಿಲ್ ನ್ಯಾಯಾಲಯದ ಆವರಣ, ಮಧ್ಯಾಹ್ನ 1.45

ರಾಜ್ಯಮಟ್ಟದ ವಿಚಾರಸಂಕಿರಣ, ನಾಟಕ ಪ್ರದರ್ಶನ, ಉಚಿತ ಅಭಿನಯ ತರಬೇತಿ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು: ಉದ್ಘಾಟನೆ: ಹುಣಸವಾಡಿ ರಾಜನ್, ಅಧ್ಯಕ್ಷತೆ: ಕಾ.ತ. ಚಿಕ್ಕಣ್ಣ, ಅತಿಥಿಗಳು: ಲಕ್ಷ್ಮಣ ಕೊಡಸೆ, ಹರಿಲಾಲ್ ಪವಾರ್, 'ಅವರ ಬಿಟ್ಟ ಇವರ ಬಿಟ್ಟ ಅವರ‍್ಯಾರು' ಕುರಿತು ವಿಚಾರಸಂಕಿರಣ: ಶ್ರೀನಿವಾಸ್ ಜಿ. ಕಪ್ಪಣ್ಣ, ಆಯೋಜನೆ: ಬಂಜಾರ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಕಾಡೆಮಿ, ಸ್ಥಳ: ಗೋವಿಂದಸ್ವಾಮಿ ಅಂಗಳ, ಶ್ರೀನಿಧಿ ಲೇಔಟ್, ಕೋಣನಕುಂಟೆ, ಮಧ್ಯಾಹ್ನ 3

ಶ್ರೀನಿವಾಸ್ ಜಿ. ಕಪ್ಪಣ್ಣ

'ಕರಾವಳಿಗರ ಒಕ್ಕೂಟ' ಉದ್ಘಾಟನಾ ಸಮಾರಂಭ: ಉದ್ಘಾಟನೆ: ಕೆ. ಜಯಪ್ರಕಾಶ್ ಹೆಗ್ಡೆ, ಅಧ್ಯಕ್ಷತೆ: ಕೆ. ಸುಬ್ರಾಯ ಭಟ್, ಉಪಸ್ಥಿತಿ: ಎಂ. ಕೃಷ್ಣಪ್ಪ, ಕೆ.ಪಿ. ಪುತ್ತೂರಾಯ, ಎಚ್. ದುಂಡಿರಾಜ್, ಎಂ. ಜಯರಾಮ್, ಡಾ. ಸುರೇಶ್ ಜಿ.ಕೆ., ಆಯೋಜನೆ: ಕರಾವಳಿಗರ ಒಕ್ಕೂಟ, ಸ್ಥಳ: ಸೋಮೇಶ್ವರ ಸಭಾಭವನ, ಮೈತ್ರಾದೇವಿ ಯಡಿಯೂರಪ್ಪ ಸಭಾಂಗಣ, ಆರ್‌ಬಿಐ ಲೇಔಟ್, ಜೆ.ಪಿ. ನಗರ, ಸಂಜೆ 5

ರಾಮಾಯಣ ಸಪ್ತಾಹ: ಪ್ರವಚನ: ಅಮೀ ದೇಶಪಾಂಡೆ, ಆಯೋಜನೆ: ಶ್ರೀಸತ್ಯಸಾಯಿ ಆರ್ಗನೈಸೇಷನ್ ಕರ್ನಾಟಕ ಸೌತ್, ಸ್ಥಳ: ಸತ್ಯಸಾಯಿ ಆಶ್ರಮ, ಕಾಡುಗೋಡಿ, ಸಂಜೆ 5

'ಶ್ರೀರಾಮೋತ್ಸವ' ಸಂಗೀತ ಕಾರ್ಯಕ್ರಮ: ಪ್ರವಚನ: ರಾಮವಿಠಲಾಚಾರ್ಯ, ಗಾಯನ: ರಾಯಚೂರು ಶೇಷಗಿರಿದಾಸ್ ಮತ್ತು ತಂಡ, ಆಯೋಜನೆ: ಶ್ರೀರಾಮ ಭಕ್ತ ಸಭಾ, ಸ್ಥಳ: ಶ್ರೀಕಂಠೇಶ್ವರ ಭವನ, ಮಲ್ಲೇಶ್ವರ, ಸಂಜೆ 5.30ರಿಂದ

ಶ್ರೀರಾಮ ನವಮಿ ಉತ್ಸವ: ಗಾಯನ: ಆರ್. ಶೇಷಪ್ರಸಾದ್, ಪಿಟೀಲು: ಎಚ್. ವಿ. ರಘುರಾಮ್, ಮೃದಂಗ: ಅಕ್ಷಯ್ ಆನಂದ್, ಘಟ: ಶ್ರೀನಿಧಿ ಆರ್. ಕೌಂಡಿನ್ಯ, ಆಯೋಜನೆ: ವೈಯಾಲಿ ಕಾವಲ್ ಎಕ್ಸ್‌ಟೆನ್ಷನ್ ಅಸೋಸಿಯೇಷನ್, ಸ್ಥಳ: ಶ್ರೀರಾಮ ದೇವಸ್ಥಾನ, ವೈಯಾಲಿ ಕಾವಲ್, ಸಂಜೆ 6.30

ರಾಮನವಮಿ ಕಾರ್ಯಕ್ರಮ: ಭರತನಾಟ್ಯ ಪ್ರದರ್ಶನ: ನಾಟ್ಯಾರಾಧನ ನೃತ್ಯ ಶಾಲೆಯ ವಿದ್ಯಾರ್ಥಿಗಳಿಂದ, ನಿರ್ದೇಶನ: ವೀಣಾ ಶ್ರೀಧರ್ ಮೊರಬ್, ಆಯೋಜನೆ ಹಾಗೂ ಸ್ಥಳ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6.30

ಪ್ರವಚನ ವಾಹಿನಿ: 'ಆಳ್ವಾರ್–ಆಚಾರ್ಯರು ಒಂದು ಅವಲೋಕನ' ಕುರಿತು ಪ್ರವಚನ: ಎನ್.ಕೆ. ರಾಮಶೇಷನ್, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್‌ನ ಸಾಂಸ್ಕೃತಿಕ ಮಂದಿರ, ಜಯನಗರ, ಸಂಜೆ 6.30

ಶ್ರೀರಾಮ ನವಮಿ ಸಂಗೀತೋತ್ಸವ: ಗಾಯನ: ಶ್ರೀಕಾಂತಂ ನಾಗೇಂದ್ರ ಶಾಸ್ತ್ರಿ ಅವರ ಶಿಷ್ಯರಿಂದ, ಭಾಗವಹಿಸುವವರು: ಚೂಡಾಮಣಿ ಶ್ರೀಧರ್, ಜ್ಯೋತಿಕುಮಾರ್ ಅಭಿರಾಮ್, ಲಹರಿ: ಗಾಯತ್ರಿ ರಮೇಶ್, ಮಂಜುಳ, ಶ್ರಾವ್ಯ: ಪೂರ್ಣಿಮಾ ಮೋಹನ್, ಮೃದಂಗ: ಶ್ರೀಧರ್ ವಿ., ಸ್ಥಳ: ಶ್ರೀ ರಾಘವೇಂದ್ರ ಮತ್ತು ಆಂಜನೇಯ ಸ್ವಾಮಿಗಳ ದೇವಾಲಯದ ಆವರಣ, 8ನೇ ಕ್ರಾಸ್, ಮಲ್ಲೇಶ್ವರ, 6.30

ಹರ್ತಿಕೋಟೆಯ ಸಮಾವೇಶಕ್ಕೆ ಜನರೇ ಬಾರದ ಆತಂಕ

ಬಂಜಾರರ ಆಕ್ರೋಶ: ರದ್ದಾದ ಹಕ್ಕುಪತ್ರ ವಿತರಣೆ ಕಾರ್ಯಕ್ರಮ

• ಸಿದ್ದಯ್ಯ ಹಿರೇಮಠ

ದಾವಣಗೆರೆ: ಮೀಸಲಾತಿಗೆ ಸಂಬಂಧಿಸಿದಂತೆ ರಾಜ್ಯ ಸಚಿವ ಸಂಪುಟ ಇತ್ತೀಚೆಗೆ ಕೈಗೊಂಡ ನಿರ್ಧಾರಕ್ಕೆ ಸಮುದಾಯದವರಿಂದ ವ್ಯಕ್ತವಾದ ವಿರೋಧವು ಚಿತ್ರದುರ್ಗ ಜಿಲ್ಲೆಯಲ್ಲಿ ಸೋಮವಾರ ನಡೆಯಬೇಕಿದ್ದ ಫಲಾನುಭವಿಗಳ ಹಕ್ಕುಪತ್ರ ವಿತರಣೆ ಕಾರ್ಯಕ್ರಮ ರದ್ದಾಗಲು ಪ್ರಮುಖ ಕಾರಣವಾಗಿದೆ.

ಲಂಬಾಣಿ ತಾಂಡಾಗಳು ಮತ್ತು ಗೊಲ್ಲರ ಹಟ್ಟಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಿದ್ದ ಸರ್ಕಾರ, 9 ಜಿಲ್ಲೆಗಳ 50,000 ಫಲಾನುಭವಿಗಳಿಗೆ ಹಕ್ಕುಪತ್ರಗಳನ್ನು ವಿತರಿಸಲು ಚಿತ್ರದುರ್ಗ ಜಿಲ್ಲೆಯ ಹರ್ತಿಕೋಟೆಯಲ್ಲಿ ಸೋಮವಾರ ಬೃಹತ್ ಸಮಾವೇಶ ಆಯೋಜಿಸಿ ಸಕಲ ಸಿದ್ಧತೆ ಕೈಗೊಂಡಿತ್ತು.

ಈ ಸಂಬಂಧ ಅಧಿಕಾರಿಗಳು ಹಲವು ಸುತ್ತಿನ ಸಭೆ ನಡೆಸಿದ್ದರು. ಫಲಾನುಭವಿಗಳನ್ನು ಕರೆತರಲು, ಪಕ್ಷದ ಆಯಾ ಜಿಲ್ಲೆಗಳ ಮುಖಂಡರಿಗೆ ತಿಳಿಸಲಾಗಿತ್ತು. ಆದರೆ, ಒಳಮೀಸಲಾತಿಯ ವರ್ಗೀಕರಣ ಕುರಿತ ನ್ಯಾಯಮೂರ್ತಿ ಎ.ಜೆ. ಸದಾಶಿವ ನೇತೃತ್ವದ ಆಯೋಗದ ವರದಿಯನ್ನು ಕೇಂದ್ರಕ್ಕೆ ಶಿಫಾರಸು ಮಾಡಲು ಕಳೆದ ಶುಕ್ರವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಕೈಗೊಂಡ ನಿರ್ಧಾರಕ್ಕೆ ಲಂಬಾಣಿ (ಬಂಜಾರ) ಸಮುದಾಯದಿಂದ ತೀವ್ರ ಆಕ್ಷೇಪ ವ್ಯಕ್ತವಾಗಿದ್ದರಿಂದ ಸಮಾವೇಶವನ್ನೇ ರದ್ದುಪಡಿಸಲಾಗಿದೆ ಎಂದು ಮೂಲಗಳು ಖಚಿತಪಡಿಸಿವೆ.

ಹಕ್ಕುಪತ್ರ ಪಡೆಯಲಿದ್ದ ಫಲಾನುಭವಿಗಳಲ್ಲಿ ಶೇ 75ರಷ್ಟು ಲಂಬಾಣಿ ಸಮುದಾಯದವರಿದ್ದರು. ಅವರನ್ನು ಸಮಾವೇಶಕ್ಕೆ ಕರೆತರುವುದು ಕಷ್ಟ ಸಾಧ್ಯ ಎಂಬ ಕಾರಣದಿಂದ ಸರ್ಕಾರವೇ ಭಾನುವಾರ ಕಾರ್ಯಕ್ರಮ ರದ್ದುಪಡಿಸುವ ನಿರ್ಧಾರ ಕೈಗೊಂಡಿದೆ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಬಿಜೆಪಿ ಮುಖಂಡರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಲಂಬಾಣಿ ಸಮುದಾಯದ ಶಾಸಕರು ಮತ್ತು ಕಾರ್ಯಕರ್ತರು ಸರ್ಕಾರದ ನಿರ್ಧಾರಕ್ಕೆ ಆಕ್ಷೇಪ ವ್ಯಕ್ತಪಡಿಸಿ, 'ಫಲಾನುಭವಿಗಳನ್ನು ಕರೆತರಲಾಗದು' ಎಂಬ ಸಂದೇಶ ರವಾನಿಸಿದ್ದರಿಂದ ಆತಂಕದಿಂದ ಕಾರ್ಯಕ್ರಮ ರದ್ದುಪಡಿಸಲಾಗಿದೆ ಎಂದು ಅವರು ಹೇಳಿದರು.

ಚಿತ್ರದುರ್ಗ, ತುಮಕೂರು, ಶಿವಮೊಗ್ಗ, ಹಾಸನ, ದಾವಣಗೆರೆ, ಚಿಕ್ಕಮಗಳೂರು, ಹಾವೇರಿ, ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಕಂದಾಯ ಗ್ರಾಮಗಳಾಗಿ ಬದಲಾದ ತಾಂಡಾ ಮತ್ತು ಹಟ್ಟಿಗಳ 50,000 ಫಲಾನುಭವಿಗಳಿಗೆ ಹಾಗೂ ಇತರ ಯೋಜನೆಗಳ 50,000 ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸುವ ಕಾರ್ಯಕ್ರಮ ನಿಗದಿಯಾಗಿತ್ತು. ಶಿವಮೊಗ್ಗ, ದಾವಣಗೆರೆ, ಹಾವೇರಿ, ವಿಜಯನಗರ ಮತ್ತಿತರ ಜಿಲ್ಲೆಗಳಲ್ಲಿ ಅಧಿಕ ಸಂಖ್ಯೆಯ ಲಂಬಾಣಿ ತಾಂಡಾಗಳಿದ್ದು, ತೀವ್ರ ಅಸಮಾಧಾನ ಹೊಂದಿರುವ ಆ ಸಮುದಾಯದ ಜನ ಸಮಾವೇಶಕ್ಕೆ ಬರಲು ಹಿಂದೇಟು ಹಾಕಿದ್ದರಿಂದ ಕಾರ್ಯಕ್ರಮ ರದ್ದುಪಡಿಸಿ, ಆಯಾ ತಹಶೀಲ್ದಾರ್ ಕಚೇರಿ ವ್ಯಾಪ್ತಿಯಲ್ಲಿ ಹಕ್ಕುಪತ್ರ ವಿತರಿಸಲು ಸೂಚಿಸಲಾಗಿದೆ ಎಂದು ಅವರು ಹೇಳಿದರು.

> **ಹಕ್ಕುಪತ್ರ ವಿತರಣೆ ಸಮಾರಂಭ ರದ್ದತಿ ಸೂಚನೆ ಬಂದಿತ್ತು. ಜಿಲ್ಲೆಯ ವಿವಿಧ ಕ್ಷೇತ್ರ ವ್ಯಾಪ್ತಿಗಳಲ್ಲೇ ಸೋಮವಾರ ಹಕ್ಕುಪತ್ರ ವಿತರಿಸಲಾಗಿದೆ.**
> **ದಿವ್ಯಪ್ರಭು ಜಿ.ಆರ್.ಜೆ.,** ಜಿಲ್ಲಾಧಿಕಾರಿ, ಚಿತ್ರದುರ್ಗ

ಬಿಜೆಪಿ ಪ್ರವೇಶ ನಿಷೇಧ ಫಲಕ ಹಾಕಲು ತೀರ್ಮಾನ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ಒಳ ಮೀಸಲಾತಿ ನೀಡಲು ಕೇಂದ್ರಕ್ಕೆ ಮಾಡಿರುವ ಶಿಫಾರಸ್ಸನ್ನು ಹಿಂಪಡೆಯಬೇಕು ಎಂದು ಆಗ್ರಹಿಸಿ ಹೋರಾಟ ಮಾಡಲು ಬಾಗಲಕೋಟೆ ಬಂಜಾರ ಸೇವಾ ಸಂಘ ನಿರ್ಣಯಿಸಿದೆ.

'ಮೀಸಲಾತಿ ಹಿಂಪಡೆಯುವವರೆಗೂ ಬಿಜೆಪಿ ಪ್ರವೇಶವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ' ಎಂಬ ಫಲಕ ಹಾಕಲು ನಿರ್ಧರಿಸಲಾಗಿದೆ. ಮಾ. 29ರಿಂದ ಗ್ರಾಮಗಳಲ್ಲಿ ಫಲಕಗಳನ್ನು ಹಾಕಲಾಗುವುದು ಎಂದು ಲಮಾಣಿ ಸಮಾಜದ ಮುಖಂಡ ರಾಜು ಲಮಾಣಿ ಹೇಳಿದರು.

ಸಭೆಯಲ್ಲಿ ಜಿಲ್ಲಾ ಘಟಕದ ಅಧ್ಯಕ್ಷ ಬಲರಾಮ ನಾಯ್ಕ, ರತ್ನಪ್ಪ ರಾಠೋಡ, ರಮೇಶ ನಾಯಕ ಮತ್ತಿತರರು ಇದ್ದರು.

ಒಳ ಮೀಸಲಾತಿ ಹಿಂಪಡೆಯಬೇಕು ಎಂದು ಆಗ್ರಹಿಸಿ ಮುಚಖಂಡಿ ತಾಂಡಾದಲ್ಲಿ ಸೋಮವಾರ ಲಮಾಣಿ ಸಮಾಜದವರು ಪ್ರತಿಭಟಿಸಿ ಬಿಜೆಪಿ ವಿರುದ್ಧ ಘೋಷಣೆಗಳನ್ನು ಕೂಗಿದರು.

ಬಾಗಲಕೋಟೆ ಜಿಲ್ಲೆಯ ತಾಂಡಾಗಳಲ್ಲಿ ಮೀಸಲಾತಿ ಹಿಂಪಡೆಯಲು ಆಗ್ರಹಿಸಿ ಹಾಕಲು ಉದ್ದೇಶಿಸಿರುವ ಫಲಕ

ಜನಗಣತಿ ಆಧಾರಿತ ಮೀಸಲಾತಿ ಅವೈಜ್ಞಾನಿಕ: 'ಮುಖ್ಯಮಂತ್ರಿ' ಚಂದ್ರು

ವಿಜಯಪುರ: 'ಜಾತಿಗಣತಿ ಆಧಾರಿತವಾಗಿ ಮೀಸಲಾತಿ ಕಲ್ಪಿಸಬೇಕೇ ಹೊರತು ಜನಗಣತಿ ಆಧರಿಸಿ ಅಲ್ಲ. ಬಿಜೆಪಿ ಕಣ್ಣೊರೆಸುವ ಕೆಲಸ ಮಾಡಿದೆ, ನೈಜ ಕಾಳಜಿಯಿಂದಲ್ಲ' ಎಂದು ಎಎಪಿ ಪ್ರಚಾರ ಸಮಿತಿ ಅಧ್ಯಕ್ಷ 'ಮುಖ್ಯಮಂತ್ರಿ' ಚಂದ್ರು ಟೀಕಿಸಿದರು.

ನಗರದ ಮಧುವನ ಸಭಾಂಗಣದಲ್ಲಿ ಸೋಮವಾರ ಆಮ್ ಆದ್ಮಿ ಪಕ್ಷದ ಸಭೆಗೆ ಚಾಲನೆ ನೀಡಿ ಮಾತನಾಡಿದ ಅವರು, 'ಜಾತಿಗಣತಿ ಆಧರಿಸಿ ಮೀಸಲಾತಿ ಜಾರಿಯಾದರೆ ಮಾತ್ರ ವೈಜ್ಞಾನಿಕವಾಗಿ ಮೀಸಲಾತಿ ಕಲ್ಪಿಸಲು ಸಾಧ್ಯ' ಎಂದರು.

'ಮೀಸಲಾತಿಗೆ ಸಂಬಂಧಿಸಿದಂತೆ ಕಾಂತರಾಜ್ ಆಯೋಗದ ವರದಿಯನ್ನು ಸರ್ಕಾರ ಸ್ವೀಕರಿಸಿಲ್ಲ. ಈ ವರದಿಯ ಅಂಶಗಳನ್ನು ಬಿಡುಗಡೆಗೆ ಒತ್ತಾಯಿಸಿ ನಾನು ಕಾನೂನಾತ್ಮಕ ಹೋರಾಟ ಕೈಗೊಂಡಿದ್ದೇನೆ. ಕಾಂತರಾಜ್ ಆಯೋಗದ ವರದಿಯನ್ನು ಆಧರಿಸಿ ಮೀಸಲಾತಿ ಕಲ್ಪಿಸಬೇಕು' ಎಂದರು.

ತಪ್ಪು ಗ್ರಹಿಕೆಯಿಂದ ಘಟನೆ ನಡೆದಿದೆ: ಬಿಎಸ್‌ವೈ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಿಕಾರಿಪುರದಲ್ಲಿ ಲಂಬಾಣಿ ಸಮುದಾಯದವರು ನಮ್ಮ ಮನೆ ಮೇಲೆ ದಾಳಿ ಮಾಡಿರುವ ಘಟನೆ ತಪ್ಪು ಗ್ರಹಿಕೆಯಿಂದ ನಡೆದಿರುವಂತಿದೆ. ಈ ಸಂಬಂಧ ಯಾರನ್ನೂ ಬಂಧಿಸದಂತೆ ಪೊಲೀಸ್ ವರಿಷ್ಠಾಧಿಕಾರಿಗೆ ಮನವಿ ಮಾಡಿದ್ದೇನೆ' ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ತಿಳಿಸಿದರು.

ಸುದ್ದಿಗಾರರಿಗೆ ಸೋಮವಾರ ಪ್ರತಿಕ್ರಿಯಿಸಿದ ಅವರು, 'ಸಮುದಾಯದ ಕೆಲ ಕಾರ್ಯಕರ್ತರು ಮನೆ ಮೇಲೆ ದಾಳಿ ನಡೆಸಿದ್ದಾರೆ. ತಾಂಡಾ ಅಭಿವೃದ್ಧಿ ನಿಗಮ ರಚನೆ, ಸಂತ ಸೇವಾಲಾಲ್ ಅವರ ಜನ್ಮಸ್ಥಳ ಸೂರಗೊಂಡನಕೊಪ್ಪದ ಅಭಿವೃದ್ಧಿ ಮಾಡಿದ್ದೇನೆ. ಇಷ್ಟಾದರೂ ತಪ್ಪು ಗ್ರಹಿಕೆಯಿಂದ ಘಟನೆ ನಡೆದಿದೆ' ಎಂದರು.

> **ಮೀಸಲಾತಿ ವಿಚಾರದಲ್ಲಿ ರಾಜ್ಯ ಸರ್ಕಾರ ತೆಗೆದುಕೊಂಡಿರುವ ತೀರ್ಮಾನವನ್ನು ಶೇಕಡ 90ರಷ್ಟು ಜನರು ಸ್ವಾಗತಿಸಿದ್ದಾರೆ. ಸಣ್ಣಪುಟ್ಟ ಲೋಪಗಳಿದ್ದರೆ ಚರ್ಚಿಸಿ ಪರಿಹರಿಸಲಾಗುವುದು**
> **ಬಿ.ಎಸ್.ಯಡಿಯೂರಪ್ಪ,** ಬಿಜೆಪಿ ಸಂಸದೀಯ ಮಂಡಳಿ ಸದಸ್ಯ

'ಘಟನೆ ನಡೆದ ತಕ್ಷಣವೇ ಎಸ್‌ಪಿ ಮತ್ತು ಜಿಲ್ಲಾಧಿಕಾರಿಯವರನ್ನು ಸಂಪರ್ಕಿಸಿ ಮಾತುಕತೆ ನಡೆಸಿದ್ದೇನೆ. ಯಾರ ವಿರುದ್ಧವೂ ಕ್ರಮ ಕೈಗೊಳ್ಳದೆ ಶಾಂತ ರೀತಿಯಲ್ಲಿ ಸಮಸ್ಯೆ ಬಗೆ ಹರಿಸುವಂತೆ ತಿಳಿಸಿದ್ದೇನೆ. ಈ ರೀತಿಯ ಗೊಂದಲಕ್ಕೆ ಕಾರಣ ಏನು? ಏಕೆ ಈ ಘಟನೆ ನಡೆದಿದೆ ಎಂಬುದರ ಕುರಿತು ಸಮಾಲೋಚನೆ ನಡೆಸುವೆ' ಎಂದು ಹೇಳಿದರು.

'ನಾನು ನಾಲ್ಕು ಬಾರಿ ಸಿ.ಎಂ ಆಗಲು ಬಂಜಾರ ಸಮುದಾಯದವರು ಬೆಂಬಲ ನೀಡಿದ್ದರು. ಅವರ ಯಾವುದೇ ಸಮಸ್ಯೆ ಇದ್ದರೂ ಚರ್ಚೆಗೆ ನಾನು ಮತ್ತು ವಿಜಯೇಂದ್ರ ಸಿದ್ಧ. ಶಿಕಾರಿ ಪುರಕ್ಕೆ ತೆರಳಿ ಸಮುದಾಯದ ಪ್ರಮುಖರನ್ನು ಭೇಟಿಮಾಡಿ ಚರ್ಚಿಸುವೆ' ಎಂದು ಅವರು ಹೇಳಿದರು.

ಯಡಿಯೂರಪ್ಪ ಮನೆ ಮೇಲೆ ದಾಳಿ

ಒಂದನೇ ಪುಟದಿಂದ

ಅಲ್ಲಿಂದ ಪಟ್ಟಣದ ಮಾಳೇರ ಕೇರಿಯಲ್ಲಿರುವ ಯಡಿಯೂರಪ್ಪ ಅವರ ನಿವಾಸದತ್ತ ಗುಂಪುಗುಂಪಾಗಿ ತೆರಳಿದ ಪ್ರತಿಭಟನಕಾರರನ್ನು ತಡೆಯಲು ಪೊಲೀಸರು ಮೂರು ಕಡೆ ಬ್ಯಾರಿಕೇಡ್ ಅಳವಡಿಸಿದ್ದರು. ಎರಡು ಬ್ಯಾರಿಕೇಡ್‌ಗಳನ್ನು ಕಿತ್ತೆಸೆದು ಮುಂದೆ ನುಗ್ಗಿದ ಪ್ರತಿಭಟನಕಾರರನ್ನು ತಡೆಯಲು ಪೊಲೀಸರು ಲಾಠಿ ಪ್ರಹಾರ ಮಾಡಿದರು. ಇದರಿಂದ ಆಕ್ರೋಶಗೊಂಡ ಪ್ರತಿಭಟನಕಾರರು, ಕಲ್ಲು ಹಾಗೂ ಚಪ್ಪಲಿ ತೂರಾಟ ನಡೆಸಿದರು.

ಈ ಸಂದರ್ಭದಲ್ಲಿ ಶಿಕಾರಿಪುರ ಗ್ರಾಮಾಂತರ ಠಾಣೆಯ ಇನ್‌ಸ್ಪೆಕ್ಟರ್ ಲಕ್ಷ್ಮಣ್, ನಗರ ಠಾಣೆಯ ಪಿಎಸ್‌ಐ ಮಂಜುನಾಥ ಕೊಪ್ಪಲೂರು, ಕಾನ್‌ಸ್ಟೆಬಲ್‌ಗಳಾದ ಶಂಕರಗೌಡ, ಕಾಂತರಾಜು ಹಾಗೂ ರತ್ನಾಕರ ಅವರ ತಲೆಗೆ ಪೆಟ್ಟು ಬಿದ್ದಿದೆ.

ಸೀರೆ ಸುಟ್ಟರು: ಶಿಕಾರಿಪುರ ಪಟ್ಟಣದಲ್ಲಿ ಅಳವಡಿಸಿದ್ದ ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿ.ಎಸ್. ಯಡಿಯೂರಪ್ಪ ಅವರ ಫ್ಲೆಕ್ಸ್‌ಗಳನ್ನು ಪ್ರತಿಭಟನಕಾರರು ಕಿತ್ತು ಹಾಕಿದರು. ಯಡಿಯೂರಪ್ಪ ಅವರ ಜನ್ಮದಿನದ ಅಂಗವಾಗಿ ವಿತರಿಸಿದ್ದ ಸೀರೆಗಳನ್ನು ಸುಟ್ಟು ಆಕ್ರೋಶ ವ್ಯಕ್ತಪಡಿಸಿದರು.

ಕೆಲವು ಯುವಕರು ಬಿಜೆಪಿ ಕಚೇರಿ ಮೇಲೆ ಇದ್ದ ಬಿಜೆಪಿ ಬಾವುಟ ಕಿತ್ತು ಹಾಕಿ ಬಂಜಾರ ಸಮುದಾಯದ ಭಾವುಟ ಹಾರಿಸಿದರು.

ಪ್ರತಿಭಟನೆ, ಕಲ್ಲು ತೂರಾಟ, ಚಪ್ಪಲಿ ಎಸೆತ, ಫ್ಲೆಕ್ಸ್‌ಗಳನ್ನು ಸುಟ್ಟು, ಟೈರ್‌ಗೆ ಬೆಂಕಿ ಹಚ್ಚಲಾಯಿತು. ಪೊಲೀಸರೊಂದಿಗೆ ವಾಗ್ವಾದ, ತಳ್ಳಾಟದ ಕಾರಣ ಶಿಕಾರಿಪುರ ಪಟ್ಟಣ ಮಧ್ಯಾಹ್ನದವರೆಗೂ ಬಿಗುವಿನಿಂದ ಕೂಡಿತ್ತು. ಯಡಿಯೂರಪ್ಪ ಅವರ ಮನೆ ಇರುವ ರಸ್ತೆಯಲ್ಲಿ ಚಪ್ಪಲಿ ಹಾಗೂ ಕಲ್ಲುಗಳ ರಾಶಿಯೇ ಬಿದ್ದಿತ್ತು.

ಪೊಲೀಸರನ್ನು ಹೆಚ್ಚಿನ ಸಂಖ್ಯೆಯಲ್ಲಿ ನಿಯೋಜಿಸಿ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರಲಾಗಿದೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿ.ಕೆ. ಮಿಥುನ್‌ಕುಮಾರ್ ಸ್ಥಳದಲ್ಲಿ ಮೊಕ್ಕಾಂ ಹೂಡಿದ್ದಾರೆ.

ಯಾರನ್ನೂ ಬಂಧಿಸಿಲ್ಲ: 'ಪ್ರಕರಣಕ್ಕೆ ಸಂಬಂಧಿಸಿದಂತೆ ರಾತ್ರಿಯವರೆಗೆ ಯಾರನ್ನೂ ಬಂಧಿಸಿಲ್ಲ. ಘಟನೆಯ ವಿಡಿಯೊ ಪರಿಶೀಲನೆ ನಡೆಸುತ್ತಿದ್ದೇವೆ. ಅದನ್ನು ಆಧರಿಸಿ ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿ ಎಫ್‌ಐಆರ್ ದಾಖಲಿಸಲಾಗುವುದು' ಎಂದು ಮಿಥುನ್‌ಕುಮಾರ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

> **ಬೊಮ್ಮಾಯಿ ಜೇನು ಎಬ್ಬಿಸಿ ಎಲ್ಲರಿಗೂ ಕಡಿಯಲು ಹಚ್ಚಿದ್ದಾರೆ. ಇದು ನಿನ್ನೆಯದಲ್ಲ; ಅರವಿಂದ ಬೆಲ್ಲದ ಅವರು 5–6 ತಿಂಗಳ ಹಿಂದೆಯೇ ಹೇಳಿದ್ದರು. ಇದು ಪೂರ್ವಯೋಜಿತ.**
> **ವಿನಯ ಕುಲಕರ್ಣಿ,** ಕಾಂಗ್ರೆಸ್ ಮಾಜಿ ಶಾಸಕ

> **ಹಿಂದೆ ಸರ್ಕಾರ ನಡೆಸಿದ ಪಕ್ಷಗಳಿಗೆ ಸದಾಶಿವ ಆಯೋಗದ ವರದಿಯಂತೆ ಮೀಸಲಾತಿ ನೀಡ ಬಾರದು ಎಂದು ಯಾರೂ ಹೇಳಿರಲಿಲ್ಲ. ಆದರೆ ಬೊಮ್ಮಾಯಿ ಧೈರ್ಯದಿಂದ ಅನುಷ್ಠಾನಗೊಳಿಸಲು ಹೊರಟಿದ್ದಾರೆ**
> **ಹಾಲಪ್ಪ ಆಚಾರ್,** ಸಚಿವ

> **ಮುಸ್ಲಿಮರ ತುಷ್ಟೀಕರಣ ಕ್ಕಾಗಿ ಕಾಂಗ್ರೆಸ್ ಅಸಾಂವಿಧಾನಿಕವಾಗಿ ಧರ್ಮದ ಆಧಾರದ ಮೇಲೆ ಮೀಸಲಾತಿ ಹಂಚಿಕೆ ಮಾಡಿತ್ತು. ಬಿಜೆಪಿ ಅದನ್ನು ರದ್ದು ಪಡಿಸಿ ಅಗತ್ಯವಿರುವ ಸಮಾಜಕ್ಕೆ ಹಂಚಿಕೆ ಮಾಡಿದೆ'**
> **ಪ್ರಲ್ಹಾದ ಜೋಶಿ,** ಕೇಂದ್ರ ಸಚಿವ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

'ಲಿಂಗಾಯತ, ವೀರಶೈವರೆಲ್ಲ ಒಂದೇ'

ಒಂದನೇ ಪುಟದಿಂದ...

'ವೀರಶೈವ ಲಿಂಗಾಯತ ಪರಂಪರೆಯಲ್ಲಿರುವವರು ತಮ್ಮ ದಾಖಲಾತಿಗಳಲ್ಲಿ ಹಿಂದೂ ಲಿಂಗಾಯತ, ವೀರಶೈವ ಲಿಂಗಾಯತ, ಹಿಂದೂ ಲಿಂಗವಂತ, ಲಿಂಗಾಯತ ಇತ್ಯಾದಿ ನಮೂದಿಸಿಕೊಂಡಿದ್ದಾರೆ. ಇನ್ನೂ ಕೆಲವರು ವೀರಶೈವ ಲಿಂಗಾಯತ ಹೆಸರಿನ ಜೊತೆಗೆ ತಮ್ಮ ಮೂಲಜಾತಿಯನ್ನೂ ನಮೂದಿಸಿದ್ದಾರೆ. ಆದರೆ, ಮೂಲಜಾತಿ ನಮೂದಿಸಿ ಜಾತಿ ಪ್ರಮಾಣಪತ್ರಕ್ಕೆ ಅರ್ಜಿ ಸಲ್ಲಿಸಿದಾಗ ಮೂಲ ಜಾತಿಯು ವೀರಶೈವರ ಉಪಜಾತಿಯಲ್ಲಿ ಇಲ್ಲದೇ ಇರುವುದರಿಂದ ಜಾತಿ ಪ್ರಮಾಣಪತ್ರ ಪಡೆಯಲು ಸಾಧ್ಯವಾಗದೇ, ಸರ್ಕಾರಿ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ. ವೀರಶೈವ ಲಿಂಗಾಯತ ಉಪಜಾತಿಯವರಿಗೆ ತಮ್ಮ ಮೂಲ ಜಾತಿ ಹೆಸರನ್ನು ಒಳಗೊಂಡ ಜಾತಿ ಪ್ರಮಾಣಪತ್ರ ಪಡೆಯಲು ತೊಂದರೆ ಆಗಬಾರದೆಂಬ ಉದ್ದೇಶದಿಂದ ಈ ಸಲಹೆ ನೀಡಲಾಗಿದೆ' ಎಂದೂ ಆಯೋಗ ವಿವರಿಸಿದೆ.

'ಎಸ್.ಸಿದ್ದಲಿಂಗಯ್ಯ ನೇತೃತ್ವದ ಆಯೋಗ 2005ರಲ್ಲಿ ಸರ್ಕಾರಕ್ಕೆ ಸಲ್ಲಿಸಿದ್ದ ವರದಿಯಲ್ಲಿ 19 ಉಪಜಾತಿಗಳನ್ನು ಮೀಸಲಾತಿ ಪಟ್ಟಿಯಲ್ಲಿ ಸೇರಿಸುವಂತೆ ಸಲಹೆ ನೀಡಿತ್ತು. 2009ರ ಜ. 27ರಂದು ಈ 19 ಉಪಜಾತಿಗಳನ್ನು 'ಪ್ರವರ್ಗ 3ಬಿ' ಅಡಿಯಲ್ಲಿ ಸೇರಿಸಿ ಸರ್ಕಾರ ಆದೇಶ ಹೊರಡಿಸಿತ್ತು. ಆದರೆ, ಒಂದು ತಿಂಗಳ ಬಳಿಕ (ಫೆ. 28), ವೀರಶೈವ ಪಂಚಮಸಾಲಿ ಎಂಬ ಉಪಜಾತಿ ಹೊರತುಪಡಿಸಿ ಉಳಿದ ಉಪಜಾತಿಗಳ ಸೇರ್ಪಡೆ ಆದೇಶವನ್ನು ಹಿಂಪಡೆದಿತ್ತು. ಆ ಬಳಿಕ, ಲಿಂಗಾಯತ ವೀರಶೈವ ಉಪಜಾತಿಗಳಾದ ಕುಡುಒಕ್ಕಲಿಗ, ಆದಿಬಣಜಿಗ, ನೊಳಂಬ, ಮಲ್ಲವ (ಮಲೆಗೌಡ), ಲಿಂಗಾಯತ ರಡ್ಡಿ (ಶೈವರಡ್ಡಿ), ಗೌಡ ಲಿಂಗಾಯತ, ಶಿವಸಿಂಪಿ, ಬಣಗಾರ, ಶಿವಚಾರ ನಗರ್ತ ಜಾತಿಯವರು ಸಲ್ಲಿಸಿದ ಮನವಿಗಳ ಮೇಲೆ ಬಹಿರಂಗ ವಿಚಾರಣೆ ನಡೆಸಿ, ದಾಖಲಾತಿಗಳನ್ನು ಸಂಗ್ರಹಿಸಿ ಈ ಉಪಜಾತಿಗಳನ್ನೂ 'ಪ್ರವರ್ಗ 3ಬಿ' ಅಡಿ ಸೇರಿಸುವಂತೆ ಸಲಹೆ ನೀಡಲಾಗಿದೆ' ಎಂದೂ ವರದಿಯಲ್ಲಿದೆ.

'ಪ್ರೊ. ರವಿವರ್ಮಕುಮಾರ್ ನೇತೃತ್ವದ ಆಯೋಗ 2000ದಲ್ಲಿ 71 ಸಲಹೆಗಳಿರುವ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತ್ತು. ಆ ವರದಿಯಲ್ಲಿಯೂ ಎಲ್ಲಾ ವೀರಶೈವ ಲಿಂಗಾಯತ ಉಪ ಜಾತಿಗಳನ್ನು ಒಂದೇ ಪ್ರವರ್ಗದ ಅಡಿಯಲ್ಲಿ ತರುವಂತೆ ಸಲಹೆ ನೀಡಲಾಗಿತ್ತು. ಈ ಎರಡೂ ವರದಿಗಳನ್ನೂ ಗಣನೆಗೆ ತೆಗೆದುಕೊಂಡು, ಲಿಂಗಾಯತ, ವೀರಶೈವ ಪರಂಪರೆಯನ್ನು ಅನುಸರಿಸುತ್ತಿರುವುದನ್ನು ದೃಢೀಕರಿಸಿಕೊಂಡು ಈ ಉಪಜಾತಿಗಳನ್ನು ಹಿಂದುಳಿದ ವರ್ಗಗಳ ಜಾತಿ ಪಟ್ಟಿಯಲ್ಲಿ ಸೇರಿಸುವಂತೆ ವರದಿ ಸಲ್ಲಿಸಲು ತೀರ್ಮಾನಿಸಲಾಯಿತು' ಎಂದೂ ವರದಿಯಲ್ಲಿದೆ.

'ಧರ್ಮಾಧಾರಿತ ರಾಜಕೀಯ ಸಂವಿಧಾನದ ಉಲ್ಲಂಘನೆಯಾಗದೇ'

ನವದೆಹಲಿ (ಪಿಟಿಐ): 'ಧರ್ಮ ಆಧಾರಿತ ಮೀಸಲಾತಿಯು ಸಂವಿಧಾನದ ಉಲ್ಲಂಘನೆಯಾಗುತ್ತದೆ' ಎಂದು ಹೇಳಿರುವ ಗೃಹ ಸಚಿವ ಅಮಿತ್ ಶಾ ವಿರುದ್ಧ ಸೋಮವಾರ ಹರಿಹಾಯ್ದಿರುವ ರಾಜ್ಯಸಭಾ ಸದಸ್ಯ ಕಪಿಲ್ ಸಿಬಲ್, 'ಧರ್ಮ ಆಧಾರಿತ ರಾಜಕೀಯ, ಧರ್ಮ ಆಧಾರಿತ ಪ್ರಚಾರವು ಸಂವಿಧಾನದ ಉಲ್ಲಂಘನೆ ಆಗುತ್ತದೆಯೋ ಅಥವಾ ಇಲ್ಲವೋ' ಎಂದು ಪ್ರಶ್ನಿಸಿದ್ದಾರೆ.

ಮುಸ್ಲಿಂ ಸಮುದಾಯಕ್ಕೆ ನೀಡಲಾಗಿದ್ದ ಶೇ 4ರಷ್ಟು ಮೀಸಲಾತಿರದ್ದುಪಡಿಸಿ, ಅದನ್ನು ಒಕ್ಕಲಿಗರು ಮತ್ತು ಲಿಂಗಾಯತ ಸಮುದಾಯದವರಿಗೆ ತಲಾ ಶೇ 2ರಷ್ಟು ಹಂಚಿಕೆ ಮಾಡಿರುವ ಕರ್ನಾಟಕ ಸರ್ಕಾರದ ನಿರ್ಧಾರವನ್ನು ಶಾ ಭಾನುವಾರ ಶ್ಲಾಘಿಸಿದ್ದರು. ಧರ್ಮದ ಆಧಾರದ ಮೇಲೆ ನೀಡುವ ಮೀಸಲಾತಿಗೆ ಸಂವಿಧಾನದಲ್ಲಿ ಅವಕಾಶವಿಲ್ಲ, ಅದು ಅಮಾನ್ಯವಾಗುತ್ತದೆ ಎಂದಿದ್ದರು.

'ಶಾ ಅವರ ಪ್ರಕಾರ ಧರ್ಮ ಆಧಾರಿತ ಮೀಸಲಾತಿಯು ಸಂವಿಧಾನ ಉಲ್ಲಂಘನೆಯಾಗುತ್ತದೆ. ಹಾಗಾದರೆ ಧರ್ಮಾಧಾರಿತ ರಾಜಕೀಯ, ಪ್ರಚಾರ, ಭಾಷಣ, ಬಗ್ಗೆ ಏನು ಹೇಳುವುದು.' ಎಂದು ಸಿಬಲ್ ಟ್ವೀಟ್‌ನಲ್ಲಿ ಪ್ರಶ್ನಿಸಿದ್ದಾರೆ.

ಈಡೇರಿದ ದಶಕಗಳ ಕನಸು– ನಂದಿಗಿರಿಧಾಮಕ್ಕೆ ರೋಪ್ ವೇ ಗೆ ಭೂಮಿ ಪೂಜೆ

• ಡಬಲ್ ಎಂಜಿನ್ ಸರ್ಕಾರದಿಂದ ಹೆಚ್ಚು ಅನುದಾನ ತಂದು ಅಭಿವೃದ್ಧಿ

ಚಿಕ್ಕಬಳ್ಳಾಪುರ ವೈದ್ಯಕೀಯ ಕಾಲೇಜು ಉದ್ಘಾಟನೆ

ಚಿಕ್ಕಬಳ್ಳಾಪುರ: ತಾಲ್ಲೂಕಿನ ಅರೂರು ಗ್ರಾಮದ ಬಳಿ ನಿರ್ಮಾಣವಾಗಿರುವ ನಂದಿ ವೈದ್ಯಕೀಯ ಶಿಕ್ಷಣ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಿದರು. ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಹಾಗೂ ಕಾಲೇಜು ನಿರ್ಮಾಣದ ರೂವಾರಿ ಸಚಿವ ಡಾ.ಕೆ.ಸುಧಾಕರ್, ಕಂದಾಯ ಸಚಿವ ಆರ್. ಅಶೋಕ್, ಪೌರಾಡಳಿತ ಸಚಿವ ಎಂ.ಟಿ.ಬಿ.ನಾಗರಾಜ್ ಹಾಗೂ ಜನಪ್ರತಿನಿಧಿಗಳು, ಅಧಿಕಾರಿಗಳು ಕಾಲೇಜು ಉದ್ಘಾಟನೆಗೆ ಸಾಕ್ಷಿಯಾದರು.

ಚಿಕ್ಕಬಳ್ಳಾಪುರದ ಹೊರವಲಯದ ಸೂಲಾಲಪ್ಪದಿನ್ನೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮೊದಲಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ರಾಜ್ಯ ಆರೋಗ್ಯ ಇಲಾಖೆಯ ಮಹತ್ವಾಕಾಂಕ್ಷೆಯ ಹಲವು ಯೋಜನೆಗಳಿಗೆ ಚಾಲನೆ ನೀಡಿದರು. ರಾಯಚೂರು ಸೇರಿದಂತೆ ರಾಜ್ಯದ ವಿವಿಧ ಭಾಗಗಳ ಆಯುಷ್ಮತಿ ಕ್ಲಿನಿಕ್‌ಗಳಲ್ಲಿನ ರೋಗಿಗಳ ಜತೆ ವಿಡಿಯೊ ಸಂವಾದ ನಡೆಸಿದರು. ಈ ಐತಿಹಾಸಿಕ ಕಾರ್ಯಕ್ರಮಕ್ಕೆ ಸಾವಿರಾರು ಜನರು ಸಾಕ್ಷಿಯಾದರು. ನಂತರ ಇಲ್ಲಿಂದ ಅರೂರಿಗೆ ತೆರಳಿ ವೈದ್ಯಕೀಯ ಕಾಲೇಜು ಉದ್ಘಾಟಿಸಿದರು.

ಕೇವಲ 36 ತಿಂಗಳಲ್ಲಿಯೇ ಈ ಕಾಲೇಜು ನಿರ್ಮಾಣವಾಗಿದೆ. 2019 ರ ನ. 8 ರಂದು ಅಂದಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಕಾಲೇಜು ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿದ್ದರು. ₹ 810 ಕೋಟಿ ವೆಚ್ಚದಲ್ಲಿ ಕಾಲೇಜು ನಿರ್ಮಾಣವಾಗಿದೆ. ಬೋಧನಾ ಕೊಠಡಿ, ಡಿಜಿಟಲ್ ಗ್ರಂಥಾಲಯಗಳು, ಲ್ಯಾಬ್‌ಗಳು, ಪರೀಕ್ಷಾ ಕೊಠಡಿ, ಸಿಬ್ಬಂದಿ ಕೊಠಡಿ, ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯ, 330 ಹಾಸಿಗೆಗಳ ಒಳರೋಗಿ ವಿಭಾಗ, ಐಸಿಯು ಲಭ್ಯವಿದೆ.

ಕಾರ್ಯಕ್ರಮದಲ್ಲಿ ಮಾತನಾಡಿದ ಡಾ.ಕೆ.ಸುಧಾಕರ್, ನಂದಿ ಮೆಡಿಕಲ್ ಕಾಲೇಜು ನಿರ್ಮಾಣಕ್ಕೆ ಶೇ 60 ರಷ್ಟು ಕೇಂದ್ರ, ಶೇ 40 ರಷ್ಟು ಅನುದಾನವನ್ನು ರಾಜ್ಯ ಸರ್ಕಾರ ನೀಡಿದೆ. 57 ಎಕರೆ ಪ್ರದೇಶದಲ್ಲಿರುವ ಈ ಕಾಲೇಜಿನಲ್ಲಿ ಸುಸಜ್ಜಿತ ಅಕಾಡೆಮಿಕ್ ಬ್ಲಾಕ್, ಹಾಸ್ಟೆಲ್ ಮೊದಲಾದ ಸೌಲಭ್ಯಗಳಿವೆ. ಚಿಕ್ಕಬಳ್ಳಾಪುರದಲ್ಲಿ ಸತ್ಯ ಸಾಯಿ ಮೆಡಿಕಲ್ ಕಾಲೇಜು ಕೂಡ ಆರಂಭವಾಗಿದೆ. ಎರಡು ಮೆಡಿಕಲ್ ಕಾಲೇಜುಗಳಿರುವ ಈ ಜಿಲ್ಲೆಯ ಜನರು ಅದೃಷ್ಟವಂತರು. ಕೋವಿಡ್ ಸಮಯದಲ್ಲಿ ಬಿ.ಎಸ್.ಯಡಿಯೂರಪ್ಪನವರು ಉತ್ತಮವಾಗಿ ಆಡಳಿತ ನೀಡಿದ್ದರು. ಹಾಗೆಯೇ ಈ ಕಾಲೇಜು ನಿರ್ಮಾಣಕ್ಕೆ ಎಲ್ಲಾ ಸಹಕಾರ ನೀಡಿದ್ದರು. ಅವರಿಗೆ ಧನ್ಯವಾದಗಳು ಎಂದರು.

ವಿವಿಧ ಕಾರ್ಯಕ್ರಮ, ಯೋಜನೆಗಳಿಗೆ ಚಾಲನೆ: ಚಿಕ್ಕಬಳ್ಳಾಪುರದಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಜ್ಯ ಆರೋಗ್ಯ ಇಲಾಖೆಯ ಹಲವು ಯೋಜನೆಗಳಿಗೂ ಮುಖ್ಯಮಂತ್ರಿ ಚಾಲನೆ ನೀಡಿದರು.

STEMI ನಿರ್ವಹಣಾ ಯೋಜನೆ, ಮಹಿಳೆಯರಿಗೆ-ಆಯುಷ್ಮತಿ ಕ್ಲಿನಿಕ್, ಶ್ರವಣದೋಷ ಮುಕ್ತ ಕರ್ನಾಟಕ ನಿರ್ಮಾಣ ಯೋಜನೆಗೆ ಇದೇ ವೇಳೆ ಚಾಲನೆ ನೀಡಲಾಯಿತು.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ನಂದಿಗಿರಿಧಾಮಕ್ಕೆ ರೋಪ್ ವೇ

ಐತಿಹಾಸಿಕ ನಂದಿಗಿರಿಧಾಮಕ್ಕೆ ರೋಪ್ ವೇ ಅಳವಡಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭೂಮಿ ಪೂಜೆ ನೆರವೇರಿಸಿದರು. ನಾಡಿನಲ್ಲಿ ಜಾರಿಯಾಗುತ್ತಿರುವ ಮೊದಲ ರೋಪ್ ವೇ ಇದು ಎನಿಸಿದೆ. ಪ್ರವಾಸಿಗರ ಹಲವು ದಶಕಗಳ ಕನಸನ್ನು ಬಿಜೆಪಿ ಸರ್ಕಾರ ಈಡೇರಿಸಿದೆ.

ಸುಧಾಕರ್‌ಗೆ ಶ್ರೇಯಸ್ಸು

ಚಿಕ್ಕಬಳ್ಳಾಪುರದಲ್ಲಿ ಮೆಡಿಕಲ್ ಕಾಲೇಜು ತರಲು ಡಾ.ಕೆ.ಸುಧಾಕರ್ ರಾಜೀನಾಮೆ ನೀಡಿದರು. ಅವರು ಸಚಿವರಾದ ಕೂಡಲೇ ಜಿಲ್ಲೆಗೆ ವೈದ್ಯಕೀಯ ಕಾಲೇಜು ತಂದರು. ಈ ಕಾಲೇಜು ಕಟ್ಟಕಡೆಯ ವ್ಯಕ್ತಿಗೂ ಉತ್ತಮ ಆರೋಗ್ಯ ಸೇವೆ ನೀಡಲಿದ್ದು, ಎಲ್ಲಾ ಶ್ರೇಯಸ್ಸು ಸುಧಾಕರ್‌ರಿಗೆ ಸಲ್ಲುತ್ತದೆ. ಹಾವೇರಿ, ಚಿಕ್ಕಮಗಳೂರು, ಯಾದಗಿರಿ ಜಿಲ್ಲೆಗಳಲ್ಲೂ ಮೆಡಿಕಲ್ ಕಾಲೇಜು ನಿರ್ಮಿಸಲಾಗುತ್ತಿದೆ. ಪ್ರಧಾನಿ ನರೇಂದ್ರ ಮೋದಿಯವರು ನಿಯಮಗಳಲ್ಲಿ ಬದಲಾವಣೆ ತಂದು, ಸುಲಭವಾಗಿ ಹೊಸ ಮೆಡಿಕಲ್ ಕಾಲೇಜು ನಿರ್ಮಿಸಲು ಕಾರಣರಾಗಿದ್ದಾರೆ.

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ



ಹಿಂದುಳಿದ ವರ್ಗದಲ್ಲೂ ಒಳಮೀಸಲಾತಿಗೆ ಆಗ್ರಹ

ಮೈಸೂರು: 'ಹಿಂದುಳಿದ ವರ್ಗಗಳಲ್ಲಿರುವ ಜಾತಿಗಳಿಗೂ ಒಳಮೀಸಲಾತಿ ಕಲ್ಪಿಸಬೇಕು' ಎಂದು ಮೈಲ್ಯಾಕ್ ಅಧ್ಯಕ್ಷ ಆರ್.ರಘು ಕೌಟಿಲ್ಯ ಒತ್ತಾಯಿಸಿದರು.


ರಘು ಕೌಟಿಲ್ಯ

ಇಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪ್ರವರ್ಗ–1 ಮತ್ತು ಹಿಂದುಳಿದ ವರ್ಗ 2ಎನಲ್ಲಿ 197 ಜಾತಿಗಳಿದ್ದು, ಅವುಗಳಲ್ಲಿ 150 ಜಾತಿಗಳಿಗೆ ಸರ್ಕಾರಿ ಉದ್ಯೋಗ ಮರೀಚಿಕೆಯಾಗಿದೆ. 23 ಜಾತಿಗಳವರು ಶಾಸಕರಾಗುವುದು ಸಾಧ್ಯವೇ ಆಗಿಲ್ಲ' ಎಂದರು.

'ಕಾಯಕ ಸಮಾಜಗಳ ಪರವಾದ ಬೇಡಿಕೆ ಇದು. ಆಧುನಿಕ ಕೈಗಾರಿಕೆಗಳಿಂದಾಗಿ ವೃತ್ತಿ ಕಳೆದುಕೊಂಡಿರುವ ಅವರು, ಭೂಮಿಯೂ ಇಲ್ಲದೇ, ರಾಜಕೀಯ, ಶೈಕ್ಷಣಿಕ ಸವಲತ್ತುಗಳೂ ಸಿಗದೇ ಸಂಕಷ್ಟದಲ್ಲಿದ್ದಾರೆ. ಮೀಸಲಾತಿ ಪರಿಷ್ಕರಿಸುತ್ತಿರುವ ಸರ್ಕಾರದ ನಡೆ ಸ್ವಾಗತಾರ್ಹವಾಗಿದ್ದು, ನಮ್ಮ ಬೇಡಿಕೆಯನ್ನೂ ಈಡೇರಿಸಬೇಕು. ಹಿಂದುಳಿದ ವರ್ಗ 2ಎ ಒಂದು ರೀತಿ ಅಕ್ವೇರಿಯಂನಂತೆ ಆಗಿದೆ. ಸೌಲಭ್ಯಗಳನ್ನು ಪ್ರಬಲ ಮೀನುಗಳು ಕಬಳಿಸುತ್ತಿವೆ. ಒಳ ಮೀಸಲಾತಿ ನೀಡಿ ಸಣ್ಣ ಜಾತಿಯ ಮೀನುಗಳನ್ನು ರಕ್ಷಿಸಬೇಕು ಮತ್ತು ಕೆನೆಪದರ ವ್ಯವಸ್ಥೆಯಿಂದಲೂ ಹೊರಗಿಡಬೇಕು. ಜೊತೆಗೆ 2ಎ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಬೇಕು' ಎಂದು ಕೋರಿದರು.

'ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ನಿಜಕ್ಕೂ ಹಿಂದುಳಿದ ವರ್ಗಗಳ ನಾಯಕರಾಗಿದ್ದರೆ, ಈ ಬಗ್ಗೆ ಧ್ವನಿ ಎತ್ತಲಿ' ಎಂದರು.

ಪಂಚಮಸಾಲಿ, ಆದಿಚುಂಚನಗಿರಿ ಶ್ರೀಗಳು ಹೋರಾಟದ ನೇತೃತ್ವ ವಹಿಸಲಿ: ಮುಸ್ತಫಾ

ಹುಬ್ಬಳ್ಳಿ: 'ಹಿಂದುಳಿದ ಮುಸ್ಲಿಂ ಸಮುದಾಯದ 2ಬಿ ಮೀಸಲಾತಿಯನ್ನು ರದ್ದುಪಡಿಸಿ, ಅವರನ್ನು ಇಡಬ್ಲ್ಯುಎಸ್‌ಗೆ ಸೇರಿಸಿರುವ ಸರ್ಕಾರದ ನಿರ್ಧಾರದ ವಿರುದ್ಧದ ಹೋರಾಟದ ನೇತೃತ್ವವನ್ನು ಕೂಡಲಸಂಗಮದ ಪಂಚಮಸಾಲಿ ಪೀಠದ ಜಯ ಮೃತ್ಯುಂಜಯ ಸ್ವಾಮೀಜಿ, ಹರಿಹರ ಪೀಠದ ವಚನಾನಂದ ಸ್ವಾಮೀಜಿ ಹಾಗೂ ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ವಹಿಸಿಕೊಳ್ಳಬೇಕು' ಎಂದು ಮುಸ್ಲಿಂ ಮೀಸಲಾತಿ ಹೋರಾಟ ಸಮಿತಿ ಅಧ್ಯಕ್ಷ ಮುಸ್ತಫಾ ಕುನ್ನಿಭಾವಿ ಮನವಿ ಮಾಡಿದರು.

ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮುಸ್ಲಿಂ ಸಮುದಾಯವು ಲಿಂಗಾಯತರು ಮತ್ತು ಒಕ್ಕಲಿಗರೊಂದಿಗೆ ಸೋದರ ಸಂಬಂಧ ಹೊಂದಿದೆ. ಅವರ ಮೀಸಲಾತಿ ಬೇಡಿಕೆ ನ್ಯಾಯೋಚಿತ. ಆದರೆ, ನಮ್ಮ ಮೀಸಲಾತಿ ಕಿತ್ತು ಹಾಕಿ, ಅವೆರಡೂ ಸಮುದಾಯಗಳಿಗೆ ಹಂಚಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸಹೋದರರ ನಡುವೆ ಜಗಳ ಹಚ್ಚುವ ಪ್ರಯತ್ನ ಮಾಡಿದ್ದಾರೆ. ಅದು ಎಂದಿಗೂ ಸಾಧ್ಯವಿಲ್ಲ' ಎಂದು ಹೇಳಿದರು.

'ರಾಜಕೀಯ ಕಾರಣಕ್ಕಾಗಿ ಸಮುದಾಯಗಳ ನಡುವೆ ದ್ವೇಷ ಭಾವನೆ ಹುಟ್ಟಿಸುವ ಸರ್ಕಾರದ ಈ ನಡೆಯನ್ನು ಎರಡೂ ಸಮುದಾಯಗಳ ಶ್ರೀಗಳು ಖಂಡಿಸಿ, ಸರ್ಕಾರದ ಕಿವಿ ಹಿಂಡಬೇಕು. ತಮಗೆ ಕೊಟ್ಟಿರುವ ಮೀಸಲಾತಿ ತಿರಸ್ಕರಿಸಿ, 2ಬಿ ಮೀಸಲಾತಿ ಮುಂದುವರಿಸುವಂತೆ ಸರ್ಕಾರದ ಮೇಲೆ ಒತ್ತಡ ಹೇರಬೇಕು. ಮುಸ್ಲಿಂ ಸಮುದಾಯದ ಹೋರಾಟಕ್ಕೆ ಮಾರ್ಗದರ್ಶನ ಮಾಡಬೇಕು' ಎಂದರು.

NATIONAL HEALTH MISSION
Department of Health & Family Welfare Services
Arogya Soudha, 1st Cross, Magadi Road, Bengaluru - 560023
e-mail: ddiudkar@gmail.com

No.:DD/MH/82/2022-2023 Date: 27.03.2023

WALK-IN-INTERVIEW FOR CONSULTANT - MATERNAL HEALTH UNDER NHM

The Karnataka State Health & Family Welfare Society invites Walk In Interview for the eligible candidates for the **Consultant - Maternal Health** under National Health Mission. The post is temporary and purely on contract basis. The Walk In Interview will be held on **05.04.2023 at 11.00 AM** in the office of Chief Administrative Officer, National Health Mission, 1st Floor, West Wing, Arogya Soudha, Magadi Road, 1st Cross, Bengaluru - 560023.

Sl. No.	Designation	No of Post	State District level (District Names)	Qualification		Experience		Age limit	Salary per Month upto
				Essential	Desirable	Essential	Desirable		
1	Consultant Maternal Health	1	State	MBBS • DGO • MD (OBG) • MD-Community Medicine • PG in Clinical Subjects • BDS with MPH • AYUSH with MPH.	MBBS • DGO • MD (OBG) • MD-Community Medicine • PG in Clinical Subjects • BDS with MPH • AYUSH with MPH.	0	1 Yr	65	DGO, MD(OBG), MD-Community Medicine, PG in Clinical Subjects Rs.80,000/- MBBS Rs.60,000/- BDS with MPH, AYUSH with MPH Rs.50,000/-

DIPR/CP/BCPL/5472/2022-23

Sd/- Chief Administrative Officer
National Health Mission

ಸಿಕ್ಯಾಬ್ ಸಂಸ್ಥೆ, ವಿಜಯಪುರ
ಸಿಕ್ಯಾಬ್ ಎ.ಆರ್.ಎಸ್. ಇನಾಮದಾರ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಿಳಾ ಮಹಾವಿದ್ಯಾಲಯ, ವಿಜಯಪುರ

ಬೇಕಾಗಿದ್ದಾರೆ

ಸಿಕ್ಯಾಬ್ ಸಂಸ್ಥೆ, ವಿಜಯಪುರ ಇವರ ಆಡಳಿತಕ್ಕೆ ಒಳಪಟ್ಟ ಅನುದಾನಿತ ಮತೀಯ ಅಲ್ಪಸಂಖ್ಯಾತರ ಸಂಸ್ಥೆ, ವಿಜಯಪುರ ಸಿಕ್ಯಾಬ್ ಎ.ಆರ್.ಎಸ್. ಇನಾಮದಾರ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಿಳಾ ಮಹಾವಿದ್ಯಾಲಯದಲ್ಲಿ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಭರ್ತಿಗಾಗಿ ಜಾಹಿರಾತು ನೀಡಲು ಮಾನ್ಯ ಆಯುಕ್ತರು ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಕಾಶಿಇ/268/ಖಾಹುಭ/ಧಾವಿ/2017–18/ನೇವಿ–2 ದಿನಾಂಕ : 21–02–2023 ಹಾಗೂ ಮಾನ್ಯ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಚೇರಿ, ಧಾರವಾಡ ಇವರ ಪತ್ರ ಸಂಖ್ಯೆ : ಕಾಶಿಇ/ಪ್ರಾಕಧಾ/43/ಖಾಹುಭ/ಜಿಇಎಸ್–7/2022–23 ದಿನಾಂಕ: 21–02–2023 ರವರ ಪ್ರಕಾರ ಅನುಮತಿ ನೀಡಿರುವದರ ಮೇರೆಗೆ ಈ ಕೆಳಕಂಡ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಕ್ರ. ಸಂ.	ವಿಷಯ	ಹುದ್ದೆಗಳ ಸಂಖ್ಯೆ	ಮೀಸಲಾತಿ
1	ಇತಿಹಾಸ	01	ಅನ್ವಯಿಸುವುದಿಲ್ಲ
2	ಭೌತಶಾಸ್ತ್ರ	01	ಅನ್ವಯಿಸುವುದಿಲ್ಲ
3	ದೈಹಿಕ ಶಿಕ್ಷಣ ಬೋಧಕರು	01	ಅನ್ವಯಿಸುವುದಿಲ್ಲ (ಮಹಿಳೆಯರಿಗೆ ಅದ್ಯತೆ)

ನಿಬಂಧನೆಗಳು : 1) ಅಭ್ಯರ್ಥಿಗಳು ಸಂಬಂಧಪಟ್ಟ ವಿಷಯದಲ್ಲಿ ಸ್ನಾತಕೋತ್ತರ ಪದವಿಯಲ್ಲಿ ಕನಿಷ್ಠ 55% ಅಂಕಗಳನ್ನು ಪಡೆದಿರಬೇಕು (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಅಭ್ಯರ್ಥಿಗಳಿಗೆ ಶೇಕಡಾ 50% ಅಂಕಗಳು) ಮತ್ತು ಎನ್‌ಇಟಿ/ಎಸ್‌ಎಲ್‌ಇಟಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಪಿಹೆಚ್.ಡಿ ಪದವಿಯನ್ನು ಪಡೆದಿರುವ ಅಭ್ಯರ್ಥಿಗಳಿಗೆ ಎನ್‌ಇಟಿ/ಎಸ್‌ಎಲ್‌ಇಟಿ ಪರೀಕ್ಷೆಯಿಂದ ವಿನಾಯಿತಿ ಇರುತ್ತದೆ. ಪಿಹೆಚ್.ಡಿ ಪದವಿಯನ್ನು ಕೋರ್ಸ–ವರ್ಕನೊಂದಿಗೆ ಪಡೆಯಬೇಕಾಗಿರುತ್ತದೆ. ಒಂದು ವೇಳೆ ದಿನಾಂಕ: 11–07–2009ರ ಪೂರ್ವದಲ್ಲಿ ಪಿಹೆಚ್.ಡಿ ಪದವಿ ಪಡೆದಿದ್ದಲ್ಲಿ ಅಥವಾ ಪಿಹೆಚ್.ಡಿ ಪದವಿಗೆ ನೊಂದಣೆ ಮಾಡಿಸಿದ್ದಲ್ಲಿ ಅತಂಹ ಅಭ್ಯರ್ಥಿಗಳು ದಿನಾಂಕ : .04–05–2016ರ ಯುಜಿಸಿ ಅಧಿಸೂಚನೆಯಲ್ಲಿ ಹೊರಡಿಸಿರುವ ನಿಯಮಗಳನ್ನು ಪೂರೈಸುವ ಷರತ್ತುಗಳಿಗೊಳಪಟ್ಟಿರುತ್ತದೆ. 2) ನೇಮಕಾತಿ ವಯೋಮಿತಿ ದಿನಾಂಕ: 20–06–2018 ಸರಕಾರದ ಆದೇಶ ಸಂಖ್ಯೆ: ಇಡಿ/49/ಯುಪಿಸಿ/2018 ರ ಪ್ರಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ–1 ಗರಿಷ್ಟ 45, ಇತರೆ ಹಿಂದುಳಿದ ವರ್ಗ ಗರಿಷ್ಟ 43 ಹಾಗೂ ಸಾಮಾನ್ಯ ವರ್ಗ 40 ವರ್ಷಗಳು, ದಿನಾಂಕ 13.12.2018ರ ಸಂಖ್ಯೆ: ಇಡಿ/87/ಯುಪಿಸಿ/2016 ರ ಸರಕಾರದ ಸೇರ್ಪಡೆ ಆದೇಶದನ್ವಯ, ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಪೂರ್ಣಕಾಲಿಕ ಬೋಧನಾನುಭವ ಹೊಂದಿರುವ ಒಟ್ಟು ಸೇವಾ ಅವಧಿ ಅಥವಾ 05 ವರ್ಷಗಳು ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಅವಧಿಯನ್ನು ಗರಿಷ್ಟ ವಯೋಮಿತಿಯಲ್ಲಿ ವಿನಾಯಿತಿಯನ್ನು ಪರಿಗಣಿಸಬಹುದಾಗಿದೆ. 3) ಸರಕಾರ ಹಾಗೂ ಯುಜಿಸಿ ನಿಯಮಾಳಿಗಳ ಪ್ರಕಾರ ಆಯ್ಕೆ ಪ್ರಕ್ರಿಯೆಯನ್ನು ನಡೆಸಲಾಗುವುದು. (4) ವೇತನ ಶ್ರೇಣಿ ಮತ್ತು ಇತರೆ ನಿಬಂಧನೆಗಳು: ಯುಜಿಸಿ ಮತ್ತು ಅನುದಾನಿತ ಕಾಲೇಜುಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಸರಕಾರದ ನಿಯಮದ ಪ್ರಕಾರ ಇರುತ್ತದೆ. (5) ಅನುದಾನಿತ ಮತ್ತು ಸರಕಾರಿ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಭ್ಯರ್ಥಿಗಳು ಮಾತೃ ಸಂಸ್ಥೆಯಿಂದ ಪಡೆದ ನಿರಾಕ್ಷೇಪಣಾ (ಎನ್.ಓ.ಸಿ) ಪತ್ರವನ್ನು ಒದಗಿಸಬೇಕು. (6) ಸಂದರ್ಶನ ದಿನಾಂಕವನ್ನು ಪ್ರತ್ಯೇಕವಾಗಿ ತಿಳಿಸಲಾಗುವುದು ಮತ್ತು ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳಿಗೆ ಯಾವುದೇ ಪ್ರಯಾಣ /ದಿನ ಭತ್ತೆ ನೀಡಲಾಗುವುದಿಲ್ಲ. (7) ಅರ್ಹ ಅಭ್ಯರ್ಥಿಗಳು ತಮ್ಮ ಅರ್ಜಿಯನ್ನು ಸ್ವ–ವಿವರ ಮತ್ತು ವಿದ್ಯಾರ್ಹತೆಗೆ ಸಂಬಂಧಿಸಿದಂತೆ ದೃಢೀಕೃತ ಪ್ರತಿಗಳೊಂದಿಗೆ ರೂ. 3000/– (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಅಭ್ಯರ್ಥಿಗಳಿಗೆ ರೂ. 1500/– ಬ್ಯಾಂಕ್ ಹುಂಡಿಯನ್ನು ಅಧ್ಯಕ್ಷರು, ಸಿಕ್ಯಾಬ್ ಸಂಸ್ಥೆ, ವಿಜಯಪುರ ಇವರಿಗೆ ಸಂದಾಯವಾಗುವಂತೆ ಪಡೆದು ಪ್ರಕಟಣೆ ಹೊರಡಿಸಿದ ದಿನಾಂಕದಿಂದ 21 ದಿನದೊಳಗೆ ಎಲ್ಲಾ ದಾಖಲಾತಿಗಳನ್ನು ಅಧ್ಯಕ್ಷರು, ಸಿಕ್ಯಾಬ್ ಸಂಸ್ಥೆ, ನವರಸಪೂರ, ಬಾಗಲಕೋಟ ರೋಡ, ವಿಜಯಪುರ–586109 ಈ ವಿಳಾಸಕ್ಕೆ ತಲುಪುವಂತೆ ನೋಂದಾಯಿತ ಅಂಚೆ ಮೂಲಕ ಕಳುಹಿಸತಕ್ಕದ್ದು ಲಕೋಟೆಯ ಮೇಲೆ ಯಾವ ಹುದ್ದೆಗೆ ಅರ್ಜಿಯಂದು ಬರೆಯಬೇಕು. ಅರ್ಜಿಯ ಒಂದು ಪ್ರತಿಯನ್ನು ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಚೇರಿ, ಧಾರವಾಡ–580001, ಇವರಿಗೆ ನಿಗದಿತ ಅವಧಿಯೊಳಗೆ ಕಡ್ಡಾಯವಾಗಿ ಕಳುಹಿಸತಕ್ಕದ್ದು. (8) ಅಪೂರ್ಣವಾದ ಮತ್ತು ಕಡೆಯ ದಿನಾಂಕದ ನಂತರ ಬಂದ ಯಾವುದೇ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. (9) ಆಯ್ಕೆ ಪ್ರಕ್ರಿಯೆಯು ಯಾವುದೇ ಹಂತದಲ್ಲಾದರೂ, ಸದರಿ ಹುದ್ದೆಯ ಅನುಮತಿ ಮತ್ತು ಆಯ್ಕೆಯನ್ನು ಇಲಾಖೆ/ ಸರಕಾರವು ರದ್ದುಪಡಿಸುವ ಅಧಿಕಾರವನ್ನು ಹೊಂದಿದ್ದು, ಅಭ್ಯರ್ಥಿಯ ಅರ್ಜಿಯನ್ನು ಸಲ್ಲಿಸಿದ ಅಥವಾ ಸಂದರ್ಶನಕ್ಕೆ ಹಾಜರಾದ ಮಾತ್ರಕ್ಕೆ ಸದರಿ ಹುದ್ದೆಗೆ ಯಾವುದೇ ಹಕ್ಕನ್ನು ಹೊಂದಿರುವುದಿಲ್ಲ.

ಎ.ಎಸ್. ಪಾಟೀಲ, ಗೌರವ ಪ್ರಧಾನ ಕಾರ್ಯದರ್ಶಿಗಳು
ಎಸ್.ಎ. ಪುಣೇಕರ, ಅಧ್ಯಕ್ಷರು

ಕ್ಷೇಮ ಕುಶಲ

ಬೇಸಿಗೆ ರಜೆಯಲ್ಲಿ ತೆರೆಯಲಿ ಹೊಸ ಲೋಕ

ರಮ್ಯಾ ಶ್ರೀಹರಿ

ಕಲಿಕೆಯ ಬಗ್ಗೆ ಮಾತನಾಡುವಾಗ ನಾವು ಸಾಮಾನ್ಯವಾಗಿ ಏನು ಕಲಿತೆ? ಎಷ್ಟು ಕಲಿತೆ? ಕಲಿತದ್ದರಿಂದ ಏನು ಉಪಯೋಗ? ಪರೀಕ್ಷೆಯಲ್ಲಿ ಬರೆಯಲು ಬರುವಂತಹ ಕಲಿಕೆಯೇ? ಎಂಬಂತಹ ಪ್ರಶ್ನೆಗಳನ್ನು ಮಕ್ಕಳಿಗೆ ಸಾಮಾನ್ಯವಾಗಿ ಕೇಳುತ್ತಿರುತ್ತೇವೆ, ಆದರೆ ಕಲಿಕೆ ಎನ್ನುವ ಪ್ರಕ್ರಿಯೆಯ ಕುರಿತು, ಆ ಪ್ರಕ್ರಿಯೆಯಲ್ಲಿ ಆಗುವ ಅನುಭವಗಳ ಕುರಿತು ಪರಸ್ಪರ ಮಾತನಾಡುವುದು ಕಡಿಮೆಯೇ. ಯಾವುದನ್ನು ಕಲಿಯುವುದರಲ್ಲಿ ಯಶಸ್ವಿಯಾದೆ ಎನ್ನುವ ಮಾತನ್ನಾಡುವುದೇ ಹೆಚ್ಚು, ಯಾವುದನ್ನು ಕಲಿಯುವುದರಲ್ಲಿ ಸೋತೆ ಎಂಬುದರ ಬಗ್ಗೆ ಹೇಳುವುದು ಕಡಿಮೆ.

> ಪ್ರಶ್ನೆಗಳು ಹುಟ್ಟುವುದು ಹೇಗೆ? ಅನುಭವದ ಮೂಲಕವೇ ಅಲ್ಲವೇ? ಆದರೆ ಇಂದು ನಮ್ಮ ಶಿಕ್ಷಣ ವ್ಯವಸ್ಥೆ ಎಷ್ಟು ಅನುಭವ ಕೇಂದ್ರಿತವಾಗಿದೆ ಎಂಬ ಪ್ರಶ್ನೆಯನ್ನು ನಾವೇ ಕೇಳಿಕೊಳ್ಳಬೇಕು.

ಏನನ್ನಾದರೂ ಕಲಿಯುವ ಮುಂಚೆ, ಕಲಿಯುವಾಗ, ಕಲಿತ ನಂತರ, ಕಲಿತದ್ದನ್ನು ಮರೆತು ಹೊಸದನ್ನು ಕಲಿತಾಗ ನಮ್ಮೊಳಗೇ ಆಗುವ ಅನುಭವವೆಂಥದ್ದು? ಕಲಿಕೆ ಎಂದರೆ ಅದು ಬುದ್ಧಿಗೆ ಮಾತ್ರ ಸಂಬಂಧಪಟ್ಟದ್ದೇ? ಕಲಿಕೆ ಎಂದರೆ ಕೌಶಲವೇ? ಕಲಿಕೆ ಎಂದರೆ ಪರಿವರ್ತನೆಯೇ? ನಾವು ಬಯಸಿದ್ದನ್ನೆಲ್ಲಾ ಕಲಿಯುವುದು ಸಾಧ್ಯವೇ? ಕಲಿಕೆಯೆಂದರೆ ಕಷ್ಟಪಟ್ಟು ಮಾಡಬೇಕಾದ್ದು ಎನ್ನುವ ಕಲ್ಪನೆಯಿರುವ ನಮಗೆ ಸಂತೋಷವಾಗಿರುವುದು, ಶಾಂತಿಯಿಂದ ಇರುವುದು, ಲವಲವಿಕೆಯಿಂದ ಬದುಕುವುದು ಕಲಿಕೆ ಎಂದು ಅನಿಸುವುದು ಸಾಧ್ಯವೇ?

ಕಲಿಕೆಯ ಅನುಭವಗಳ ಹರಹು ಅಗಾಧವಾದದ್ದು, ಕಲಿಕೆಯೆನ್ನುವ ಪ್ರಕ್ರಿಯೆಯನ್ನು ಅರ್ಥಮಾಡಿಕೊಳ್ಳುವ ಪಯಣವೂ ರೋಚಕವಾದದ್ದು. ಆದರೆ, ಕಲಿಕೆಯ ಅನುಭವಗಳ ಬಗೆಗಿನ ಸಂವಾದ ನಮ್ಮ ಸಮಾಜದಲ್ಲಿ, ಶಿಕ್ಷಣ ವ್ಯವಸ್ಥೆಯಲ್ಲಿ ಅಷ್ಟೇನೂ ಪ್ರಚಲಿತವಿಲ್ಲ. ಮಕ್ಕಳೂ, ಶಿಕ್ಷಕರೂ, ಪೋಷಕರೂ ಮತ್ತು ಸಮಾಜದ ಎಲ್ಲರೂ ತಮ್ಮ ತಮ್ಮ ಕಲಿಕೆಯ ಅನುಭವಗಳ ಕುರಿತು ಹಂಚಿಕೊಳ್ಳುವ ಪ್ರಸಂಗಗಳು ಹೇರಳವಾಗೇನಿಲ್ಲ. ಈ ಬೇಸಿಗೆ ರಜೆಯ ಕಾಲವನ್ನು ನಾವು ಇಂತಹ ಅನೇಕ ಸಂವಾದಗಳಿಗೆ ವೇದಿಕೆಯಾಗಿಸಬಹುದು.

ನಮ್ಮ ಶಿಕ್ಷಣ ವ್ಯವಸ್ಥೆಯ ದುರಂತವೆಂದರೆ ಮಕ್ಕಳು ಪ್ರಶ್ನೆ ಕೇಳುವ ಮುಂಚೆಯೇ ಉತ್ತರಗಳನ್ನು ಅಭ್ಯಾಸಮಾಡಿಸಲು ಹೊರಡುವುದು. ನಾವು ಮಕ್ಕಳಾಗಿದ್ದಾಗ ಕೇಳಿಕೊಳ್ಳುತ್ತಿದ್ದ ಎಷ್ಟೋ ಪ್ರಶ್ನೆಗಳನ್ನು ಈಗ ಕೇಳಿಕೊಳ್ಳುವುದೇ ಇಲ್ಲ, ಕಾರಣ ಅವಕ್ಕೆಲ್ಲಾ ಉತ್ತರಗಳನ್ನು ಪಡೆದುಕೊಂಡಿದ್ದೇವೆ ಎನ್ನುವುದಲ್ಲ, ಪ್ರಶ್ನೆ ಕೇಳಿಕೊಳ್ಳುವ ಅಭ್ಯಾಸವನ್ನು ಕೈಬಿಟ್ಟಿದ್ದೇವೆ ಅಷ್ಟೇ!.

ಯಾವ ಪ್ರಶ್ನೆ ಕೇಳಿಕೊಳ್ಳುವುದು ಅನುಕೂಲವೋ ಅದನ್ನಷ್ಟೇ ಪ್ರೋತ್ಸಾಹಿಸುತ್ತೇವೆ, ಯಾವ ಪ್ರಶ್ನೆ ಮುಜುಗರವನ್ನು ತರುವುದೋ, ಯಾವುದರ ಉತ್ತರ ನಮ್ಮ ಅಸಮಾಧಾನಕ್ಕೆ ಕಾರಣವಾಗುವುದೋ ಅಂಥ ಪ್ರಶ್ನೆಗಳನ್ನೇ ಮರೆತಿದ್ದೇವೆ ಅಷ್ಟೇ!.

ಮಕ್ಕಳು ಎಂತೆಂತಹಾ ವಿಚಿತ್ರ ಪ್ರಶ್ನೆಗಳನ್ನು ಕೇಳುತ್ತಾರಲ್ಲವೇ? ದೊಡ್ಡವರ ಲೋಕದ ನಿಯಮಗಳನ್ನು ಅವರಿಗೆ ಅರ್ಥಮಾಡಿಸುವುದು ಎಷ್ಟು ಕಷ್ಟವಲ್ಲವೇ? ಪ್ರಶ್ನೆಗಳು ಹುಟ್ಟುವುದು ಹೇಗೆ? ಅನುಭವದ ಮೂಲಕವೇ ಅಲ್ಲವೇ? ಆದರೆ ಇಂದು ನಮ್ಮ ಶಿಕ್ಷಣ ವ್ಯವಸ್ಥೆ ಎಷ್ಟು ಅನುಭವಕೇಂದ್ರಿತವಾಗಿದೆ ಎಂಬ ಪ್ರಶ್ನೆಯನ್ನು ನಾವೇ ಕೇಳಿಕೊಳ್ಳಬೇಕು. ಈ ಬೇಸಿಗೆ ರಜೆಯಲ್ಲಿ ಬಾಲ್ಯದ ಅನೇಕ ಮರೆತುಹೋದ ಪ್ರಶ್ನೆಗಳಿಗೆ ಜೀವವನ್ನು ಕೊಡಬಹುದು. ಇದಕ್ಕೆ ಮಕ್ಕಳ ಸಾಹಿತ್ಯ ಸಾಕಷ್ಟು ಪ್ರೇರಣೆಯನ್ನು ಒದಗಿಸುತ್ತದೆ.

ಬಾಲ್ಯದ ಪ್ರಪಂಚವೇ ಬೇರೆ, ಅದರ ರೀತಿ-ನೀತಿಗಳೇ ಬೇರೆ, ಬಾಲ್ಯದ ನಿಮ್ಮ ನೆಚ್ಚಿನ ಕಲ್ಪನೆಗಳು ಯಾವುವು, ಯಾವುದು ಅತ್ಯಂತ ನಿಗೂಢ ಎಂದು ನಿಮಗನ್ನಿಸುತ್ತಿತ್ತು, ಯಾಕೆ? ಇವುಗಳ ಬಗ್ಗೆ ಮಕ್ಕಳ ಜೊತೆ ಮಾತನಾಡಿ ಅವರ ಕಲ್ಪನಾಲೋಕದ ಬಗ್ಗೆ ತಿಳಿಯುವುದಕ್ಕೂ ಬೇಸಿಗೆ ರಜೆ ಸಕಾಲ. ಮಕ್ಕಳ ಸಿನಿಮಾಗಳನ್ನು ಪಟ್ಟಿ ಮಾಡಿಕೊಂಡು ದಿನವೂ ಒಂದೊಂದು ಸಿನಿಮಾ ಪೋಷಕರೂ, ಮಕ್ಕಳೂ ಒಟ್ಟಿಗೆ ನೋಡುವುದೂ ಆಹ್ಲಾದಕಾರಿ ಅನುಭವ.

ನಾವೀಗ ಮಕ್ಕಳ ಪ್ರಪಂಚವನ್ನು ತುಂಬಾ ಬುದ್ಧಿಕೇಂದ್ರಿತ ಮಾಡುತ್ತಿದ್ದೇವೆ. ಸುತ್ತಲಿನ ಪರಿಸರ ನೀಡುವ ಸಮೃದ್ಧ ಇಂದ್ರಿಯಾನುಭವಗಳನ್ನು, ಸಂವೇದನೆಗಳನ್ನು ಗುರುತಿಸುವ ಸಾಮರ್ಥ್ಯ ಅವರಲ್ಲಿ ಕಡಿಮೆಯಾಗುತ್ತಿರುವುದೂ ಸುಳ್ಳಲ್ಲ. ಎಷ್ಟೊಂದು ಬಗೆಯ ನೋಟಗಳು, ಶಬ್ದಗಳು, ರುಚಿಗಳು ಅವುಗಳ ನಡುವಿರುವ ನಾಜೂಕು ವೈವಿಧ್ಯಗಳು ಮನಸ್ಸಿಗೆ ಹೊಸ ಉಲ್ಲಾಸವನ್ನು ತರಬಲ್ಲವು. ಸ್ಮಾರ್ಟ್‌ ಫೋನ್/ಟ್ಯಾಬ್‌ಗಳಲ್ಲಿ ತಲ್ಲೀನರಾದ ಮಕ್ಕಳಿಗೆ ಪ್ರಪಂಚವನ್ನು ಆಸಕ್ತಿಯಿಂದ ಗಮನಿಸುವ ಅಭ್ಯಾಸವನ್ನು ಮಾಡಿಸೋಣ. ವಿವಿಧ ಸಸ್ಯಗಳು, ಹೂವುಗಳು, ಪಕ್ಷಿಗಳು, ಜಲಚರಗಳು, ಬಗೆಬಗೆಯ ಕಟ್ಟಡಗಳ ವಿನ್ಯಾಸಗಳು, ಅಡುಗೆಯಲ್ಲಿನ ವೈವಿಧ್ಯ, ಉಡುಗೆ, ತೊಡುಗೆಯಲ್ಲಿನ ವಿಶಿಷ್ಟ ವಿನ್ಯಾಸ; ಹೀಗೆ ವೈವಿಧ್ಯವನ್ನು ಗಮನಿಸಲು ಹೇಳೋಣ. ಬೇಸಿಗೆ ರಜೆಯಲ್ಲಿ ಪ್ರವಾಸವೆಂದರೆ ಎಲ್ಲೋ ದೂರದ ಊರುಗಳಿಗೆ ಹೊರಡುವ ದುಬಾರಿ ಸಂಚಾರವೇ ಆಗಬೇಕಿಲ್ಲ. ನಮ್ಮ ಊರುಗಳನ್ನು ಚೆನ್ನಾಗಿ ಅರಿಯುವ, ಅದರ ಇತಿಹಾಸ ತಿಳಿಯುವ ಕೆಲಸವಾಗಲಿ. ಒಟ್ಟಾರೆ ಆಯಾ ಊರಿನ ವೈಶಿಷ್ಟ್ಯಗಳೂ, ಸಮಸ್ಯೆಗಳ ಕುರಿತು ಪ್ರಾಯೋಗಿಕವಾಗಿ ಅರಿಯಬಹುದು.

ಪ್ರವಾಸಕ್ಕಾಗಿ ಯಾವ ಊರಿಗೇ ತೆರಳಲಿ, ಆ ಊರನ್ನು ನೋಡಿ ಸಂತಸಪಡುವುದರ ಜೊತೆಗೆ ತಮ್ಮ ಆಸಕ್ತಿಯ ಕ್ಷೇತ್ರವನ್ನು ಇನ್ನೊಂದಿಷ್ಟು ವಿಸ್ತರಿಸಿಕೊಳ್ಳುವುದು ಮಕ್ಕಳಿಗೆ ಸಾಧ್ಯವಾದರೆ ಆಗ ಪ್ರವಾಸ ನಿಜಕ್ಕೂ ಸಾರ್ಥಕವಾದಂತೆ. ನಮ್ಮ ದೇಶದ ಶಿಲ್ಪಕಲಾ ಪರಂಪರೆಯ ಬಗ್ಗೆ ಕುತೂಹಲವೋ, ಇತಿಹಾಸದಲ್ಲಿನ ಯಾವುದೋ ಒಂದು ಕಾಲಘಟ್ಟದ ಬಗೆಗೆ ವಿಶೇಷ ಆಸಕ್ತಿಯೋ, ಸಾಮಾಜಿಕ ವ್ಯವಸ್ಥೆಯೊಂದನ್ನು ಕುರಿತಾದ ಪ್ರಶ್ನೆಗಳೋ, ಜೀವನ ಶೈಲಿಯಲ್ಲಿನ ಆರೋಗ್ಯಕರ ಬದಲಾವಣೆಯೋ, ಅಧ್ಯಯನದ ಹೊಸ ಕ್ಷೇತ್ರವೊಂದರ ಪರಿಚಯವೋ; ಒಟ್ಟಿನಲ್ಲಿ ಮಕ್ಕಳ ಬದುಕು ಹೊಸಹೊಸದಾಗಿ ಚಿಗುರುತ್ತಲೇ ಇರಬೇಕು, ಬೇಸಿಗೆ ಸಿದ್ಧವಾಗಿದೆ, ರಜೆ ಬಾಗಿಲ ಬಳಿ ನಿಂತಿದೆ, ನಾವೂ ಮಕ್ಕಳೊಂದಿಗೆ ಕೂಡಿ ಹತ್ತಾರು ಲೋಕಗಳನ್ನು ಸುತ್ತೋಣ, ಅವರಂತೆ ನಾವೂ ಬೆಳೆಯುತ್ತಲೇ ಇರೋಣ!. ❖

ಬುದ್ಧಿಯನ್ನು ಮಂಕಾಗಿಸುವ ಜಂಕ್ ಫುಡ್!

ಡಾ.ವಿನಯಾ ಶ್ರೀನಿವಾಸ್

ಬೇಸಿಗೆಯ ದಿನಗಳು ಆರಂಭವಾಗಿವೆ. ಇನ್ನು ಶಾಲೆಗಳಿಗೆ ರಜೆ. ಈ ದಿನಗಳಲ್ಲಿ ಮನೆಯಲ್ಲಿಯೇ ಹೆಚ್ಚು ಸಮಯವನ್ನು ಕಳೆಯುವ ಮಕ್ಕಳನ್ನು ನಿಭಾಯಿಸುವುದು ಅಷ್ಟು ಸುಲಭವಲ್ಲ. ಅದರಲ್ಲಿಯೂ ಅವರ ಆಹಾರದ ಬಗ್ಗೆ ನಿಗಾ ಇಡುವುದು ತುಸು ಕಷ್ಟವೇ. ಮೊದಲನೆಯದು, 'ಮೂರು ವರ್ಷದಲ್ಲಿ ಕಲಿತದ್ದು ನೂರು ವರ್ಷದವರೆಗೆ' ಎಂಬ ಹಿರಿಯರ ಮಾತಿನಂತೆ ಬಾಲ್ಯದಲ್ಲಿ ರೂಢಿಸಿಕೊಂಡಿದ್ದು ಮುಂದಿನ ಜೀವನದಲ್ಲಿಯೂ ಗಟ್ಟಿಯಾಗಿ ಉಳಿದುಕೊಳ್ಳುತ್ತದೆ. ಎರಡನೆಯದು ಹೆಚ್ಚು ಕ್ರಿಯಾಶೀಲರಾಗಿರಬೇಕಾದ ಈ ವಯಸ್ಸಿನಲ್ಲಿ ಅಗತ್ಯ ಪೋಷಕಾಂಶಗಳಿರುವ ಆಹಾರವನ್ನು ಒದಗಿಸಿದರೆ ಅವರ ಓದು, ಕಲಿಕೆ, ಆಟೋಟಗಳೂ ಸುಗಮ ಹಾದಿಯಲ್ಲಿ ಸಾಗುತ್ತವೆ. ಜೊತೆಯಲ್ಲಿ ಶರೀರದ ರೋಗ ನಿರೋಧಕ ವ್ಯವಸ್ಥೆಯೂ ಸಶಕ್ತವಾಗಿದ್ದು ಮಕ್ಕಳನ್ನು ರೋಗರುಜಿನಗಳಿಂದ ರಕ್ಷಿಸುತ್ತದೆ. ಆದರೆ ಅದು ಎಣಿಸಿದಷ್ಟು ಸಲಭವಲ್ಲ. ಜಂಕ್ ಆಹಾರಗಳ ಜಾಹೀರಾತುಗಳು ಎಲ್ಲೆಂದರಲ್ಲಿ ರಾರಾಜಿಸುವಾಗ ಮಕ್ಕಳು ಅದರೆಡೆಗೆ ಆಕರ್ಷಿತರಾಗುವುದು ಸರ್ವೇಸಾಮಾನ್ಯ. ಆದರೆ ಇವು ಎಷ್ಟರ ಮಟ್ಟಿಗೆ ಸುರಕ್ಷಿತ?? ಸುಲಭವಾಗಿ, ಎಲ್ಲೆಂದರಲ್ಲಿ ಲಭ್ಯವಿರುವ ಈ ಸಂಸ್ಕರಿಸಿದ ಆಹಾರ ಪದಾರ್ಥಗಳು ಹೆಚ್ಚು ಕ್ಯಾಲೊರಿಯ ಜೊತೆ ಅಧಿಕ ಪಿಷ್ಟ ಮತ್ತು ಲವಣಾಂಶವನ್ನೂ ಹೊಂದಿರುತ್ತವೆ. ಶರೀರಕ್ಕೆ ಅಗತ್ಯವಿರುವ ಜೀವಸತ್ವಗಳು, ಖನಿಜಾಂಶ, ನಾರಿನಾಂಶ ಮತ್ತು ಪ್ರೊಟೀನ್ ಜಂಕ್ ಆಹಾರಗಳಲ್ಲಿ ಅತ್ಯಂತ ಕಡಿಮೆ ಎಂದೇ ಹೇಳಬಹುದು.

ಎಂಥ ಸಮಸ್ಯೆ? ಏಕೆ?

ಬೊಜ್ಜು: ಸಂಸ್ಕರಿಸಿದ ಆಹಾರ ಪದಾರ್ಥಗಳಲ್ಲಿನ ಹೆಚ್ಚಾದ ಪಿಷ್ಟ/ಸಕ್ಕರೆ , ಕೊಬ್ಬಿನಾಂಶವು ಶರೀರಕ್ಕೆ ಅಧಿಕ ಕ್ಯಾಲೊರಿಯನ್ನು ಒದಗಿಸುವುದರಿಂದ ಮಕ್ಕಳಲ್ಲಿ ಅತಿ ಚಿಕ್ಕ ವಯಸ್ಸಿನಲ್ಲಿಯೇ ಬೊಜ್ಜು, ಅಧಿಕ ದೇಹತೂಕದಂತಹ ಸಮಸ್ಯೆಗಳು ಬರಬಹುದು. ಇದು ಅಧಿಕ ರಕ್ತದೊತ್ತಡ, ಮಧುಮೇಹ, ಹೃದ್ರೋಗ ಮತ್ತು ಸ್ಟ್ರೋಕ್‌ನಂಥ ಸಮಸ್ಯೆಗಳಿಗಳಿಗೂ ಎಡೆ ಮಾಡಿಕೊಡಬಹುದು.

ಮಲಬದ್ಧತೆ: ಈ ಆಹಾರವನ್ನು ಸ್ವಲ್ಪ ಪ್ರಮಾಣದಲ್ಲಿ ಸೇವಿಸಿದರೂ ಹೊಟ್ಟೆ ತುಂಬಿದಂತೆನಿಸುತ್ತದೆ. ಮನೆಯ ಆಹಾರ ರುಚಿಸದೇ ಬೇಳೆಕಾಳುಗಳು, ತರಕಾರಿ ಮತ್ತು ಹಣ್ಣುಗಳಲ್ಲಿ ಸಿಗುವ ನಾರಿನಾಂಶದಿಂದ ಅವರು ವಂಚಿತರಾಗುತ್ತಾರೆ. ಇದು ಮಲಬದ್ಧತೆಗೆ ಕಾರಣವಾಗುತ್ತದೆ.

ಏಕಾಗ್ರತೆಯಲ್ಲಿ ವ್ಯತ್ಯಯ: ಮೆದುಳಿನ ಕಾರ್ಯಕ್ಷಮತೆಗೆ ಜೀವಸತ್ವಗಳು ಮತ್ತು ಖನಿಜಾಂಶಗಳು ಮುಖ್ಯ. ಜಂಕ್ ಆಹಾರದಲ್ಲಿ ಇವು ಇರದ ಕಾರಣ ಮಕ್ಕಳಲ್ಲಿ ಏಕಾಗ್ರತೆ ಮತ್ತು ಕಲಿಕಾ ಸಾಮರ್ಥ್ಯ ಕಡಿಮೆಯಾಗುವುದು.

ಅಲರ್ಜಿ, ಅಸ್ತಮಾ: ಆಹಾರ ಪದಾರ್ಥವು ಕೆಡದಂತೆ ಮತ್ತು ಆಕರ್ಷಕವಾಗಿ ಕಾಣಲು ಕೆಲವು ರಾಸಾಯನಿಕ ವಸ್ತುಗಳನ್ನು ಮತ್ತು ವರ್ಣಗಳನ್ನು ಇದರ ತಯಾರಿಯಲ್ಲಿ ಬಳಸಿರುತ್ತಾರೆ ಇವು ಮಕ್ಕಳಲ್ಲಿ ಅಲರ್ಜಿ ಪ್ರಕ್ರಿಯೆಗೆ ಕಾರಣವಾಗಬಹುದು. ಅಸ್ತಮಾ ಮತ್ತು ಮೂಗಿನ ಉರಿಯೂತ ಸಮಸ್ಯೆಗಳೂ ಕಾಣಿಸಿಕೊಳ್ಳಬಹುದು.

ಆತ್ಮವಿಶ್ವಾಸ ಕಡಿಮೆಯಾಗುವುದು, ಖಿನ್ನತೆ: ಮಕ್ಕಳ ದೇಹ ತೂಕ ಹೆಚ್ಚಾದಂತೆ ಆಟೋಟಗಳಲ್ಲಿ ಆಸಕ್ತಿ ಕುಂಠಿತವಾಗುತ್ತದೆ. ಶಾಲೆಯಲ್ಲಿನ ಸೃಜನಾತ್ಮಕ ಚಟುವಟಿಕೆಗಳಲ್ಲಿಯೂ ಅವರ ತೊಡಗಿಕೊಳ್ಳುವಿಕೆ ಕ್ಷೀಣಿಸುತ್ತದೆ. ಪರಿಣಾಮವಾಗಿ, ಇತರ ಸಹಪಾಠಿಗಳೊಂದಿಗೆ ಬೆರೆಯುವುದನ್ನೂ ಕಡಿಮೆ ಮಾಡುತ್ತಾರೆ. ಇದರಿಂದ ಮಕ್ಕಳ ಆತ್ಮವಿಶ್ವಾಸವನ್ನು ಕುಗ್ಗಿಸಿ ಖಿನ್ನತೆಗೆ ತುತ್ತಾಗಬಹುದು.

ಜೀವಸತ್ವಗಳ ಕೊರತೆಯಿಂದ ಸಮಸ್ಯೆ: ಜೀವಸತ್ವಗಳ ಮತ್ತು ಖನಿಜಾಂಶಗಳ ಕೊರತೆಯಿಂದಾಗಿ ರಕ್ತಹೀನತೆ, ಥೈರಾಯ್ಡ್ ಸಮಸ್ಯೆ, ವಸಡುಗಳಲ್ಲಿ ರಕ್ತಸ್ರಾವ, ಮೂಳೆಗಳ ಟೊಳ್ಳಾಗುವಿಕೆ, ದಂತಕ್ಷಯ ಮೊದಲಾದ ಸಮಸ್ಯೆಗಳಿಗೆ ತುತ್ತಾಗಬಹುದು.

ಕರುಳಿನ ಸೂಕ್ಷ್ಮಾಣುಗಳಲ್ಲಿ ವ್ಯತ್ಯಾಸ: ಜಂಕ್ ಆಹಾರದಲ್ಲಿರುವ ಅಂಶಗಳು ಕರುಳಿನಲ್ಲಿನ ಸ್ನೇಹಪರ ಸೂಕ್ಷ್ಮಾಣುಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತವೆ. ಇದು ಮಗುವಿನ ರೋಗನಿರೋಧಕ ವ್ಯವಸ್ಥೆ ದುರ್ಬಲಗೊಳಿಸಬಹುದು.

ನಿದ್ರಾಹೀನತೆ: ಕೆಫಿನ್‌ನಂತಹ ಪದಾರ್ಥಗಳಿರುವ ಸಂಸ್ಕರಿಸಿದ ಪಾನೀಯಗಳ ಸೇವನೆಯಿಂದ ನಿದ್ದೆಗೂ ಭಂಗ ತರಬಹುದು. ಶಾಲಾಚಟುವಟಿಕೆಗಳ ಮೇಲೆ ಗಮನವಿಡಲು ಅಸಮರ್ಥರಾಗಬಹುದು. ❖

ಪೋಷಕರು ಏನು ಮಾಡಬಹುದು?

- ಮಗು ಹೊಸದನ್ನು ಕಲಿಯುವ ಮೊದಲ ಎರಡು ವರ್ಷಗಳಿಂದಲೇ ಪೋಷಕರು ಎಚ್ಚರವಹಿಸಬೇಕು. ಮಕ್ಕಳಿಗೆ ಮನೆಯಲ್ಲಿಯೇ ತಯಾರಿಸಿದ ಆಹಾರವನ್ನು ರೂಢಿ ಮಾಡಿಸಿ.
- ಮನೆಯ ಆಹಾರದಲ್ಲಿ ವೈವಿಧ್ಯ ಇರುವಂತೆ ಗಮನ ವಹಿಸಿ.
- ವಿಧವಿಧವಾದ ಹಣ್ಣುಗಳನ್ನು ತುಂಡರಿಸಿ, ಅಂದವಾಗಿ, ಆಕರ್ಷಕವಾಗಿ ಜೋಡಿಸಿಟ್ಟು ತಿನ್ನಲು ಪ್ರೇರೇಪಿಸಿ.
- ತರಕಾರಿಗಳ ಮಹತ್ವವನ್ನು ಮಕ್ಕಳಿಗೆ ತಿಳಿಸುತ್ತಾ, ಬಗೆಬಗೆಯ ತರಕಾರಿಗಳ ಸಲಾಡ್, ಪಲ್ಯಗಳನ್ನು ತಿನ್ನಲು ಪ್ರೋತ್ಸಾಹಿಸಿ.
- ಪ್ರಶಂಸೆಯಾಗಿ ಎಂದೂ ಜಂಕ್ ಆಹಾರದ ಆಮಿಷ ತೋರಿಸದಿರಿ.
- ಮನೆಯ ಆಹಾರವನ್ನು ತಿನ್ನುವಂತೆ ಪ್ರೋತ್ಸಾಹಿಸಿ; ಮಧ್ಯೆ ಮಧ್ಯೆ ಜಂಕ್ ಆಹಾರವನ್ನು ಕೊಡುವ ಪದ್ಧತಿ ಬೇಡವೇ ಬೇಡ. (ಉದಾ:ಅನ್ನ- ಹುಳಿಯ ಜೊತೆ ಚಿಪ್ಸ್ ಕೊಡುವುದು.)
- ತೀರ ಆಸೆ ಪಡುವ ಮಕ್ಕಳಿಗೆ ಅಪರೂಪಕೊಮ್ಮೆ ಅಂತಹ ಆಹಾರವನ್ನು ಕೊಡಿಸಿ.
- ಮಕ್ಕಳು ಪೋಷಕರನ್ನು ಅನುಕರಿಸುತ್ತಾರೆ. ಹಾಗಾಗಿ ಪೋಷಕರು ಒಳ್ಳೆಯ ಆಹಾರ ಕ್ರಮವನ್ನು ಪಾಲಿಸಿ.

ಪಿಯುಸಿ-ಸಿಇಟಿ ಪರೀಕ್ಷೆ ದಿಕ್ಸೂಚಿ

MATHEMATICS

MULTIPLE CHOICE QUESTIONS:

17) If 1, w, w^2 are three cube roots of unity, then $(1 - w + w^2)(1 + w - w^2)$ is........................

(A) 2 (B) 4
(C) 1 (D) 3

Ans: (B) 4

Expln:- We know $1 + w + w^2 = 0$. $\therefore 1 + w = -w^2$ and $1 + w^2 = -w$.

$\therefore (1 - w + w^2)(1 + w - w^2)$
$= (-2w)(-2w^2) = 4w^3 = 4$.

18) Solve for x

$$\tan^{-1}\left(\frac{1-x}{1+x}\right) = \frac{1}{2}\tan^{-1} x,\ x > 0$$

(A) 1 (B) $\frac{1}{\sqrt{3}}$ (C) $\sqrt{3}$ (D) −1

Ans : (B) $\frac{1}{\sqrt{3}}$

Expln :− $\tan^{-1}\left(\frac{1-x}{1+x}\right) = \frac{1}{2}\tan^{-1} x$

$\therefore 2\tan^{-1}\left(\frac{1-x}{1+x}\right) = \tan^{-1} x,\ x > 0$

Put $x = \tan\theta$. Then $\frac{1-x}{1+x} = \frac{1-\tan\theta}{1+\tan\theta} = \tan\left(\frac{\pi}{4}-\theta\right)$

$\therefore 2\tan^{-1}\tan\left(\frac{\pi}{4}-\theta\right) = \theta$

i.e., $2\left(\frac{\pi}{4}-\theta\right) = \theta \therefore \frac{\pi}{2} = 3\theta$ or $\theta = \frac{\pi}{6}$

$x = \tan\frac{\pi}{6} = \frac{1}{\sqrt{3}}$.

19) The differential equation of the family of parabolas $y^2 = 4ax$, where a is parameter, is

(A) $\frac{dy}{dx} = \frac{y}{2x}$ (B) $\frac{dy}{dx} = -\frac{y}{2x}$

(C) $\frac{dy}{dx} = -\frac{2y}{x}$ (D) $\frac{dy}{dx} = \frac{2y}{x}$

Ans : (A) $\frac{dy}{dx} = \frac{y}{2x}$

Expln :−

$y^2 = 4ax$. $\therefore 2y\frac{dy}{dx} = 4a$ i.e., $\frac{dy}{dx} = \frac{4a}{2y}$

But $4a = \frac{y^2}{x} \therefore \frac{dy}{dx} = \frac{y^2}{2y.x} = \frac{y}{2x}$.

20) If $\frac{dy}{dx} = \frac{y + x\tan\frac{y}{x}}{x}$, then $\sin\frac{y}{x} =$

(A) cx^2 **(B) cx**
(C) cx^3 **(D) log x**

Ans: (B) cx

$\frac{dy}{dx} = \frac{y}{x} + \tan\frac{y}{x}$

Put $\frac{y}{x} = v$ i.e., $y = vx$. Then $\frac{dy}{dx} = v + x\frac{dv}{dx}$

$\therefore v + x\frac{dv}{dx} = v + \tan v$.

i.e., $x\frac{dv}{dx} = \tan v$

$\therefore \frac{dv}{\tan v} = \frac{dx}{x}$ i.e., $\cot v\, dv = \frac{dx}{x}$

Integrating, $\log\sin v = \log x + \log c$

$\sin v = cx$

$\sin\frac{y}{x} = cx$

21) The maximum area of arectangle inscribed in the circlr (x+1)2 + (y-3)2- 64 is

A) 64 sq unit B) 72 sq uits
C) 128 sq units D) 8 sq unit

Ans:-C

Expln:- We know that of all the rectangles inscribed in a given circle, the square has the maximum area when the side is equal to $2x\frac{a}{\sqrt{2}}$, 'a' being the radius of the circle.

Here radius of the circle is 8 ie the side of the square is $8\sqrt{2}$ which has maximum area and **the maximum area of the square is**

$(8\sqrt{2})^2 - 64x2 = 128$ sq. units

22) The general solution of the D.E. $\left(\frac{dy}{dx}\right) + y.\ g'(x) = g(x).\ g'(x)$, where g (x) is a given function of x is

(A) $g(x) + \log(1 + y + g(x)) = C$
(B) $g(x) + \log(1 + y - g(x)) = C$
(C) $g(x) - \log(1 + y - g(x)) = C$
(D) $g(x) - \log(1 - y + g(x)) = C$

Ans: (B) $g(x) + \log(1 + y - g(x)) = C$

Expln:-

Given, differential equation is of the form $\frac{dy}{dx} + py = Q$.

$\therefore$ Integrating factor is $e^{\int g'(x)dx} = e^{g(x)}$

Solution is $ye^{g(x)} = \int g^{g(x)} g(x) g'(x) + C$

$ye^{g(x)} = \int e^t.\ t\, dt + C$ where $t = g(x)$ $\therefore dt = g'(x)\, dx$

$= e^t(t-1) + C$.

$ye^{g(x)} = e^{g(x)}[g(x) - 1] + C$

$\therefore y = g(x) - 1 + ce^{-g(x)}$

$y + 1 - g(x) = ce^{-g(x)}$

$\log[y + 1 - g(x)] = \log C - g(x)$

$g(x) + \log[y + 1 - g(x)] = C$.

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

CHEMISTRY

10) The lattice site in a pure crystal *cannot* be occupied by

a) molecule b) ion
c) electron d) atom

Ans:-C

11. Cations are present in the interstitial sites in ....

a) Frenkel defect b) Schottky defect
c) vacancy defect d) Metal deficiency defect

Ans: a

12. Schottky defect is observed in crystals when ....

a) some cations move from their lattice site to interstitial sites.
b) equal number of cations and anions are missing from the lattice.
c) some lattice sites are occupied by electrons.
d) some impurity is present in the lattice.

Ans:-b

13. Which of the following is true about the charge acquired by *p*-type semiconductors?

a) positive b) neutral
c) negative
d) depends on concentration of *p* impurity

Ans:- d

14. To get a n-type semiconductor from silicon, it should be doped with a substance with valency..............

a) 2 b) 1
c) 3 d) 5

Ans:- d

15: Which of the following possess net dipole moment?

a) BF_3 b) SO_2
c) CO_2 d) $BeCl_2$

Ans: (b)

Expln:- By seeing geometry, we can easily find out the net dipole moment $BeCl_2$ and CO_2 have linear geometry, BF_3 has triangular planar geometry with zero dipole moment. While SO_2 geometry is in a bent shape.



16) The number of -bonds and -bonds present in naphthalene are respectively

a. 5, 19 b. 6, 19
c. 5, 20 d. 5, 11

Ans: (a)

Expln:- We can find out by drawing the structure of Naphthalene.



The number of -bonds and -bonds are 5, 19 respectively.

17) On e mole of ammonia was completely absorbed in one litre solution each of (1) 1 M HCl, (2) 1 M CH_3COOH and (3) 1 M H_2SO_4 at 298 K.

The decreasing order for the pH of the resulting solutions is (Given: Kb(NH3) = 4.74)

a) 2 > 3 > 1 b) 1 > 2 > 3
c) 2 > 1 > 3 d) 3 > 2 > 1

Soln: C

Decreasing order of pH →
$CH_3COOH > HCl > H_2SO_4$
(2) (1) (3)
Increasing acidic strength →

18) 5.5 mg of nitrogen gas dissolves in 180 g of water at 273 K and one atm pressure due to nitrogen gas. The mole fraction of nitrogen in 180 g of water at 5 atm nitrogen pressure is approximately

(a) 1×10^{-6} (b) 1×10^{-5}
(c) 1×10^{-3} (d) 1×10^{-4}

Soln: (c) Solubility of a gas ∝ mole fraction

$^{n}N_2 = \frac{5.5 \times 10^{-3}}{28} = 1.96 \times 10^{-4}$ at 1 atm

Now, p ∝ mole fraction

Then at 5atm the mole fraction will increase 5 times.

Hence, $5 \times 1.96 \times 10^{-4} = 9.8 \times 10^{-4}$
$\approx 10 \times 10^{-4} = 1.0 \times 10^{-3}$

19. Plot of Maxwell's distribution of velocities is given below:



Which of the following is correct about this plot?

(A) $f_1 > f_2$ (B) $V_1 < V_2$
(C) $T_1 < T_2$ (D) $T_1 > T_2$

Ans: (D) $T_1 > T_2$

Molecular velocity increases with temperature as $V_1 > V_2$.

Therefore T_1 must be greater than T_2.

20. The lattice site in a pure crystal *cannot* be occupied by

a) molecule b) ion
c) electron d) atom

Ans:-C

ಬಿಲ್ಕಿಸ್ ಬಾನೊ ಪ್ರಕರಣ: ಅವಧಿಪೂರ್ವ ಬಿಡುಗಡೆ ಪ್ರಶ್ನಿಸಿ ಅರ್ಜಿ ಸಲ್ಲಿಕೆ

ಗುಜರಾತ್ ಸರ್ಕಾರಕ್ಕೆ 'ಸುಪ್ರೀಂ' ನೋಟಿಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ತನ್ನ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿದ್ದ ಅಪರಾಧಿಗಳ ಅವಧಿಪೂರ್ವ ಬಿಡುಗಡೆ ಪ್ರಶ್ನಿಸಿ ಬಿಲ್ಕಿಸ್ ಬಾನೊ ಸಲ್ಲಿಸಿರುವ ಅರ್ಜಿಯ ಸಂಬಂಧ ಪ್ರತಿಕ್ರಿಯೆ ನೀಡುವಂತೆ ಸುಪ್ರೀಂ ಕೋರ್ಟ್ ಸೋಮವಾರ ಗುಜರಾತ್ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಿದೆ.

2002ರ ಗೋಧ್ರೋತ್ತರ ಗಲಭೆಯ ವೇಳೆ ಬಿಲ್ಕಿಸ್ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಲಾಗಿತ್ತು. ಅವರ ಕುಟುಂಬದ 7 ಮಂದಿಯನ್ನು ಹತ್ಯೆ ಮಾಡಲಾಗಿತ್ತು.

ಪ್ರಕರಣದ ಕುರಿತು ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆ ನಡೆಸಿದನ್ಯಾಯಮೂರ್ತಿಗಳಾದ ಕೆ.ಎಂ.ಜೋಸೆಫ್ ಹಾಗೂ ಬಿ.ವಿ.ನಾಗರತ್ನ ಅವರನ್ನೊಳಗೊಂಡ ದ್ವಿಸದಸ್ಯ ನ್ಯಾಯಪೀಠ 'ಪ್ರಕರಣವು ಜಟಿಲತೆಯಿಂದ ಕೂಡಿದೆ. ಇದರ ವಿಸ್ತೃತ ವಿಚಾರಣೆ ನಡೆಸುವ ಅಗತ್ಯವಿದೆ' ಎಂದು ತಿಳಿಸಿದೆ.

ಅಪರಾಧಿಗಳ ಕೃತ್ಯವು ಘೋರ ಎಂದು ಅಭಿಪ್ರಾಯಪಟ್ಟಿರುವ ನ್ಯಾಯಪೀಠವು, 'ಈ ಪ್ರಕರಣದಲ್ಲಿ ನಾವು ಭಾವನೆಗಳ ಆಧಾರದಲ್ಲಿ ಯಾವುದೇ ನಿರ್ಣಯ ಕೈಗೊಳ್ಳುವುದಿಲ್ಲ. ಎಲ್ಲವನ್ನೂ ಕಾನೂನಿನ ಅಡಿಯಲ್ಲೇ ತೀರ್ಮಾನಿಸಲಿದ್ದೇವೆ' ಎಂದಿದೆ.

'ಕೊಲೆಗೆ ಸಂಬಂಧಿಸಿದ ಇತರ ಕೆಲ ಪ್ರಕರಣಗಳಲ್ಲಿನ ಅಪರಾಧಿಗಳು ಇನ್ನೂ ಜೈಲಿನಲ್ಲಿದ್ದಾರೆ. ಹೀಗಿರುವಾಗ ಬಿಲ್ಕಿಸ್ ಪ್ರಕರಣದಲ್ಲಿ ಕಾನೂನಿನ ಮಾನದಂಡಗಳನ್ನು ಏಕರೂಪವಾಗಿ ಅನ್ವಯಿಸಲಾಗಿದೆಯೇ ಎಂಬುದು ನ್ಯಾಯಪೀಠಕ್ಕೆ ಗೊತ್ತಾಗಬೇಕಿದೆ. ಪ್ರತಿಯೊಬ್ಬ ಅಪರಾಧಿಯು ಎಷ್ಟು ಕಾಲ ಜೈಲು ಶಿಕ್ಷೆ ಅನುಭವಿಸಿದ್ದಾನೆ ಎಂಬುದೂ ತಿಳಿಯಬೇಕಿದೆ' ಎಂದು ಹೇಳಿದೆ.

'ಅಪರಾಧಿಗಳನ್ನು ಬಿಡುಗಡೆಗೊಳಿಸಿರುವುದಕ್ಕೆ ಸಂಬಂಧಿಸಿದ ಅಗತ್ಯ ದಾಖಲೆಗಳನ್ನು ಮುಂದಿನ ವಿಚಾರಣೆ ವೇಳೆ ನ್ಯಾಯಪೀಠಕ್ಕೆ ಸಲ್ಲಿಸಬೇಕು' ಎಂದು ಕೇಂದ್ರ ಗೃಹ ಸಚಿವಾಲಯ ಹಾಗೂ ಗುಜರಾತ್ ಸರ್ಕಾರಕ್ಕೆ ನಿರ್ದೇಶಿಸಿದೆ.

ನ್ಯಾಯಪೀಠವು ವಿಚಾರಣೆಯನ್ನು ಏಪ್ರಿಲ್ 18ಕ್ಕೆ ಮುಂದೂಡಿದೆ.

ಬಿಜೆಪಿ ಸಂಸದ, ಶಾಸಕನೊಂದಿಗೆ ವೇದಿಕೆ ಹಂಚಿಕೊಂಡ ಅತ್ಯಾಚಾರ ಅಪರಾಧಿ

ಅಹಮದಾಬಾದ್: ಬಿಲ್ಕಿಸ್ ಬಾನೊ ಸಾಮೂಹಿಕ ಅತ್ಯಾಚಾರ ಪ್ರಕರಣದ 11 ಅಪರಾಧಿಗಳಲ್ಲಿ ಒಬ್ಬರಾದ ಶೈಲೇಶ್ ಭಟ್ ಜೊತೆ ಸರ್ಕಾರಿ ಕಾರ್ಯಕ್ರಮದಲ್ಲಿ ಬಿಜೆಪಿ ಸಂಸದ ಮತ್ತು ಸ್ಥಳೀಯ ಶಾಸಕ ವೇದಿಕೆ ಹಂಚಿಕೊಂಡಿರುವುದು ವಿವಾದಕ್ಕೆ ಕಾರಣವಾಗಿದೆ.

ಬಿಜೆಪಿ ಸಂಸದ ಜಸ್ವಂತ್‌ಸಿನ್ಹಾ ಭಭೋರ್ ಮತ್ತು ಅವರ ಸಹೋದರ, ಲಿಮ್ಖೇಡಾದ ಬಿಜೆಪಿ ಶಾಸಕ ಶೈಲೇಶ್ ಭಭೋರ್ ಅವರು ದಾಹೋದ್ ಜಿಲ್ಲೆಯ ಲಿಮ್ಖೇಡಾ, ಸಿಂಗ್ವಾಡ್ ಮತ್ತು ಝಲೋದ್ ತಾಲ್ಲೂಕಿನ 64 ಹಳ್ಳಿಗಳಿಗೆ ಗುಜರಾತ್‌ನ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಯೋಜನೆಯಡಿ ಕುಡಿಯುವ ನೀರು ಸರಬರಾಜು ಮಾಡುವ ಉದ್ದೇಶದಿಂದ ₹ 101.88 ಕೋಟಿ ವೆಚ್ಚದ ಯೋಜನೆಗೆ ಶಂಕುಸ್ಥಾಪನೆ ನೆರವೇರಿಸುವ ಸಮಾರಂಭದಲ್ಲಿ ಅಪರಾಧಿ ಶೈಲೇಶ್ ಭಟ್ ಮೊದಲ ಸಾಲಿನಲ್ಲಿ ಕುಳಿತಿದ್ದ ವಿಡಿಯೊ ಮತ್ತು ಚಿತ್ರಗಳು ಚರ್ಚೆಯನ್ನು ಹುಟ್ಟುಹಾಕಿವೆ.

11 ಅಪರಾಧಿಗಳ ಅವಧಿಪೂರ್ವ ಬಿಡುಗಡೆ ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ವಿಚಾರಣೆಗೆ ತೆಗೆದುಕೊಳ್ಳುವುದಾಗಿ ಹೇಳಿರುವ ಬೆನ್ನಲ್ಲೇ ಈ ಪ್ರಕರಣ ಬೆಳಕಿಗೆ ಬಂದಿದೆ.

ಮದುವೆಗೆ ಏಕರೂಪ ಕನಿಷ್ಠ ವಯಸ್ಸು ನಿಗದಿ ಕೋರಿದ್ದ ಅರ್ಜಿ ವಜಾ

ನವದೆಹಲಿ (ಪಿಟಿಐ): ಪುರುಷರು ಮತ್ತು ಮಹಿಳೆಯರ ವಿವಾಹಕ್ಕೆ ಕನಿಷ್ಠ 21 ವರ್ಷ ವಯಸ್ಸು ನಿಗದಿಪಡಿಸುವಂತೆ ಕೋರಿ ಸಲ್ಲಿಸಿದ್ದ ಅರ್ಜಿ ಸ್ವೀಕರಿಸಲು ಸುಪ್ರೀಂ ಕೋರ್ಟ್ ಸೋಮವಾರ ನಿರಾಕರಿಸಿದೆ.

ಈ ಅರ್ಜಿ ಮಾನ್ಯ ಮಾಡಿದರೆ ವಯೋಮಿತಿ ನಿಗದಿಗೆ ಕಾನೂನು ಮಾಡಲು ಸಂಸತ್‌ಗೆ ನಿರ್ದೇಶನ ನೀಡಿದಂತಾಗುತ್ತದೆ ಎಂದು ಹೇಳಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಹಾಗೂ ನ್ಯಾಯಮೂರ್ತಿಗಳಾದ ಪಿ.ಎಸ್.ನರಸಿಂಹ ಮತ್ತು ಜೆ.ಬಿ. ಪಾರ್ದೀವಾಲ ಅವರಿದ್ದ ಪೀಠ ಈ ವಿಷಯ ಶಾಸನಸಭೆ ಪರಿಮಿತಿಗೆ ಒಳಪಡುತ್ತದೆ ಎಂದು ತಿಳಿಸಿದೆ.

ಪುರುಷರು ಹಾಗೂ ಮಹಿಳೆಯರ ವಿವಾಹದ ಕನಿಷ್ಠ ವಯಸ್ಸು ಒಂದೇ ಇರಬೇಕು ಎಂದು ಕೋರಿ ವಕೀಲ ಅಶ್ವಿನ್ ಉಪಾಧ್ಯಾಯ ಅವರು ಸಲ್ಲಿಸಿದ್ದ ಮತ್ತೊಂದು ಅರ್ಜಿ ವಜಾಗೊಳಿಸಿದ್ದ ಫೆ.20ರ ಆದೇಶವನ್ನು ಸುಪ್ರೀಂ ಕೋರ್ಟ್ ಉಲ್ಲೇಖಿಸಿದೆ.

ಕೇಂದ್ರದ ಪರ ಹಾಜರಾದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, 'ಇದು ಶಾಸನ ಸಭೆ ವ್ಯಾಪ್ತಿಯಲ್ಲಿದೆ' ಎಂದರು.

ನ್ಯಾಯಾಲಯವು ಈ ಅರ್ಜಿ ಪರಿಗಣಿಸಿದರೆ 'ಕನಿಷ್ಠ ವಯಸ್ಸನ್ನು ನಿಗದಿಪಡಿಸುವಂತೆ ಸಂಸತ್ತಿಗೆ ನಿರ್ದೇಶನ ನೀಡಿದಂತಾಗುತ್ತದೆ' ಎಂದು ಸಿಜೆಐ ಅಭಿಪ್ರಾಯಪಟ್ಟರು. ಶಾಹಿದಾ ಖುರೇಶಿ ಎಂಬುವರು ಸಲ್ಲಿಸಿದ ಅರ್ಜಿಯಲ್ಲಿ ಪುರುಷರಿಗೆ ಸಮಾನವಾಗಿ ಮಹಿಳೆಯರ ವಿವಾಹದ ವಯಸ್ಸನ್ನು 21 ವರ್ಷಕ್ಕೆ ಹೆಚ್ಚಿಸುವಂತೆ ಕೋರಿದ್ದರು.

ಕವಿತಾಗೆ ಮಧ್ಯಂತರ ಪರಿಹಾರ ನೀಡಲು 'ಸುಪ್ರೀಂ' ನಕಾರ

ನವದೆಹಲಿ: ದೆಹಲಿ ಅಬಕಾರಿ ನೀತಿಗೆ ಸಂಬಂಧಿಸಿದಂತೆ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯವು (ಇ.ಡಿ) ನೀಡಿರುವ ಸಮನ್ಸ್‌ಗೆ ಸಂಬಂಧಿಸಿದಂತೆ ಬಿಆರ್‌ಎಸ್ ಶಾಸಕಿ ಕೆ. ಕವಿತಾ ಅವರಿಗೆ ಯಾವುದೇ ಮಧ್ಯಂತರ ಪರಿಹಾರವನ್ನು ನೀಡಲು ಸುಪ್ರೀಂ ಕೋರ್ಟ್ ಸೋಮವಾರ ನಿರಾಕರಿಸಿದೆ.

ಆದರೆ, ನ್ಯಾಯಮೂರ್ತಿ ಅಜಯ್ ರಸ್ತೋಗಿ ಅವರ ನೇತೃತ್ವದ ನ್ಯಾಯ ಪೀಠವು, ತನಿಖಾ ಸಂಸ್ಥೆಯ ಕಚೇರಿಯಲ್ಲಿ ಮಹಿಳೆಯನ್ನು ವಿಚಾರಣೆಗೆ ಕರೆಯಬಹುದೇ ಎಂಬ ಕಾನೂನು ಪ್ರಶ್ನೆಯನ್ನು ಪರಿಶೀಲಿಸಲು ಒಪ್ಪಿಕೊಂಡಿತು.

ಕವಿತಾ ಅವರ ಮನವಿ ಅರ್ಜಿಯನ್ನು ಬಾಕಿ ಉಳಿದಿರುವ ಅರ್ಜಿದಾರರಾದ ನಳಿನಿ ಚಿದಂಬರಂ ಹಾಗೂ ಟಿಎಂಸಿ ಸಂಸದ ಅಭಿಷೇಕ್ ಬ್ಯಾನರ್ಜಿ ಅವರ ಪತ್ನಿ ರುಚಿರಾ ಬ್ಯಾನರ್ಜಿ ಅವರ ಅರ್ಜಿಗಳೊಂದಿಗೆ ಸೇರಿಸಿ ವಿಚಾರಣೆ ಮಾಡಲು ನ್ಯಾಯಾಲಯವು ಆದೇಶಿಸಿದ್ದು, ಮೂರು ವಾರಗಳ ಬಳಿಕ ಅರ್ಜಿಗಳ ಪರಿಶೀಲನೆ ನಡೆಸುವುದಾಗಿ ತಿಳಿಸಿದೆ.

ಕವಿತಾ ಪರ ಹಾಜರಿದ್ದ ಹಿರಿಯ ವಕೀಲ ಕಪಿಲ್ ಸಿಬಲ್, ಕವಿತಾ ಅವರಿಗೆ ದೆಹಲಿಯಲ್ಲಿ ವಿಚಾರಣೆಗಾಗಿ ಸಮನ್ಸ್ ಜಾರಿ ಮಾಡಲಾಗಿದ್ದು, ಅವರನ್ನು ಇಲ್ಲಿ ಅಥವಾ ಅವರ ನಿವಾಸದಲ್ಲಿ ಪ್ರಶ್ನಿಸಲಾಗುವುದೇ ಎಂಬ ಪ್ರಶ್ನೆಗೆ ಸಂಬಂಧಿಸಿದೆ ಎಂದು ವಾದಿಸಿದರು.

ಕವಿತಾ ಹಾಗೂ ಇತರರ ಅರ್ಜಿಗಳನ್ನು ಒಟ್ಟಾಗಿ ವಿಚಾರಣೆಗೊಳಪಡಿಸುವುದನ್ನು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ವಿರೋಧಿಸಿದ್ದು, ಬ್ಯಾನರ್ಜಿ ಅವರ ಪ್ರಕರಣವು ಭಿನ್ನವಾಗಿದೆ ಎಂದರು.

ಇ.ಡಿ ಪರ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ. ರಾಜು ಅವರು, ಕವಿತಾ ಅವರ ಮನವಿಯು ಫಲಪ್ರದದಾಯಕವಾಗಿಲ್ಲ ಎಂದು ನ್ಯಾಯಪೀಠಕ್ಕೆ ತಿಳಿಸಿದರು. ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದಂತೆ ಈ ಹಿಂದೆ ಕವಿತಾ ಅವರನ್ನು ಸಿಬಿಐ ಹಾಗೂ ಇ.ಡಿ ವಿಚಾರಣೆಗೊಳಪಡಿಸಿತ್ತು. ಈ ಪ್ರಕರಣದಲ್ಲಿ ದೆಹಲಿಯ ಮಾಜಿ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಸೇರಿದಂತೆ ಹಲವು ಆರೋಪಿಗಳನ್ನು ಈಗಾಗಲೇ ಬಂಧಿಸಲಾಗಿದೆ.

ಶಾಸಕ ಮಾಡಾಳ್ ಬಂಧನ

ಒಂದನೇ ಪುಟದಿಂದ

ಬೆಂಗಳೂರಿನತ್ತ ಬರುವಾಗ ಸೆರೆ:

ಚನ್ನಗಿರಿಯಲ್ಲಿ ಸೋಮವಾರ ವಿವಿಧ ಕಾಮಗಾರಿಗಳ ಉದ್ಘಾಟನೆ, ಭೂಮಿಪೂಜೆಯಲ್ಲಿ ಪಾಲ್ಗೊಂಡಿದ್ದ ವಿರೂಪಾಕ್ಷಪ್ಪ, 'ಪ್ರಕರಣದಲ್ಲಿ ವಿರೋಧಿಗಳ ಕೈವಾಡವಿದೆ. ಆರೋಪ ಮುಕ್ತನಾಗಿ ಹೊರಬರುತ್ತೇನೆ' ಎಂದು ಭಾವುಕರಾಗಿದ್ದರು.

ನಂತರ ಮಾಡಾಳ್‌ನಲ್ಲಿರುವ ಮನೆಗೆ ಮರಳಿದ್ದರು. ನಿರೀಕ್ಷಣಾ ಜಾಮೀನು ಅರ್ಜಿ ತಿರಸ್ಕಾರಗೊಂಡಿರುವ ಸುದ್ದಿ ತಿಳಿಯುತ್ತಿದ್ದಂತೆಯೇ ಬೆಂಗಳೂರಿನತ್ತ ಹೊರಟಿದ್ದರು. ಹೈಕೋರ್ಟ್ ಆದೇಶ ಹೊರಬೀಳುತ್ತಿದ್ದಂತೆ ಕಾರ್ಯಾಚರಣೆ ಆರಂಭಿಸಿದ್ದ ಲೋಕಾಯುಕ್ತ ಪೊಲೀಸರು ಬೆಂಗಳೂರು, ಚನ್ನಗಿರಿಯಲ್ಲಿ ಶಾಸಕರ ಪತ್ತೆಗಾಗಿ ಶೋಧ ನಡೆಸುತ್ತಿದ್ದರು.

'ವಿರೂಪಾಕ್ಷಪ್ಪ ಚಲನವಲನದ ಮೇಲೆ ನಿಗಾ ಇರಿಸಲಾಗಿತ್ತು. ಅವರು ಬೆಂಗಳೂರಿನತ್ತ ಬರುತ್ತಿರುವ ಮಾಹಿತಿ ಆಧರಿಸಿ ನಮ್ಮ ಅಧಿಕಾರಿಗಳ ತಂಡವೊಂದು ತುಮಕೂರಿನ ಕ್ಯಾತ್ಸಂದ್ರ ಟೋಲ್ ಗೇಟ್ ಬಳಿ ಕಾದಿತ್ತು. ಟೋಲ್ ಗೇಟ್‌ನಲ್ಲೇ ಶಾಸಕರ ಕಾರನ್ನು ಸುತ್ತುವರೆದು ವಶಕ್ಕೆ ಪಡೆಯಲಾಯಿತು. ನಂತರ ಬಂಧನದ ಪ್ರಕ್ರಿಯೆ ಪೂರ್ಣಗೊಳಿಸಿ ಬೆಂಗಳೂರಿಗೆ ಕರೆತರಲಾಯಿತು' ಎಂದು ಲೋಕಾಯುಕ್ತದ ಹಿರಿಯ ಅಧಿಕಾರಿಗಳು 'ಪ್ರಜಾವಾಣಿ'ಗೆ ತಿಳಿಸಿದರು.

ವಿಚಾರಣೆಗೆ ಸಿದ್ಧತೆ: ಆರೋಪಿಯನ್ನು ಬೆಂಗಳೂರಿಗೆ ಕರೆತಂದ ಬಳಿಕ ಬೌರಿಂಗ್ ಆಸ್ಪತ್ರೆಯಲ್ಲಿ ವೈದ್ಯಕೀಯ ತಪಾಸಣೆ ನಡೆಸಲಾಯಿತು. ತಾನು ಹೃದ್ರೋಗಿಯಾಗಿದ್ದು, ಎದೆ ನೋಯುತ್ತಿದೆ ಎಂಬುದಾಗಿ ಶಾಸಕರು ವೈದ್ಯಕೀಯ ತಪಾಸಣೆ ವೇಳೆ ಅಳಲು ತೋಡಿಕೊಂಡಿದ್ದರು. ಆದರೆ, ವೈದ್ಯರು ಆರೋಗ್ಯ ಸ್ಥಿತಿ ಸರಿ ಇರುವುದಾಗಿ ವರದಿ ನೀಡಿದರು. ನಂತರ ಲೋಕಾಯುಕ್ತ ಕಚೇರಿಗೆ ಕರೆ ತಂದಿದ್ದು, ವಿಚಾರಣೆಗೆ ಸಿದ್ಧತೆ ನಡೆಸಲಾಗುತ್ತಿದೆ.

ನಿರೀಕ್ಷಣಾ ಜಾಮೀನು ಅರ್ಜಿ ವಜಾ

ಒಂದನೇ ಪುಟದಿಂದ

'ಮಧ್ಯಂತರ ನಿರೀಕ್ಷಣಾ ಜಾಮೀನು ಮಂಜೂರು ಮಾಡುವಾಗ ಪ್ರಾಸಿಕ್ಯೂಷನ್ ಬಳಿ ಆರೋಪಿ ವಿರೂಪಾಕ್ಷಪ್ಪ ವಿರುದ್ಧ ಯಾವುದೇ ಸಾಕ್ಷ್ಯ ಇರಲಿಲ್ಲ. ಸೂಕ್ತ ಸಾಕ್ಷ್ಯಗಳನ್ನು ಸಂಗ್ರಹಿಸಲು ಆರೋಪಿ ಬಂಧಿಸಿ ವಿಚಾರಣೆ ನಡೆಸುವ ಅವಶ್ಯ ಇದೆ ಎಂಬುದನ್ನು ಪ್ರಾಸಿಕ್ಯೂಷನ್ ವಿಚಾರಣೆ ವೇಳೆ ನ್ಯಾಯಪೀಠಕ್ಕೆ ಮನದಟ್ಟು ಮಾಡಿಕೊಟ್ಟಿದೆ. ವಿರೂಪಾಕ್ಷಪ್ಪ ಅವರು ಲಂಚಕ್ಕೆ ಬೇಡಿಕೆ ಇರಿಸಿದ್ದರು ಮತ್ತು ಈ ಲಂಚದ ಹಣ ಪಡೆಯುವಲ್ಲಿ ಅವರ ಪುತ್ರ ಪ್ರಶಾಂತ್ ಪಾತ್ರ ವಹಿಸಿದ್ದಾರೆ ಎಂಬುದನ್ನು ಮನವರಿಕೆ ಮಾಡಿದೆ. ಹಾಗಾಗಿ, ಆರೋಪಿಯನ್ನು ಬಂಧಿಸಿಯೇ ವಿಚಾರಣೆ ನಡೆಸುವ ಅಗತ್ಯವಿದೆ' ಎಂದು ನ್ಯಾಯಪೀಠ ತನ್ನ 24 ಪುಟಗಳ ಆದೇಶದಲ್ಲಿ ಅಭಿಪ್ರಾಯ ಪಟ್ಟಿದೆ. ಲೋಕಾಯುಕ್ತ ಪರ ಹಿರಿಯ ವಕೀಲ ಅಶೋಕ ಹಾರನಹಳ್ಳಿ ಮತ್ತು ಬಿ.ಬಿ. ಪಾಟೀಲ್ ವಾದ ಮಂಡಿಸಿದ್ದರು.

ಎನ್‌ಸಿಇಆರ್‌ಟಿ: 2024–25ನೇ ಸಾಲಿನಿಂದ ಪರಿಷ್ಕೃತ ಪಠ್ಯಪುಸ್ತಕ



ನವದೆಹಲಿ: ನೂತನ ರಾಷ್ಟ್ರೀಯ ಶಿಕ್ಷಣ ನೀತಿಗೆ (ಎನ್‌ಇಪಿ) ಅನುಗುಣವಾಗಿ ಪರಿಷ್ಕರಿಸಿರುವ ರಾಷ್ಟ್ರೀಯ ಶೈಕ್ಷಣಿಕ ಸಂಶೋಧನಾ ಮತ್ತು ತರಬೇತಿ ಮಂಡಳಿಯ (ಎನ್‌ಸಿಇಆರ್‌ಟಿ) ಹೊಸ ಪಠ್ಯಪುಸ್ತಕಗಳನ್ನು 2024–25ನೇ ಶೈಕ್ಷಣಿಕ ಸಾಲಿನಲ್ಲಿ ಶಾಲೆಗಳಿಗೆ ಪರಿಚಯಿಸುವ ಸಾಧ್ಯತೆ ಇದೆ ಎಂದು ಕೇಂದ್ರ ಶಿಕ್ಷಣ ಸಚಿವಾಲಯದ ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (ಎನ್‌ಸಿಎಫ್) ಅಡಿಯಲ್ಲಿ ಈ ಪಠ್ಯಪುಸ್ತಕಗಳನ್ನು ಪರಿಷ್ಕರಿಸಲಾಗುತ್ತಿದೆ ಎಂದೂ ಹೇಳಿದ್ದಾರೆ.

'ಡಿಜಿಟಲ್ ಕಲಿಕೆಯ ಮಹತ್ವವು ಕೋವಿಡ್ ಪಿಡುಗಿನ ಸಂದರ್ಭದಲ್ಲಿ ಅರಿವಾಗಿದೆ. ಎಲ್ಲಾ ಹೊಸ ಪಠ್ಯಪುಸ್ತಕಗಳು ಏಕಕಾಲದಲ್ಲಿ ಡಿಜಿಟಲ್ ರೂಪದಲ್ಲೂ ಲಭ್ಯವಾಗಲಿದೆ. ಯಾರು ಬೇಕಾದರೂ ಅವುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ' ಎಂದೂ ವಿವರಿಸಿದ್ದಾರೆ.

ಪಠ್ಯಪುಸ್ತಕಗಳು ಸ್ಥಿರವಾಗಿರಬಾರದು. ಅವುಗಳನ್ನು ನಿಯಮಿತವಾಗಿ ಪರಿಷ್ಕರಿಸುವುದನ್ನು ಖಚಿತಪಡಿಸಿಕೊಳ್ಳಲು ಸಾಂಸ್ಥಿಕ ಚೌಕಟ್ಟನ್ನು ರಚಿಸಲಾಗುವುದು ಎಂದೂ ತಿಳಿಸಿದ್ದಾರೆ.

:ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ ಬಾಗಲಕೋಟೆ:
ಕಾರ್ಯನಿರ್ವಾಹಕ ಇಂಜಿನೀಯರವರ ಕಾರ್ಯಾಲಯ, ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ ವಿಭಾಗ ನಂ: 01, ಬಾಗಲಕೋಟೆ–587102. ದೂರವಾಣಿ ಸಂಖ್ಯೆ: 08354–295372 E-mail: btdadn1@gmail.com

ಟೆಂಡರ್ ಪ್ರಕಟಣೆ ಸಂಖ್ಯೆ: ಕಾನಿಇಂ/ಬಾ.ಪ.ಅ.ಪ್ರಾ/ವಿ–1/ಪಿಬಿ–01/ಟೆ.ಪ್ರ.ಸಂಖ್ಯೆ–17/2022–23/5196 ದಿನಾಂಕ:24/03/2023

ಅಲ್ಪಾವಧಿ ಟೆಂಡರ್ ಪ್ರಕಟಣೆ–17 (ಇ–ಪ್ರೋಕ್ಯೂರಮೆಂಟ್ ಮುಖಾಂತರ)

ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಅಡಿಯಲ್ಲಿನ ವಿವಿಧ ಕಾಮಗಾರಿಗಳಿಗೆ ಅರ್ಹ ನೊಂದಾಯಿತ ಗುತ್ತಿಗೆದಾರರಿಂದ ಶೇಕಡಾವಾರು ಟೆಂಡರ್‌ಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಆಹ್ವಾನಿಸಲಾಗಿದೆ. ಇಂಡೆಂಟ್ ನಂ: 1391, 1392, 1386, 1385, 1387, 1388, 1393 ಮತ್ತು 1394 ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತವು ರೂ. 79.75 ಲಕ್ಷದಿಂದ 419.18 ಲಕ್ಷಗಳು ಇರುತ್ತದೆ.

ಸದರಿ ಕಾಮಗಾರಿಯ ಟೆಂಡರಿನಲ್ಲಿ ಭಾಗವಹಿಸಲು ಇಚ್ಛಿಸುವವರು ಟೆಂಡರ್ ವಿವರ ಹಾಗೂ ಕಾಮಗಾರಿಯ ವಿವರಗಳಿಗಾಗಿ ಇ–ಪ್ರೋಕ್ಯೂರ್‌ಮೆಂಟ್ ವೆಬ್‌ಸೈಟ್ www.eproc.karnataka.gov.in ಮೂಲಕ ವೀಕ್ಷಿಸಬಹುದು. ದಿನಾಂಕ:05.04.2023 ಸಂಜೆ 5.00 ಘಂಟೆವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್‌ನ್ನು ದಿನಾಂಕ: 06.04.2023 ರಂದು ಸಂಜೆ 5.01 ಘಂಟೆಗೆ (ಸಾಧ್ಯವಾದಲ್ಲಿ) ತೆರೆಯಲಾಗುವುದು. ಹೆಚ್ಚಿನ ವಿವರಗಳಿಗಾಗಿ ಕಛೇರಿಯ ಅವಧಿಯಲ್ಲಿ ದೂರವಾಣಿ ಸಂಖ್ಯೆ:08354–295372 ಸಂಪರ್ಕಿಸ ಬಹುದಾಗಿದೆ.

ಸಹಿ/–ಕಾರ್ಯನಿರ್ವಾಹಕ ಇಂಜೀನಿಯರರು, ಬಾ.ಪ.ಅ.ಪ್ರಾ., ವಿಭಾಗ ನಂ: 01, ಬಾಗಲಕೋಟೆ.

DIPR/BGK/RO-NO-1048/KSMCA/2022-23

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ ನಂ. 1
ಹೇಮಾವತಿ ಬಲಮೇಲ್ದಂಡೆ ನಾಲಾ ವಿಭಾಗ, ಗೊರೂರು

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ 26/2022–23 ದಿನಾಂಕ 23.03.2023

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ನಂ.1 ಹೇಮಾವತಿ ಬಲಮೇಲ್ದಂಡೆ ನಾಲಾ ವಿಭಾಗ, ಗೊರೂರು ಹಾಸನ ಜಿಲ್ಲೆ, ಇವರಿಂದ ಕಾವೇರಿ ನೀರಾವರಿ ನಿಗಮದಲ್ಲಿ ನೊಂದಾಯಿತವಾಗಿರುವ ನಿಗಧಿತ ದರ್ಜೆಯ ಗುತ್ತಿಗೆದಾರರಿಂದ ಈ ಅಧಿಸೂಚನೆಯಲ್ಲಿ ತಿಳಿಸಿರುವಂತೆ ಒಟ್ಟು 3 ಕಾಮಗಾರಿಗೆ ಟೆಂಡರ್‌ಅನ್ನು ಇ–ಪ್ರೊಕ್ಯೂರ್‌ಮೆಂಟ್ ನಲ್ಲಿ ಆಹ್ವಾನಿಸಲಾಗಿದೆ. ಈ ಕಾಮಗಾರಿಗೆ ಟೆಂಡರ್ ಸಲ್ಲಿಸುವ ಗುತ್ತಿಗೆದಾರರು ಟೆಂಡರ್‌ಗಿಟ್ಟ ಕನಿಷ್ಠ ಮೊತ್ತ ರೂ. 84.56 ಲಕ್ಷ ಮತ್ತು ಗರಿಷ್ಠ ಮೊತ್ತ ರೂ.85.03 ಲಕ್ಷಗಳಾಗಿರುತ್ತದೆ. ಅರ್ಜಿ ಬೆಲೆ E-portal ನಂತೆ ಇರುತ್ತದೆ. ಇ–ಪ್ರೊಕ್ಯೂರ್‌ಮೆಂಟ್ ಅಡಿಯಲ್ಲಿ ಅರ್ಹ ಗುತ್ತಿಗೆದಾರರು ಅಂತರ್ಜಾಲದಲ್ಲಿ ದಿನಾಂಕ 27/03/2023 ರಂದು ಬೆಳಿಗ್ಗೆ 11.00 ಗಂಟೆಯಿಂದ ದಿನಾಂಕ 03/04/2023 ರ ಮಧ್ಯಾಹ್ನ 4.00 ಗಂಟೆಯವರೆಗೆ ಟೆಂಡರ್‌ನ ನಿಗಧಿತ ನಮೂನೆಗಳನ್ನು www.eproc.karnataka.gov.in ನಲ್ಲಿ ಡೌನ್ ಲೋಡ್ ಮಾಡಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗದಿತ ಇ.ಎಂ.ಡಿ. ಯೊಂದಿಗೆ ಅಪ್‌ಲೋಡ್ ಮಾಡಬಹುದಾಗಿದೆ. ಟೆಂಡರ್‌ಅನ್ನು ದಿನಾಂಕ 05/04/2023 ರಂದು ನಂ.1 ಹೇಮಾವತಿ ಬಲಮೇಲ್ದಂಡೆ ನಾಲಾ ವಿಭಾಗ,ಗೊರೂರು ಕಚೇರಿಯಲ್ಲಿ ತೆರೆಯಲಾಗುವುದು. ಹೆಚ್ಚಿನ ಮಾಹಿತಿ ಹಾಗೂ ಇತರೆ ನಿಬಂದನೆಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/– ಎಕ್ಸಿಕ್ಯೂಟಿವ್ ಇಂಜಿನಿಯರ್, ನಂ.1 ಹೇಮಾವತಿ ಬಲಮೇಲ್ದಂಡೆ ನಾಲಾವಿಭಾಗ, ಗೊರೂರು

ವಾಸಾಸಂಇ/ಹಿಸನಿ/ಹಾಸನ/ಎಂಸಿಎ/1316/2022–23

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿತ್ರದುರ್ಗ–577 501.
(ಜಿಲ್ಲಾ ನಗರಾಭಿವೃದ್ಧಿಕೋಶ)
e-mail: dudc_ctg@yahoo.co.in Ph./Fax: 08194-225713
ನಂ.ಜಿ.ನ.ಕೋ./ನಗರೋತ್ಥಾನ ಹಂತ 04/ಟಿ.ಎಸ್.50/2022–23 ದಿ: 24.03.2023

ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿತ್ರದುರ್ಗ ಇವರು ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ–4)ರಡಿ ಶೇಕಡ 5ರ ಪ್ರೋತ್ಸಾಹಧನ ಅನುದಾನದಲ್ಲಿ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ಪುರಸಭೆಯ ಕಾಮಗಾರಿಗಳಿಗೆ ದ್ವಿ ಲಕೋಟೆಯಲ್ಲಿ ಕೆಡಬ್ಲ್ಯೂ–3 ಟೆಂಡರ್ ದಾಸ್ತವೇಜುನಂತೆ, ಪಿ.ಡಬ್ಲ್ಯೂ.ಡಿ ಇಲಾಖೆಯಲ್ಲಿ ನೋಂದಾಯಿಸಿದ ಅರ್ಹ (ಸಿವಿಲ್) 3ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.

ಕಾಮಗಾರಿಗಳ ವಿವರ: 1) ಹೊಸದುರ್ಗ ಪಟ್ಟಣದ ರಿ.ಸರ್ವೇ.ಸಂ.34ರಲ್ಲಿ ಮತ್ತು 32 ರಲ್ಲಿ ನಿವೇಶನ/ವಸತಿ ರಹಿತರಿಗೆ ಮಂಜೂರಾದ 9.20 ಎಕರೆ ಜಾಗದಲ್ಲಿ ಮೂಲಭೂತ ಸೌಕರ್ಯ ಕಲ್ಪಿಸಲು ಅವಶ್ಯಕವಿರುವ ಕುಡಿಯುವ ನೀರು, ವಿದ್ಯುತ್ ಹಾಗೂ ರಸ್ತೆ, ಚರಂಡಿ ನಿರ್ಮಾಣ ಕಾಮಗಾರಿ. ಇಂಡೆಂಟ್ ಸಂ.DMA/2022-23/OW/WORK_INDENT 149412. ಟೆಂಡರ್‌ಗಿಟ್ಟ ಮೊತ್ತ: ರೂ. 52.28 ಲಕ್ಷಗಳು. ಇ.ಎಂ.ಡಿ ಮೊತ್ತ: ರೂ. 104561.00. ಕಾಮಗಾರಿಯ ಅವಧಿ (ಮಳೆಗಾಲ ಸೇರಿ): 6 ತಿಂಗಳ.

ಆಸಕ್ತ ಗುತ್ತಿಗೆದಾರರು ಹೆಚ್ಚಿನ ಮಾಹಿತಿ, ಟೆಂಡರ್ ದಾಖಲೆಗಳು ಮತ್ತು ಇತರೆ ಸೂಚನೆಗಳನ್ನು (www.eproc.karnataka.gov.in). ಡೌನ್‌ಲೋಡ್ ಮಾಡಿಕೊಳ್ಳತಕ್ಕದ್ದು ಹಾಗೂ ಠೇವಣಿ ಮತ್ತು ಟೆಂಡರ್ ಶುಲ್ಕಗಳನ್ನು ಆನ್‌ಲೈನ್‌ನಲ್ಲಿ (www.eproc.karnataka.gov.in). ಪಾವತಿಸತಕ್ಕದ್ದು.

ಟೆಂಡರ್ ವೇಳಾಪಟ್ಟಿ: 1) ಪ್ರಶ್ನೆ / ಮಾಹಿತಿಗಾಗಿ ಸಲ್ಲಿಸುವ ಕೊನೆಯ ದಿನಾಂಕ: 05.04.2023 ಬೆಳಗ್ಗೆ 11:30. 2) ಟೆಂಡರ್ ದಾಖಲೆಯನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 11.04.2023 ಸಂಜೆ 05:30. 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 12.04.2023 ಬೆಳಗ್ಗೆ 11:30. 4) ಹಣಕಾಸು ಬಿಡ್ ತೆರೆಯುವ ದಿನಾಂಕ: ತಾಂತ್ರಿಕ ಬಿಡ್ ಅನುಮೋದನೆ ನಂತರ ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು.

ಟೆಂಡರ್ ನಿಬಂಧನೆಗಳ ಬಗ್ಗೆ ಏನಾದರೂ ಬದಲಾವಣೆಯಾದರೂ ಅಥವಾ ದಿನಾಂಕ ಮುಂದೂಡಿದರು ಸಹ ಈ ಬಗ್ಗೆ ಮಾಹಿತಿಯನ್ನು ಇ–ಪೋರ್ಟಲ್‌ನಲ್ಲಿ ಮಾತ್ರ ಪ್ರಚುರಪಡಿಸಲಾಗುವುದು ಯಾವುದೇ ದಿನ ಪತ್ರಿಕೆಯಲ್ಲಿ ಪ್ರಕಟಣೆಯನ್ನು ಹೊರಡಿಸುವುದಿಲ್ಲ.

ಸಹಿ/– ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ.

RO No. 1194: DIPR/CTA/KSMCA/2022-23

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕನೀನಿನಿ, ನಂ.5, ಭದ್ರಾ ನಾಲಾ ವಿಭಾಗ, ದಾವಣಗೆರೆ. ಫೋ: 08192–264669
ಇ–ಮೇಲ್: eebcddvg@yahoo.co.in

ಅಲ್ಪಾವಧಿ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ಉಲ್ಲೇಖ:– No: EE/ KNNL/ BCD-5/DVG/PB-4/4701/2022-23 / 3717/10 Dated: 25.03.2023

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಕ.ನೀ.ನಿ.ನಿ, ನಂ.5 ಭದ್ರಾ ನಾಲಾ ವಿಭಾಗ, ದಾವಣಗೆರೆ ರವರು, ಲೆಕ್ಕ ಶೀರ್ಷಿಕೆ 4701 ಎಸ್.ಸಿ.ಪಿ/ಟಿ.ಎಸ್.ಪಿ ಅಡಿಯಲ್ಲಿ ಕಾಮಗಾರಿಗಳಿಗೆ ಏಕ ಲಕೋಟೆ ಪದ್ಧತಿಯಡಿ KW-2 (Standard tender Bid Document)ನಲ್ಲಿ ಇ–ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ. ಅರ್ಹ ಗುತ್ತಿಗೆದಾರರು, ಶೇಕಡಾವಾರು ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್‌ನ ವೆಬ್‌ಸೈಟ್ (http://eproc.karnataka.gov.in) ಮುಖಾಂತರವೇ ಇಂಡೆಂಟ್ ಸಂಖ್ಯೆ: 36455 ಡೌನಲೋಡ್ ಮಾಡಿಕೊಳ್ಳಲು ದಿನಾಂಕ: 25.03.2023 ರಿಂದ 01.04.2023 ರ ಸಂಜೆ 5.35 ಘಂಟೆವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 03.04.2023 ರಂದು ಸಂಜೆ 5.40 ಘಂಟೆಗೆ, ಕಾಮಗಾರಿಗಳ ಮೊತ್ತ–50.00 ಲಕ್ಷಗಳು ಕಾಮಗಾರಿ ಸಂಖ್ಯೆ :–1 ಸಂಖ್ಯೆ ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಮುಂದೂಡುವ, ಅಂಗಿಕರೀಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ. ಹೆಚ್ಚಿನ ಮಾಹಿತಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಥವಾ ಕಛೇರಿ ವೇಳೆಯಲ್ಲಿ ಕೆಳಗೆ ಸಹಿ ಮಾಡಿದವರ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ.

ವಾಸಾಇ/ಡಿವಿಜಿ/1098/ ಕೆಎಸ್‌ಎಂಸಿಎ/2022–23

ಸಹಿ/– ಕಾರ್ಯಪಾಲಕ ಇಂಜಿನಿಯರ್, ಕನೀನಿನಿ ನಂ.5 ಭದ್ರಾ ನಾಲಾ ವಿಭಾಗ, ದಾವಣಗೆರೆ.

ಕರ್ನಾಟಕ ಉಚ್ಚ ನ್ಯಾಯಾಲಯ
ಉಚ್ಚ ನ್ಯಾಯಾಲಯ ಕಟ್ಟಡಗಳು, ಬೆಂಗಳೂರು–560 001

ಹೆಚ್‌ಸಿಸಿ ಸಂ. 27/2018 ದಿನಾಂಕ: 25.03.2023

ಸಂಕ್ಷಿಪ್ತ ಟೆಂಡರ್ ಅಧಿಸೂಚನೆ

ಕರ್ನಾಟಕ ಉಚ್ಚ ನ್ಯಾಯಾಲಯವು, ವಿವಿಧ ಬಗೆಯ 208 UPS ಗಳ ವಾರ್ಷಿಕ ನಿರ್ವಹಣೆಗಾಗಿ ಟೆಂಡರನ್ನು e-Procurement portal ಮೂಲಕ ಆಹ್ವಾನಿಸಿದೆ.

ಆಸಕ್ತರು ಟೆಂಡರನ್ನು ದಿನಾಂಕ: 10.04.2023 ರ 4.00 ಗಂಟೆಯೊಳಗೆ upload ಮಾಡಬಹುದಾಗಿದೆ. ಹೆಚ್ಚಿನ ವಿವರಗಳನ್ನು https://eproc.karnataka.gov.in ಜಾಲಾತಾಣದ ಮೂಲಕ ಪಡೆದುಕೊಳ್ಳಬಹುದು.

ಸಹಿ/– (ಎನ್.ಜಿ. ದಿನೇಶ)
ರಿಜಿಸ್ಟ್ರಾರ್ (ಗಣಕ) ಮತ್ತು ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.

ವಾ.ಸಾ.ಸಂ.ಇ/ವಾಪ್ರ/5479/ಆಕಾರ್/22–23

ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಹಟ್ಟಿ – 584 115, ಲಿಂಗಸುಗೂರು-ತಾ., ರಾಯಚೂರು ಜಿಲ್ಲೆ , ಕರ್ನಾಟಕ.
ದೂರವಾಣಿ: 08537–275740, ಇ–ಮೇಲ್: material276339@gmail.com
ವೆಬ್‌ಸೈಟ್: www.huttigold.karnataka.gov.in
TNO.65/22-23 No.HGML/EOI/11/2022-23/CALL-3 Date: 28.03.2023

ಆಸಕ್ತಿ ವ್ಯಕ್ತಪಡಿಸುವಿಕೆಗಾಗಿ (EoI) ಟೆಂಡರ್ ಪ್ರಕಟಣೆ

ಲೀಚಿಂಗ್ ಪ್ಲಾಂಟ್ ಆಟೋಮೇಷನ್ ಮತ್ತು ಸಾಗ್ ಮತ್ತು ಬಾಲ್ ಮಿಲ್ ಒಟ್ಟಾರೆ ದಕ್ಷತೆಯ ಸುಧಾರಣೆಗಾಗಿ ಜಾಗತಿಕ ಸಲಹಾ ಸಂಸ್ಥೆ/ಸಂಸ್ಥೆಯ ಸೇವೆಗಳನ್ನು ನೇಮಿಸಿಕೊಳ್ಳಲು ಆಸಕ್ತಿಯ ಅಭಿವ್ಯಕ್ತಿ(EoI)

ಈ ಕಾರ್ಯಕ್ಕೆ ಆಸಕ್ತ ಸಲಹೆಗಾರರು/ಸಮಾಲೋಚಕ ಸಂಸ್ಥೆ/ವೈಯಕ್ತಿಕ ಸಲಹೆಗಾರರು ಸಾಮಾನ್ಯ ಷರತ್ತುಗಳು, ಅರ್ಹತಾ ಮಾನದಂಡಗಳು ಇತ್ಯಾದಿ ಅಗತ್ಯ ವಿವರಗಳಿಗಾಗಿ www.eproc.karnataka.gov.in ಲಿಂಕ್‌ಗೆ ಭೇಟಿ ನೀಡಬೇಕು. EoI ನಲ್ಲಿ ಭಾಗವಹಿಸಲು ಆಸಕ್ತಿ ಹೊಂದಿರುವ ಏಜೆನ್ಸಿಗಳು ಇ–ಪ್ರೊಕ್ಯೂರ್‌ಮೆಂಟ್ GoK, ಬೆಂಗಳೂರಿನಲ್ಲಿ ನೋಂದಾಯಿಸಿಕೊಳ್ಳಬೇಕು.

ಟೆಂಡರ್ ವೇಳಾಪಟ್ಟಿ:

1. ಪ್ರಿ–ಬಿಡ್ ಸಭೆ (Zoom): **08.04.2023 ಮಧ್ಯಾಹ್ನ 12.00 ಗಂಟೆಗೆ.**
2. ಬಿಡ್ ಸ್ವೀಕರಿಸುವ ಕಡೆಯ ದಿನಾಂಕ: **27.04.2023 ಸಂಜೆ 4.00 ಗಂಟೆಗೆ.**
3. ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **29.04.2023 ಬೆಳಿಗ್ಗೆ 10.00 ಗಂಟೆಗೆ.**

ಸಹಿ/– ಪ್ರಧಾನ ವ್ಯವಸ್ಥಾಪಕರು (ಸಮನ್ವಯ)

ಭಾರತದ ಅತಿ ಹೆಚ್ಚು ಚಿನ್ನದ ಉತ್ಪಾದಕರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಯೋಜನೆ ದಕ್ಷಿಣ, ದಕ್ಷಿಣ ವಲಯ ಕಛೇರಿ ಸಂಕೀರ್ಣ, 9ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಜಯನಗರ 2ನೇ ಬ್ಲಾಕ್, ಬೆಂಗಳೂರು – 560011.

ಸಂಖ್ಯೆ: ಕಾಅಯೋ(ದ)/ಇ–ಪ್ರೊಕ್/29/2022–23 ದಿನಾಂಕ: 27–03–2023

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ದ್ವಿ–ಲಕೋಟೆ ಪದ್ಧತಿ) (ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಯೋಜನೆ ದಕ್ಷಿಣ, ದಕ್ಷಿಣ ವಲಯ, ಬಿಬಿಎಂಪಿ, ಬೆಂಗಳೂರು ಇವರು ಈ ಕೆಳಕಂಡ ಸೇವೆಗಳಿಗಾಗಿ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)
1	ಬಿಬಿಎಂಪಿಯ ದಕ್ಷಿಣ ಕ್ಲಿನಿಕಲ್ ವಿಂಗ್‌ನ ರೆಫರಲ್ ಆಸ್ಪತ್ರೆಗಳು ಮತ್ತು ಮೆಟರ್ನಿಟಿ ಹೋಂಗಳಿಗೆ ವೈದ್ಯರು ಮತ್ತು ಪ್ಯಾರಾಮೆಡಿಕಲ್ ಸಿಬ್ಬಂದಿಗಳನ್ನು ಪೂರೈಸುವುದು.	1,83,23,727/-	2,74,855/-

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **www.eproc.karnataka.gov.in** ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆ ದಿನಾಂಕ: **01–04–2023 ರಂದು ಮಧ್ಯಾಹ್ನ 12.00 ಗಂಟೆಗೆ ಕಾರ್ಯಪಾಲಕ ಅಭಿಯಂತರ ಕಛೇರಿ, ಯೋಜನೆ ದಕ್ಷಿಣ ಇಲ್ಲಿ.** 3) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **10–04–2023 ರಂದು ಸಂಜೆ 4.00 ಗಂಟೆವರೆಗೆ.** 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **12–04–2023 ರಂದು ಬೆಳಿಗ್ಗೆ 11.30 ಗಂಟೆಗೆ.** 5) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **17–04–2023 ರಂದು ಮಧ್ಯಾಹ್ನ 12.00 ಗಂಟೆಗೆ ಅಥವಾ ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಯೋಜನೆ ದಕ್ಷಿಣ, ಬಿಬಿಎಂಪಿ.

ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ
ನಂ.5, 2ನೇ ಮಹಡಿ, ಲೂಪ್‌ಲೇನ್, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560 009.
ದೂರವಾಣಿ: 080–22341230/35 ಇ–ಮೇಲ್: bmicapa@gmail.com

ಸಂಖ್ಯೆ: ಬಿಎಂಐಸಿಎಪಿಎ/ಭೂಉಬ–03/10/2021–22 ದಿನಾಂಕ: 27.03.2023

ಸಾರ್ವಜನಿಕ ಪ್ರಕಟಣೆ

[ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರ ಪ್ರಕಾರ]

ಶ್ರೀರಂಗಪಟ್ಟಣ ತಾಲ್ಲೂಕು, ಅರಕೆರೆ ಹೋಬಳಿ, ಅರಕೆರೆ ಗ್ರಾಮದ ಸರ್ವೆ ಸಂಖ್ಯೆ: 45/19ರ 0ಎ–05ಗು ವಿಸ್ತೀರ್ಣದ ಜಮೀನಿನ ಭೂ ಉಪಯೋಗವನ್ನು ಕೆಟಿಸಿಪಿ ಕಾಯ್ದೆ, 1961ರ ಕಲಂ 14(ಎ)ರಡಿಯಲ್ಲಿ **"ವ್ಯವಸಾಯ"** ವಲಯದಿಂದ **"ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅರ್ಜಿದಾರರಾದ ಶ್ರೀಮತಿ. ಶಾಂತ.ಆರ್ ಕೋಂ ದೊಡ್ಡಚನ್ನೇಗೌಡ ಇವರು ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ಪರಿಶೀಲಿಸಲಾಗಿ, ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆ ನಕ್ಷೆಯಲ್ಲಿ ಪ್ರಸ್ತಾಪಿತ ಜಮೀನನ್ನು "ವ್ಯವಸಾಯ" ವಲಯವೆಂದು ವರ್ಗೀಕರಿಸಿರುವ ಭೂ ಉಪಯೋಗದಲ್ಲಿ ಕಾಯ್ದಿರಿಸಲಾಗಿದೆ. ಅರ್ಜಿದಾರರು ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯು ಈ ಕೆಳಕಂಡ ಸಾರ್ವಜನಿಕ ಹಿತಾಸಕ್ತಿ ಹೊಂದಿರುವುದಾಗಿ ತಿಳಿಸಿರುತ್ತಾರೆ.

1. ವಿನ್ಯಾಸ ಅಭಿವೃದ್ಧಿ ಕಾಮಗಾರಿ ನಡೆಯುವಾಗ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ.
2. ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ.

ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಗಳು ಇದ್ದಲ್ಲಿ ಅವುಗಳನ್ನು ಈ ಪ್ರಕಟಣೆಯ ದಿನಾಂಕದಿಂದ 16 ದಿವಸಗಳೊಳಗಾಗಿ ಸೂಕ್ತ ಕಾರಣಗಳೊಂದಿಗೆ ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬಿ.ಎಂ.ಐ.ಸಿ.ಎ.ಪಿ.ಎ. ಬೆಂಗಳೂರು ಇವರಿಗೆ ಈ ಪ್ರಕಟಣೆಯಲ್ಲಿನ ಮೇಲ್ಕಂಡ ವಿಳಾಸಕ್ಕೆ ಸಲ್ಲಿಸಬೇಕೆಂದು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/– ಸದಸ್ಯ–ಕಾರ್ಯದರ್ಶಿಗಳು, ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು.

ವಾಸಾಸಂಇ/ವಾಪ್ರ/5481/ಎಎಎ/22–23

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನೀಯರವರ ಕಛೇರಿ, ಕ.ನೀ.ನಿ.ನಿ., ಮ.ಬ.ದ.ಕಾ.ನಿ. ವಿಭಾಗ ನಂ. 1, ನರಗುಂದ ಜಿಲ್ಲೆ : ಗದಗ
Tel No. 08377-244236 E-mail : knnlmrbccdiv1@gmail.com
ಸಂ:ಕನೀನಿನಿ/ಮಬದಕಾನಿ–1/ಪಿಬಿ/2022–23/3107 ದಿನಾಂಕ: 24–03–2023

ಅಲ್ಪಾವಧಿ ಟೆಂಡರ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಈ ಕೆಳ ಸಹಿ ಮಾಡಿದವರಿಂದ ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ಗುತ್ತಿಗೆದಾರರಿಂದ, KW-4 ನಲ್ಲಿ ಶೇಕಡಾವಾರು ಇ–ಟೆಂಡರಗಳನ್ನು ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ (Two-Cover System) ಕರೆಯಲಾಗಿದೆ. (1) ಇಂಡೆಂಟ್ ನಂ.**36426** (2) ಟೆಂಡರಿಗಿಟ್ಟ ಕಾಮಗಾರಿಯ ಅಂದಾಜು ಮೊತ್ತ: ರೂ. **168.28** ಲಕ್ಷಗಳು (ಜಿ.ಎಸ್.ಟಿ ಹೊರತುಪಡಿಸಿ) (3) ನಿಗದಿಪಡಿಸಿದ ಕಾಮಗಾರಿಯ ಇ.ಎಂ.ಡಿ ಮೊತ್ತ (ಜಿ.ಎಸ್.ಟಿ ಸೇರಿಸಿ) ರೂ. **2.99** ಲಕ್ಷಗಳು (4) ಟೆಂಡರ್ ಅಕ್ಷೇಪಣೆಗಳಿಗಾಗಿ/ಸ್ಪಷ್ಟಿಕರಣಕ್ಕಾಗಿ ನಿಗದಿಪಡಿಸಿದ ದಿನಾಂಕ: **27–03–2023** ರಂದು ಕಚೇರಿ ವೇಳೆಯಲ್ಲಿ (5) ಪ್ರೀ–ಬಿಡ್ ಮಿಟಿಂಗ್ ದಿ: **27–03–2023** ಮದ್ಯಾಹ್ನ 12.00 ಗಂಟೆಗೆ ಕಾರ್ಯನಿರ್ವಾಹಕ ಇಂಜನೀಯರರು, ಕನೀನಿನಿ ಮಬದಕಾನಿ, ವಿಭಾಗ ನಂ.1 ನರಗುಂದ ಕಚೇರಿಯಲ್ಲಿ. (6) ಇ–ಟೆಂಡರ್ ದಾಖಲೆಗಳನ್ನು ಡೌನಲೋಡ್ ಮಾಡಿಕೊಳ್ಳಲು ಹಾಗೂ ಭರ್ತಿ ಮಾಡಿದ ಇ–ಟೆಂಡರ್ ಸಲ್ಲಿಸಲು ಕೊನೆಯ ದಿ: **03–04–2023** ಅಪರಾಹ್ನ 4–00 ಗಂಟೆವರೆಗೆ (7) ಟೆಂಡರ್ ತೆರಯುವ ದಿನಾಂಕ: (1) ತಾಂತ್ರಿಕ ಬಿಡ್: **05–04–2023** ರಂದು ಬೆಳಿಗ್ಗೆ 11.00 ಗಂಟೆಯ ನಂತರ (2) ಆರ್ಥಿಕ ಬಿಡ್ : **10–04–2023** ರಂದು ಬೆಳಿಗ್ಗೆ 11.00 ಗಂಟೆಯ ನಂತರ

ಗುತ್ತಿಗೆದಾರರ ಅರ್ಹತೆ /ಟೆಂಡರ ನಿಯಮಗಳು/ಟೆಂಡರ ಪ್ರೋಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ ವೆಬ್‌ಸೈಟ್ www.eproc.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕಚೇರಿ ವೇಳೆಯಲ್ಲಿ ದೂರವಾಣಿ ಸಂಖ್ಯೆ: 08377–244236 ಸಂಪರ್ಕಿಸಬಹುದು. ಟೆಂಡರಗಳನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸುವ ಅಧಿಕಾರವನ್ನು ಕೆಳಗೆ ಸಹಿಮಾಡಿದವರು ಹೊಂದಿರುತ್ತಾರೆ.

ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂಖ್ಯೆ: 08377–244236 ರಲ್ಲಿ ಸಂಪರ್ಕಿಸಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಕನೀನಿನಿ ಮಬದಕಾನಿ ವಿಭಾಗ ನಂ.1 ನರಗುಂದ

ವಾಸಾಸಂಇ/ಗದಗ/ಕೆಎಸ್‌ಎಂಸಿಎ/824/2022–23

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಚೇರಿ,
ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ ಚಿಕ್ಕೋಡಿ
ದೂರವಾಣಿ ಸಂಖ್ಯೆ: 08338–275101 ಇ–ಮೇಲ್ : ee.rdws.ckd@gmail.com
ಸಂಖ್ಯೆ: ಕಾಇಂ/ಗ್ರಾಕುನೀ&ನೈ/ವಿಚಿ/ತಾಂಶಾಕೆಡಬ್ಲ್ಯು4/ಟೆಂಡರ್/87/2022–23/4861 ದಿನಾಂಕ: 24–03–2023

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ ವಿಭಾಗ, ಚಿಕ್ಕೋಡಿ ವ್ಯಾಪ್ತಿಯ ಸನ್ 2021–22ನೇ ಸಾಲಿನ ಜಲ ಜೀವನ್ ಮೀಷನ್ ಯೋಜನೆಯಡಿ ಅನುಮೋದಿತ ಪುನರ್‌ಚೇತನ ಕಾಮಗಾರಿಯ ಅಥಣಿ ತಾಲ್ಲೂಕಿನ ಬಳ್ಳಿಗೇರಿ ಮತ್ತು ಇತರೆ 14 ಗ್ರಾಮಗಳಿಗೆ ಶುದ್ಧ ಹಾಗೂ ಶಾಶ್ವತ ಕುಡಿಯುವ ನೀರನ್ನು ಒದಗಿಸುವ DBOT ಆಧಾರದ ಮೇಲೆ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾಗಿದೆ. ವಿವರಗಳನ್ನು https://eproc.karnataka.gov.in ರಲ್ಲಿ ಪಡೆಯಬಹುದಾಗಿರುತ್ತದೆ.

1	ಪೂರ್ವಭಾವಿ ಸಭೆ ಮತ್ತು ದಿನಾಂಕ ಹಾಗೂ ಸ್ಥಳ ಪರಿಶೀಲನೆ	:	29–03–2023ರ ಬೆಳಿಗ್ಗೆ 11:15 ಗಂಟೆಗೆ ಮಾನ್ಯ ಮುಖ್ಯ ಇಂಜಿನಿಯರ್, ಗ್ರಾ.ಕು.ನೀ.&ನೈ ಇಲಾಖೆ ಕೆ.ಹೆಚ್.ಬಿ. ಕಟ್ಟಡ ಇ ಬ್ಲಾಕ್, 1ನೇ ಮಹಡಿ, ಕೆಂಪೇಗೌಡ ರಸ್ತೆ, ಬೆಂಗಳೂರು
2	ಭರ್ತಿ ಮಾಡಲಾದ ಟೆಂಡರ್ ದಾಖಲಾತಿಗಳನ್ನು ಅನ್‌ಲೈನ್‌ನಲ್ಲಿ ಸ್ವೀಕರಿಸುವ ಕೊನೆಯ ದಿನಾಂಕ	:	05–04–2023ರ ಸಂಜೆ 16:00 ಗಂಟೆಯವರೆಗೆ
3	ತಾಂತ್ರಿಕ ಬಿಡ್ ತೆರೆಯುವ ದಿನಾಂಕ	:	06–04–2023ರ ಸಂಜೆ 17:30 ಗಂಟೆಗೆ
4	ಆರ್ಥಿಕ ಬಿಡ್ ತೆರೆಯುವ ದಿನಾಂಕ	:	10–04–2023ರ ಬೆಳಿಗ್ಗೆ 11:00 ಗಂಟೆಗೆ

ಕ್ರ ಸಂ	ಕಾಮಗಾರಿಯ ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ (ರೂ.ಗಳಲ್ಲಿ)	ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿಪಡಿಸಿದ ಕಾಲಾವಧಿ (ಮಳೆಗಾಲ ಸೇರಿ)
1	AUGMENTATION OF MULTI-VILLAGE WATER SUPPLY SCHEME TO BALLIGERI AND OTHERS 14 VILLAGES IN ATHANI TALUKA OF BELAGAVI DISTRICT UNDER JAL JEEVAN MISSION (Indent No. 61776)	3434.00	27,24,000/–	11 ತಿಂಗಳು

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಗ್ರಾ.ಕು.ನೀ.&ನೈ. ವಿಭಾಗ, ಚಿಕ್ಕೋಡಿ

DIPO/RO No. 2170/2022-23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ರಸ್ತೆ ಮೂಲ ಸೌಕರ್ಯ – ರಾಜರಾಜೇಶ್ವರಿನಗರ ವಿಭಾಗ, ಬಿಬಿಎಂಪಿ ಡಿಡಬ್ಲ್ಯೂಪಿಸಿ ರೆಮ್ಕೋ ಲೇಔಟ್ ಹತ್ತಿರ, ಜವರೇಗೌಡನದೊಡ್ಡಿ ಮುಖ್ಯರಸ್ತೆ, ರಾಜರಾಜೇಶ್ವರಿನಗರ, ಬೆಂಗಳೂರು.

ಸಂಖ್ಯೆ: ಕಾಅ/ರಮೂಸೌ/ಆರ್‌ಆರ್‌ನ/ಟೆಂಡರ್/06/2022–23 ದಿನಾಂಕ: 27–03–2023

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) – (ಅಲ್ಪಾವಧಿ)
(ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಬಿಬಿಎಂಪಿ ಕೌನ್ಸಿಲ್ ದಿನಾಂಕ: 07.08.2020 ರ ವಿಷಯ ಸಂಖ್ಯೆ: 13/2020–21 ಮತ್ತು ದಿನಾಂಕ: 08.03.2023 ರ 453/2022–23 ರಂತೆ ಈ ಕೆಳಗೆ ತಿಳಿಸಿರುವ ಕಾಮಗಾರಿಗಳನ್ನು ಕೈಗೊಳ್ಳಲು ರಸ್ತೆ ಮೂಲ ಸೌಕರ್ಯ ವಿಭಾಗ ಆರ್‌ಆರ್ ನಗರ ವಲಯಗಳು – ಎಸ್ಕ್ರೊ ಖಾತೆಯಲ್ಲಿ ಆರ್ಟೀರಿಯಲ್ ಮತ್ತು ಸಬ್–ಆರ್ಟೀರಿಯಲ್ ರಸ್ತೆಗಳ ನಿರ್ವಹಣೆಗೆ ತಾತ್ವಿಕ ಅನುಮೋದನೆ ನೀಡಿದೆ ಮತ್ತು ಬಜೆಟ್ ಮಂಜೂರು ಮಾಡಿದೆ.

ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲ ಸೌಕರ್ಯ – ರಾಜರಾಜೇಶ್ವರಿನಗರ ವಿಭಾಗ, ಬಿಬಿಎಂಪಿ ಇವರು ಈ ಕೆಳಕಂಡ ಕಾಮಗಾರಿಗಳಿಗೆ ಬೃಬೆಂಮಪಾಯಲ್ಲಿ ನೋಂದಾಯಿಸಿರುವ ಅಥವಾ ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯುಡಿ / ರೈಲ್ವೇಸ್ / ಎಂಇಎಸ್/ ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ತತ್ಸಮಾನ ನೋಂದಾಯಿಸಿರುವ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್– ಕೆಡಬ್ಲ್ಯೂ–4)

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)
1	ರಸ್ತೆ ಮೂಲ ಸೌಕರ್ಯ – ಆರ್.ಆರ್. ನಗರ ವಿಭಾಗ ಇದರ ರಾಜರಾಜೇಶ್ವರಿನಗರ ಮತ್ತು ಯಶವಂತಪುರ ವಿಧಾನಸಭಾ ಕ್ಷೇತ್ರದಲ್ಲಿ ಪಾದಚಾರಿ ಮಾರ್ಗ ಸೇರಿದಂತೆ ಪಾಟ್‌ಹೋಲ್‌ಗಳನ್ನು ಹೊರತುಪಡಿಸಿ ಆರ್ಟೀರಿಯಲ್ ಮತ್ತು ಸಬ್ – ಆರ್ಟೀರಿಯಲ್ ರಸ್ತೆಗಳ ವಾರ್ಷಿಕ ನಿರ್ವಹಣೆ.	204.32	3,06,500/-
2	ತುಮಕೂರು ಮುಖ್ಯರಸ್ತೆಯಿಂದ (ಎನ್‌ಹೆಚ್–4) ಬಸವೇಶ್ವರ ಬಸ್ ನಿಲ್ದಾಣದವರೆಗೆ 25 ಎಂಎಂ ದಪ್ಪದ ಕಲ್ಲಿನ ಆಸ್ಫಾಲ್ಟ್ ಮಿಕ್ಸ್ (ಪೈಲಟ್ ಆಧಾರ) ಉಪಯೋಗಿಸಿ ಬಸವೇಶ್ವರ ಬಸ್ ನಿಲ್ದಾಣ ರಸ್ತೆಯ ಡಾಂಬರೀಕರಣ.	192.50	2,90,000/-

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **http://eproc.karnataka.gov.in** ನಲ್ಲಿ ದಿನಾಂಕ: **28–03–2023** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ವಿಚಾರಣೆಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: **31–03–2023 ರಂದು 16.30 ಗಂಟೆವರೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ, ರಸ್ತೆ ಮೂಲ ಸೌಕರ್ಯ – ಆರ್.ಆರ್. ನಗರ ವಿಭಾಗ, ಬಿಬಿಎಂಪಿ ಇಲ್ಲಿ.** 3) ಟೆಂಡರ್ ಪೂರ್ವಭಾವಿ ಸಭೆ ದಿನಾಂಕ: **01–04–2023 ರಂದು 15.30 ಗಂಟೆಗೆ ಮುಖ್ಯ ಅಭಿಯಂತರರು (ರಸ್ತೆ ಮೂಲ ಸೌಕರ್ಯ) ಕಛೇರಿ, 4ನೇ ಮಹಡಿ, ಅನೆಕ್ಸ್ ಕಟ್ಟಡ–3, ಎನ್.ಆರ್. ಚೌಕ, ಬಿಬಿಎಂಪಿ, ಬೆಂಗಳೂರು ಇಲ್ಲಿ ನಡೆಯುತ್ತದೆ.** 4) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಆನ್‌ಲೈನ್ ಮೂಲಕ ಸಲ್ಲಿಸುವ ಕೊನೆಯ ದಿನಾಂಕ: **05–04–2023 ರಂದು 17.30 ಗಂಟೆಗೆ ಅಥವಾ ಮುಂಚಿತವಾಗಿ.** 5) ತಾಂತ್ರಿಕ ಬಿಡ್‌ಗಳನ್ನು ದಿನಾಂಕ: **06–04–2023 ರಂದು 16.30 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ, ರಸ್ತೆ ಮೂಲ ಸೌಕರ್ಯ – ರಾಜರಾಜೇಶ್ವರಿನಗರ ವಿಭಾಗ, ಬಿಬಿಎಂಪಿ ಡಿಡಬ್ಲ್ಯೂಪಿಸಿ ರೆಮ್ಕೋ ಲೇಔಟ್ ಹತ್ತಿರ, ಜವರೇಗೌಡನದೊಡ್ಡಿ ಮುಖ್ಯರಸ್ತೆ, ರಾಜರಾಜೇಶ್ವರಿನಗರ ಇಲ್ಲಿ ತೆರೆಯಲಾಗುವುದು.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲ ಸೌಕರ್ಯ – ರಾಜರಾಜೇಶ್ವರಿನಗರ ವಿಭಾಗ, ಬಿಬಿಎಂಪಿ.

❦ ಸುಭಾಷಿತ ❦
ನಿಮ್ಮ ಕೆಲಸವನ್ನು ನೀವು ಗೌರವಿಸಿದರೆ ಬೇರೆ ಯಾರಿಗೂ ನೀವು ಡೊಗ್ಗು ಸಲಾಮು ಹಾಕುವ ಅಗತ್ಯವಿಲ್ಲ. ನಿಮ್ಮ ಕೆಲಸಕ್ಕೆ ಅಗೌರವ ತೋರಿದರೆ ಎಲ್ಲರಿಗೂ ಡೊಗ್ಗು ಸಲಾಮು ಹಾಕಬೇಕಾಗುತ್ತದೆ.
-ಎ.ಪಿ.ಜೆ. ಅಬ್ದುಲ್ ಕಲಾಂ

ಖಾಲಿಸ್ತಾನ ಬೆಂಬಲಿಗರಿಂದ ಹಿಂಸಾಚಾರ ಭಾರತದ ಕಳವಳಕ್ಕೆ ಕಿವಿಗೊಡಬೇಕು

ಖಾಲಿಸ್ತಾನ ಪರ ಕಾರ್ಯಕರ್ತರು ಬೇರೆ ದೇಶಗಳಲ್ಲಿ ಇರುವ ಭಾರತದ ದೂತಾವಾಸ ಕಚೇರಿಗಳ ಮೇಲೆ ದಾಳಿ ನಡೆಸುವುದು ಹಾಗೂ ಹಿಂಸಾತ್ಮಕವಾಗಿ ಪ್ರತಿಭಟನೆ ನಡೆಸುವುದು ಈಚಿನ ದಿನಗಳಲ್ಲಿ ಕಣ್ಣಿಗೆ ರಾಚುವಷ್ಟು ಹೆಚ್ಚಾಗಿದೆ. ಲಂಡನ್‌ನಲ್ಲಿ ಇರುವ ಭಾರತದ ಹೈಕಮಿಷನ್ ಕಚೇರಿಯ ಎದುರು ಗುಂಪೊಂದು ಮಾರ್ಚ್ 19ರಂದು ಖಾಲಿಸ್ತಾನ ಪರ ಘೋಷಣೆಗಳನ್ನು ಕೂಗಿತು. ದೂತಾವಾಸ ಕಚೇರಿ ಇರುವ ಕಟ್ಟಡದ ಮೇಲೆ ಬಾಟಲಿಗಳನ್ನು ಎಸೆದಿದ್ದಷ್ಟೇ ಅಲ್ಲದೆ, ಅಲ್ಲಿ ಹಾರಿಸಲಾಗಿದ್ದ ತ್ರಿವರ್ಣ ಧ್ವಜವನ್ನು ಆ ಗುಂಪು ಕೆಳಕ್ಕಿಳಿಸಿತು. ಆ ಸಂದರ್ಭದಲ್ಲಿ ಭಾರತದ ದೂತಾವಾಸ ಕಚೇರಿಗೆ ಭದ್ರತೆ ನೀಡಲು ಅಲ್ಲಿ ಪೊಲೀಸರು ಇಲ್ಲದಿದ್ದುದು ಆಘಾತಕಾರಿ ಸಂಗತಿ. ಈ ಘಟನೆ ಜರುಗಿದ ಎರಡು ದಿನಗಳ ನಂತರ ಇನ್ನೊಂದು ದಾಳಿ ನಡೆಯಿತು. ಈ ನಡುವೆ ಖಾಲಿಸ್ತಾನ ಬೆಂಬಲಿಗರು ಅಮೆರಿಕ ಮತ್ತು ಕೆನಡಾದಲ್ಲಿ ಕೂಡ ಪ್ರತಿಭಟನೆ ನಡೆಸಿದ್ದಾರೆ. ಅಮೆರಿಕದ ವಾಷಿಂಗ್ಟನ್, ಸ್ಯಾನ್‌ಫ್ರಾನ್ಸಿಸ್ಕೊ, ಕೆನಡಾದ ವ್ಯಾಂಕೂವರ್‌ನಲ್ಲಿ ಭಾರತದ ದೂತಾವಾಸ ಕಚೇರಿಗಳ ಸುತ್ತಲಿನ ಭದ್ರತಾ ಬೇಲಿಯನ್ನು ಮುರಿದು, ಕಚೇರಿಯ ಮೇಲೆ ದಾಳಿ ನಡೆಸಿ ಅಲ್ಲಿ ನಷ್ಟ ಉಂಟುಮಾಡಲು ಅವರು ಯತ್ನಿಸಿದ್ದಾರೆ. ವಾಷಿಂಗ್ಟನ್‌ನಲ್ಲಿ ನಡೆದ ಪ್ರತಿಭಟನೆ ಸಂದರ್ಭದಲ್ಲಿ ಅಲ್ಲಿನ ವಿದ್ಯಮಾನಗಳನ್ನು ವರದಿ ಮಾಡುತ್ತಿದ್ದ ಭಾರತದ ಹಿರಿಯ ಪತ್ರಕರ್ತರೊಬ್ಬರ ಮೇಲೆ ಖಾಲಿಸ್ತಾನ ಬೆಂಬಲಿಗರು ಹಲ್ಲೆ ನಡೆಸಿದ್ದಾರೆ. ಖಾಲಿಸ್ತಾನ ಪರ ಸಹಾನುಭೂತಿ ಹೊಂದಿರುವ, ತೀವ್ರಗಾಮಿ ಸಂಘಟನೆ 'ವಾರಿಸ್ ಪಂಜಾಬ್ ದೆ' ನಾಯಕ ಅಮೃತ್ ಪಾಲ್ ಸಿಂಗ್‌ಗೆ ಭಾರತದಲ್ಲಿ ಶೋಧ ತೀವ್ರಗೊಂಡಿರುವ ಸಂದರ್ಭದಲ್ಲಿಯೇ ಪಶ್ಚಿಮದ ದೇಶಗಳಲ್ಲಿ ಖಾಲಿಸ್ತಾನ ಪರ ಈ ಬಗೆಯ ಚಟುವಟಿಕೆಗಳು ಹೆಚ್ಚಳವಾಗಿವೆ. ಕಳೆದ ಒಂದು ವಾರದಲ್ಲಿ ಅಮೃತ್ ಪಾಲ್ ಬೆಂಬಲಿಗರು ಎನ್ನಲಾದ ನೂರಾರು ಮಂದಿಯನ್ನು ಬಂಧಿಸಲಾಗಿದೆ. ಪಂಜಾಬ್‌ನಲ್ಲಿ ಪೊಲೀಸರು ಕೈಗೊಂಡಿರುವ ಕಠಿಣ ಕ್ರಮಗಳನ್ನು ತಾವು ವಿರೋಧಿಸುತ್ತಿರುವುದಾಗಿ ಖಾಲಿಸ್ತಾನ ಪರ ಕಾರ್ಯಕರ್ತರು ಹೇಳಿಕೊಂಡಿದ್ದಾರೆ. ತವರಿನಲ್ಲಿ ಇರುವ ತಮ್ಮವರ ಬಗ್ಗೆ ಅವರಿಗೆ ಕಾಳಜಿ ಇದ್ದಿದ್ದರೆ, ಅದರ ಬಗ್ಗೆ ಅವರು ಭಾರತದ ದೂತಾವಾಸ ಕಚೇರಿಗಳಿಗೆ ಶಾಂತಿಯುತವಾಗಿ ಮನವಿ ಸಲ್ಲಿಸ ಬಹುದಿತ್ತು. ಆದರೆ ಅವರು ಹಾಗೆ ಮಾಡಿಲ್ಲ. ಅವರು ನಡೆಸಿದ ಪ್ರತಿಭಟನೆಗಳು ಹಿಂಸಾತ್ಮಕವಾಗಿದ್ದವು, ಭಾರತ ವಿರೋಧಿಯಾಗಿದ್ದವು.

ಪ್ರಜಾತಂತ್ರವನ್ನು ಬೆಂಬಲಿಸುವ ಹೆಸರಿನಲ್ಲಿ ಪಾಶ್ಚಿಮಾತ್ಯ ದೇಶಗಳು ಖಾಲಿಸ್ತಾನ ಬೆಂಬಲಿಗರನ್ನು ಮುದ್ದುಗರೆಯುವ ಕೆಲಸ ಮಾಡಿವೆ. ಆದರೆ, ಪ್ರತ್ಯೇಕ ಖಾಲಿಸ್ತಾನಕ್ಕೆ ಆಗ್ರಹಿಸುತ್ತಿರುವವರು ಪ್ರಜಾತಂತ್ರವಾದಿಗಳಲ್ಲ

ಖಾಲಿಸ್ತಾನ ಬೆಂಬಲಿಗರು ನಡೆಸಿರುವ ದಾಳಿ ಮಾತ್ರವೇ ಅಲ್ಲದೆ, ದಾಳಿಯಿಂದ ಭಾರತದ ದೂತಾವಾಸ ಕಚೇರಿಗಳನ್ನು ರಕ್ಷಿಸುವಲ್ಲಿ ಅಮೆರಿಕ, ಬ್ರಿಟನ್ ಮತ್ತು ಕೆನಡಾ ಸರ್ಕಾರಗಳು ವಿಫಲವಾಗಿದ್ದರ ಬಗ್ಗೆ ಭಾರತವು ಕಳವಳಗೊಂಡಿದೆ. ತಮ್ಮ ದೇಶದಲ್ಲಿ ಇರುವ ವಿದೇಶಿ ದೂತಾವಾಸ ಕಚೇರಿಗಳ ರಕ್ಷಣೆಯು ಆತಿಥೇಯ ದೇಶಗಳ ಹೊಣೆ. ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಈ ವಿಚಾರವಾಗಿ ಕಟುವಾದ ಮಾತುಗಳಲ್ಲಿ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ. ಈ ದೇಶಗಳ ಸರ್ಕಾರಗಳು ಭಾರತದ ದೂತಾವಾಸ ಕಚೇರಿಗಳಿಗೆ ಭದ್ರತೆ ಕಲ್ಪಿಸುವ ವಿಚಾರದಲ್ಲಿ ಬಾಯಿಮಾತಿನ ಆಚೆಗೂ ಕ್ರಮ ಕೈಗೊಳ್ಳಬೇಕು ಎಂದು ಜೈಶಂಕರ್ ಹೇಳಿದ್ದಾರೆ. ಭಾರತದಲ್ಲಿ ಇರುವ ಈ ದೇಶಗಳ ರಾಯಭಾರಿಗಳನ್ನು ಕರೆಸಿ, ದಾಳಿಗಳ ವಿಚಾರವಾಗಿ ಅವರಲ್ಲಿ ತನ್ನ ಅಸಮಾಧಾನವನ್ನು ಕೇಂದ್ರ ವ್ಯಕ್ತಪಡಿಸಿದೆ. ಅಲ್ಲದೆ, ಮುಯ್ಯಿಗೆ ಮುಯ್ಯಿ ಎಂಬಂತೆ ದೆಹಲಿಯಲ್ಲಿನ ಬ್ರಿಟಿಷ್ ಹೈಕಮಿಷನರ್ ನಿವಾಸಕ್ಕೆ ನೀಡಿದ್ದ ಭದ್ರತೆಯ ಮಟ್ಟವನ್ನು ತಗ್ಗಿಸಿದೆ.

ಪಾಶ್ಚಿಮಾತ್ಯ ದೇಶಗಳು ಖಾಲಿಸ್ತಾನ ಉಗ್ರಗಾಮಿ ಚಟುವಟಿಕೆಗಳ ವಿಚಾರದಲ್ಲಿ ಭಾರತವು ಇರಿಸಿದ್ದ ವಿಶ್ವಾಸವನ್ನು ದಶಕಗಳಿಂದಲೂ ಉಳಿಸಿಕೊಂಡಿಲ್ಲ. 1980 ಹಾಗೂ 1990ರ ದಶಕಗಳಲ್ಲಿ ಭಾರತವು ತನ್ನ ಏಕತೆಗೆ ಸವಾಲಾಗಿದ್ದ ಪ್ರತ್ಯೇಕತಾವಾದಿ ಹೋರಾಟವನ್ನು ಹತ್ತಿಕ್ಕಲು ಮುಂದಾಗಿದ್ದಾಗ ಕೆಲವು ದೇಶಗಳು ಖಾಲಿಸ್ತಾನ ಬೆಂಬಲಿಗರಿಗೆ ಭಾರತ ವಿರೋಧಿ ಕೃತ್ಯಗಳನ್ನು ನಡೆಸಲು, ಉಗ್ರಗಾಮಿಗಳನ್ನು ನೇಮಕ ಮಾಡಿಕೊಳ್ಳಲು ಹಾಗೂ ಭಾರತದಲ್ಲಿ ಉಗ್ರವಾದಿ ಚಟುವಟಿಕೆಗಳಿಗೆ ಇಂಬು ಕೊಡಲು ಹಣ ಸಂಗ್ರಹಕ್ಕೆ ಅವಕಾಶ ಕಲ್ಪಿಸಿದವು. ಖಾಲಿಸ್ತಾನ ಪರ ಚಟುವಟಿಕೆಗಳಲ್ಲಿ ಭಾಗಿಯಾದ ನೂರಾರು ಮಂದಿಗೆ ಆಶ್ರಯ ಕಲ್ಪಿಸಿದವು. ಕೆನಡಾದ ಶಾಸನಸಭೆಗಳಲ್ಲಿ ಖಾಲಿಸ್ತಾನ ಪರ ಕಾರ್ಯಕರ್ತರು ಇದ್ದಾರೆ. ಕಳೆದ ಎರಡು ವರ್ಷಗಳಲ್ಲಿ ಖಾಲಿಸ್ತಾನ ಪರ ಕಾರ್ಯಕರ್ತರು ಭಾರತದ ವಿರೋಧದ ನಡುವೆಯೂ ಯುರೋಪ್, ಉತ್ತರ ಅಮೆರಿಕದಲ್ಲಿ ಜನಮತಗಣನೆ ನಡೆಸಿದ್ದಾರೆ. ಪ್ರಜಾತಂತ್ರವನ್ನು ಬೆಂಬಲಿಸುವ ಹೆಸರಿನಲ್ಲಿ ಪಾಶ್ಚಿಮಾತ್ಯ ದೇಶಗಳು ಖಾಲಿಸ್ತಾನ ಬೆಂಬಲಿಗರನ್ನು ಮುದ್ದುಗರೆಯುವ ಕೆಲಸ ಮಾಡಿವೆ. ಆದರೆ, ಪ್ರತ್ಯೇಕ ಖಾಲಿಸ್ತಾನಕ್ಕೆ ಆಗ್ರಹಿಸುತ್ತಿರುವವರು ಪ್ರಜಾತಂತ್ರವಾದಿಗಳಲ್ಲ. ಏಕೆಂದರೆ ಅವರು ನಡೆಸುತ್ತಿರುವುದು ಹಿಂಸಾತ್ಮಕ ಚಳವಳಿ. ಪಾಶ್ಚಿಮಾತ್ಯ ದೇಶಗಳು ಭಾರತದ ಕಳವಳವನ್ನು ಗಂಭೀರವಾಗಿ ಪರಿಗಣಿಸಬೇಕು. ತಮ್ಮ ನೆಲದಲ್ಲಿ ಭಾರತ ವಿರೋಧಿ ಕೃತ್ಯಗಳು ನಡೆಯದಂತೆ ಎಚ್ಚರಿಕೆ ವಹಿಸಬೇಕು.

ದಿನದ ಟ್ವೀಟ್

ಹೊಸ ರಾಜಕೀಯ ಕಾರ್ಯತಂತ್ರ?

ರಾಹುಲ್ ಗಾಂಧಿ ಅವರನ್ನು ಅಪರಾಧಿ ಎಂದು ಘೋಷಿಸಿರುವುದು ಹಾಗೂ ಸಂಸತ್ ಸದಸ್ಯ ಸ್ಥಾನದಿಂದ ಅವರನ್ನು ಅನರ್ಹಗೊಳಿಸಿದ್ದನ್ನು ಪ್ರಶ್ನಿಸಿ ಕಾಂಗ್ರೆಸ್ ಇದುವರೆಗೂ ಮೇಲ್ಮನವಿ ಸಲ್ಲಿಸಿಲ್ಲ. ಹಿಂದೆ ಅಜಂ ಖಾನ್ ಪ್ರಕರಣದಲ್ಲಿ ಚುನಾವಣಾ ಆಯೋಗವು ತಕ್ಷಣವೇ ಉಪಚುನಾವಣೆ ನಡೆಸಿತ್ತು. ಇದು ಹೊಸ ರಾಜಕೀಯ ಕಾರ್ಯತಂತ್ರವೇ? ಚುನಾವಣಾ ಆಯೋಗವು ವಯನಾಡು ಕ್ಷೇತ್ರಕ್ಕೆ ಚುನಾವಣೆ ಘೋಷಿಸಲಿ ಎಂಬುದು ಅವರ ಬಯಕೆಯೇ?

ಇಷ್ಕರಣ್ ಸಿಂಗ್ ಭಂಡಾರಿ, ವಕೀಲ

ಕಿಡಿನುಡಿ



ಯಾವುದೇ ಆಯೋಗವನ್ನು ರಚಿಸದೇ ಸಲಹೆ ಪಡೆಯದೇ ಅವೈಜ್ಞಾನಿಕವಾಗಿ ಮುಸ್ಲಿಮರ ಮೀಸಲಾತಿಯನ್ನು ತರಾತುರಿಯಲ್ಲಿ ತೆಗೆದು ಹಾಕಿರುವುದು ಸರಿಯಲ್ಲ. ಸರ್ಕಾರದ ಮಕ್ಕಳಾಟಿಕೆ ಇದು. ಲಿಂಗಾಯತರು ಹಾಗೂ ಒಕ್ಕಲಿಗರ ಕಿವಿಗೆ ಹೂ ಮುಡಿಸಲು ಹೊರಟಿದ್ದಾರೆ. ವಾರದಲ್ಲಿ ಚುನಾವಣೆ ಘೋಷಣೆಯಾಗಲಿದೆ. ಬಿಜೆಪಿಯ ಮೀಸಲಾತಿ ಘೋಷಣೆಯು ಕಾರ್ಯರೂಪಕ್ಕೆ ಬರುವುದಿಲ್ಲ.

ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಶನಿವಾರ, 28-3-1998

- **ವಿಶ್ವಾಸಮತ ಯಾಚನೆ ನಿರ್ಣಯ ಮಂಡನೆ**

ನವದೆಹಲಿ, ಮಾರ್ಚ್ 27 (ಪಿಟಿಐ, ಯುಎನ್‌ಐ)– ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ತಮ್ಮ ಸರ್ಕಾರದ ಪರ ವಿಶ್ವಾಸಮತ ಕೋರುವ ನಿರ್ಣಯವನ್ನು ಲೋಕಸಭೆಯಲ್ಲಿ ಇಂದು ಮಂಡಿಸಿದರು. ಎರಡು ದಿನಗಳ ಚರ್ಚೆಯ ನಂತರ ಈ ನಿರ್ಣಯವನ್ನು ನಾಳೆ ಮತಕ್ಕೆ ಹಾಕಲಾಗುವುದು.

ಒಂದೇ ವಾಕ್ಯದ ನಿರ್ಣಯವನ್ನು ಮಂಡಿಸಿದ ಪ್ರಧಾನಿ ಅವರು 'ಶುದ್ಧ, ಪ್ರಾಮಾಣಿಕ ಮತ್ತು ಸ್ಥಿರ ಸರ್ಕಾರ' ನೀಡುವ ಭರವಸೆ ನೀಡಿದರು. ದೇಶದಲ್ಲಿ ರಾಜಕೀಯ ಅಸ್ಥಿರತೆಯನ್ನು ಕೊನೆಗಾಣಿಸಲು ಎಲ್ಲ ರಾಜಕೀಯ ಪಕ್ಷಗಳು ನೆರವಾಗುವಂತೆ ಅವರು ಮನವಿ ಮಾಡಿಕೊಂಡರು.

- **ಕ್ಯಾಚುಗಳ ಶತಕ ಪೂರೈಸಿದ ಅಜರ್**

ಬೆಂಗಳೂರು, ಮಾರ್ಚ್ 27– ಭಾರತ ತಂಡದ ನಾಯಕ ಮಹಮ್ಮದ್ ಅಜರುದ್ದೀನ್ ಇಂದು ಟೆಸ್ಟ್ ಪಂದ್ಯಗಳಲ್ಲಿ ನೂರು ಕ್ಯಾಚುಗಳನ್ನು ಪೂರೈಸಿದರು. ಆಸ್ಟ್ರೇಲಿಯ ಮತ್ತು ಭಾರತ ತಂಡಗಳ ನಡುವೆ ಇಲ್ಲಿ ನಡೆಯುತ್ತಿರುವ ಮೂರನೇ ಕ್ರಿಕೆಟ್ ಟೆಸ್ಟ್ ಪಂದ್ಯದ ಮೂರನೇ ದಿನ ಅವರು ಈ ಸಾಧನೆ ಮಾಡಿದರು.

50 ವರ್ಷಗಳ ಹಿಂದೆ

ಬುಧವಾರ, 28-3-1973

- **ಮಣಿಪುರದಲ್ಲಿ ರಾಷ್ಟ್ರಪತಿ ಆಡಳಿತ ಜಾರಿಗೆ ಇಂದು ಕೇಂದ್ರದ ನಿರ್ಧಾರ?**

ನವದೆಹಲಿ, ಮಾರ್ಚ್ 27– ಶ್ರೀ ಮಹಮದ್ ಅಲಿಮುದ್ದೀನ್ ಅವರ ಕಾಂಗ್ರೆಸ್ಸೇತರ ಮಂತ್ರಿಮಂಡಲ ರಾಜೀನಾಮೆ ನೀಡಿದ ಕಾರಣ ಮಣಿಪುರದಲ್ಲಿ ರಾಷ್ಟ್ರಪತಿ ಆಡಳಿತ ಜಾರಿಗೆ ತರುವಂತೆ ಕೇಂದ್ರ ಸಚಿವ ಸಂಪುಟ ಇಂದು ಶಿಫಾರಸು ಮಾಡಿತೆಂದು ಗೊತ್ತಾಗಿದೆ.

ರಾಷ್ಟ್ರಪತಿ ಆಡಳಿತವನ್ನು ಜಾರಿಗೆ ತರುವಂತೆ ಮಣಿಪುರದ ರಾಜ್ಯಪಾಲ ಶ್ರೀ ಬಿ.ಕೆ. ನೆಹರೂ ಅವರು ಮಾಡಿರುವ ಶಿಫಾರಸು ಬುಧವಾರ ಇಲ್ಲಿಗೆ ಬಂದು ತಲುಪುವ ನಿರೀಕ್ಷೆ ಇದ್ದು, ಸಂಪುಟವು ಮತ್ತೆ ಬುಧವಾರ ಸಭೆ ಸೇರುತ್ತದೆ.

- **ಆಂಧ್ರ ಪ್ರಶ್ನೆ: ವಿಭಜನೆ ಪರಿಹಾರ ಅಲ್ಲವೆಂದು ಚೆನ್ನಾರೆಡ್ಡಿಗೆ ಸ್ಪಷ್ಟನೆ**

ನವದೆಹಲಿ, ಮಾರ್ಚ್ 27– ಆಂಧ್ರ ಪ್ರದೇಶದ ಯಾವುದೇ ಸಮಸ್ಯೆಯನ್ನು ರಾಜ್ಯ ವಿಭಜನೆ ಪರಿಹರಿಸುವುದಿಲ್ಲವೆಂದು ಪ್ರಧಾನಿ ಇಂದಿರಾ ಅವರು ತೆಲಂಗಾಣದ ಪ್ರತ್ಯೇಕತಾವಾದಿ ನಾಯಕ ಡಾ. ಎಂ. ಚೆನ್ನಾರೆಡ್ಡಿ ಅವರಿಗೆ ತಿಳಿಹೇಳಿದರೆಂದು ತಿಳಿದುಬಂದಿದೆ.

ಐವತ್ತು ನಿಮಿಷಗಳ ಭೇಟಿ, ವೇಳೆ ರಾಜ್ಯದಲ್ಲಿ ಮಾಮೂಲು ಪರಿಸ್ಥಿತಿಯುಂಟು ಮಾಡುವಲ್ಲಿ ಸಹಕರಿಸಬೇಕೆಂದು ಡಾ. ಚೆನ್ನಾರೆಡ್ಡಿ ಅವರನ್ನು ಪ್ರಧಾನಿ ಕೇಳಿದರು.

ವ್ಯಕ್ತಿಗಳು ಶ್ರೀಮಂತರಾಗುತ್ತಾ ಸಂಸ್ಥೆಗಳು ಬಡವಾದ ವರ್ತಮಾನದಲ್ಲಿ ವಿಮಾನಗಳು ರಾರಾಜಿಸುತ್ತವೆ

ಊರುಕೇರಿಗಳೂ ಒಂಟಿ ನಿಲ್ದಾಣಗಳೂ

ವಿಶ್ಲೇಷಣೆ

ಡಾ. ಸಬಿತಾ ಬನ್ನಾಡಿ

ಮೊನ್ನೆ ಮೊನ್ನೆ ಉಕ್ಕಿನ ಹಕ್ಕಿಯೊಂದು ಹಾರಿ ಬಂದುದನ್ನು ದೊಡ್ಡ ಸಂಭ್ರಮವಾಗಿಸಲು ಎಲ್ಲ ಅಂಗಗಳು ಬಹು ಶ್ರಮಿಸಿದುವು. ಆದರೆ ಆ ಹಕ್ಕಿಯು ಅಲ್ಲೇ ಪಕ್ಕದಲ್ಲಿದ್ದ ಉಕ್ಕಿನ ನಗರಿಯನ್ನು ನೋಡಲೇ ಇಲ್ಲ. ಶಿವಮೊಗ್ಗ ಜಿಲ್ಲೆಯ ಈ ಉಕ್ಕಿನ ನಗರಿಯ ತುಂಬ ಸರ್ ಎಂ.ವಿಶ್ವೇಶ್ವರಯ್ಯ ಅವರ ಹೆಸರೇ ರಾರಾಜಿಸುತ್ತಿರುತ್ತದೆ. ಆದರೆ ಉಕ್ಕಿನ ಹಕ್ಕಿ ಬಂದಾಗ ವಿಶ್ವೇಶ್ವರಯ್ಯನವರ ಹೆಸರು ಎಲ್ಲೂ ಕಾಣಲೇ ಇಲ್ಲ. ಇದು ಕಾಲದ ಮಹಿಮೆಯೋ? ಅಥವಾ ಜನರನ್ನು ಮರೆವಿಗೆ ಸರಿಸುವ ಪರಿಯೋ?

'ಗ್ರೀನ್‌ಬುಕ್' ಎಂಬ ಸಿನಿಮಾದಲ್ಲಿ ಪ್ರಸಿದ್ಧ ಪಿಯಾನೊ ವಾದಕನಾಗಿ ಶ್ರೀಮಂತನಾಗಿದ್ದ ಕರಿಯ ವರ್ಣದ ಶರ್ಲೀ ತನ್ನ ವೈಭವೋಪೇತ ಕಾರಿನಲ್ಲಿ ಬಿಳಿಯನನ್ನು ಡ್ರೈವರನನ್ನಾಗಿಸಿಕೊಂಡು ಪಯಣಿಸುವಾಗ ದಾರಿ ಮಧ್ಯದಲ್ಲಿ ಕಾರು ನಿಲ್ಲುತ್ತದೆ. ಅಲ್ಲೇ ಪಕ್ಕದ ಹೊಲದಲ್ಲಿ ಕರಿಯ ಜೀತದಾಳುಗಳು ಅಚ್ಚರಿಯಿಂದ ಈ ದೃಶ್ಯ ನೋಡುತ್ತಾ ಮೂಕವಾಗಿ ನಿಂತುಬಿಡುತ್ತಾರೆ. ಶರ್ಲೀ ಅವರನ್ನು ನೋಡಿಯೂ ನೋಡದಂತೆ ನಟಿಸಿ ಮುಂದಕ್ಕೆ ಹೋಗುತ್ತಾನೆ. ಗೊತ್ತಿದ್ದೂ ಆಗುವ ಈ ಅಂತರಗಳು ಪರಸ್ಪರರ ನಡುವಿನ ಒಡನಾಟವನ್ನು ಒಡೆಯುವ ಜೀವನ ಕ್ರಮವೊಂದರ ಪರಿಣಾಮವೂ ಹೌದು.

ಕಾರ್ಖಾನೆಯೊಂದು ಜನಸಮುದಾಯಗಳನ್ನು ತನ್ನ ಒಡಲಿನಿಂದಲೇ ಬೆಳೆಸುತ್ತಾ ಚಿಗುರಿಸುತ್ತಾ ನೆರಳಾಗುತ್ತಾ ಹೋಗುತ್ತದೆ. ಅದರ ಸುತ್ತಲೂ ಏನೇನೆಲ್ಲಾ ಬೆಳೆಯುತ್ತಾ ಹೋಗುತ್ತದೆ. ಯಾಕೆಂದರೆ ಕಾರ್ಖಾನೆಗಳು ಜನರನ್ನೇ ಕೇಂದ್ರವಾಗಿಸಿಕೊಂಡಿರುತ್ತವೆ. ಜಗತ್ತಿನಾದ್ಯಂತ ಹುಟ್ಟಿದ ಪ್ರಜಾಪ್ರಭುತ್ವದ ಕಲ್ಪನೆಗೂ ಇಂತಹ ಕಾರ್ಖಾನೆಗಳ ಹುಟ್ಟಿಗೂ ಹೊಕ್ಕುಳಬಳ್ಳಿಯ ಸಂಬಂಧ ಇರುವಂತಿದೆ. ಭದ್ರಾವತಿಯೆಂಬ ನದಿದಡದ ಪಟ್ಟಣವನ್ನು ಬೆಳೆಸಿದ ವಿ.ಐ.ಎಸ್.ಎಲ್. ಕಾರ್ಖಾನೆಯನ್ನೇ ನೋಡಿ. ಇದು ಪಟ್ಟಣವೊಂದರಲ್ಲಿ ಎಲ್ಲಾ ಜಾತಿಯ, ಎಲ್ಲಾ ಊರಿನ, ಎಲ್ಲಾ ಅರ್ಹತೆಯ ಜನರೂ ಜೊತೆಯಲ್ಲೇ ಬದುಕುವುದಕ್ಕೆ ಅನುವು ಮಾಡಿಕೊಟ್ಟಿತು. ಪದವೀಧರರು, ಪದವಿ ಇಲ್ಲದವರು, ಅನಕ್ಷರಸ್ಥರು ಎಲ್ಲರೂ ನೆಲೆ ಕಂಡುಕೊಳ್ಳಲು ನೆಲ ನೀಡಿತು. ಕ್ವಾರ್ಟರ್ಸ್‌ಗಳ ಈ ಪೇಟೆಯಲ್ಲಿ ಅಕ್ಕಪಕ್ಕದಲ್ಲಿ ಯಾವ ಜಾತಿಯವರು ಇರುತ್ತಾರೆ ಎಂಬುದು ಮುಖ್ಯವಾಗಲಿಲ್ಲ. ಕಾರ್ಖಾನೆಯೊಂದು ತಾನು ಬೆಳೆಯುತ್ತಲೇ, ತನ್ನೆದುರಿನ ನೆರಳು ನೀಡುವ ಮರಗಳ ಸಾಲಿನ ರಸ್ತೆಯನ್ನೂ ಉದ್ಯಾನವನ್ನೂ ನಿರ್ವಹಿಸುತ್ತಾ, ಅದು ಎಲ್ಲರಿಗೂ ಮುಕ್ತವಾಗಿರುವಂತೆ ಮನುಷ್ಯರ ಮನಸ್ಸುಗಳಲ್ಲೂ ಒಂದು ರೀತಿಯ ಮುಕ್ತತೆಯನ್ನು ಹರಿಸಿತು.

ಬಿ.ಕೃಷ್ಣಪ್ಪ ಅವರಂತಹ ನಾಯಕರನ್ನು ಬೆಳೆಸಿದ ದಲಿತ ಸಂಘಟನೆಯೂ, ಹಲವು ನಾಯಕರನ್ನು ಹುಟ್ಟುಹಾಕಿದ ಕಾರ್ಮಿಕ ಸಂಘಟನೆಗಳೂ ನಿರ್ಭೀತಿಯಲ್ಲಿ ಅಭಿವ್ಯಕ್ತಿ ಮಾಡಲು ಇಲ್ಲಿ ಸಾಧ್ಯವಿತ್ತು. ಅತ್ಯುತ್ತಮ ಗುಣಮಟ್ಟದ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಬೆಳೆಸಿತು. ಅತ್ಯಂತ ಕಡಿಮೆ ಖರ್ಚಿನಲ್ಲಿ ಆರೋಗ್ಯದ ಸೇವೆ ನೀಡುವ ಅತ್ಯುತ್ತಮ ಡಾಕ್ಟರುಗಳನ್ನೊಳಗೊಂಡ ಆಸ್ಪತ್ರೆಯನ್ನು ಊರಿಗೇ ನೀಡಿತು. ಇದರ ಜೊತೆಗೇ ಬೆಳೆದ ಎಂ.ಪಿ.ಎಂ., ಸುತ್ತಲಿನ ರೈತರಿಗೆ ಆಸರೆಯಾಗುತ್ತಾ, ಅತಿ ಕಡಿಮೆ ವೆಚ್ಚದಲ್ಲಿ ಅತ್ಯುಚ್ಚ ಕಾಗದ ಉತ್ಪಾದಿಸಿ ಅಕ್ಷರ ಭಾರತದ ಆಸರೆಯಾಯಿತು.

ಇಂದು ಬರಡಾಗಿಸಲಾಗಿರುವ ಭದ್ರಾವತಿ ಒಂದು ಕಾಲದಲ್ಲಿ ಸಾಂಸ್ಕೃತಿಕ ನಗರಿಯಾಗಿತ್ತು. ತಿಂಗಳುಗಳ ಕಾಲ ಸಾಂಸ್ಕೃತಿಕ ಉತ್ಸವಗಳು, ರಾಜ್ಯ ಮಟ್ಟದ ನಾಟಕ ಸ್ಪರ್ಧೆಗಳನ್ನು ಆಯೋಜಿಸಲಾಗುತ್ತಿತ್ತು. ಇಲ್ಲಿ ಓದಿದವರು, ಇಲ್ಲಿ ಕಲಾವಿದರಾದವರು ಜಗತ್ತಿನಾದ್ಯಂತ ಹಬ್ಬಿ ಹರಡಿಹೋಗಿದ್ದಾರೆ. ಆದರೆ ಎಲ್ಲರೂ ಈ ಊರನ್ನು ಮರೆತಿರುವರೇ? ಇದು ಅವರ ಬೇರು ಆಗಿರದೆ, ಬರೀ ಚಿಮ್ಮುಹಲಗೆಯಷ್ಟೇ ಆಯಿತೇ?

ನನಗೆ ಈ ಊರಿನಲ್ಲಿ ಅತ್ಯಂತ ವಿಶೇಷ ಅನ್ನಿಸಿದ್ದು 'ತಿಂಗಳ ಸಂತೆ'. ಕಾರ್ಖಾನೆಯ ಉದ್ಯೋಗಿಗಳಿಗೆ ಸಂಬಳವಾಗುವ ಎಂಟನೇ ತಾರೀಖಿನ ದಿನದ ಈ ಸಂತೆಯಲ್ಲಿ ಅತ್ಯಂತ ಕಡಿಮೆ ಆದಾಯ ಇರುವವರೂ ತಮ್ಮ ಮನದಿಚ್ಛೆ ಈಡೇರಿಸಿಕೊಳ್ಳಬಹುದಾದಷ್ಟು ಸೋವಿ ದರದಲ್ಲಿ ಮನೆಗೆ ಬೇಕಾದೆಲ್ಲಾ ವಸ್ತುವೈವಿಧ್ಯಗಳು ಇರುತ್ತಿದ್ದವು. ಕಾರ್ಖಾನೆ ಸೊರಗಿದಂತೆ ಈ ಸಂತೆಯೂ ಸೊರಗಿತು. ಇಲ್ಲಿ ನಾನು ಹೇಳಹೊರಡುತ್ತಿರುವುದು ಊರೊಂದರ ವರ್ಣನೆಯಲ್ಲ. ಬದಲಿಗೆ ಈ ಊರುಗಳ ನಿರ್ಮಾಣದ ಹಿಂದಿರುವ ಯೋಜನೆಗಳನ್ನು. ಇಂತಹದೇ ಹಲವು ಊರುಗಳು ನಮ್ಮ ನಾಡಿನಲ್ಲಿ ನಿರ್ಮಾಣವಾಗಿವೆ.

ಒಂದು ಕಾಲದಲ್ಲಿ ಹಳ್ಳಿಗಳಲ್ಲಿ ತಮ್ಮ ಜಾತಿ, ವರ್ಗಗಳಿಂದಾಗಿ ತಾರತಮ್ಯದ ಶಾಪ ಅನುಭವಿಸುತ್ತಿದ್ದವರು ತಮಗೊಂದು ಹೊಸ ಐಡೆಂಟಿಟಿಯನ್ನು ಹೊಂದಲು ಇಂತಹ ಊರುಗಳು ವರವಾಗಿ ಪರಿಣಮಿಸುತ್ತಿದ್ದವು. ಇದು ಜನರ ನಡುವಿನ ಒಡನಾಟಗಳನ್ನು ನೇಯ್ಗೆಯಾಗಿ ಹೊಸೆಯುವ, ಆ ಮೂಲಕ ಪರಸ್ಪರರ ಕಷ್ಟ ಸುಖಗಳನ್ನು ಅರಿಯುವ, ಹಂಚಿಕೊಳ್ಳುವ ಸಾಧ್ಯತೆಗಳ ಎಳೆಯನ್ನು ಹೊಂದಿರುವ ಜೀವನಕ್ರಮಕ್ಕೆ ಪೂರಕವಾದ ಚಿಂತನೆಗಳನ್ನು ಹೊಂದಿತ್ತು. ಆದರೆ ಇಂದು ದೇಶದ ಹೆಸರಿನಲ್ಲಿ ದೇಶೀಯರ ನಡುವೆ ಪ್ರತ್ಯೇಕತೆಯನ್ನು ಉದ್ದೀಪಿಸುವ ಜೀವನಕ್ರಮವನ್ನು ಹೇರಿಕೆ ಮಾಡುವ ಪ್ರಯತ್ನಗಳು ನಡೆಯುತ್ತಿವೆ. ಹೀಗಾಗಿ ಯಾವುದೋ ದೊಂಬಿಯಲ್ಲೋ ವ್ಯಕ್ತಿಗತ ದ್ವೇಷದ ಹೊಡೆದಾಟದಲ್ಲೋ ಸತ್ತವರ ಫೋಟೊಗಳನ್ನು ರಾರಾಜಿಸುತ್ತಾ, ಊರು ಕಟ್ಟಿದ ವಿಶ್ವೇಶ್ವರಯ್ಯನವರ ಫೋಟೊವನ್ನು ಮರೆಗೆ ದಬ್ಬಲಾಗುತ್ತದೆ. ಆ ಮೂಲಕ ಒಂದು ಜೀವನಕ್ರಮವನ್ನೂ ಮರೆವಿಗೆ ತಳ್ಳುವ ಹುನ್ನಾರಗಳಿವೆ. ಎಲ್ಲೆಲ್ಲಾ ಜನರ ನಡುವಿನ ಒಡನಾಟದ ಬದುಕುಗಳನ್ನು ದೂರ ಮಾಡಲಾಗಿದೆಯೋ ಅಲ್ಲೆಲ್ಲಾ ಪರಸ್ಪರ ಅನುಮಾನದ ಅತೃಪ್ತ ಬದುಕುಗಳ ನರಕ ಸೃಷ್ಟಿಯಾಗುತ್ತದೆ. ಆಗೆಲ್ಲಾ ಸಾಂಸ್ಕೃತಿಕ ನಗರಿಗಳು ವ್ಯಾವಹಾರಿಕ ನಗರಿಗಳಾಗತೊಡಗುತ್ತವೆ.



'ಗ್ರೀನ್‌ಬುಕ್' ಎಂದರೆ ಅಮೆರಿಕದಲ್ಲಿ ಕರಿಯ ವರ್ಣೀಯರಿಗೆ ಅಪಾಯಕಾರಿಯಲ್ಲದ, ಸೌಲಭ್ಯ ಇರುವ ಪ್ರದೇಶಗಳ ಪ್ರವಾಸ ಮಾಹಿತಿ ಇರುವ ಪುಸ್ತಕ. 1962ರ ಕತೆಯನ್ನು 2018ರಲ್ಲಿ ತೆರೆಗೆ ತಂದ ಈ ಅಮೆರಿಕನ್ ಸಿನಿಮಾ, ವರ್ಗ ಮತ್ತು ವರ್ಣ ತಾರತಮ್ಯದ ಬದುಕಿನ ಎಳೆಯನ್ನು ಸ್ನೇಹದ ಹಿನ್ನೆಲೆಯಲ್ಲಿ ವಿಶ್ಲೇಷಿಸುವ, ನಿಜಜೀವನ ಆಧಾರಿತವಾದ ಕತೆಯನ್ನು ಹೊಂದಿದೆ. ಪರಸ್ಪರ ಒಡನಾಟದಿಂದ ವ್ಯಕ್ತಿಗಳ ಮನಸ್ಸುಗಳನ್ನು ಬೆಸೆಯುವುದು ಸಾಧ್ಯ ಎಂಬೊಂದು ನಂಬಿಕೆಯನ್ನು ಇದು ಹೊಂದಿದೆ.

ಕರಿಯರೆಡೆಗೆ ತಿರಸ್ಕಾರವಿರುವ, ಅವರು ಕುಡಿದ ಗಾಜಿನ ಲೋಟಗಳನ್ನು ನಾವು ತೊಳೆಯಬೇಕೇ ಎಂಬ ಅಸಹನೆಯಿಂದ ಲೋಟಗಳನ್ನು ಮನೆಯ ಕಸದಬುಟ್ಟಿಗೆ ಹಾಕುವ ಬಿಳಿಯ ಟೋನಿ ಲಿಪ್ ಕಸದಗಾಡಿಯ ಡ್ರೈವರ್. ಹೆಂಡತಿ, ಮಕ್ಕಳು, ಗೆಳೆಯರನ್ನು ಪ್ರೀತಿಸುವ ಈತ ಒರಟ ಮತ್ತು ನೇರವಂತ. ಇರುವ ಕೆಲಸವೂ ಹೋದಾಗ ಅನಿವಾರ್ಯವಾಗಿ ಶರ್ಲೀಯ ಡ್ರೈವರ್ ಆಗಿ ಅವನೊಂದಿಗೆ ತೆರಳುತ್ತಾನೆ. ಶರ್ಲೀಯ ಪಿಯಾನೊ ಪ್ರತಿಭೆಯಿಂದ ಪ್ರಭಾವಿತನಾಗುತ್ತಾ ಅವನನ್ನು ಮೆಚ್ಚಿಕೊಳ್ಳುತ್ತಾನೆ.

ವೇದಿಕೆಯಲ್ಲಿ ಅಪಾರ ಮನ್ನಣೆ ಸಿಕ್ಕರೂ ವೇದಿಕೆಯಿಂದ ಇಳಿಯುತ್ತಿದ್ದಂತೆಯೇ ಕರಿಯನೆಂಬ ಅಪಮಾನ ಎದುರಿಸುವ ಶರ್ಲೀಗೆ, ಆತ ಎಲ್ಲಿ ಪ್ರದರ್ಶನ ನೀಡುತ್ತಾನೋ ಆ ಸಭಾಂಗಣದಲ್ಲಾಗಲೀ ಹೋಟೆಲ್‌ನಲ್ಲಾಗಲೀ ಊಟವನ್ನೂ ವಸತಿಯನ್ನೂ ನೀಡುವುದಿಲ್ಲ. ಮಾತ್ರವಲ್ಲ, ಕಾರ್ಯಕ್ರಮದ ನಡುವಿನ ಬಿಡುವಿನಲ್ಲಿ ಅಲ್ಲಿನ ಶೌಚಾಲಯ ಕೂಡಾ ಅವನಿಗೆ ಲಭ್ಯವಿಲ್ಲ. ಆತ ಬಿಳಿಯರಂತೆಯೇ ಜೀವನಶೈಲಿ ಅಳವಡಿಸಿಕೊಂಡಿದ್ದರೂ ಅವರು ಅದನ್ನು ಲೆಕ್ಕಕ್ಕೇ ಇಟ್ಟಿಲ್ಲ.

ಇದನ್ನೆಲ್ಲಾ ಗಮನಿಸುವ ಟೋನಿಗೆ ಬಿಳಿಯರ ವರ್ತನೆ ಸಿಟ್ಟು ತರಿಸುತ್ತದೆ. ಇದನ್ನೆಲ್ಲಾ ವಿರೋಧಿಸದೆ ಸಭ್ಯತೆ ತೋರುವ ಶರ್ಲೀಯನ್ನು ಜರಿಯುತ್ತಾನೆ. ತಾನು ಎಲ್ಲಾ ಅವಮಾನ ನುಂಗಿಕೊಂಡು ಬಿಳಿಯರ ಮನಃಸ್ಥಿತಿ ಬದಲಿಸಲು ಅವರೊಡನೆ ಒಡನಾಡುತ್ತಿದ್ದೇನೆ ಎನ್ನುವ ಶರ್ಲೀ, ಕೊನೆಗೊಮ್ಮೆ ತನಗೆ ಎಲ್ಲರೊಂದಿಗೆ ಊಟ ಕೊಡದ ನಿಯಮ ಧಿಕ್ಕರಿಸಿ ಕಾರ್ಯಕ್ರಮ ರದ್ದು ಮಾಡಿ ಪ್ರತಿಭಟಿಸುತ್ತಾನೆ, ಬಡ ಕರಿಯರ ರೆಸ್ಟೊರೆಂಟ್‌ನಲ್ಲಿ ನಿರಾಳವಾಗಿ ಪಿಯಾನೊ ನುಡಿಸಿ ಅವರೊಂದಿಗೆ ಬೆರೆಯುತ್ತಾನೆ. ಆ ಬೆರೆಯುವಿಕೆಯ ಸುಖವನ್ನು ಅನುಭವಿಸುತ್ತಾನೆ.

ಜನ ಆ ಸುಖ ಮರೆತ ದಿನ, ಉಕ್ಕಿನಷ್ಟೇ ಗಟ್ಟಿಯಾಗಿತ್ತು ಎಂದು ನಂಬಿದ್ದ ಬದುಕುಗಳನ್ನೂ ತಕ್ಕಡಿ ಹಿಡಿದವರು ಗುಜರಿಗೆ ಹಾಕಿ ಅದೇ ಉಕ್ಕಿನಿಂದ ಹಾರುವ ಹಕ್ಕಿಗಳಾಗುತ್ತಾರೆ. ಕಾರ್ಖಾನೆಗಿಲ್ಲದ ಕೋಟಿಗಳು ನಿಲ್ದಾಣವಾಗಿ ಅರಳುವ ಕಣ್ಕಟ್ಟಿಗೆ ಮರುಳಾಗುವ ನಾವು, ನಿಂತ ನೆಲ ಕುಸಿದರೂ ಹಾರುವ ಕನಸು ಕಾಣುತ್ತೇವೆ.

ಚುರುಮುರಿ

ಪ್ರಣಾಳಿಕೆ- ಡಿಮ್ಯಾಂಡ್

• ಕಲ್ಗಚ್ಚು ಮಹೇಶ ಆರ್. ನಾಯಕ್

'ನೋಡೇ ರುಕ್ಮಿಣಿ, ಪೇಪರ್‌ನಲ್ಲಿ ಏನು ಬಂದಿದೆ ಅಂತ. ಯಾವಾಗಲೂ ಹೇಳ್ತಾ ಇರ್ತೀಯಲ್ಲ ಈ ರಾಜಕಾರಣಿಗಳು ಮನೆ ನಡೆಸೋ ನಮ್ಮ ಹತ್ರ ಏನೂ ಕೇಳಲ್ಲ ಅಂತ. ಈಗ ನೋಡು ಅವರ ಪ್ರಣಾಳಿಕೆಗೆ ನಿನ್ನಂಥ ಮಹಿಳಾಮಣಿಗಳ ಸಲಹೆ, ಸೂಚನೆ ಬೇಕಂತೆ. ಬೇಗ ಬೇಗ ಹೇಳು ನಿನ್ನ ಡಿಮ್ಯಾಂಡು...'

'ಪ್ರಣಾಳಿಕೆ... ಹಾಗಂದ್ರೆ ಏನ್ರೀ ಅದು. ಈ ಪ್ರಣಾಳಶಿಶು ಅಂತಾರಲ್ಲ ಅದುವ... ನಮಗೆ ಈಗ್ಲೇ ಮೂವರು ಮಕ್ಕಳು ಇದ್ದಾವಲ್ಲ ಗಟ್ಟಿಮುಟ್ಟಾಗಿ, ಮತ್ತೆ ಯಾಕೆ ಅವೆಲ್ಲ ಗೋಳು?'

'ಅಯ್ಯೋ... ಈ ಪ್ರಣಾಳಿಕೆ ಆ ರೀತಿದ್ದಲ್ಲ ಕಣೇ... ಈಗ ಎಲೆಕ್ಷನ್ ಆದ್ಮೇಲೆ ಅಧಿಕಾರಕ್ಕೆ ಬರೋ ಪಕ್ಷ ಏನೆಲ್ಲ ನಿಂಗೆ ಕೊಡಬೇಕು, ಅಂದರೆ ಮಹಿಳೆಯರಿಗೆ ಅದೇನೆಲ್ಲ ಬೇಕೂಂತ ಕೇಳೋ ವಿಷಯ ಇದು'.

'ಓಹೋ... ಹಾಗೋ, ಹಾಗಿದ್ರೆ ಹೇಳ್ತೀನಿ ಕೇಳಿ... ಮೊದಲು ನಮಗೂ ಮನೆಯಲ್ಲಿ ವಾರಕ್ಕೆ ಐದು ದಿನ ಕೆಲಸ ಅಂತ ಆಗಬೇಕು, ಮತ್ತೆ ಪ್ರತೀ ಹಬ್ಬಕ್ಕೂ ರೇಷ್ಮೆ ಸೀರೆ, ವರ್ಷಕ್ಕೆ ಐದು ಪವನ್ ಚಿನ್ನದ ಸರ...'

ಹ್ಹ ಹ್ಹ ಹ್ಹ 'ಸಾಕು ಸಾಕು ನಿಲ್ಲಿಸು... ನೀನು ಗಂಡನತ್ರ ಅಲ್ಲ ಕಣೇ.. ಸರ್ಕಾರದವ್ರತ್ರ ಕೇಳ್ತಾ ಇರೋದು. ಅಷ್ಟಕ್ಕೂ ಹಳೆ ಕಾಲದ ಹೆಂಗಸರ ಥರ ಚಿನ್ನ, ಸೀರೆ ಅಂತ ಕೂತ್ಕೋಬೇಡ. ಹೊಸದಾಗೆ ಏನಾದರೂ ಡಿಮ್ಯಾಂಡ್ ಮಾಡೋದನ್ನ ಕಲಿ'.

'ಅಯ್ಯೋ ಸರ್ಕಾರನೂ ಒಂಥರ ಗಂಡ ಇದ್ದಂಗೆ ಕಣ್ರೀ... ನಾವೆಲ್ಲ ಜೋರಾಗಿ ಹೇಳಿದ್ರೆ ಕೇಳೇ ಕೇಳುತ್ತೆ. ಹೊಸದಾಗಿ ನಮಗೆಲ್ಲ ಅದೇನ್ರೀ ಅಂಥ ದೊಡ್ಡ ಆಸೆ ಇರುತ್ತೆ... ಹ್ವಾ... ಬೇಕಾದರೆ ವರ್ಷಕ್ಕೊಮ್ಮೆ ಫಾರಿನ್ ಟೂರ್, ಜತೆಗೆ ಒಂದು ಕಾರು, ಮತ್ತೆ...'

'ಓಕೆ, ಓಕೆ ಎಲ್ಲ ಬರ್ಕೊಂಡೆ. ನಿನ್ನ ಪಟ್ಟಿ ಇನ್ನೂ ದೊಡ್ಡದಾದರೆ, ಆಮೇಲೆ ಎಲೆಕ್ಷನ್ ಅನ್ನೇ ನಿಲ್ಲಿಸಿಬಿಟ್ಟಾರು. ಈಗ ನಮಗೆ ಹೇಳಿರೋ ಅಕ್ಕಿನೂ ತಪ್ಪಿ ಹೋಗಬಹುದು. ಮೊದಲು ತಿಂಡಿ ರೆಡಿ ಮಾಡು. ನಾನು ಪೇಟೆಗೆ ಹೋಗಿ, ವೋಟರ್ ಲಿಸ್ಟ್‌ನಲ್ಲಿ ನಮ್ಮ ಹೆಸರು ಇದೆಯಾ ಇಲ್ವಾ ಅಂತ ನೋಡ್ಕೊಂಡು ಬರ್ಬೇಕು'!

ಸಂಗತ

ತರಗತಿಗೆ ಬರಲಿ ದುಂಡುಮೇಜು

ಶಿಕ್ಷಕರು– ವಿದ್ಯಾರ್ಥಿಗಳ ಸಂಬಂಧ ಸಮರ್ಥ ತರಗತಿ ನಿರ್ವಹಣೆಗೆ ತಳಹದಿ

• ಯೋಗಾನಂದ

ಬದಲಾದ ಈ ದಿನಗಳಲ್ಲಿ ಮಕ್ಕಳಿಗೆ ಸುಧಾರಿತ ಗುಣಮಟ್ಟದ ಶಿಕ್ಷಣ ನೀಡುವುದರ ಬಗ್ಗೆ ವಿಶ್ವದಾದ್ಯಂತ ಚರ್ಚೆಯಾಗುತ್ತಿದೆ. ಶಾಲಾ ಹಂತದಲ್ಲೇ ತೆರೆದ ಮನಸ್ಸು, ವಿಮರ್ಶಾತ್ಮಕ ಚಿಂತನೆ ಹಾಗೂ ಜಗತ್ತು ಪ್ರಸ್ತುತ ಎದುರಿಸುತ್ತಿರುವ ಸವಾಲುಗಳ ಅರಿವು ಮಕ್ಕಳಲ್ಲಿ ಮೂಡಬೇಕೆನ್ನುವುದು ಆಶಯ.

ಒಂದು ದೇಶದ ಏಳಿಗೆಯ ಭವಿತವ್ಯದ ನೀಲನಕ್ಷೆ ರೂಪುಗೊಳ್ಳುವುದು ತರಗತಿಯೆಂಬ ಪುಟ್ಟ ವಿಶ್ವವಿದ್ಯಾಲಯದಲ್ಲಿ. ಅರ್ಥಪೂರ್ಣ ಶಿಕ್ಷಣವು ವಾಸ್ತವ ವಿಶ್ವವನ್ನು ತರಗತಿಯ ಮುಂದಿಡುತ್ತದೆ. ಬೋಧನೆ ಮತ್ತು ಕಲಿಕೆ ಜೀವನಪರ್ಯಂತ ಅಧ್ಯಯನಾಸಕ್ತ ಸಮಾಜದ ನಿರ್ಮಿತಿಯ ಮೂಲಗಳು. ಆದರೆ ತರಗತಿ ಸ್ವಾತಂತ್ರ್ಯಪೂರ್ವದಲ್ಲಿ ಹೇಗಿತ್ತೊ ಹಾಗೆಯೇ ಇದೆ. ಅದೇ ಬೋರ್ಡು, ಅದೇ ಸೀಮೆಸುಣ್ಣ, ಅದೇ ಹೋಂವರ್ಕ್, ಅದೇ ಪರೀಕ್ಷೆ, ಅದೇ ಮೌಲ್ಯಮಾಪನ. ತರಗತಿಯಲ್ಲಿ ಶಿಕ್ಷಕರೇ ಜ್ಞಾನದ ಮೂಲ ಆಕರ ಎಂದು ಭಾವಿಸಲಾಗುತ್ತದೆ. ವಾಸ್ತವವಾಗಿ ತರಗತಿಯಲ್ಲಿ ಗುರುವರ್ಯರು ಮಕ್ಕಳಿಗೆ ಕಲಿಸುವುದರ ಜೊತೆಗೆ ಮಕ್ಕಳಿಂದಲೂ ಕಲಿಯುತ್ತಾರೆ.

ಬೋಧನೆ ಮತ್ತು ಕಲಿಕೆ ಬೇರ್ಪಡಿಸಲಾಗದಷ್ಟು ಪರಸ್ಪರ ಹೆಣೆದುಕೊಂಡಿವೆ. ಈ ಕಾರಣಕ್ಕಾಗಿಯೇ ತರಗತಿಯು ಸಂವಾದದ ರೂಪದಲ್ಲಿರಬೇಕೆಂದು ಹೇಳುವುದು. ಶಿಕ್ಷಕಕೇಂದ್ರಿತ ಆಗುವುದರ ಜೊತೆಗೆ ವಿದ್ಯಾರ್ಥಿಕೇಂದ್ರಿತವೂ ಆದಾಗ ಮಾತ್ರ ತರಗತಿ ಎಂಬ ಬಂಡಿಯ ಸುಸ್ಥಿರ ಓಟ. 'ನಿರಂತರ ಐದು ನಿಮಿಷಗಳಿಗಿಂತ ಹೆಚ್ಚು ಬೋಧಿಸಬೇಡಿ, ವಿದ್ಯಾರ್ಥಿಗಳು ಅರ್ಥಮಾಡಿಕೊಳ್ಳುತ್ತಿದ್ದಾರೆಯೇ ಎಂದು ಹಿಂದಿರುಗಿ ನೋಡಿ' ಎನ್ನುವುದು ಶಿಕ್ಷಕರಿಗೆ ತಜ್ಞರ ಕಿವಿಮಾತು. ವಿದ್ಯಾರ್ಥಿಗಳು ಪಾಠ ಗ್ರಹಿಸಿದ್ದೇವೆಂದು ತಲೆಯಾಡಿಸಿ ಆತ್ಮವಂಚನೆ ಮಾಡಿಕೊಳ್ಳಬಾರದು. ಮಾಸ್ತರರು ಬಂದು ಹೋಗುವವರನ್ನು ಗಮನಿಸುವ ಮತ್ತು ಗೌಜು, ಗದ್ದಲವಿಲ್ಲದಂತೆ ನೋಡಿಕೊಳ್ಳುವ ತರಗತಿಯ ದ್ವಾರಪಾಲಕರಲ್ಲ.

ತರಗತಿ ನಿರ್ವಹಣೆಯೆಂದರೆ ಮಕ್ಕಳನ್ನು ತೆಪ್ಪಗಿರುವಂತೆ ನಿಯಂತ್ರಿಸುವುದಲ್ಲ. ಶಿಕ್ಷಕರು ಮಕ್ಕಳೊಂದಿಗೆ ಅವರು ಒಟ್ಟಾಗಿ ಕಲಿಯುವಂತೆ, ಬೆಳೆಯುವಂತೆ, ಯಶಸ್ವಿಯಾಗುವಂತೆ ಸಕ್ರಿಯರಾಗುವುದು. ಹೇರುವ ಕಠಿಣ ಶಿಸ್ತು, ಕಟ್ಟುಪಾಡುಗಳೇ ಕೆಲವೊಮ್ಮೆ ಮಕ್ಕಳ ಕಲಿಕೆಗೆ ಅಡೆತಡೆಗಳಾಗಬಹುದು. ಒಪ್ಪ ಓರಣ, ನಾಜೂಕು ಸಾಮಾನ್ಯ ಪ್ರಜ್ಞೆ. ಇಂಥ ನಿಯಮಗಳನ್ನು ವಿಧಿಸುವ ಹಿನ್ನೆಲೆಯನ್ನು ವಿವರಿಸಿದರೆ ಬಹುಮಟ್ಟಿಗೆ ಮಕ್ಕಳು ತಪ್ಪದೆ ಪಾಲನೆಗಿಳಿದಾರು.

ಕ್ಯಾಲಿಫೋರ್ನಿಯಾದ ಶಾಲೆಯೊಂದರಲ್ಲಿ ಮಕ್ಕಳಿಗೆ ಬರೆಯಲು ಅವರವರ ಹೆಸರು ನಮೂದಿಸಿಯೇ ಪೆನ್ಸಿಲ್ ಒದಗಿಸುತ್ತಾರೆ. ಯಾರ್‍ಯಾರು ಪೆನ್ಸಿಲ್ ಮುರಿಯುತ್ತಾರೆ, ಮೊಂಡಾಗಿಸುತ್ತಾರೆ, ಅಗಿಯುತ್ತಾರೆಂದು ತಿಳಿಯುವ ಉಪಾಯವಿದು! ಇವು ವಿದ್ಯುನ್ಮಾನ ದಿನಮಾನಗಳು. ಮಕ್ಕಳು ಮೊಬೈಲ್, ಸ್ಮಾರ್ಟ್‌ಫೋನ್‌ಗಳಿಂದ ಕಲಿಯುವ ಅವಕಾಶಗಳು ಹೆಚ್ಚು. ಆದರೆ ಎಲ್ಲಿ, ಹೇಗೆ ಅವನ್ನು ಹಿತಮಿತವಾಗಿ ಬಳಸಬೇಕೆಂಬ ಮಾರ್ಗದರ್ಶನ ಅವರಿಗೆ ಬೇಕಿದೆ. ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ವಿದ್ಯುನ್ಮಾನ ಪರಿಕರಗಳು ಅತಿಕ್ರಮಿಸಬಾರದೆಂಬ ಎಚ್ಚರವನ್ನು ಅವರಲ್ಲಿ ಮೂಡಿಸುವುದು ಅಗತ್ಯ.

ತರಗತಿಗೆ ಬರುತ್ತಲೇ ಗಣಿತದ ಮಾಸ್ತರರು ಬೋರ್ಡಿನ ಮೇಲೆ ಅಸಂಬದ್ಧ ಒಕ್ಕಣೆಗಳನ್ನು ಗಮನಿಸುತ್ತಾರೆನ್ನಿ. ಸಿಟ್ಟಿಗೆ ಬದಲಾಗಿ ಶಾಂತಚಿತ್ತದ ಪರ್ಯಾಯ ಮಾರ್ಗಗಳಿಗೆ ಅವರಿಗೆ ಬರವಿಲ್ಲ. ದುರ್ವರ್ತನೆ ನಿರ್ಲಕ್ಷಿಸಬಹುದು, ಸ್ವತಃ ಬೋರ್ಡ್ ಅಳಿಸಿದರೂ ಆಯಿತು. ನೋಡಿ, ಹೀಗೆಲ್ಲ ಗೀಚುವ ಬದಲು ಹೇಳಿಕೊಟ್ಟ ಕೋಷ್ಟಕ, ಸಮೀಕರಣಗಳನ್ನು ಬರೆದರೆ ನಿಮಗೇನೆ ಉಪಯೋಗವಾಗುವುದಲ್ಲ ಎನ್ನುವುದು ರಾಜಮಾರ್ಗ. ಮಕ್ಕಳು ಪಠ್ಯರೀತಿಯ ಸಲಹಾಸೂತ್ರಗಳಿಗಿಂತ ಬದುಕಿನ ಆಗುಹೋಗುಗಳ ನಿದರ್ಶನಗಳಿಗೆ ಗಾಢವಾಗಿ ಸ್ಪಂದಿಸುತ್ತಾರೆ. ಮಗು ತಂತಾನೆ ನಡಿಗೆ ಕಲಿಯುವುದು. ನಡೆಯುತ್ತಿರುವ ಇನ್ನೊಂದು ಮಗುವನ್ನು ಅದು ಕಣ್ಣೆತ್ತಿಯೂ ನೋಡದು! ಒಂದೊಂದು ಶಸ್ತ್ರಚಿಕಿತ್ಸೆಯೂ ಭಿನ್ನ. ಅಕ್ಕಪಕ್ಕದ ಮೇಜು ನೋಡಿ ಶಸ್ತ್ರಕ್ರಿಯೆ ನಡೆಸಲಾದೀತೆ? ಇಂತಹ ಉದಾಹರಣೆಗಳು ಹೋಮ್‌ವರ್ಕ್, ಪರೀಕ್ಷೆಗಳಲ್ಲಿ ನಕಲು ತಪ್ಪಿಸುವ ಪ್ರವೃತ್ತಿಗೆ ಕಡಿವಾಣ ಹಾಕಬಲ್ಲವು.



18ನೇ ಶತಮಾನದ ವಿಶ್ವಮಾನ್ಯ ಬಹುಮುಖ ಸಾಧಕ ಪ್ರತಿಭೆ ಬೆಂಜಮಿನ್ ಫ್ರಾಂಕ್ಲಿನ್‌ರ ನುಡಿ ಪ್ರಸಿದ್ಧವಾಗಿದೆ: 'ಹೇಳು, ನಾನು ಮರೆಯುವೆ. ಬೋಧಿಸು, ನಾನು ನೆನಪಿಡುವೆ. ಒಳಗೊಳ್ಳು, ನಾನು ಕಲಿಯುವೆ'. ಇಂದಿನ ವಿದ್ಯಾರ್ಥಿಗಳನ್ನು ನಾಳೆಗೆ ಪುನರ್ ಕಲ್ಪಿಸಿಕೊಳ್ಳುವ ದಿಸೆಯಲ್ಲಿ ಶಿಕ್ಷಕರು ಕರ್ತವ್ಯಶೀಲರಾಗಬೇಕಿದೆ.

'ಪ್ರಶ್ನೆ- ಉತ್ತರ' ಕ್ರಮದಲ್ಲಿ ಕಲಿಸುವುದಕ್ಕಿಂತ ಮಕ್ಕಳು ಪ್ರಶ್ನೆಗಳಿಗೆ ತಾವೇ ಉತ್ತರಗಳನ್ನು ಕಂಡುಕೊಳ್ಳುವಂತೆ ಬೋಧಿಸುವ ವಿಧಾನ ಪರಿಣಾಮಕಾರಿ. ಈ ಉದ್ದೇಶಕ್ಕಾಗಿ ಅವರಲ್ಲಿ ಸಮೂಹ ಚರ್ಚೆ ಏರ್ಪಡಬೇಕು. ಚಿಕ್ಕ ಚಿಕ್ಕ ಗುಂಪುಗಳನ್ನು ರಚಿಸಿ ಚರ್ಚೆಗೆ ಅನುವು ಮಾಡಿಕೊಡಬೇಕು. ತರಗತಿಯಲ್ಲಿ ಸಾಂಪ್ರದಾಯಿಕ ಮೇಜುಗಳನ್ನು ತೆಗೆದು ದುಂಡುಮೇಜುಗಳನ್ನು ಹಾಕಬೇಕಿದೆ. ವಿದ್ಯಾರ್ಥಿಗಳಲ್ಲಿ ಸ್ವಜಾಗೃತಿ ಉಂಟಾಗಲು ಅವರಿಗೆ ಪೂರ್ಣ ಅಧಿಕಾರ ನೀಡಬೇಕು, ಅವರ ಆಯ್ಕೆ ಮತ್ತು ವಿಧಾನಗಳಲ್ಲಿ ವಿಶ್ವಾಸವಿಡಬೇಕು.

ಕಲಿಕೆ ಒಟ್ಟಾರೆ ಮಕ್ಕಳ ಹೊಣೆಗಾರಿಕೆಯೆ. ಕುದುರೆಯನ್ನು ನೀರಿನತನಕ ಒಯ್ಯಬಹುದು. ನೀರು ಕುಡಿಯಬೇಕಾದ್ದು ಕುದುರೆಯೇ. 'ವಿದ್ಯಾರ್ಥಿಗಳು ಒಳ್ಳೆಯ ನಡತೆ ಹೊಂದಿರುವುದಲ್ಲದೆ ತಮ್ಮ ಸಹಪಾಠಿಗಳೂ ಅಸಭ್ಯ ವರ್ತನೆಗೆ ಮುಂದಾಗದಂತೆ ನೋಡಿಕೊಳ್ಳಬೇಕು' ಎಂದರು ಮಹಾತ್ಮ ಗಾಂಧಿ. ಸಂಪನ್ನತೆ ಇಲ್ಲದಿದ್ದರೆ ಎಷ್ಟು ವಿದ್ಯೆ ಕಲಿತರೂ ಅದೆಲ್ಲವೂ ವ್ಯರ್ಥ ಎನ್ನುವುದು ಅವರ ನಿಲುವಾಗಿತ್ತು.

ವಾಚಕರ ವಾಣಿ

ಎತ್ತಿಕಟ್ಟುವ ಆಟ, ಅಸಮ ಆಡುಂಬೊಲ

ಪ್ರವರ್ಗ 2ಬಿ ಅಡಿ ಮುಸ್ಲಿಂ ಸಮುದಾಯಕ್ಕೆ ನೀಡಿದ್ದ ಶೇಕಡ 4ರಷ್ಟು ಮೀಸಲಾತಿಯನ್ನು ರಾಜ್ಯ ಸರ್ಕಾರ ಈಗ ತೆಗೆದುಹಾಕಿ, ಅದನ್ನು ಒಕ್ಕಲಿಗರು ಮತ್ತು ವೀರಶೈವ- ಲಿಂಗಾಯತ ಸಮುದಾಯಗಳಿಗೆ ಸಮಾನವಾಗಿ ಹಂಚಿರುವುದು ಬಹುದೊಡ್ಡ ಅನ್ಯಾಯದ ನಡೆ. ಅದರ ಮೇಲೆ, ಮುಸ್ಲಿಮರನ್ನು ಆರ್ಥಿಕವಾಗಿ ದುರ್ಬಲ ವರ್ಗದ (ಇಡಬ್ಲ್ಯುಎಸ್) ಪಟ್ಟಿಗೆ ಸೇರಿಸಲು ನಿರ್ಧರಿಸಿರುವುದು ಇನ್ನೂ ದೊಡ್ಡ ಅನ್ಯಾಯದ ನಡೆ. ಇದು ಜಾರಿಗೆ ಬಂದರೆ ಇಡಬ್ಲ್ಯುಎಸ್ ಕೋಟಾದ ಅಡಿ, ಈಗಾಗಲೇ ಸಾಮಾಜಿಕ ಬಂಡವಾಳ ಹೊಂದಿರುವ ಬ್ರಾಹ್ಮಣರೇ ಮೊದಲಾದ ಪ್ರಬಲ ಜಾತಿಗಳ ಅಭ್ಯರ್ಥಿಗಳ ಜೊತೆಗೆ ಮುಸ್ಲಿಮರು ಸ್ಪರ್ಧಿಸಬೇಕಾಗುತ್ತದೆ. ಹಾಗಾಗಿ ಅದು ತುಂಬಾ ಅಸಮವಾದ ಆಡುಂಬೊಲವೇ ಆಗಿದ್ದು, ಅಲ್ಲಿ ಮುಸ್ಲಿಮರ ಹಕ್ಕುಗಳಿಗೆ ಖಂಡಿತವಾಗಿಯೂ ಧಕ್ಕೆ ಆಗುತ್ತದೆ.

ಇದೆಲ್ಲವೂ ಮುಸ್ಲಿಮರ ಪಾಲಿನ ಇದ್ದಬದ್ದ ಹಕ್ಕನ್ನೂ ಕಿತ್ತುಕೊಂಡು ಅವರನ್ನು ಸಾಮಾಜಿಕ ಅವಕಾಶಗಳಿಂದ ಸಂಪೂರ್ಣ ದೂರಮಾಡುವ ಬಿಜೆಪಿ- ಸಂಘ ಪರಿವಾರ– ಪ್ರಬಲ ಜಾತಿಗಳ ಹುನ್ನಾರದ ಒಂದು ಆಟ. ಒಕ್ಕಲಿಗರು, ಲಿಂಗಾಯತರು ಮತ್ತು ಬ್ರಾಹ್ಮಣರ ವಿರುದ್ಧ ಮುಸ್ಲಿಮರನ್ನೂ ಮುಸ್ಲಿಮರ ವಿರುದ್ಧ ಆ ಎಲ್ಲ ಜಾತಿಗಳವರನ್ನೂ ಎತ್ತಿಕಟ್ಟಲು ಹೂಡಿರುವ ಹೂಟ.

'ಮುಸ್ಲಿಮರಿಂದ ಕಿತ್ತುಕೊಂಡು ನೀಡುವ ಸೌಲಭ್ಯ ನಮಗೆ ಬೇಡ. ಅವರ ಪಾಲನ್ನು ಅವರಿಗೇ ಹಿಂದಿರುಗಿಸಿ' ಎಂದು ಸರ್ಕಾರದ ವಿರುದ್ಧ ಈ ಪ್ರಬಲ ಸಮುದಾಯಗಳು, ಅವುಗಳನ್ನು ಪ್ರತಿನಿಧಿಸುವ ಒಕ್ಕಲಿಗರ ಸಂಘ, ವೀರಶೈವ- ಲಿಂಗಾಯತ ಮಹಾಸಭಾ ಹಾಗೂ ಬ್ರಾಹ್ಮಣರ ಮಹಾಸಭಾ ದನಿ ಎತ್ತಬೇಕು. ಈ ಅನ್ಯಾಯವನ್ನು ಎಲ್ಲರೂ ಖಂಡಿಸಬೇಕು. ಇಲ್ಲದಿದ್ದಲ್ಲಿ ಕರ್ನಾಟಕದ ಹೆಸರಲ್ಲಿ, ಕನ್ನಡಿಗರ ಹೆಸರಲ್ಲಿ ಸರ್ಕಾರ ಮಾಡುತ್ತಿರುವ ಈ ಅಧರ್ಮದ ಕೆಲಸದಲ್ಲಿ ನಾವೆಲ್ಲ ಶಾಮೀಲಾದಂತೆ ಆಗುತ್ತದೆ.

ರಘುನಂದನ, ಬೆಂಗಳೂರು

ಜನರ ಧ್ವನಿ ಅಡಗಿಸುವ ಯತ್ನ

ವಿಜಯಪುರದಲ್ಲಿ ಇತ್ತೀಚೆಗೆ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ 106ನೇ ವಾರ್ಷಿಕ ಅಧಿವೇಶನವು ನಿಗದಿತ ಸಮಯಕ್ಕಿಂತ ಒಂದು ಗಂಟೆ ತಡವಾಗಿ ಶುರುವಾಗಿ, ಅರ್ಧ ಗಂಟೆ ಅವಧಿಯಲ್ಲಿ ಮುಗಿಯಿತು. ಬೇಗ ಏಕೆ ಮುಗಿಯಿತು ಎಂದರೆ, ಯಾವ ಸದಸ್ಯರಿಗೂ ತಮ್ಮ ವಿಚಾರ ಹಂಚಿಕೊಳ್ಳಲು ಹಾಗೂ ಪ್ರಶ್ನೆಗಳನ್ನು ಕೇಳಲು ಅವಕಾಶ ಕೊಡಲಿಲ್ಲ ಎಂಬ ಕಾರಣಕ್ಕಾಗಿ. ಅಧ್ಯಕ್ಷರ ಭಾಷಣದ ನಂತರ ಪ್ರಶ್ನೆ ಕೇಳಲು ಅವಕಾಶ ಕೊಡುವುದಾಗಿ ನಿರೂಪಕರು ಹೇಳಿದ್ದರು. ಅಧ್ಯಕ್ಷರು ತಮ್ಮ ಭಾಷಣ ಮುಗಿಸಿ ವೇದಿಕೆಯಿಂದ ಇಳಿದೇಬಿಟ್ಟರು. ಯಾರು ಏನು ಕೇಳುತ್ತಾರೋ ಎಂಬ ಭಯ ಅವರಿಗೆ ಇದ್ದಿತೋ ಏನೋ?!

ಕೆಲವರು ವೇದಿಕೆಯ ಬಳಿ ಬಂದು ಪ್ರಶ್ನೋತ್ತರಕ್ಕೆ ಅವಕಾಶ ಕೊಡಿ ಎಂದು ಒತ್ತಾಯಿಸಿದರು. ಅದಕ್ಕೆ ಪರಿಷತ್ತಿನ ಪರವಾದ ಕೆಲವರು, 'ಇಲ್ಲೇನು ಕೇಳುತ್ತೀರಿ, ಏನಾದರೂ ಕೇಳುವುದಿದ್ದರೆ ಬೆಂಗಳೂರಿಗೆ ಹೋಗಿ...' ಎಂದು ಅಬ್ಬರಿಸಿದರು. ಅವರ ಅಟಾಟೋಪಕ್ಕೆ, ವೇದಿಕೆ ಬಳಿ ಬಂದ ಸದಸ್ಯರ ಧ್ವನಿ ಅಡಗಿತು. ಇದೆಂಥ ವಾರ್ಷಿಕ ಅಧಿವೇಶನ?

ಸುಭಾಸ ಯಾದವಾಡ, ವಿಜಯಪುರ

ಉಚಿತ ಸೇವೆ ಎಲ್ಲರಿಗೂ ಮಾದರಿ

ಸತ್ಯಸಾಯಿ ಗ್ರಾಮದಲ್ಲಿ ಉಚಿತ ವೈದ್ಯಕೀಯ ಶಿಕ್ಷಣ ಕಾಲೇಜು ಕಾರ್ಯಾರಂಭ ಮಾಡಿರುವ ಸುದ್ದಿ (ಪ್ರ.ವಾ., ಮಾರ್ಚ್ 27) ಓದಿ ನಿಜಕ್ಕೂ ಇದು ಕನಸೋ ನನಸೋ ಒಂದೂ ಗೊತ್ತಾಗಲಿಲ್ಲ. 'ನೀಟ್' ಬರೆದು ಸರ್ಕಾರಿ ಕೋಟಾದಲ್ಲಿ ಸೀಟು ದೊರೆತರೂ ವೈದ್ಯಕೀಯ ಪದವಿ ಪಡೆಯಲು ಕನಿಷ್ಠ ಐದಾರು ಲಕ್ಷ ರೂಪಾಯಿ ಖರ್ಚಾಗುತ್ತದೆ. ಅಂಥಾದ್ದರಲ್ಲಿ ಒಂದು ರೂಪಾಯಿಯೂ ಖರ್ಚಾಗದಂತೆ ಎಲ್ಲ ಉಚಿತ ಎಂಬುದನ್ನು ತಿಳಿದು ಹೀಗೂ ಉಂಟೆ ಎನಿಸಿತು.

ವೈದ್ಯಕೀಯ ಶಿಕ್ಷಣದ ಜೊತೆಗೆ ವೈದ್ಯಕೀಯ ಸೇವೆಯೂ ಉಚಿತ, ಅದರಲ್ಲೂ ಅಲ್ಲಿ ಬಿಲ್ಲಿಂಗ್ ಕೌಂಟರ್‌ಗಳೇ ಇಲ್ಲ. ಇಂಥ ಅಪರೂಪದ ವೈದ್ಯಕೀಯ ಸಂಸ್ಥೆಯನ್ನು ನಡೆಸುತ್ತಿರುವ ಪ್ರಶಾಂತಿ ಬಾಲಮಂದಿರ ಟ್ರಸ್ಟ್ ನಿಜಕ್ಕೂ ಅಭಿನಂದನಾರ್ಹ.

ಎಚ್.ಆರ್.ವಸ್ತ್ರದ, ಧಾರವಾಡ

ಪ್ರಾಣಿಗಳ ಬಾಯಾರಿಕೆ ನೀಗಲಿ

ಹಂಪಿಯ ವಿರೂಪಾಕ್ಷ ದೇವಾಲಯದಲ್ಲಿ ಅನೇಕ ಮಂಗಗಳು ಪ್ರವಾಸಿಗರ ಕೈಯಿಂದ ನೀರಿನ ಬಾಟಲಿಯನ್ನು ಕಸಿದು ನೀರನ್ನು ಕೆಳಗೆ ಚೆಲ್ಲಿ ಕುಡಿಯುವುದನ್ನು ನೋಡಿ ಕರುಳು ಚುರುಕ್ ಎಂದಿತು. ಈಗ ಬೇಸಿಗೆ ಕಾಲ. ಸಂಬಂಧಿಸಿದ ಅಧಿಕಾರಿಗಳು ಸಿಮೆಂಟಿನ ಅಥವಾ ಕಲ್ಲಿನ ಬಾನಿಗಳನ್ನು ಮಾಡಿಸಿ ದೇವಾಲಯದ ಪ್ರಾಂಗಣದಲ್ಲಿ ಮತ್ತು ಹೊರಗೆ ಇರಿಸಬೇಕು. ಅವುಗಳಲ್ಲಿ ನೀರು ತುಂಬಿಸಿ ಮಂಗಗಳು ಕುಡಿಯಲು ಅನುವು ಮಾಡಿಕೊಡಬೇಕು.

ಮುರುಗೇಶ್ ಹನಗೋಡಿಮಠ, ಹುಬ್ಬಳ್ಳಿ

ಪ್ಯಾನ್– ಆಧಾರ್: ಗಡುವು ವಿಸ್ತರಿಸಿ

ಪ್ಯಾನ್ ಕಾರ್ಡ್‌ಗೆ ಆಧಾರ್ ಜೋಡಣೆ ಮಾಡಲು ಇದೇ 31ರ ಒಳಗೆ ₹ 1,000 ಶುಲ್ಕ ಪಾವತಿಸಬೇಕು. ಇಲ್ಲದಿದ್ದರೆ ಪ್ಯಾನ್ ನಿಷ್ಕ್ರಿಯಗೊಳಿಸಲಾಗುವುದು ಎಂದು ಕೇಂದ್ರ ಸರ್ಕಾರ ತಿಳಿಸಿದೆ. ದೇಶದ ಗ್ರಾಮೀಣ ಭಾಗಗಳ ಅನೇಕರಿಗೆ ಇಂದಿಗೂ ಈ ವಿಷಯದ ಬಗ್ಗೆ ಅರಿವು ಇಲ್ಲ. ಜಾಗೃತಿ ಮೂಡಿಸುವ ಅಗತ್ಯ ಇದೆ. ಮೊದಲೇ ಬೆಲೆ ಏರಿಕೆಯ ಬಿಸಿಯಿಂದ ಬಸವಳಿದಿರುವ ಜನರಿಗೆ ₹ 1000 ಶುಲ್ಕವು ಗಾಯದ ಮೇಲೆ ಬರೆ ಎಳೆದಂತಾಗಿದೆ. ಈ ಶುಲ್ಕವನ್ನು ಬೇಕಾದರೆ ತೆರಿಗೆ ಪಾವತಿದಾರರಿಗೆ ವಿಧಿಸಲಿ. ಆದರೆ ತೆರಿಗೆ ಪಾವತಿದಾರರಲ್ಲದವರಿಗೂ ವಿಧಿಸುತ್ತಿರುವುದು ಮೂರ್ಖತನದ ಪರಮಾವಧಿ. ಕೇಂದ್ರ ಸರ್ಕಾರ ಈ ಯೋಜನೆಗೆ ನೀಡಿರುವ ಗಡುವನ್ನು ಇನ್ನೂ ಆರು ತಿಂಗಳು ವಿಸ್ತರಿಸುವುದರ ಜೊತೆಗೆ ಒಂದು ಸಾವಿರ ರೂಪಾಯಿ ದಂಡ ಶುಲ್ಕದಿಂದ ವಿನಾಯಿತಿ ನೀಡಲಿ.

ಮುರುಗೇಶ ಡಿ., ದಾವಣಗೆರೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪ್ಯಾನ್–ಆಧಾರ್ ಜೋಡಣೆಗೆ ಶುಲ್ಕ
ಸರ್ಕಾರ ಸಂಗ್ರಹಿಸಿದ್ದೆಷ್ಟು...

ಪ್ಯಾನ್ ಮತ್ತು ಆಧಾರ್ ಜೋಡಣೆಗೆ ಇದೇ ಮಾರ್ಚ್ 31ಅನ್ನು ಕಡೆಯ ದಿನ ಎಂದು ವರ್ಷದ ಹಿಂದೆಯೇ ಕೇಂದ್ರ ಸರ್ಕಾರ ಘೋಷಿಸಿದೆ. ಪ್ಯಾನ್ ಮತ್ತು ಆಧಾರ್ ಜೋಡಣೆಗೆ ₹1,000 ಶುಲ್ಕವನ್ನೂ ಸರ್ಕಾರ ನಿಗದಿ ಮಾಡಿದೆ. ವರ್ಷದ ಹಿಂದೆಯೇ ಇಂತಹ ಸುತ್ತೋಲೆ ಹೊರಡಿಸಿದ್ದರೂ, ಈಗ ಗಡುವು ಮುಗಿಯುವ ಹಂತದಲ್ಲಿ ಇದು ಹೆಚ್ಚು ಸುದ್ದಿಯಾಗುತ್ತಿದೆ. ಪ್ಯಾನ್ ಜತೆಗೆ ಆಧಾರ್ ಜೋಡಿಸಲು ₹1,000 ಶುಲ್ಕವನ್ನೇಕೆ ತೆರಬೇಕು ಎಂದು ಹಲವರು ಸಾಮಾಜಿಕ ಜಾಲತಾಣಗಳಲ್ಲಿ ಪ್ರಶ್ನಿಸುತ್ತಿದ್ದಾರೆ. ಸರ್ಕಾರದ್ದೇ ಮಾಹಿತಿಯ ಪ್ರಕಾರ ಇನ್ನೂ 13 ಕೋಟಿ ಪ್ಯಾನ್‌ಗಳನ್ನು ಆಧಾರ್ ಜತೆಗೆ ಜೋಡಿಸಬೇಕಿದೆ. ಇದು ಕಾರ್ಯಗತವಾದರೆ ಸರ್ಕಾರಕ್ಕೆ ಅಂದಾಜು ₹13,000 ಕೋಟಿ ಆದಾಯ ಸಂಗ್ರಹವಾಗಲಿದೆ

ಪ್ರಜಾವಾಣಿ ವಾರ್ತೆ

ಒಬ್ಬನೇ ವ್ಯಕ್ತಿ ಒಂದಕ್ಕಿಂತ ಹೆಚ್ಚು ಪ್ಯಾನ್ ಹೊಂದಿರುವುದನ್ನು ತಪ್ಪಿಸುವ ಉದ್ದೇಶದಿಂದ, ಪ್ಯಾನ್ ಜತೆಗೆ ಆಧಾರ್ ಜೋಡಿಸುವ ವ್ಯವಸ್ಥೆಯನ್ನು 2017ರ ಏಪ್ರಿಲ್‌ನಲ್ಲಿ ಕೇಂದ್ರ ಸರ್ಕಾರವು ಜಾರಿಗೆ ತಂದಿತ್ತು. ಪ್ಯಾನ್–ಆಧಾರ್ ಜೋಡಣೆಗೆ ಆಗ ಸರ್ಕಾರವು ಯಾವುದೇ ಶುಲ್ಕ ವಿಧಿಸಿರಲಿಲ್ಲ. ಆದರೆ, ನಿರೀಕ್ಷಿತ ಮಟ್ಟದಲ್ಲಿ ಜೋಡಣೆ ಕಾರ್ಯಗತವಾಗಲಿಲ್ಲ. ಹೀಗಾಗಿ ಪ್ಯಾನ್–ಆಧಾರ್ ಜೋಡಣೆಗೆ ನೀಡಿದ್ದ ಗಡುವನ್ನು ಸರ್ಕಾರವು ಹಲವು ಬಾರಿ ವಿಸ್ತರಿಸಿತ್ತು. ಕೊನೆಯ ಹಂತದ್ದು ಎಂದು ಹೇಳಿ 2022ರ ಮಾರ್ಚ್‌ನಲ್ಲಿ ವಿಸ್ತರಿಸಿದ ಗಡುವು 2023ರ ಮಾರ್ಚ್ 31ಕ್ಕೆ ಕೊನೆಯಾಗಲಿದೆ. 'ಆಧಾರ್ ಜೊತೆಗೆ ಜೋಡಣೆಯಾಗದ ಪ್ಯಾನ್‌ಗಳನ್ನು ಇದೇ ಮಾರ್ಚ್ 31ರ ನಂತರ ಬಳಸಲು ಸಾಧ್ಯವಿಲ್ಲ. ಆನಂತರ ವ್ಯಾವಹಾರಿಕ ಮತ್ತು ತೆರಿಗೆ ಲಾಭಗಳನ್ನು ಕಳೆದುಕೊಳ್ಳಬೇಕಾಗುತ್ತದೆ' ಎಂದು ಕೇಂದ್ರೀಯ ನೇರ ತೆರಿಗೆ ಮಂಡಳಿ ಅಧ್ಯಕ್ಷ ನಿತಿನ್ ಗುಪ್ತಾ ಈಚೆಗೆ ಹೇಳಿದ್ದರು.

ಪ್ಯಾನ್ ಅನ್ನು ಆಧಾರ್ ಜತೆಗೆ ಜೋಡಿಸಲು ಶುಲ್ಕವನ್ನೇಕೆ ತೆರಬೇಕು ಎಂದು ಟ್ವಿಟರ್ ಮತ್ತು ಫೇಸ್‌ಬುಕ್‌ಗಳಲ್ಲಿ ಹಲವರು ಪ್ರಶ್ನಿಸಿದ್ದಾರೆ. ಕಾಂಗ್ರೆಸ್‌ನ ಲೋಕಸಭಾ ಸದಸ್ಯ ಅಧೀರ್ ರಂಜನ್ ಚೌಧರಿ ಸಹ ಇದೇ ಪ್ರಶ್ನೆಯನ್ನು ಎತ್ತಿದ್ದರು. ಶುಲ್ಕವನ್ನು ರದ್ದುಪಡಿಸಿ ಎಂದು ಪ್ರಧಾನಿ ನರೇಂದ್ರ ಮೋದಿ ಮತ್ತು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಆಗ್ರಹಿಸಿದ್ದರು. ಪತ್ರವನ್ನೂ ಬರೆದಿದ್ದರು. ಶುಲ್ಕ ಏಕೆ ತೆರಬೇಕು ಎಂಬ ಪ್ರಶ್ನೆಯೂ ಆನಂತರ ದೊಡ್ಡಮಟ್ಟದಲ್ಲಿ ಕೇಳಿಬರುತ್ತಿದೆ.

ಪ್ಯಾನ್ ಜೊತೆಗೆ ಆಧಾರ್ ಜೋಡಿಸಲು ಮೊದಲು ₹500 ಶುಲ್ಕವನ್ನು ನಿಗದಿ ಮಾಡಲಾಗಿತ್ತು. ನಂತರ ಅದನ್ನು ₹1,000ಕ್ಕೆ ಹೆಚ್ಚಿಸಲಾಯಿತು. ಈ ಕಾರ್ಯಕ್ಕೆ ಶುಲ್ಕ ವಿಧಿಸಲು ಮೂಲ ಕಾಯ್ದೆ ಅಥವಾ ನಿಯಮಗಳಲ್ಲಿ ಅವಕಾಶವಿರಲಿಲ್ಲ. ಹೀಗಾಗಿ 2021ರ ಹಣಕಾಸು ಕಾಯ್ದೆಯಲ್ಲಿ ತಿದ್ದುಪಡಿಯನ್ನು ತರಲಾಗಿತ್ತು. 1961ರ ಆದಾಯ ತೆರಿಗೆ ಕಾಯ್ದೆಗೆ ಹೊಸದಾಗಿ 234ಎಚ್ ಎಂಬ ಸೆಕ್ಷನ್ ಅನ್ನು ಸೇರಿಸಲಾಯಿತು. 'ಸರ್ಕಾರವು ನಿಗದಿ ಮಾಡಿದ ಗಡುವಿನ ಒಳಗೆ ಪ್ಯಾನ್–ಆಧಾರ್ ಜೋಡಣೆ ಮಾಡದೇ ಇದ್ದವರು, ನಂತರದ ಅವಧಿಯಲ್ಲಿ ಶುಲ್ಕ ಪಾವತಿಸಬೇಕಾಗುತ್ತದೆ' ಎಂದು ಈ ಸೆಕ್ಷನ್‌ನಲ್ಲಿ ವಿವರಿಸಲಾಗಿದೆ. ಹೀಗಾಗಿ ಈಗ ಪ್ಯಾನ್–ಆಧಾರ್ ಜೋಡಣೆ ಮಾಡುವವರು ₹1,000 ಶುಲ್ಕ ಪಾವತಿಸಲೇಬೇಕು.

ಸರ್ಕಾರದ ಮಾಹಿತಿ ಪ್ರಕಾರ 2022ರ ಜನವರಿ 24ರ ವೇಳೆಗೆ 43.34 ಕೋಟಿ ಪ್ಯಾನ್‌ಗಳನ್ನು ಆಧಾರ್ ಜತೆಗೆ ಜೋಡಿಸಲಾಗಿತ್ತು. 2023ರ ಫೆಬ್ರುವರಿ ವೇಳೆಗೆ 48 ಕೋಟಿ ಪ್ಯಾನ್‌ಗಳನ್ನು ಆಧಾರ್ ಜೊತೆಗೆ ಜೋಡಿಸಲಾಗಿದೆ. ಅಂದರೆ ಈ ಅವಧಿಯಲ್ಲಿ ನಾಲ್ಕು ಕೋಟಿಗೂ ಹೆಚ್ಚು ಪ್ಯಾನ್‌ಗಳನ್ನು ಆಧಾರ್ ಜತೆಗೆ ಜೋಡಿಸಲಾಗಿದೆ. ಅಂದರೆ ಈ ಅವಧಿಯಲ್ಲಿ ಸರ್ಕಾರಕ್ಕೆ, ಶುಲ್ಕದ ರೂಪದಲ್ಲಿ ₹4,000 ಕೋಟಿಗೂ ಹೆಚ್ಚು ಮೊತ್ತ ಪಾವತಿಯಾಗಿರಬೇಕು. 'ಇನ್ನೂ 13 ಕೋಟಿಯಷ್ಟು ಪ್ಯಾನ್‌ಗಳನ್ನು ಆಧಾರ್ ಜತೆಗೆ ಜೋಡಿಸಬೇಕಿದೆ. ಇದರಲ್ಲಿ ಆಧಾರ್ ಜೋಡಣೆಯಿಂದ ವಿನಾಯಿತಿ ಪಡೆದ ಪ್ಯಾನ್‌ಗಳೂ ಇವೆ' ಎಂದು ನಿತಿನ್ ಗುಪ್ತಾ ಅವರು ಹೇಳಿದ್ದರು. ಈ ಪ್ರಕಾರ ಸರ್ಕಾರಕ್ಕೆ ಇನ್ನೂ ₹13,000 ಕೋಟಿ ಸಂಗ್ರಹಕ್ಕೆ ಅವಕಾಶವಿದೆ.

ಆದರೆ, ಎಷ್ಟು ಪ್ಯಾನ್‌ಗಳು ಆಧಾರ್‌ಗೆ ಜೋಡಣೆಯಾಗಿವೆ ಮತ್ತು ಇನ್ನೆಷ್ಟು ಜೋಡಣೆ ಆಗಬೇಕು ಎಂಬ ನಿಖರ ಮಾಹಿತಿಯನ್ನು ಸರ್ಕಾರ ನೀಡಿಲ್ಲ. ನಿತಿನ್ ಗುಪ್ತಾ ಅವರು ಮಾಧ್ಯಮಗೋಷ್ಠಿಯಲ್ಲಿ ನೀಡಿದ್ದ ಮಾಹಿತಿಯೇ ಈಗ ಲಭ್ಯವಿರುವ ಏಕೈಕ ದತ್ತಾಂಶ. 'ದೇಶದಲ್ಲಿ ಈವರೆಗೆ ಸುಮಾರು 61 ಕೋಟಿ ಪ್ಯಾನ್‌ಗಳನ್ನು ನೀಡಲಾಗಿದೆ. ಅವುಗಳಲ್ಲಿ ಸುಮಾರು 48 ಕೋಟಿ ಪ್ಯಾನ್‌ಗಳನ್ನಷ್ಟೇ ಆಧಾರ್ ಜತೆಗೆ ಜೋಡಿಸಲಾಗಿದೆ' ಎಂದಷ್ಟೇ ಅವರು ಹೇಳಿದ್ದರು. ಆದರೆ, ಯಾವುದೇ ನಿಖರ ಸಂಖ್ಯೆಯನ್ನು ಹೇಳಿರಲಿಲ್ಲ. ಅಲ್ಲದೆ, ಪ್ಯಾನ್–ಆಧಾರ್ ಜೋಡಣೆಗೆ ₹500 ಶುಲ್ಕವಿದ್ದಾಗ ಎಷ್ಟು ಮೊತ್ತ ಸಂಗ್ರಹವಾಗಿದೆ ಎಂಬುದರ ಮಾಹಿತಿಯೂ ಲಭ್ಯವಿಲ್ಲ.

'ಪ್ಯಾನ್ ಬಳಸುವಂತಹ ಎಲ್ಲಾ ಪ್ರಕ್ರಿಯೆಗಳಲ್ಲಿ, ಅದಕ್ಕೆ ಬದಲಾಗಿ ಆಧಾರ್ ಬಳಸಬಹುದು. ಪ್ಯಾನ್ ಇಲ್ಲದೇ ಇದ್ದವರಿಗೆ ಮತ್ತು ಆಧಾರ್ ಜತೆಗೆ ಪ್ಯಾನ್ ಜೋಡಿಸದೇ ಇದ್ದವರಿಗೂ ಇದು ಅನ್ವಯವಾಗುತ್ತದೆ' ಎಂದು 2019ರ ಆರ್ಥಿಕ ಮಸೂದೆಯಲ್ಲಿ ವಿವರಿಸಲಾಗಿತ್ತು. ಅದು ಕಾಯ್ದೆಯೂ ಆಗಿತ್ತು. ಹೀಗಿದ್ದೂ, ಈ ಮೇಲೆ ವಿವರಿಸಲಾದ ಕಾರ್ಯಗಳಲ್ಲಿ ಅಡಚಣೆ ಹೇಗಾಗುತ್ತದೆ ಎಂಬುದನ್ನು ಸರ್ಕಾರ ಸ್ಪಷ್ಟಪಡಿಸಿಲ್ಲ.

ಜೋಡಿಸದಿದ್ದರೆ...

ಗಡುವಿನ ಒಳಗೆ ಪ್ಯಾನ್–ಆಧಾರ್ ಜೋಡಣೆ ಆಗದಿದ್ದರೆ, ಕೆಲವಾರು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ ಎಂದು ಹಣಕಾಸು ಸಚಿವಾಲಯವು 2022ರ ಮಾರ್ಚ್ 30ರಂದು ಹೊರಡಿಸಿದ್ದ ಸುತ್ತೋಲೆಯಲ್ಲಿ ವಿವರಿಸಿತ್ತು. ಅಂತಹ ಸಮಸ್ಯೆಗಳು ಕೆಳಗಿನಂತಿವೆ.

- ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸಲು ಸಾಧ್ಯವಾಗುವುದಿಲ್ಲ
- ಈಗಾಗಲೇ ಬಾಕಿ ಇರುವ ರಿಟರ್ನ್ಸ್‌ಗಳ ಪ್ರಕ್ರಿಯೆ ಪೂರ್ಣವಾಗುವುದಿಲ್ಲ
- ಬಾಕಿ ಮೊತ್ತಗಳನ್ನು ಪಡೆಯಲು ಸಾಧ್ಯವಾಗುವುದಿಲ್ಲ
- ಹೆಚ್ಚಿನ ದರದ ತೆರಿಗೆ ಪಾವತಿ ಮಾಡಬೇಕಾಗುತ್ತದೆ
- ಬ್ಯಾಂಕ್ ಮತ್ತು ಸಂಬಂಧಿತ ಆರ್ಥಿಕ ವ್ಯವಹಾರಗಳಿಗೆ ಅಡಚಣೆಯಾಗುತ್ತದೆ. ಕೆವೈಸಿ ಪ್ರಕ್ರಿಯೆಯಲ್ಲಿ ಅಡಚಣೆಯಾಗಲಿದೆ.

ಮತ್ತೆ ಮತ್ತೆ ಶುಲ್ಕ

ಪ್ಯಾನ್ ಮತ್ತು ಆಧಾರ್ ಜೋಡಣೆ ವೇಳೆ ತಪ್ಪಾದರೆ ಅದನ್ನು ಸರಿಪಡಿಸಲು ಸಾಧ್ಯವಿಲ್ಲ. ಒಬ್ಬರ ಪ್ಯಾನ್‌ಗೆ ಬೇರೊಬ್ಬರ ಆಧಾರ್ ಸಂಖ್ಯೆ ನಮೂದಿಸಿದರೆ, ಅದು ಹಾಗೆಯೇ ನೋಂದಣಿಯಾಗುತ್ತದೆ. ಒಬ್ಬರ ಆಧಾರ್ ಸಂಖ್ಯೆಗೆ ಬೇರೊಬ್ಬರ ಪ್ಯಾನ್ ಸಂಖ್ಯೆ ನಮೂದಿಸಿದರೆ, ಅದು ಹಾಗೆಯೇ ನೋಂದಣಿಯಾಗುತ್ತದೆ. ಎರಡೂ ಸಂದರ್ಭದಲ್ಲಿ ಪರಸ್ಪರ ಜೋಡಿಸಲಾದ ಮಾಹಿತಿ ತಪ್ಪಾಗಿಯೇ ಇರುತ್ತದೆ. ಹೀಗೆ ತಪ್ಪಾಗಿ ಜೋಡಿಸಲಾದ ಮಾಹಿತಿಯನ್ನು ಸರಿಪಡಿಸಲು ಮತ್ತೆ ಶುಲ್ಕ ಪಾವತಿಸಬೇಕು. ಹೀಗಾಗಿ ಒಮ್ಮೆ ₹1,000 ವಾಪತಿಸಿ ಪ್ಯಾನ್–ಆಧಾರ್ ಜೋಡಿಸಿದರೆ, ಆ ಶುಲ್ಕದ ಅವಧಿ ಮುಗಿದಂತೆ. ಮತ್ತೆ ಸರಿಯಾದ ಪ್ಯಾನ್ ಮತ್ತು ಆಧಾರ್ ಜೋಡಿಸಲು ಹೊಸದಾಗಿ ₹1,000 ಶುಲ್ಕ ಪಾವತಿಸಬೇಕು. ಹಳೆಯ ಶುಲ್ಕದ ರಸೀದಿಯನ್ನೇ ಇಲ್ಲಿ ಬಳಸಲು ಸಾಧ್ಯವಿಲ್ಲ. ಹಲವು ಬಾರಿ ತಪ್ಪು ಸರಿಪಡಿಸಲೂ, ಪದೇ ಪದೇ ಶುಲ್ಕ ಪಾವತಿಸಬೇಕಾಗಿದೆ.

ಪ್ಯಾನ್–ಆಧಾರ್ ಜೋಡಣೆ ಪ್ರಕ್ರಿಯೆ

ಆದಾಯ ತೆರಿಗೆ ಇಲಾಖೆಯ ಇ-ಫೈಲಿಂಗ್ ಪೋರ್ಟಲ್ ಮೂಲಕ ಪ್ಯಾನ್-ಆಧಾರ್ ಜೋಡಣೆ ಮಾಡಬಹುದು. ಇದಕ್ಕಾಗಿ ವೆಬ್‌ಸೈಟ್‌ಗೆ ಲಾಗಿನ್ ಆಗಬೇಕಾದ ಅಗತ್ಯವಿಲ್ಲ. ವೆಬ್‌ಸೈಟ್‌ಗೆ ನೋಂದಣಿ ಮಾಡಿಕೊಂಡಿರಬೇಕು ಎಂಬ ನಿಯಮವೂ ಇಲ್ಲ. ಇದೇ 31ರೊಳಗೆ ₹1,000 ಶುಲ್ಕ ಪಾವತಿಯೊಂದಿಗೆ ಪ್ಯಾನ್-ಆಧಾರ್ ಜೋಡಣೆ ಮಾಡಬೇಕಿದೆ. ಪ್ಯಾನ್-ಆಧಾರ್ ಜೋಡಣೆಯ ಸಂಪೂರ್ಣ ಪ್ರಕ್ರಿಯೆಯನ್ನು ಚಿತ್ರಸಹಿತವಾಗಿ ಪೋರ್ಟಲ್‌ನಲ್ಲಿ ವಿವರಿಸಲಾಗಿದೆ.

- ಮೊದಲಿಗೆ, ಆದಾಯ ತೆರಿಗೆ ಇಲಾಖೆಯ ಇ-ಪೋರ್ಟಲ್‌ಗೆ ಭೇಟಿ ನೀಡಿ https://www.incometax.gov.in/iec/foportal/
- ಪ್ಯಾನ್ ಮತ್ತು ಆಧಾರ್ ಸಂಖ್ಯೆಗಳನ್ನು ನಿಗದಿತ ಜಾಗದಲ್ಲಿ ನಮೂದಿಸಬೇಕು
- ಶುಲ್ಕ ಪಾವತಿಗೆ ಇರುವ ಆಯ್ಕೆಯ ಮೇಲೆ (Continue to Pay Through e-Pay Tax) ಕ್ಲಿಕ್ ಮಾಡಬೇಕು
- ಶುಲ್ಕ ಪಾವತಿಗಾಗಿ, ನಿಮ್ಮ ಪ್ಯಾನ್, ಆಧಾರ್ ಹಾಗೂ ಮೊಬೈಲ್ ಸಂಖ್ಯೆಯನ್ನು ನಮೂದಿಸಿ
- ಮೊಬೈಲ್ ಸಂಖ್ಯೆಗೆ ಬರುವ ಒಟಿಪಿ ನಮೂದಿಸಿದ ನಂತರ 'ಇ-ಪೇ ಟ್ಯಾಕ್ಸ್' ಪುಟ ತೆರೆದುಕೊಳ್ಳುತ್ತದೆ
- ಮೊದಲಿಗೆ ಕಾಣಿಸುವ 'ಇನ್‌ಕಮ್ ಟ್ಯಾಕ್ಸ್' ಬಾಕ್ಸ್‌ನ ಕೊನೆಯಲ್ಲಿರುವ 'ಪ್ರೊಸೀಡ್' ಮೇಲೆ ಕ್ಲಿಕ್ ಮಾಡಿ
- ಅಸೆಸ್‌ಮೆಂಟ್ ಇಯರ್ 'ಎವೈ 2023-24' ಆಯ್ಕೆ ಮಾಡಿ, ಪೇಮೆಂಟ್ ವಿಧಾನದಲ್ಲಿ 'ಅದರ್ ರೆಸಿಪ್ಟ್ಸ್ (500)' ಆಯ್ಕೆ ಮಾಡಿ ಕ್ಲಿಕ್ ಮಾಡಿ
- ₹1,000 ಶುಲ್ಕದ ಚಲನ್ ಕಾಣಿಸುವ ಪುಟದ ಕೊನೆಯಲ್ಲಿ 'ಕಂಟಿನ್ಯೂ' ಮೇಲೆ ಕ್ಲಿಕ್ ಮಾಡಿ. ಇದು ನಿಮ್ಮ ಖಾತೆ ಇರುವ ಬ್ಯಾಂಕ್ ವೆಬ್‌ಸೈಟ್‌ಗೆ ಹೋಗುತ್ತದೆ. ಆ್ಯಕ್ಸಿಸ್ ಬ್ಯಾಂಕ್, ಬ್ಯಾಂಕ್ ಆಫ್ ಇಂಡಿಯಾ, ಬ್ಯಾಂಕ್ ಆಫ್ ಮಹಾರಾಷ್ಟ್ರ, ಕೆನರಾ ಬ್ಯಾಂಕ್, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ, ಸಿಟಿ ಯೂನಿಯನ್ ಬ್ಯಾಂಕ್, ಫೆಡರಲ್ ಬ್ಯಾಂಕ್, ಐಸಿಐಸಿಐ ಬ್ಯಾಂಕ್, ಐಡಿಬಿಐ ಬ್ಯಾಂಕ್, ಇಂಡಿಯನ್ ಬ್ಯಾಂಕ್, ಇಂಡಿಯನ್ ಓವರ್‌ಸೀಸ್ ಬ್ಯಾಂಕ್, ಇಂಡಸ್‌ಇಂಡ್ ಬ್ಯಾಂಕ್, ಜಮ್ಮು&ಕಾಶ್ಮೀರ್ ಬ್ಯಾಂಕ್, ಕರೂರ್ ವೈಶ್ಯ ಬ್ಯಾಂಕ್, ಕೊಟಕ್ ಮಹೀಂದ್ರ ಬ್ಯಾಂಕ್, ಪಂಜಾಬ್ ನ್ಯಾಷನಲ್ ಬ್ಯಾಂಕ್, ಯುಕೊ ಬ್ಯಾಂಕ್, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ–ಈ ಯಾವುದಾದರೂ ಒಂದು ಬ್ಯಾಂಕ್‌ನಲ್ಲಿ ಖಾತೆ ಹೊಂದಿದ್ದರೆ ಇ-ಪೇ ಟ್ಯಾಕ್ಸ್ ಮೂಲಕ ಪಾವತಿ ಮಾಡಿ
- ಒಂದು ವೇಳೆ, ಮೇಲೆ ಹೇಳಿದ ಬ್ಯಾಂಕ್‌ಗಳನ್ನು ಹೊರತುಪಡಿಸದ ಬ್ಯಾಂಕ್‌ಗಳಲ್ಲಿ ನಿಮ್ಮ ಖಾತೆ ಇದ್ದಲ್ಲಿ, 'ಇ-ಪೇ ಟ್ಯಾಕ್ಸ್' ಪುಟದ ಕೆಳಭಾಗದಲ್ಲಿರುವ ಎನ್‌ಎಸ್‌ಡಿಎಲ್ ಪೋರ್ಟಲ್‌ನ ಹೈಪರ್‌ಲಿಂಕ್ ಮೇಲೆ ಕ್ಲಿಕ್ ಮಾಡಿ. ಇಲ್ಲಿ ಕಾಣಿಸುವ ಚಲನ್ ನಂಬರ್ ITNS 280 ಆಯ್ಕೆ ಮಾಡಿ
- ಟ್ಯಾಕ್ಸ್ ಅಪ್ಲಿಕೇಬಲ್ ಎಂಬಲ್ಲಿ '0021' ಎಂದೂ, ಪೇಮೆಂಟ್ ಟೈಪ್‌ನಲ್ಲಿ '500' ಎಂದು ಆಯ್ಕೆ ಮಾಡಿ. ಅಸೆಸ್‌ಮೆಂಟ್ ಇಯರ್ ಎಂಬ ಜಾಗದಲ್ಲಿ '2023-24' ಎಂದು ಆಯ್ಕೆ ಮಾಡಿಕೊಂಡು, ಬ್ಯಾಂಕ್ ಖಾತೆಗೆ ಸಂಬಂಧಿಸಿದಂತೆ ನೀಡಲಾಗಿರುವ ಕಾಲಂ ಭರ್ತಿ ಮಾಡಿ 'ಪ್ರೊಸೀಡ್' ಕ್ಲಿಕ್ ಮಾಡಿ
- ಶುಲ್ಕ ಪಾವತಿಸಿದ ಬಳಿಕ ಪುನಃ ಇ-ಫೈಲಿಂಗ್ ಪೋರ್ಟಲ್‌ಗೆ ಭೇಟಿ ನೀಡಬೇಕು. ಲಾಗಿನ್ ಆಗಿ, ಪ್ರೊಫೈಲ್ ವಿಭಾಗದಲ್ಲಿ ಪ್ಯಾನ್–ಆಧಾರ್ ಜೋಡಣೆ ಆಯ್ಕೆಯ ಮೇಲೆ ಕ್ಲಿಕ್ ಮಾಡಿ. ಅಥವಾ ವೈಯಕ್ತಿಕ ಮಾಹಿತಿ ವಿಭಾಗದಲ್ಲಿ 'ಲಿಂಕ್ ಆಧಾರ್' ಮೇಲೆ ಕ್ಲಿಕ್ ಮಾಡಿ
- ಆಧಾರ್ ಸಂಖ್ಯೆ ನಮೂದಿಸಿ. 'ವ್ಯಾಲಿಡೇಟ್' ಮೇಲೆ ಕ್ಲಿಕ್ ಮಾಡಿ. ಅಗತ್ಯ ಮಾಹಿತಿ ಭರ್ತಿ ಮಾಡಿದ ಬಳಿಕ 'ಲಿಂಕ್ ಆಧಾರ್' ಮೇಲೆ ಕ್ಲಿಕ್ ಮಾಡಿ
- ಮತ್ತೆ ಒಟಿಪಿ ನಮೂದಿಸಿ, ವ್ಯಾಲಿಡೇಟ್ ಮೇಲೆ ಕ್ಲಿಕ್ ಮಾಡಿ. 'ಪ್ಯಾನ್–ಆಧಾರ್ ಜೋಡಣೆ ಮನವಿ ಯಶಸ್ವಿಯಾಗಿ ಸ್ವೀಕೃತವಾಗಿದ್ದು, ಜೋಡಣೆಯ ಸ್ಥಿತಿಯನ್ನು (ಸ್ಟೇಟಸ್) ಪರಿಶೀಲಿಸಿ' ಎಂಬ ಸಂದೇಶ ಕಾಣಿಸುತ್ತದೆ.
- ಒಂದು ವೇಳೆ ಯಶಸ್ವಿಯಾಗದಿದ್ದಲ್ಲಿ, ಶುಲ್ಕ ಪಾವತಿಯಲ್ಲಿಲ್ಲ ಎಂಬ ಸಂದೇಶ ಕಾಣಿಸುತ್ತದೆ. ಒಂದು ವೇಳೆ ಎನ್‌ಎಸ್‌ಡಿಎಲ್ ಪೋರ್ಟಲ್ ಮೂಲಕ ಪಾವತಿಸಿದ್ದರೆ ನಾಲ್ಕೈದು ದಿನಗಳ ಬಳಿಕ 'ವ್ಯಾಲಿಡೇಟ್' ಮಾಡಬೇಕು
- ಒಂದು ವೇಳೆ ಬೇರೊಂದು ಪ್ಯಾನ್ ಅಥವಾ ಆಧಾರ್ ಜೋಡಣೆಯಾಗಿದ್ದರೆ, ಸಮೀಪದ ಆದಾಯ ತೆರಿಗೆ ಇಲಾಖೆ ಕಚೇರಿಯನ್ನು ಸಂಪರ್ಕಿಸಿ

ಸ್ಟೇಟಸ್ ಪರಿಶೀಲನೆ

ಪ್ಯಾನ್–ಆಧಾರ್ ಜೋಡಣೆ ಆಗಿದೆಯೇ ಇಲ್ಲವೇ ಎಂಬುದನ್ನು ಪರಿಶೀಲಿಸಿ ಖಚಿತಪಡಿಸಿಕೊಳ್ಳಬಹುದು. ಆದಾಯ ತೆರಿಗೆ ಇಲಾಖೆಯ ಇ–ಫೈಲಿಂಗ್ ಪೋರ್ಟಲ್‌ನಲ್ಲಿ 'ಲಿಂಕ್ ಆಧಾರ್ ಸ್ಟೇಟಸ್' ಆಯ್ಕೆಯನ್ನು ಕ್ಲಿಕ್ ಮಾಡಬೇಕು. ಇಲ್ಲಿ ಪ್ಯಾನ್ ಹಾಗೂ ಆಧಾರ್ ಸಂಖ್ಯೆಯನ್ನು ನಮೂದಿಸಿದರೆ, ಇವರೆಡೂ ಜೋಡಣೆ ಆಗಿವೆಯೇ ಅಥವಾ ಇಲ್ಲವೇ ಎಂಬ ಮಾಹಿತಿ ತಿಳಿಯುತ್ತದೆ.

61 ಕೋಟಿ — ದೇಶದಲ್ಲಿ ಈವರೆಗೆ ನೀಡಲಾಗಿರುವ ಪ್ಯಾನ್‌ಗಳ ಸಂಖ್ಯೆ

48 ಕೋಟಿ — ಆಧಾರ್ ಜೊತೆಗೆ ಪ್ಯಾನ್ ಜೋಡಿಸಿರುವವರ ಸಂಖ್ಯೆ

13 ಕೋಟಿ — ಆಧಾರ್ ಜೊತೆಗೆ ಪ್ಯಾನ್ ಜೋಡಿಸದೇ ಇರುವವರ ಸಂಖ್ಯೆ

78.68% — ಆಧಾರ್ ಜೊತೆಗೆ ಪ್ಯಾನ್ ಜೋಡಿಸಿರುವವರ ಪ್ರಮಾಣ

21.32% — ಆಧಾರ್ ಜೊತೆಗೆ ಪ್ಯಾನ್ ಜೋಡಿಸದೇ ಇರುವವರ ಪ್ರಮಾಣ

ಪ್ಯಾನ್–ಆಧಾರ್ ಜೋಡಣೆಗೆ ಏನು ಬೇಕು

- ಪ್ಯಾನ್ ಸಂಖ್ಯೆ
- ಆಧಾರ್ ಸಂಖ್ಯೆ
- ಮೊಬೈಲ್ ಸಂಖ್ಯೆ

ಪ್ಯಾನ್–ಆಧಾರ್ ಜೋಡಣೆ: ಯಾರಿಗೆ ವಿನಾಯಿತಿ

- 80 ವರ್ಷ ದಾಟಿದವರು
- ಜಮ್ಮುಕಾಶ್ಮೀರ, ಮೇಘಾಲಯ ಮತ್ತು ಅಸ್ಸಾಂ ನಿವಾಸಿಗಳು
- ಅನಿವಾಸಿ ಭಾರತೀಯರು (ಎನ್‌ಆರ್‌ಐ)

ಆಧಾರ: ಹಣಕಾಸು ಸಚಿವಾಲಯದ ಸುತ್ತೋಲೆ ಸಂಖ್ಯೆ:07 ಆಫ್ 2022, 2019ರ ಹಣಕಾಸು ಕಾಯ್ದೆ, 2021ರ ಹಣಕಾಸು ಕಾಯ್ದೆ, ಪಿಐಬಿ, ಪಿಟಿಐ, ಆದಾಯ ತೆರಿಗೆ ಇಲಾಖೆಯ ಪ್ರಕಟಣೆಗಳು, ಆದಾಯ ತೆರಿಗೆ ಇಲಾಖೆಯ ಇ–ಫೈಲಿಂಗ್ ಜಾಲತಾಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಬ್ರಹ್ಮನಟರಾಜನ ನೃತ್ಯ

ನೃತ್ಯವೋ ಬ್ರಹ್ಮನಟರಾಜನದು ಜಗವೆಲ್ಲ |
ಪ್ರತ್ಯೇಕ ಜೀವದಶೆಯವನಂಗಭಂಗಿ ||
ಸತ್ಯ ಸತ್ತ್ವಜ್ವಾಲೆ ವಿಶ್ವಮಾಯಾಲೀಲೆ ||
ಪ್ರತ್ಯಗಾತ್ಮನು ನೀನು – ಮಂಕುತಿಮ್ಮ || 850 ||

ಪದ-ಅರ್ಥ: ಜೀವದಶೆಯವನಂಗಭಂಗಿ = ಜೀವದಶೆ(ಜೀವರೂಪ) + ಅವನ + ಅಂಗ + ಭಂಗಿ, ಪ್ರತ್ಯಗಾತ್ಮನು = ಪ್ರತ್ಯಗ್ (ವಿಸ್ತರಿಸಿದ) + ಆತ್ಮನು.

ವಾಚ್ಯಾರ್ಥ: ಈ ಜಗತ್ತು ಬ್ರಹ್ಮವೆಂಬ ನಟರಾಜನ ನೃತ್ಯ. ಪ್ರತಿಯೊಂದು ಜೀವರೂಪ ಅವನ ಅಂಗದ ಭಂಗಿ. ಅವನ ದೇಹದಿಂದ ಹೊರಡುವ ಪ್ರಕಾಶವೇ ಸತ್ಯಸತ್ವದ ಜ್ವಾಲೆ. ಇದೇ ವಿಶ್ವದ ಮಾಯಾಲೀಲೆ. ನೀನು ಆ ಮೂಲ ಆತ್ಮದ ವಿಸ್ತರಿತ ರೂಪ.

ವಿವರಣೆ: ಬ್ರಹ್ಮಸತ್ವ ನಿರಾಕಾರ, ನಿರ್ಗುಣ ಮತ್ತು ಅಚಲ. ಆ ನಿಶ್ಚಲವಾದ ಬ್ರಹ್ಮದ ಚಲನಶೀಲವಾದ ರೂಪವೇ ನಟರಾಜ. ಈ ಜಗತ್ತು ನಟರಾಜನ ವಿರಾಟ್ ನೃತ್ಯ. ಆದರೆ ಆತ ಎಲ್ಲಿದ್ದಾನೆ? ಅದನ್ನು ನಿಪುಣ ನಟ, ನಗೆಗಾರ, ಬಹುರೂಪಿ ಕಾಯಕದ ಶರಣ, ಬಹುರೂಪಿ ಚೌಡಯ್ಯ ಮನೋಜ್ಞವಾಗಿ ಹೇಳುತ್ತಾನೆ. ಎಲ್ಲಾ ಜನಂಗಳೊಳಗಿರ್ದಡೇನು ? ಶಿವನು ಜಗದಂತಹನಲ್ಲ. ಜಗವ ತನ್ನೊಳಗಿಕ್ಕಿ ತಾ ಹೊರಗಿರ್ದಹೆನೆಂದೆಡೆ ಬ್ರಹ್ಮಾಂಡದಂತಹನೇ? ಅಲ್ಲ. ಆಕಾಶದೋಪಾದಿಯಲ್ಲಿ ಸರ್ವಲೋಕದ ಒಳ ಹೊರಗೆ ಮೂಲ ಚೈತನ್ಯ ತಾನಾಗಿ, ಆಧಾರವಾದ ನಮ್ಮ ರೇಕಣ್ಣಪ್ರಿಯ ನಾಗಿನಾಥ. ಅವನು ಜಗದೊಳಗಡೆಯೂ ಇದ್ದಾನೆ, ಹೊರಗೂ ಇದ್ದಾನೆ. ಅವನು ಒಳಗೆ, ಹೊರಗೆ ಎಲ್ಲದರ ಮೂಲ ಚೈತನ್ಯವಾಗಿ, ಆಧಾರವಾಗಿದ್ದಾನೆ. ಆದರೆ ಆ ಶುದ್ಧವಾದ ಪರತತ್ವ ತಾನೇ ತಾನಾಗ ಏನನ್ನೂ ಮಾಡಲಾರದು. ಅತ್ಯಂತ ಪರಿಶುದ್ಧವಾದ ಬಂಗಾರದಿಂದ ಆಭರಣಗಳನ್ನು ಮಾಡಲಾಗದೆ ಕೆಲವು ಲೋಹಗಳನ್ನೂ ಮಿಶ್ರಮಾಡಬೇಕಾಗುತ್ತದೆ. ಅಂತೆಯೇ ಶುದ್ಧವಾದ ಪರಸತ್ವ, ಸತ್ವ, ರಜಸ್, ತಮಸ್ ಗುಣಗಳನ್ನು ಕೊಂಚ ಸೇರಿಸಿಕೊಂಡು ಕೋಟ್ಯಾಂತರ ಜೀವಿಯಾಗಿ ಹೊಮ್ಮಿದೆ. ಗೀತೆ, ಜೀವವೆಂಬುದು ಬ್ರಹ್ಮಚೈತನ್ಯದ ಒಂದಂಶವೆಂದು ಹೇಳುತ್ತದೆ. "ಮಮೈವಾಂಶೋ ಜೀವ ಲೋಕೇ ಜೀವಭೂತ: ಸನಾತನ: "ನನ್ನ ಅಂಶವೇ ಪ್ರಾಣಿ ಲೋಕದಲ್ಲಿ ಜೀವವಾಗಿರುವ ಶಾಶ್ವತ ಸತ್ವ". ಅದನ್ನೇ ಕಗ್ಗ ತಿಳಿಯಪಡಿಸುತ್ತದೆ. ಪ್ರತ್ಯೇಕ ಜೀವವೂ ಆ ಬ್ರಹ್ಮದ ಅನಂತ ಅಂಗಭಂಗಿಗಳಲ್ಲಿ ಒಂದು. ಹೀಗಾಗಿ ಪ್ರತಿಯೊಂದು ಜೀವ ಮೂಲಸತ್ವದ ಒಂದು ಪರಿ. ಆದ್ದರಿಂದ ಬ್ರಹ್ಮನ ತೇಜ ಜೀವಿಗಳಲ್ಲೂ ಇರಬೇಕಲ್ಲವೇ? ಇದೆ. ಅದೇ ಸತ್ಯದ ಸತ್ವಜ್ವಾಲೆ. ಅದೇ ಬ್ರಹ್ಮದ ಮಾಯೆಯ ಲೀಲೆ. ಪ್ರತಿ ಜೀವಿಯೂ ಒಬ್ಬ ಪ್ರತ್ಯಗಾತ್ಮ. ಹಾಗೆಂದರೆ ಪ್ರತ್ಯಗ್ ಆತ್ಮ, ಮೂಲ ಆತ್ಮದ ವಿಸ್ತರಿತ ರೂಪ. ಆ ಮೂಲಸತ್ವವೇ ತನ್ನ ಶಕ್ತಿಯ ಅಂಶಗಳನ್ನೂ ಜೀವಿಗಳಲ್ಲೆಲ್ಲ ಹರಡಿ, ವಿಶ್ವವೆಂಬ ಆಟಿಕೆಯನ್ನು ಸೃಷ್ಟಿಮಾಡಿ ಆಟವಾಡುತ್ತಿದೆ.

ಸಿನಿ ಬಿಟ್ಸ್

ಪ್ರಿನ್ಸ್ – ಡಿಂಪಲ್ ಮಿಂಚಿದ ವೀರಂ

ಪ್ರಜ್ವಲ್ ದೇವರಾಜ್, ರಚಿತಾರಾಮ್ ನಾಯಕ, ನಾಯಕಿಯಾಗಿ ಕಾಣಿಸಿಕೊಂಡಿರುವ 'ವೀರಂ' ಚಿತ್ರದ ಟ್ರೈಲರನ್ನು ಹಿರಿಯನಟ ದೇವರಾಜ್ ಅವರು ಇತ್ತೀಚೆಗೆ ಬಿಡುಗಡೆಗೊಳಿಸಿದರು. ಖದರ್ ಕುಮಾರ್ ಅವರು ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ. ಏಪ್ರಿಲ್ 7 ರಾಜ್ಯದಾದ್ಯಂತ ತೆರೆಕಾಣುತ್ತಿದೆ.

'ಯಾರಿಗೂ ಹೆದರದ ವ್ಯಕ್ತಿ 'ವೀರಂ'. ಪ್ರಿನ್ಸ್ ಪ್ರಜ್ವಲ್ ದೇವರಾಜ್ ಹಾಗೂ ಹಿರಿಯ ನಟಿ ಶ್ರುತಿ, ಅಕ್ಕ-ತಮ್ಮನಾಗಿ ಅಲ್ಲದೆ ಸಾಹಸಸಿಂಹ ವಿಷ್ಣುವರ್ಧನ್ ಅಭಿಮಾನಿಗಳಾಗಿ ಕಾಣಿಸಿಕೊಂಡಿದ್ದಾರೆ' ಎಂದಿದೆ ಚಿತ್ರತಂಡ.

ಶಶಿಧರ್ ಸ್ಟುಡಿಯೋಸ್ ಪ್ರೊಡಕ್ಷನ್‌ನ ಮೂರನೇ ಚಿತ್ರವಿದು. ಕೆ.ಎಂ. ಶಶಿಧರ್ ಈ ಚಿತ್ರ ನಿರ್ಮಿಸಿದ್ದಾರೆ. 'ಡಾಟರ್ ಆಫ್ ಪಾರ್ವತಮ್ಮ', 'ಶುಗರ್‌ಲೆಸ್' ಚಿತ್ರಗಳ ನಂತರ ಅವರು ಈ ಯೋಜನೆ ಕೈಗೆತ್ತಿಕೊಂಡಿದ್ದಾರೆ.

'ಭಾವನಾತ್ಮಕ ಥ್ರಿಲ್ಲರ್ ಡ್ರಾಮಾ ಜೊತೆಗೆ ಪೂರ್ಣ ಮನೋರಂಜನೆಯ ಸಿನಿಮಾ ಪ್ಯಾಕೇಜ್ ಇದಾಗಿದೆ. ದ್ವಿತೀಯಾರ್ಧದಲ್ಲಿ ಥ್ರಿಲ್ಲರ್ ಕಥೆಯಿದೆ. ದೀಪಕ್ ಅವರು ಮೊದಲ ಬಾರಿಗೆ ಪೂರ್ಣಪ್ರಮಾಣದ ಖಳನಾಯಕನಾಗಿ ನಟಿಸಿದ್ದಾರೆ. ವಿಶೇಷವಾಗಿ ಸಾಹಸಸಿಂಹ ವಿಷ್ಣುವರ್ಧನ್ ಅವರ ಪಾತ್ರವನ್ನಿಟ್ಟುಕೊಂಡು ಕಥೆ ಹೇಳಿದ್ದೇವೆ. ವಿಷ್ಣು ಅಭಿಮಾನಿಗಳಿಗೆ ಈ ಚಿತ್ರ ತುಂಬಾ ಇಷ್ಟವಾಗಲಿದೆ. ಚಿತ್ರವನ್ನು ವಿಷ್ಣು ಅವರಿಗೆ ಅರ್ಪಣೆ ಮಾಡಿದ್ದೇವೆ' ಎಂದರು ಶಶಿಧರ್.

ನಿರ್ದೇಶಕ ಖದರ್‌ಕುಮಾರ್ ಮಾತನಾಡಿ, 'ನಾನು ಚಿಕ್ಕವನಿದ್ದಾಗ ವಿಷ್ಣು ಅವರ ದಾದಾ ಚಿತ್ರವನ್ನು ಇದೇ ಚಿತ್ರಮಂದಿರದಲ್ಲಿ ನೋಡಿದ್ದೆ. ಈಗ ನನ್ನ ಚಿತ್ರವೂ ಇದೇ ಚಿತ್ರಮಂದಿರದಲ್ಲಿ ಬಿಡುಗಡೆಯಾಗುತ್ತಿದೆ' ಎಂದರು.

ಬಾಲ ರಾಜವಾಡಿ, ಅಚ್ಯುತ್ ಕುಮಾರ್, ಸ್ವಾತಿ, ಮೈಕೋ ನಾಗರಾಜ್, ಪ್ರಶಾಂತ್ ನಟನಾ, ಹನುಮಂತೇಗೌಡ ಅಲ್ಲದೆ ನಿರ್ದೇಶಕರಾದ ಜೋಸೈಮನ್, ವಿ.ನಾಗೇಂದ್ರಪ್ರಸಾದ್ ತಾರಾಗಣದಲ್ಲಿದ್ದಾರೆ.

ಪೋಸ್ಟರ್‌ನಲ್ಲಿ ಬಡಿಸಿದ 'ಫುಲ್ ಮೀಲ್ಸ್'

ತೇಜಸ್ವಿನಿ ಶರ್ಮಾ, ಲಿಖಿತ್ ಶೆಟ್ಟಿ, ಖುಷಿ ರವಿ

'ಸಂಕಷ್ಟಕರ ಗಣಪತಿ' ಹಾಗೂ 'ಫ್ಯಾಮಿಲಿ ಪ್ಯಾಕ್' ಚಿತ್ರಗಳ ಮೂಲಕ ಗುರುತಿಸಿಕೊಂಡವರು ಲಿಖಿತ್ ಶೆಟ್ಟಿ. ಈಗ 'ಫುಲ್ ಮೀಲ್ಸ್' ಕೊಡಲು ರೆಡಿಯಾಗಿದ್ದಾರೆ. ಈಗ ನಟನೆ ಜೊತೆ ನಿರ್ಮಾಣದ ಜವಾಬ್ದಾರಿಯೂ ಅವರ ಹೆಗಲಿಗಿದೆ. ಈ ಚಿತ್ರದಲ್ಲಿ ಮದುವೆ ಛಾಯಾಗ್ರಾಹಕನ ಗೆಟಪ್‌ನಲ್ಲಿರುವ ಲಿಖಿತ್ ಅವರಿಗೆ ಖುಷಿ ರವಿ ಮತ್ತು ತೇಜಸ್ವಿನಿ ಶರ್ಮಾ ನಾಯಕಿಯರು.

'ಚಿತ್ರದ ಪೋಸ್ಟರ್‌ನಲ್ಲಿ ನಾಯಕನ ನೋಟ ಹೇಗಿರಬಹುದು ಎಂದು ಊಹಿಸಬಹುದು. ಅಂಥ ಆಕರ್ಷಕ ಪೋಸ್ಟರ್ ಇದು' ಎಂದಿದೆ ಚಿತ್ರತಂಡ. ಚಿತ್ರದ ಅರ್ಧಭಾಗ ಚಿತ್ರೀಕರಣ ಮುಕ್ತಾಯವಾಗಿದೆ. ಎನ್.ವಿನಾಯಕ ಈ ಚಿತ್ರದ ನಿರ್ದೇಶಕರು.

'ಇದೊಂದು ಸಂಪೂರ್ಣ ಮನರಂಜನಾತ್ಮಕ ಚಿತ್ರ. ನನ್ನ ನಿರ್ದೇಶನದ ಮೊದಲ ಚಿತ್ರ ಕೂಡ. ರಂಗಾಯಣ ರಘು, ಸಾಧುಕೋಕಿಲ, ಚಂದ್ರಕಲಾ ಮೋಹನ್, ರಮೇಶ್ ಪಂಡಿತ್, ಗಣೇಶ್ ರಾವ್, ವಿಜಯ್ ಚೆಂಡೂರ್, ಸುಜಯ್ ಶಾಸ್ತ್ರಿ ಸೇರಿದಂತೆ ಅನೇಕ ಅನುಭವಿ ಕಲಾವಿದರು ಈ ಚಿತ್ರದ ತಾರಾಬಳಗದಲ್ಲಿದ್ದಾರೆ.

ಮದುವೆ ಫೋಟೊ ತೆಗೆಯಲು ಬಂದ ಛಾಯಾಗ್ರಾಹಕನಿಗೆ ಮದುಮಗಳ ಮೇಲೆ ಪ್ರೀತಿ ಮೂಡಿದರೆ ಏನಾಗುತ್ತದೆ? ಅನ್ನುವುದಕ್ಕೆ ಈ ಚಿತ್ರದಲ್ಲಿ ಉತ್ತರವಿದೆಯಂತೆ.

ಈ ಚಿತ್ರಕ್ಕೆ ಗುರುಕಿರಣ್ ಸಂಗೀತ ನಿರ್ದೇಶನ, ಹರೀಶ್ ರಾಜಣ್ಣ ಅವರ ಸಂಭಾಷಣೆ ಹಾಗೂ ಮನೋಹರ್ ಜೋಶಿ ಅವರ ಛಾಯಾಗ್ರಹಣವಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಮಾರ್ಚ್ 28, 2023

ಶ್ರೀಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ಚೈತ್ರ ಶುದ್ಧ ಸಪ್ತಮಿ ಗಂ. 19-03 ನಕ್ಷತ್ರ: ಮೃಗಶಿರ ಗಂ. 17-32 ಯೋಗ: ಸೌಭಾಗ್ಯ ಗಂ. 23-35, ಕರಣ: ಗರಜೆ ಗಂ. 06-11, ಮೀನ ಮಾಸದ 13 ನೇ ದಿನ. ರಾಹುಕಾಲ : ಸಾಯಂಕಾಲ 03-00 –04-30, ಸೂರ್ಯೋದಯ : 06-33 ಸೂರ್ಯಾಸ್ತ : 06-38, ಮುಸ್ಲಿಂ ದಿನಾಂಕ : 05 ರಂಜಾನ್
ದಿನ ವಿಶೇಷ : ವಸಂತಿ ಪೂಜಾರಂಭ
ಅದೃಷ್ಟ ಸಂಖ್ಯೆ : 10, 6

ಮೇಷ: ಸ್ನೇಹಿತನೊಂದಿಗೆ ಮಾಡಿಕೊಂಡ ಒಪ್ಪಂದದ ಗಡುವು ಮುಗಿಯುವ ಹಂತಕ್ಕೆ ಬಂದಿದ್ದಲ್ಲಿ ಅದನ್ನು ಆದಷ್ಟು ಬೇಗ ನೆನಪಿಸಿಕೊಂಡು ಮುಗಿಸುವ ಯೋಚನೆ ಮಾಡಿ. ಉತ್ತಮ ಆದಾಯದೊಂದಿಗೆ ಖರ್ಚು ಇರುತ್ತದೆ.

ವೃಷಭ: ವಿದ್ಯಾವಂತರಾಗಿ ಅವಿವೇಕದ ಕೆಲಸಗಳನ್ನು ಮಾಡಿಕೊಂಡು ಕುಟುಂಬದವರೆದುರು ತಲೆ ತಗ್ಗಿಸುವಂತೆ ಮಾಡಿಕೊಳ್ಳಬೇಡಿ. ಮನೆಯ ಸಾಕುಪ್ರಾಣಿಗಳ ಮೇಲಿನ ಪ್ರೀತಿ ಎಲ್ಲರ ಆಶ್ಚರ್ಯಕ್ಕೆ ಕಾರಣವಾಗುವುದು.

ಮಿಥುನ: ರಾತ್ರಿ ಕಂಡ ಬಾವಿಗೆ ಹಗಲು ಬಿದ್ದಂತೆ ಎಂಬ ಹಾಗೆ ನೀವು ತಪ್ಪು ಹಾದಿಗಳಿಗೆ ಮತ್ತೆ ಹೋಗದಿರಿ. ವಿಶ್ವದ ಆಗುಹೋಗುಗಳ ಮೇಲೆ ಸರಿಯಾದ ಗಮನವಿಟ್ಟು ಹೂಡಿಕೆಗಳನ್ನು ಮಾಡುವುದು ಸೂಕ್ತಕರ.

ಕರ್ಕಾಟಕ: ನೀವು ಮಾಡುವ ಅಧ್ಯಾಪನಕ್ಕೆ ವಿದ್ಯಾರ್ಥಿಗಳ ಸಮೂಹವು ಪ್ರೀತಿಯಿಂದ ಕಾಣುವುದು. ದವಸ ಧಾನ್ಯಗಳು ಪ್ರಾಣಿಪೀಡೆಗಳ ದಾಳಿಗೆ ತುತ್ತಾಗದಂತೆ ಜಾಗ್ರತೆ ಮಾಡಿ ಸಂರಕ್ಷಿಸಿ.

ಸಿಂಹ: ದತ್ತು ಮಕ್ಕಳ ತಂದೆ ತಾಯಿಯರು ಪ್ರೇಮ ಪೂರಿತ ಆರೈಕೆಯ ನಂತರವೂ ಮಗುವಿನ ಅಸಮಾಧಾನವನ್ನು ಕಂಡು ದುಃಖಿಸುವಂತಾಗುವುದು. ಕಾಡಿನಲ್ಲಿ ಕೆಲಸ ಮಾಡುವಾಗ ವಿಷಪೂರಿತ ಜಂತುಗಳ ಮೇಲೆ ನಿಗಾ ಇರಲಿ.

ಕನ್ಯಾ: ಸಂಖ್ಯಾಶಾಸ್ತ್ರಜ್ಞರಿಗೆ ಬಂದ ಅವಕಾಶಗಳನ್ನು ಬಿಟ್ಟು ನಿಮ್ಮ ಇಚ್ಛೆಯ ಸಂಸ್ಥೆಯ ಕೆಲಸವನ್ನು ನಿರೀಕ್ಷಿಸುವುದರಲ್ಲಿ ಹುರುಳಿಲ್ಲವೆಂದು ಕಾಣುತ್ತದೆ. ಸಂಜೆಯ ವೇಳೆಯ ಥಂಡಿಯ ವಾತಾವರಣ ಹೈರಾಣಾಗಿಸಬಹುದು.

ತುಲಾ: ಖಾಸಗಿ ಕಂಪನಿಯಲ್ಲಿರುವವರು ಉದ್ಯೋಗದಲ್ಲಿ ತಮ್ಮ ಮೇಲಧಿಕಾರಿಗಳಿಂದ ಅನುಕೂಲ ಪಡೆಯುವರು. ಮಕ್ಕಳ ನಡೆ ಕಂಡು ಅವರ ಮುಂದಿನ ಭವಿಷ್ಯದ ಬಗ್ಗೆ ಯೋಚನೆ ಮಾಡುವಿರಿ.

ವೃಶ್ಚಿಕ: ಮನೆಯಲ್ಲಿ ನಡೆಯುವ ಘಟನೆ ನಿಮ್ಮಲ್ಲಿ ದೊಡ್ಡದಾದ ಬದಲಾವಣೆಯನ್ನು ಉಂಟುಮಾಡಬಹುದು. ಯೋಗಾರೂಢ ನರಸಿಂಹನಲ್ಲಿ ಮನೋಭಿಲಾಶೆಯನ್ನು ಬೇಡಿಕೊಂಡರೆ ಪೂರೈಕೆಯಾಗುವುದು.

ಧನು: ಅಜೀರ್ಣಾದಿ ಸಮಸ್ಯೆಗಳನ್ನು ತಡೆಗಟ್ಟಲು ಮೃದು ಹಾಗೂ ಸ್ನಿಗ್ಧ ಆಹಾರವನ್ನು ಸೇವಿಸಿರಿ. ವಾಹನವನ್ನು ಚಲಾಯಿಸುವಾಗ ನಿಮಗೆ ಇರುವ ಅವಸರವನ್ನು ಇತರರು ಗೌರವಿಸಲಾರರು ಎಂಬುದನ್ನು ಮರೆಯದಿರಿ.

ಮಕರ: ಭಾಗವಹಿಸುವ ಸಭೆಯಲ್ಲಿ ನಿಮ್ಮ ಪಾಂಡಿತ್ಯಕ್ಕೆ ತಕ್ಕನಾದ ಸ್ಥಾನಮಾನ ದೊರೆಯದೆ ಇರಬಹುದು. ಮಗಳ ಶಿಫಾರಸ್ಸಿನ ಮೇಲೆ ಖರೀದಿಸಿದ ಆಸ್ತಿಯು ಅತ್ಯಂತ ಲಾಭದಾಯಕವಾದದ್ದು ಎಂದು ಮನವರಿಕೆಯಾಗುತ್ತದೆ.

ಕುಂಭ: ಕುಟುಂಬದ ಗೌರವವನ್ನು ಉಳಿಸುವುದಕ್ಕಾಗಿ ನೀವು ಮಾಡುತ್ತಿರುವ ತ್ಯಾಗವು ಅತ್ಯಂತ ಪ್ರಶಂಸನೀಯ. ಓಡಾಟ ತಿರುಗಾಟಗಳು ಹೆಚ್ಚಿದ ಕಾರಣ ದೇಹಾಯಾಸವು ಅತ್ಯಂತವಾಗಿ ಬಾಧಿಸುತ್ತದೆ.

ಮೀನ: ನಿರಂತರವಾಗಿ ಆಗುತ್ತಿರುವ ಎಡವಟ್ಟುಗಳು ಸಂಗಾತಿಯ ಮಾತುಗಳನ್ನು ಮರುಕಳಿಸುವಂತೆ ಮಾಡುತ್ತದೆ. ಹೆಚ್ಚಿದ ಜವಾಬ್ದಾರಿಗಳು ನಿಮ್ಮನ್ನು ಗಂಭೀರರನ್ನಾಗಿಯೂ, ಮೌನಿಗಳನ್ನಾಗಿಯು ಮಾಡುತ್ತದೆ.

ಪದಬಂಧ 5271

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಹರಣವನ್ನ ನೀಡುವಿಕೆ (4)
3.ಅಪ್ಪನ ಈ ರೂಪ ಬಲು ವಿರಳ! (4)
5.ನಡುವಲ್ಲೇ ಶುರುವಾದ ಕಂಪನ (3)
8.ಮಿಥ್ಯವಲ್ಲ! ಇದು ಜೋಡಿ! (3)
9.ಯೋಗ್ಯನಿಗೆ ಸಿಕ್ಕಿರುವ ಪ್ರಮಾಣ ಪತ್ರ (5)
10.ತಲೆಯಲ್ಲಿರಿಸಿಕೊಂಡಿರುವ ಅನ್ನದ ಪಾತ್ರೆ (3)
11.ಹರನಿಗೆ ಸಲ್ಲಿಸಿದ ಮುಡಿಪು (3)
15.ಯತಿಗೆಂದೇ ನೀಡಿದ ರಿಬೇಟ್ (4)
16.ಜೇನಿನೊಡಗೂಡಿದ ತಿಂಗಳು (4)

ಮೇಲಿಂದ ಕೆಳಕ್ಕೆ
1.ಚೀನದಲ್ಲಿ ಖರೀದಿಸಿದ್ದೆಲ್ಲಾ ಹಳೆಯದು! (3)
2.ಬಟ್ಟೆಯನ್ನು ಧರಿಸದಿರುವವ (2)
3.ಪಗಡೆ ಆಟದ ದಾಳ (2)
4.ಇದು ಬೇರೆಯವರ ಹಣ (4)
6.ಕಲೆಯಲ್ಲಿನ ಆಹ್ವಾನ (4)
7.ತಾಪವಿದ್ದಾಗಲೇ ಅತಿಯಾದ ದುಃಖ (3)
8.ಗೆಳೆಯನಿಗೆ ಮಾಡಿದ ವಂಚನೆ (4)
10.ತರತರದ ಕಾಯಿಪಲ್ಲೆ (4)
12.ಕೆಲವರು ಮಾಡುವ ಕಾರ್ಯ (3)
13.ಕೀರ್ತಿ ಹೀಗೆ ಬಂದಿದೆ (2)
14.ಪಾಂಡವರಲ್ಲಿ ಎರಡನೆಯವನು (2)



5270ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಉಚ್ಛ್ವಾಸ 3.ಗಾವುದ
5.ಭಿನ್ನಾಭಿಪ್ರಾಯ
7.ಕ್ಷುಲ್ಲಕ 8.ಕಹಳೆ
9.ಓರಿಗೆ 11.ಗರತಿ
13.ದುಮ್ಮಾನ 15.ಶುಕ್ತಿಕೆ
16.ವಿಮಾನಯಾನ
17.ಕಂದೀಲು 18.ಕದಿರು

ಮೇಲಿಂದ ಕೆಳಕ್ಕೆ:
2.ಸಭಿಕ 3.ಗಾಯಕ
6.ಭಿಕಾರಿ 9.ಓದುಗ
10.ಗೆಳತಿ 12.ರಸನ
14.ನವಿಲು 15.ಶುನಕ

ಸುಡೊಕು 5657

	4			2		7		3
6		9	5		7			
	3			8		6		
	7			9			3	
	9	3	6					4
4				5		8		
7			8		9			
	5						8	
	8			4		9		1

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5656 ಸುಡೊಕು

2	1	8	3	7	5	4	6	9
4	9	7	6	1	2	8	5	3
3	6	5	9	4	8	1	7	2
9	2	3	1	8	7	5	4	6
5	7	1	4	6	3	9	2	8
8	4	6	5	2	9	3	1	7
7	3	9	2	5	1	6	8	4
6	5	2	8	9	4	7	3	1
1	8	4	7	3	6	2	9	5

ಪ್ರಜಾವಾಣಿ ಪ್ರಜಾಧ್ವನಿ ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ

ಕರ್ನಾಟಕದಲ್ಲಿ ಧರ್ಮ ಆಧಾರಿತ ಮೀಸಲಾತಿಯನ್ನು ಸಮಾಪ್ತಿ ಮಾಡಲಾಗಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿರುವುದು ಸರಿಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಶ್ರದ್ಧಾಂಜಲಿ

ಶ್ರೀಮತಿ ಗೌರಮ್ಮ ಭದ್ರಶೆಟ್ಟಿ
ಜನನ: 28.05.1946 – ಮರಣ: 19.03.2023
ದಿ|| ಶ್ರೀ ಭದ್ರಶೆಟ್ಟಿ ಚಂದ್ರಶೇಖರಪ್ಪ ಇವರ ಧರ್ಮಪತ್ನಿ ಶ್ರೀಮತಿ ಗೌರಮ್ಮ ಭದ್ರಶೆಟ್ಟಿ ಇವರು ದಿನಾಂಕ 19.03.2023 ರಂದು ಲಿಂಗೈಕ್ಯರಾದರು ಎಂದು ತಿಳಿಸಲು ವಿಷಾದಿಸುತ್ತೇವೆ
ಇವರ ಶಿವಗಣಾರಾಧನೆಯನ್ನು ದಿನಾಂಕ 31–03–2023 ಅಪರಾಹ್ನ: 12:30 ಗಂಟೆಗೆ. ಮೃತರ ಸ್ವಗೃಹ ಚಂದ್ರಾಲೇಔಟ್‌ನಲ್ಲಿ ನೆರವೇರಿಸಲಾಗುವುದು
ಇಂತಿ ದುಃಖತಪ್ತರು:
ಶ್ರೀಮತಿ ಪೂರ್ಣ ಭದ್ರಶೆಟ್ಟಿ ಹಾಗೂ ಶ್ರೀ ಮಂಜುನಾಥ ಭದ್ರಶೆಟ್ಟಿ U.S.A ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಸಮಸ್ತ ಭದ್ರಶೆಟ್ಟಿಯ ಹಾಗೂ ಉತ್ತಂಗಿ ಕರಣಂ ಬಂಧುಗಳು.

ಅದಾನಿ ಪ್ರಕರಣ: ಕೇಂದ್ರ ಸರ್ಕಾರಕ್ಕೆ ವಿರೋಧ ಪಕ್ಷಗಳ ತೀಕ್ಷ್ಣ ಪ್ರಶ್ನೆ, ನಡೆಯದ ಸಂಸತ್ ಕಲಾಪ

‘ಜೆಪಿಸಿ ತನಿಖೆಗೆ ಮೋದಿ ಸರ್ಕಾರ ಹೆದರುವುದೇಕೆ?’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಅದಾನಿ ಸಮೂಹದ ಮೇಲಿನ ಆರೋಪದ ತನಿಖೆಗೆ ಸರ್ಕಾರ ಆದೇಶ ನೀಡದಿರುವುದು ಏಕೆ’ ಎಂದು ವಿರೋಧ ಪಕ್ಷಗಳ ನಾಯಕರು ಸರ್ಕಾರವನ್ನು ಪ್ರಶ್ನಿಸಿದವು. ಸಂಸತ್ತಿನ ಒಳಗೆ ಮತ್ತು ಹೊರಗೆ ನಡೆದ ಪ್ರತಿಭಟನೆಯಲ್ಲಿ ವಿರೋಧ ಪಕ್ಷಗಳ ನಾಯಕರು ಈ ಪ್ರಶ್ನೆಯನ್ನು ಪದೇ ಪದೇ ಸರ್ಕಾರದ ಮುಂದಿಟ್ಟರು.

ಲೋಕಸಭೆಯಲ್ಲಿ ವಿರೋಧ ಪಕ್ಷಗಳ ಸಂಸದರು, ‘ಇ.ಡಿ ಮತ್ತು ಮೊದಾನಿ ಅಣ್ಣ-ತಮ್ಮ’, ‘ಇ.ಡಿ ಮತ್ ಡರೋ, ಅದಾನಿ ಪರ್ ರೇಡ್ ಕರೋ (ಹೆದರಬೇಡ ಇ.ಡಿ, ಅದಾನಿ ಮೇಲೆ ದಾಳಿ ಮಾಡು)’ ಎಂಬ ಘೋಷಣೆಗಳಿದ್ದ ಫಲಕಗಳನ್ನು ಪ್ರದರ್ಶಿಸಿದರು.

ಕರಾಳ ದಿನದ ಭಾಗವಾಗಿ ಎಲ್ಲಾ ವಿರೋಧ ಪಕ್ಷಗಳ ಸಂಸದರು ಕಪ್ಪು ದಿರಿಸು ಧರಿಸಿದ್ದರು. ‘ಪ್ರಧಾನಿ ಮೋದಿ ಅವರು ದೇಶದ ಪ್ರಜಾಪ್ರಭುತ್ವವನ್ನು ನಾಶ ಮಾಡುತ್ತಿದ್ದಾರೆ. ಹೀಗಾಗಿ ಎಲ್ಲಾ ವಿರೋಧ ಪಕ್ಷಗಳ ನಾಯಕರು ಕಪ್ಪು ಬಟ್ಟೆ ಹಾಕಿದ್ದಾರೆ. ಕೆಲವೇ ವರ್ಷಗಳಲ್ಲಿ ಅದಾನಿಯ ಆಸ್ತಿ ಹಲವು ಪಟ್ಟು ಹೆಚ್ಚಾಗಿದ್ದು ಹೇಗೆ? ಅದಾನಿ ಸಂಬಂಧ ಎತ್ತಲಾದ ಪ್ರಶ್ನೆಗಳಿಗೆ ಪ್ರಧಾನಿ ಉತ್ತರ ನೀಡುತ್ತಿಲ್ಲ. ಹೀಗಾಗಿಯೇ ಈ ವಿಚಾರದಲ್ಲಿ ಜಂಟಿ ಸಂಸದೀಯ ಸಮಿತಿ (ಜೆಪಿಸಿ) ಬೇಕು ಎಂದು ನಾವು ಕೇಳುತ್ತಿದ್ದೇವೆ. ಆದರೆ, ಸರ್ಕಾರ ಇದಕ್ಕೆ ಒಪ್ಪದೇ ಇರುವುದು ಏಕೆ? ಜೆಪಿಸಿ ತನಿಖೆಗೆ ಸರ್ಕಾರ ಹಿಂದೇಟು ಹಾಕುತ್ತಿರುವುದೇಕೆ? ಇಲ್ಲೇನೋ ತಪ್ಪು ನಡೆದಿದೆ ಎಂಬುದನ್ನು ಇದು ಸೂಚಿಸುತ್ತದೆ ಅಲ್ಲವೇ’ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು

ಪ್ರತಿಭಟನೆ ನಡೆಸಿದ ಯುವಕಾಂಗ್ರೆಸ್ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದು ಬಸ್‌ನಲ್ಲಿ ಕರೆದೊಯ್ದರು –ಪಿಟಿಐ ಚಿತ್ರ

ರಾಹುಲ್ ಅವರಿಗೆ ಅವಮಾನ ಮಾಡಲೆಂದೇ, ಕರ್ನಾಟಕದಲ್ಲಿ ಆಡಿದ್ದ ಮಾತುಗಳನ್ನು ಗುಜರಾತ್‌ನಲ್ಲಿ ತನಿಖೆಗೆ ಒಳಪಡಿಸಲಾಯಿತು
ಮಲ್ಲಿಕಾರ್ಜುನ ಖರ್ಗೆ,
ಕಾಂಗ್ರೆಸ್ ಅಧ್ಯಕ್ಷ

ಒಬಿಸಿ ಸಮುದಾಯಕ್ಕೆ ರಾಹುಲ್ ಮಾಡಿದ ಅವಮಾನವನ್ನು ಕಾಂಗ್ರೆಸ್ ಬೆಂಬಲಿಸುವ ಕೀಳುಮಟ್ಟಕ್ಕೆ ಇಳಿದಿದೆ. ಹೀಗಾಗಿಯೇ ಪ್ರತಿಭಟನೆ ನಡೆಸುತ್ತಿದೆ
ಪೀಯೂಷ್ ಗೋಯಲ್,
ಕೇಂದ್ರ ಸಚಿವ

ಸಚಿವ ಪುರಿ ವಿರುದ್ಧ ಕಾಂಗ್ರೆಸ್ ಕಿಡಿ

ರಾಹುಲ್ ಗಾಂಧಿ ಅವರ ವಿರುದ್ಧ ಕೇಂದ್ರ ಸಚಿವ ಹರ್‌ದೀಪ್ ಸಿಂಗ್ ಪುರಿ ಅವರು ಆಕ್ಷೇಪಾರ್ಹ ಹೇಳಿಕೆ ನೀಡಿದ್ದಾರೆ ಎಂದು ಕಾಂಗ್ರೆಸ್ ಸೋಮವಾರ ತೀವ್ರ ಆಕ್ರೋಶ ವ್ಯಕ್ತಪಡಿಸಿತು. ಸಾವರ್ಕರ್ ಅವರಂತವರು ದೇಶಕ್ಕೆ ನೀಡಿದ ಕೊಡುಗೆ ಗೊತ್ತಿದೆಯೇ ಎಂದು ರಾಹುಲ್ ಅವರನ್ನು ಉದ್ದೇಶಿಸಿ ಪುರಿ ಹೇಳಿದರು. ‘ಕುದುರೆ ಓಟದ ಸ್ಪರ್ಧೆಯಲ್ಲಿ ಕತ್ತೆಯನ್ನು ತರುತ್ತಿದ್ದೀರಾ’ ಎಂದು ಪುರಿ ಹೇಳಿದರು. ಈ ಮಾತಿಗೆ ಕಾಂಗ್ರೆಸ್ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ. ಮಾತನಾಡಿದವರ ನಾಲಗೆಯು ಅವರ ಚಾರಿತ್ರ್ಯವನ್ನು ಹೇಳುತ್ತದೆ ಎಂದು ಕಾಂಗ್ರೆಸ್ ಮುಖಂಡರಾದ ಜೈರಾಮ್ ರಮೇಶ್ ಹಾಗೂ ಸುಪ್ರಿಯಾ ಶ್ರೀನಾಥೆ ಅವರು ಕಿಡಿಕಾರಿದ್ದಾರೆ.

ಕಪ್ಪು ಸೀರೆಯಲ್ಲಿ ಬಿಜೆಪಿ ಶಾಸಕಿ!

ತಮಿಳುನಾಡು ಕಾಂಗ್ರೆಸ್ ಶಾಸಕರು ಸೋಮವಾರ ಕಪ್ಪು ದಿರಿಸು ಧರಿಸಿ ಸದನಕ್ಕೆ ಹಾಜರಾಗಿದ್ದರು. ಆದರೆ, ಇದರ ಅರಿವಿಲ್ಲದ ಬಿಜೆಪಿ ಶಾಸಕಿ ವಾಸಂತಿ ಶ್ರೀನಿವಾಸನ್ ಅವರು ಕಪ್ಪು ಸೀರೆ ಧರಿಸಿ ಸದನಕ್ಕೆ ಬಂದು ಅಚ್ಚರಿ ಮೂಡಿಸಿದರು.

ಕಾಂಗ್ರೆಸ್ ಸದಸ್ಯರು ಕಪ್ಪು ದಿರಿಸಿನಲ್ಲಿ ಸದನಕ್ಕೆ ಬರುತ್ತಾರೆ ಎಂಬ ವಿಚಾರ ತಮಗೆ ಗೊತ್ತಿರಲಿಲ್ಲ ಎಂದು ವಾಸಂತಿ ಹೇಳಿದರು.

‘ನೀವು ಕಾಂಗ್ರೆಸ್ ಬೆಂಬಲಿಸುತ್ತೀರಾ’ ಎಂದು ವಾಸಂತಿ ಅವರನ್ನು ಸ್ಪೀಕರ್ ಪ್ರಶ್ನಿಸಿದರು.

‘1975ರಲ್ಲಿ ಇಂದಿರಾ ಗಾಂಧಿ ಅವರು ಹೇರಿದ್ದ ತುರ್ತುಪರಿಸ್ಥಿತಿಯಲ್ಲಿ ಡಿಎಂಕೆ ಸದಸ್ಯರು ಎದುರಿಸಿದ ತೊಂದರೆಯ ವಿರುದ್ಧ ಪ್ರತಿಭಟನೆ ನಡೆಸಲು ನಾನು ಕಪ್ಪು ಸೀರೆ ಧರಿಸಿದ್ದೆ’ ಎಂದು ಅವರು ಸಮಜಾಯಿಷಿ ನೀಡಲು ಯತ್ನಿಸಿದರು.

ವಿಧಾನಸಭೆಗಳಲ್ಲಿ ಕಾಂಗ್ರೆಸ್ ಸದಸ್ಯರ ಆಕ್ರೋಶ

ನವದೆಹಲಿ/ಚೆನ್ನೈ /ಪಟ್ನಾ/ಪುದುಚೇರಿ (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಸಂಸತ್ ಸದಸ್ಯತ್ವದಿಂದ ಅನರ್ಹಗೊಳಿಸಿರುವುದನ್ನು ಖಂಡಿಸಿ ದೇಶದ ಹಲವೆಡೆ ಸೋಮವಾರವೂ ಪ್ರತಿಭಟನೆ ನಡೆದಿದೆ. ಕಾಂಗ್ರೆಸ್ ಸದಸ್ಯರು ಕಪ್ಪು ದಿರಿಸು ಧರಿಸಿ ಧರಣಿ ನಡೆಸಿದರು. ಬಿಹಾರ, ಒಡಿಶಾ, ತಮಿಳುನಾಡು, ಬಿಹಾರ ವಿಧಾನಸಭೆಯಲ್ಲಿ ಕೋಲಾಹಲ ಸೃಷ್ಟಿಯಾಗಿದೆ. ಗುಜರಾತ್ ವಿಧಾನಸಭೆಯಲ್ಲಿ 16 ಕಾಂಗ್ರೆಸ್ ಶಾಸಕರನ್ನು ಅಮಾನತು ಮಾಡಲಾಗಿದೆ. ಕಾಂಗ್ರೆಸ್ ಮಿತ್ರಪಕ್ಷಗಳೂ ಬೆಂಬಲ ಸೂಚಿಸಿ ಪ್ರತಿಭಟನೆಗೆ ಇಳಿದಿದ್ದವು.

- ಗುಜರಾತ್ ವಿಧಾನಸಭೆಯಲ್ಲಿ ಪ್ರತಿಭಟನೆ ನಡೆಸಿ ಕೋಲಾಹಲ ಸೃಷ್ಟಿಸಿದ ಆರೋಪದಲ್ಲಿ, ಕಾಂಗ್ರೆಸ್‌ನ 17 ಸದಸ್ಯರ ಪೈಕಿ 16 ಸದಸ್ಯರನ್ನು ಬಜೆಟ್ ಅಧಿವೇಶನ ಮುಗಿಯುವವರೆಗೂ ಸದನದಿಂದ ಅಮಾನತು ಮಾಡಲಾಗಿದೆ
- ಒಡಿಶಾ ವಿಧಾನಸಭೆಯಲ್ಲೂ ಕಾಂಗ್ರೆಸ್ ಶಾಸಕರು ಕಪ್ಪು ದಿರಿಸು ಧರಿಸಿ ಪ್ರತಿಭಟನೆ ನಡೆಸಿದರು. ಕೆಲವು ಸದಸ್ಯರು ಸ್ಪೀಕರ್ ಆಸನದತ್ತ ನುಗ್ಗಲು ಯತ್ನಿಸಿದ್ದರಿಂದ ಕೋಲಾಹಲ ಉಂಟಾಯಿತು
- ಬಿಹಾರ ವಿಧಾನಸಭೆಯೂ ಕಾಂಗ್ರೆಸ್ ಶಾಸಕರ ತೀವ್ರ ಪ್ರತಿಭಟನೆಗೆ ಸೋಮವಾರ ಸಾಕ್ಷಿಯಾಯಿತು. ಕೈಗೆ ಕಪ್ಪುಪಟ್ಟಿ ಹಾಗೂ ತಲೆಗೆ ಕಪ್ಪುವಸ್ತ್ರ ಧರಿಸಿದ್ದ ಸದಸ್ಯರು ಧರಣಿ ನಡೆಸಿದರು. ಬಿಹಾರದಲ್ಲಿ ಕಾಂಗ್ರೆಸ್ ಪಕ್ಷವು ಆಡಳಿತಾರೂಢ ಮಹಾಮೈತ್ರಿಕೂಟದ ಭಾಗವಾಗಿದೆ. ಮುಖ್ಯಮಂತ್ರಿ ನಿತೀಶ್ ಕುಮಾರ್ ನೇತೃತ್ವದ ಜೆಡಿಯು ಪಕ್ಷವೂ ಪ್ರತಿಭಟನೆಗೆ ಬೆಂಬಲ ಸೂಚಿಸಿತು
- ಕೇರಳದ ಮುಸ್ಲಿಂ ಯೂತ್ ಲೀಗ್‌ನ ನೂರಾರು ಸದಸ್ಯರು ರಾಹುಲ್ ಗಾಂಧಿ ಅವರಿಗೆ ಬೆಂಬಲ ಸೂಚಿಸಿ ಕೋಯಿಕ್ಕೋಡ್‌ನಲ್ಲಿ ಪಂಜಿನ ಮೆರವಣಿಗೆ ನಡೆಸಿದರು
- ಪುದುಚೇರಿಯ ಪ್ರದೇಶ ಕಾಂಗ್ರೆಸ್ ಸಮಿತಿಯ ಸದಸ್ಯರು ಸೋಮವಾರ ಹಮ್ಮಿಕೊಂಡಿದ್ದ ಒಂದು ದಿನದ ಉಪವಾಸ ಸತ್ಯಾಗ್ರಹಕ್ಕೆ ಡಿಎಂಕೆ ಸೇರಿದಂತೆ ಮೈತ್ರಿಕೂಟ ಸದಸ್ಯರು ಬೆಂಬಲ ಸೂಚಿಸಿದರು. ಪುದುಚೇರಿ ವಿಧಾನಸಭೆಯಲ್ಲಿ ಕಾಂಗ್ರೆಸ್ ಹಾಗೂ ಡಿಎಂಕೆ ಸದಸ್ಯರು ಸಭಾತ್ಯಾಗ ಮಾಡಿದರು
- ಯುವ ಕಾಂಗ್ರೆಸ್ ಕಾರ್ಯಕರ್ತರು ದೆಹಲಿಯ ಜಂತರ್‌ಮಂತರ್‌ನಲ್ಲಿ ಪ್ರತಿಭಟನೆ ನಡೆಸಿದರು. ದೇಶದ ಎಲ್ಲೆಡೆಯಿಂದ ಬಂದಿದ್ದ ಯುವ ಘಟಕದ ಕಾರ್ಯಕರ್ತರು ಸಂಸತ್‌ವರೆಗೆ ಮೆರವಣಿಗೆ ನಡೆಸಲು ಮುಂದಾದರು. ಆದರೆ ಪೊಲೀಸರು ಇದಕ್ಕೆ ಅವಕಾಶ ನೀಡಲಿಲ್ಲ
- ಮಣಿಪುರದ ಕಾಂಗ್ರೆಸ್ ಘಟಕದ ಸದಸ್ಯರು ಇಂಫಾಲದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಅದಾನಿ ಪ್ರಕರಣದಲ್ಲಿ ಏಕಿಷ್ಟು ಭಯ: ಮೋದಿ ವಿರುದ್ಧ ರಾಹುಲ್ ಕಿಡಿ

ನವದೆಹಲಿ (ಪಿಟಿಐ): ‘ಅದಾನಿ ಸಮೂಹದ ವಿರುದ್ಧ ಹಲವು ಆರೋಪಗಳು ಕೇಳಿಬಂದ ನಂತರವೂ ಈ ದೇಶದ ನಾಗರಿಕರ ನಿವೃತ್ತಿಯ ಹಣವನ್ನು ಆ ಸಮೂಹದಲ್ಲಿ ಹೂಡಿಕೆ ಮಾಡಿದ್ದೇಕೆ. ಈ ಕುರಿತು ತನಿಖೆಗೆ ಆದೇಶಿಸಲು ಏಕೆ ಹಿಂದೇಟು ಹಾಕುತ್ತಿದ್ದೀರಿ’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಪ್ರಧಾನಿ ನರೇಂದ್ರ ಮೋದಿ ಅವರನ್ನು ಪ್ರಶ್ನಿಸಿದ್ದಾರೆ.

ಸೋಮವಾರ ಸರಣಿ ಟ್ವೀಟ್ ಮಾಡಿರುವ ಅವರು, ‘ಭಾರತೀಯ ಜೀವ ವಿಮಾ ನಿಗಮ (ಎಲ್‌ಐಸಿ), ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಹಾಗೂ ಇಪಿಎಫ್‌ಒ ಹಣವನ್ನೂ ಅದಾನಿ ಸಮೂಹದಲ್ಲಿ ಹೂಡಿಕೆ ಮಾಡಲಾಗಿದೆ. ‘ಮೋದಾನಿ’ಯ ನಂಟು ಬಹಿರಂಗಗೊಂಡ ಬಳಿಕವೂ ನಾಗರಿಕರ ನಿವೃತ್ತಿಯ ಹಣವನ್ನು ಅದಾನಿ ಸಮೂಹದಲ್ಲಿ ಹೂಡಿಕೆ ಮಾಡಿದ್ದೇಕೆ’ ಎಂದು ಪ್ರಶ್ನಿಸಿದ್ದಾರೆ.

‘ಪ್ರಧಾನಿಯವರೆ ಅದಾನಿ ಪ್ರಕರಣದ ಕುರಿತು ತನಿಖೆಗೂ ಆದೇಶಿಸುತ್ತಿಲ್ಲ. ಈ ಸಂಬಂಧ ಉತ್ತರವನ್ನೂ ನೀಡುತ್ತಿಲ್ಲ. ನಿಮಗೆ ಇಷ್ಟೊಂದು ಭಯ ಏಕೆ’ ಎಂದೂ ಕಿಡಿಕಾರಿದ್ದಾರೆ.

ರಾಹುಲ್ ಬಂಗಲೆ ತೆರವಿಗೆ ಏ.22ರ ಗಡುವು

ಲೋಕಸಭಾ ಸದಸ್ಯತ್ವ ಕಳೆದುಕೊಂಡಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಅಧಿಕೃತ ಸರ್ಕಾರಿ ಬಂಗಲೆಯನ್ನು ಏಪ್ರಿಲ್ 22ರೊಳಗೆ ತೆರವು ಮಾಡುವಂತೆ ಸೂಚಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಲೋಕಸಭೆಯ ಸದನ ಸಮಿತಿ ಈ ನಿರ್ಧಾರ ತೆಗೆದುಕೊಂಡಿದೆ.

ದೆಹಲಿಯ ತುಘಲಕ್ ಮಾರ್ಗದ ಬಂಗಲೆಯಲ್ಲಿ ರಾಹುಲ್ ಅವರು 2005ರಿಂದ ವಾಸಿಸುತ್ತಿದ್ದಾರೆ. ಸದಸ್ಯತ್ವ ಕಳೆದುಕೊಂಡ ಒಂದು ತಿಂಗಳ ಒಳಗೆ ಅಧಿಕೃತ ನಿವಾಸವನ್ನು ಸಂಸದರು ತೆರವು ಮಾಡಬೇಕು ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ವಾಸದ ಅವಧಿ ವಿಸ್ತರಣೆ ಕೋರಿ ಸದಸ್ಯರು ಸದನ ಸಮಿತಿಗೆ ಮನವಿ ಮಾಡಬಹುದು. ಕಾರಣ ಸಮಂಜಸವಾಗಿದ್ದರೆ, ಸಮಿತಿಯು ಅವಧಿ ವಿಸ್ತರಣೆ ನಿರ್ಧಾರ ತೆಗೆದುಕೊಳ್ಳುತ್ತದೆ. ಸಮಿತಿಯು ವಿವಿಧ ಪಕ್ಷಗಳ 11 ಸದಸ್ಯರನ್ನು ಒಳಗೊಂಡಿದ್ದು, ಬಿಜೆಪಿ ಸಂಸದ ಸಿ.ಆರ್. ಪಾಟೀಲ್ ಅವರು ಸಮಿತಿ ಮುಖ್ಯಸ್ಥರಾಗಿದ್ದಾರೆ. ಸಮಿತಿಯಲ್ಲಿರುವ ಕಾಂಗ್ರೆಸ್ ಸಂಸದ ಮಾಣಿಕಂ ಟಾಗೋರ್ ಅವರು ಈ ನಿರ್ಧಾರವನ್ನು ವಿರೋಧಿಸಿದ್ದಾರೆ.

ಪಟ್ಟಿ ಬಿಡುಗಡೆ ಮಾಡಿದ ಬಿಜೆಪಿ: ಈ ಹಿಂದೆ ಅನರ್ಹಗೊಂಡಿದ್ದ ಐವರು ಸಂಸದರು ಸೇರಿದಂತೆ 12ಕ್ಕೂ ಹೆಚ್ಚು ಶಾಸಕರ ಪಟ್ಟಿಯನ್ನು ಸೋಮವಾರ ಬಿಡುಗಡೆ ಮಾಡಿದ ಬಿಜೆಪಿ, ಆ ಸಮಯದಲ್ಲಿ ಪ್ರತಿಭಟನೆಗಳು ಮತ್ತು ಕಪ್ಪು ಬಟ್ಟೆಗಳು ಏಕೆ ಕಂಡುಬಂದಿಲ್ಲ ಎಂದು ಪ್ರಶ್ನಿಸಿದೆ. 2013 ಮತ್ತು 2014ರಲ್ಲಿ ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರ ವಿಧಾನಸಭೆಯಿಂದ ಅನರ್ಹತೆಗೆ ಒಳಗಾದ ಬಿಜಾವರ್ ಶಾಸಕಿ ಆಶಾ ರಾಣಿ ಮತ್ತು ಇಚಲಕರಂಜಿ ಶಾಸಕ ಸುರೇಶ್ ಹಲ್ವಾಂಕರ್ ಸೇರಿದಂತೆ ಬಿಜೆಪಿಯ ಇಬ್ಬರು ಶಾಸಕರು ಕೂಡ ಪಟ್ಟಿಯಲ್ಲಿ ಕಾಣಿಸಿಕೊಂಡಿದ್ದಾರೆ.

ಬಿಜೆಪಿ: ‘ಒಬಿಸಿ’ ಸಮುದಾಯದ 1 ಕೋಟಿ ಮನೆಗಳ ಭೇಟಿಗೆ ಯೋಜನೆ

ನವದೆಹಲಿ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಇತರೆ ಹಿಂದುಳಿದ ವರ್ಗಕ್ಕೆ (ಒಬಿಸಿ) ಅವಮಾನ ಮಾಡಿದ್ದಾರೆ ಎಂದು ಆರೋಪಿಸಿರುವ ಬಿಜೆಪಿಯು ಈ ವಿಚಾರವನ್ನು ಜನರ ಬಳಿ ತೆಗೆದುಕೊಂಡು ಹೋಗಲು ತೀರ್ಮಾನಿಸಿದ್ದು, ಇದಕ್ಕಾಗಿ ದೇಶದಾದ್ಯಂತ ಒಬಿಸಿ ಸಮುದಾಯದ 1 ಕೋಟಿ ಮನೆಗಳನ್ನು ತಲುಪಲು ಯೋಜನೆ ರೂಪಿಸುತ್ತಿದೆ.

ಈ ವಿಚಾರವಾಗಿ ಪಕ್ಷದಲ್ಲಿರುವ ಒಬಿಸಿ ಸಮುದಾಯದ ಎಲ್ಲಾ ಸಂಸದರೊಂದಿಗೆ ಚರ್ಚಿಸುವುದಕ್ಕಾಗಿ ಇದೇ 29ರಂದು ಸಭೆ ಕರೆಯಲಾಗಿದೆ. ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಹಾಗೂ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಬಿ.ಎಲ್.ಸಂತೋಷ್ ಅವರು ಈ ಯೋಜನೆಯ ಕಾರ್ಯತಂತ್ರದ ಕುರಿತು ಚರ್ಚೆ ನಡೆಸಲಿದ್ದಾರೆ.

2024ರ ಲೋಕಸಭೆ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡಿರುವ ಪಕ್ಷದ ಒಬಿಸಿ ಮೋರ್ಚಾ, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ತನ್ನ ಒಂಬತ್ತು ವರ್ಷಗಳ ಆಡಳಿತಾವಧಿಯಲ್ಲಿ ಮಾಡಿರುವ ಸಾಧನೆಗಳನ್ನು ಬಿಂಬಿಸುವ ಸಲುವಾಗಿ ಒಂಬತ್ತು ದಿನಗಳ ಕಾರ್ಯಕ್ರಮವೊಂದನ್ನು ನಡೆಸಲು ಈಗಾಗಲೇ ನಿರ್ಧರಿಸಿದೆ. ಆದರೆ ಈಗ ರಾಹುಲ್ ಅವರು ಒಬಿಸಿ ಸಮುದಾಯವನ್ನು ಅವಮಾನಿಸಿರುವ ವಿಚಾರವನ್ನೇ ಕಾರ್ಯಕ್ರಮದ ಮೂಲ ಧ್ಯೇಯವನ್ನಾಗಿಸಿಕೊಳ್ಳಲು ತೀರ್ಮಾನಿಸಿದೆ.

ಬಿಜೆಪಿ ಸಂಸ್ಥಾಪನಾ ದಿನವಾದ ಏಪ್ರಿಲ್ 6ರಂದು ಈ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದು, ಡಾ.ಬಿ.ಆರ್.ಅಂಬೇಡ್ಕರ್ ಜಯಂತಿಯಂದು (ಏ.14) ಸಮಾರೋಪ ಸಮಾರಂಭ ನಿಗದಿಯಾಗಿದೆ. ಈ ಅವಧಿಯಲ್ಲಿ ದೇಶದ 1 ಲಕ್ಷ ಗ್ರಾಮಗಳಲ್ಲಿರುವ ಒಬಿಸಿ ಸಮುದಾಯದ 1 ಕೋಟಿ ಮನೆಗಳಿಗೆ ಭೇಟಿ ನೀಡಲು ತೀರ್ಮಾನಿಸಲಾಗಿದೆ.

‘ಚುನಾವಣಾ ಪ್ರಚಾರ ರ‍್ಯಾಲಿಯ ವೇಳೆ ರಾಹುಲ್ ಅವರು ‘ಕಳ್ಳರೆಲ್ಲರಿಗೂ ಸಾಮಾನ್ಯವಾಗಿ ಮೋದಿ ಎಂಬ ಉಪನಾಮವೇ ಏಕಿರುತ್ತದೆ’ ಎಂದು ವ್ಯಂಗ್ಯವಾಡಿದ್ದಾರೆ. ಆ ಮೂಲಕ ಇಡೀ ಒಬಿಸಿ ಸಮುದಾಯವನ್ನು ನಿಂದಿಸಿದ್ದಾರೆ. ಕಾಂಗ್ರೆಸ್ ಪಕ್ಷವು ಒಬಿಸಿ ಸಮುದಾಯಕ್ಕೆ ಎಸಗಿರುವ ದ್ರೋಹ ಎಂತಹುದು ಎಂಬುದನ್ನು ಜನರಿಗೆ ಮನವರಿಕೆ ಮಾಡಿಕೊಡುವುದು ಈ ಕಾರ್ಯಕ್ರಮದ ಉದ್ದೇಶ’ ಎಂದು ಬಿಜೆಪಿ ಒಬಿಸಿ ಮೋರ್ಚಾ ಮುಖ್ಯಸ್ಥ ಕೆ.ಲಕ್ಷ್ಮಣ್ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಸುಧಾ ಓದಿರಿ

ಉದ್ಯೋಗಾವಕಾಶ

General

TYPING WORK ಮನೆಯಲ್ಲಿ ಕುಳಿತು ಮೊಬೈಲ್ ಅಥವಾ laptopನಲ್ಲಿ ಕೆಲಸ ಮಾಡಿ ವಾರಕ್ಕೆ 10000 ಸಂಪಾದಿಸಿ; 10th pass; 6362647302

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 15,000/- ಬೆಂಗಳೂರು -54 ಸಂಪರ್ಕಿಸಿ ಹೆಚ್ಚಿನ ಮಾಹಿತಿಗಾಗಿ 9148525233, 7899235388

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

TRAVEL CORNER

ಅವಿಕಾಮ್ ಕೊರಿಯರ್ಬಾಯ್ಸ್, ಡ್ರೈವರ್ಸ್, ಬೈಕರ್ ಗಳು, ಪಿಕಪ್ ಮತ್ತು ಡೆಲಿವರಿ ಬಾಯ್ಸ್ ಕೆಲಸಕ್ಕೆ ಬೇಕಾಗಿದ್ದಾರೆ. ಬ್ರಾಂಚೆಸ್: ಪುಣೆ, ದೆಹಲಿ, ಬೆಂಗಳೂರು, ಹೈದರಾಬಾದ್ ವಸತಿ ವ್ಯವಸ್ಥೆ ಇದೆ. ಪಿಎಫ್ ಮತ್ತು ಇ.ಎಸ್.ಐ ಸೌಲಭ್ಯವಿದೆ. ಕನಿಷ್ಠ ವಿದ್ಯಾರ್ಹತೆ SSLC Ph: 9590071107/ 9686779642/ 9845840325

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611227266/ 9611221244

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/ ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ವೈಯಕ್ತಿಕ

Lost

ORIGINAL TITLE deeds of Mysore Plastics & Ceramics Pvt Ltd, A-110, Industrial Estate, Rajajinagar, Bangalore-560044 has been lost bearing no 6082/01-02 dated 04/03/2002 regd at SRO Rajajinagar, Bangalore. If anyone finds please contact B K Surendranath on 9900246803

Book Your Classifieds Ads
Online Log in to
dhclassifieds.com
Contact :
9845114560 : 9731810277
9901641752 : 9886213331
080 - 45557163 / 164

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೆಟ್ ಲಿ. ಬೆಂಗಳೂರು

ಸಚಿವ ವಜಾ: ನೇತನ್ಯಾಹು ವಿರುದ್ಧ ಆಕ್ರೋಶ

ನ್ಯಾಯಾಂಗ ವ್ಯವಸ್ಥೆ ಬದಲಾವಣೆ ಕ್ರಮಗಳ ಸ್ಥಗಿತ. ಪ್ರಧಾನಿಗೆ ಅಧ್ಯಕ್ಷರ ತಾಕೀತು

ಜೆರುಸಲೆಂ (ಎ.ಪಿ): ‘ನ್ಯಾಯಾಂಗ ವ್ಯವಸ್ಥೆಗೆ ಆಮೂಲಾಗ್ರ ಬದಲಾವಣೆ ತರುವ ನಿರ್ಧಾರವನ್ನು ತಕ್ಷಣದಿಂದ ಕೈಬಿಡಬೇಕು’ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೇತನ್ಯಾಹು ಅವರಿಗೆ ಅಧ್ಯಕ್ಷ ಐಸಾಕ್ ಹೆರ್ಜೋಗ್ ಸೂಚಿಸಿದ್ದಾರೆ.

ನಿರ್ಧಾರ ಕೈಬಿಡುವಂತೆ ಈ ಮೊದಲು ಸಲಹೆ ಮಾಡಿದ್ದ ರಕ್ಷಣಾ ಸಚಿವ ಯೋವ್ ಗಲಾಂಟ್ ಅವರನ್ನು ಪ್ರಧಾನಿ ಸಂಪುಟದಿಂದ ವಜಾ ಮಾಡಿದ್ದರು. ಪ್ರಧಾನಿಯವರ ಕ್ರಮಕ್ಕೆ ವ್ಯಾಪಕ ಆಕ್ರೋಶ ವ್ಯಕ್ತವಾಗಿದ್ದು, ಜನರು ಬೀದಿಗಿಳಿದು ಪ್ರತಿಭಟಿಸಿದ್ದರು. ಪ್ರತಿಭಟನೆಯು ತೀವ್ರಗೊಂಡಂತೆ ಅಧ್ಯಕ್ಷರ ಸೂಚನೆಯು ಹೊರಬಿದ್ದಿದೆ.

ಪ್ರತಿಭಟನೆ, ಧರಣಿ ಹಿನ್ನೆಲೆಯಲ್ಲಿ ಇಸ್ರೇಲ್‌ನಾದ್ಯಂತ ಗೊಂದಲದ ಸ್ಥಿತಿ ಇದೆ. ಹೀಗಾಗಿ, ನ್ಯಾಯಾಂಗ ವ್ಯವಸ್ಥೆಯನ್ನು ಬದಲಿಸುವ ಕ್ರಮಗಳನ್ನು ತಾತ್ಕಾಲಿಕವಾಗಿ ಕೈಬಿಡಬೇಕು ಎಂದು ರಕ್ಷಣಾ ಸಚಿವರು ಕೋರಿದ್ದರು. ಇದರ ಹಿಂದೆಯೇ ಅವರ ವಜಾ ಆದೇಶ ಹೊರಬಿದ್ದಿತ್ತು.

ಪ್ರಧಾನಿ ವಿರುದ್ಧ ಪ್ರತಿಭಟನೆಗೆ ಜೆರುಸಲೆಂನಲ್ಲಿ ಸೇರಿದ್ದ ಸಮೂಹ –ಎಎಫ್‌ಪಿ ಚಿತ್ರ

ಜನರು ಈಗಾಗಲೇ ನ್ಯಾಯಾಂಗ ವ್ಯವಸ್ಥೆ ಬದಲಿಸುವ ನಿರ್ಧಾರಗಳಿಗೆ ವಿರೋಧ ವ್ಯಕ್ತಪಡಿಸುತ್ತಿದ್ದು, ಸಚಿವರ ವಜಾ ಕ್ರಮದ ಬಳಿಕ ಆಕ್ರೋಶ ಇನ್ನಷ್ಟು ಭುಗಿಲೆದ್ದಿದೆ. ಪ್ರಧಾನಿ ನಿಲುವಿಗೆ ಉದ್ಯಮ, ಕಾನೂನು ಕ್ಷೇತ್ರ ಹಾಗೂ ಸೇನೆಯ ಪ್ರಮುಖರೂ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಪ್ರತಿಭಟನೆ: ಪ್ರಧಾನಿ ವಿರುದ್ಧ ಸಹಸ್ರಾರು ಜನರು ಬೀದಿಗಿಳಿದಿದ್ದು, ಟೆಲ್ ಅವಿವ್‌ನಲ್ಲಿ ಹೆದ್ದಾರಿಯನ್ನು ಅಡ್ಡಗಟ್ಟಿದ್ದರು. ಜೆರುಸಲೆಂನಲ್ಲಿ ಪ್ರಧಾನಿ ಖಾಸಗಿ ನಿವಾಸದ ಬಳಿ ಸೇರಿದ್ದ ಗುಂಪನ್ನು ಪೊಲೀಸರು ಚದುರಿಸಿದರು. ಟೆಲ್‌ಅವೀವ್‌ಗೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಯಲ್ಲಿ ಸಾವಿರಾರು ಜನ ಸೇರಿದ್ದು, ಇಸ್ರೇಲ್‌ನ ಧ್ವಜಗಳು ರಾರಾಜಿಸುತ್ತಿದ್ದವು.

ಮೂತ್ರಪಿಂಡ ಸೋಂಕಿನಿಂದ ಚೀತಾ ಸಾವು

ಭೋಪಾಲ್: ಕಳೆದ ವರ್ಷ ನಮೀಬಿಯಾದಿಂದ ತರಲಾಗಿದ್ದ ಎಂಟು ಚೀತಾಗಳ ಪೈಕಿ ‘ಸಾಷಾ’ ಹೆಸರಿನ ಹೆಣ್ಣು ಚೀತಾ ಸೋಮವಾರ ಮೃತಪಟ್ಟಿದೆ.

ಎರಡು ತಿಂಗಳಿನಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಐದೂವರೆ ವರ್ಷದ ಚೀತಾಗೆ ಡೆಹ್ರಾಡೂನ್ ವೈಲ್ಡ್‌ಲೈಫ್ ಇನ್ಸಿಟ್ಯೂಟ್ ಆಫ್ ಇಂಡಿಯಾದ ವಿಜ್ಞಾನಿಗಳು ಹಾಗೂ ನಮೀಬಿಯಾ ಮತ್ತು ದಕ್ಷಿಣ ಆಫ್ರಿಕಾದ ತಜ್ಞರ ಜತೆ ಸಮಾಲೋಚನೆ ನಡೆಸಿ ಪಶುವೈದ್ಯರು ಚಿಕಿತ್ಸೆ ನೀಡಿದರು.

ಈ ಚೀತಾ, ಭಾರತಕ್ಕೆ ತರುವ ಮೊದಲೇ ಮೂತ್ರಪಿಂಡ ಸಂಬಂಧಿ ಸಮಸ್ಯೆಯಿಂದ ಬಳಲುತ್ತಿತ್ತು ಎಂದು ಮಧ್ಯಪ್ರದೇಶ ಅರಣ್ಯ ಇಲಾಖೆ ತಿಳಿಸಿದೆ.

ನೇಪಾಳದಲ್ಲಿ ಅಮೃತಪಾಲ್ ಸಿಂಗ್?

ಕಠ್ಮಂಡು (ಪಿಟಿಐ): ಸಿಖ್ ಮೂಲಭೂತವಾದಿ ಧರ್ಮಪ್ರಚಾರಕ ಅಮೃತಪಾಲ್ ಸಿಂಗ್ ನೇಪಾಳದಲ್ಲಿ ತಲೆಮರೆಸಿಕೊಂಡಿರುವ ಶಂಕೆ ಇದ್ದು, ಆತನ ಪತ್ತೆಗೆ ಸಹಕರಿಸಬೇಕು ಎಂದು ಭಾರತ ಸರ್ಕಾರ ಕೋರಿದೆ.

ಭಾರತದ ಪಾಸ್‌ಪೋರ್ಟ್ ಅಥವಾ ನಕಲಿ ಪಾಸ್‌ಪೋರ್ಟ್ ಬಳಸಿ ಆತ ಯಾವುದಾದರೂ ರಾಷ್ಟ್ರಕ್ಕೆ ಪಲಾಯನಗೊಳ್ಳುವ ಸಾಧ್ಯತೆ ಇದೆ. ಆತ ನೇಪಾಳದಲ್ಲಿ ಕಂಡುಬಂದರೆ ಬಂಧಿಸಬೇಕು ಹಾಗೂ ಮಾಹಿತಿ ನೀಡಬೇಕು ಎಂದು ಕಾನ್ಸುಲರ್ ಸೇವಾ ಸಚಿವಾಲಯವು ನೇಪಾಳ ಸರ್ಕಾರಕ್ಕೆ ಪತ್ರ ಬರೆದಿದೆ.

ಸಿಂಗ್ ಸದ್ಯ ನೇಪಾಳದಲ್ಲಿ ತಲೆಮರೆಸಿಕೊಂಡಿದ್ದಾನೆ ಎಂದು ಸ್ಥಳೀಯ ನಿಯತಕಾಲಿಕೆ ‘ಕಾಠ್ಮಂಡು ಪೋಸ್ಟ್’ ವರದಿಯನ್ನೂ ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಅಮೃತಪಾಲ್ ಸಿಂಗ್‌ನ ವ್ಯಕ್ತಿಗತ ವಿವರ ಹಾಗೂ ಭಾರತದ ಪತ್ರವನ್ನು ಹೋಟೆಲ್‌ಗಳು, ವಿಮಾನಯಾನ ಸಂಸ್ಥೆಗಳಿಗೆ ರವಾನಿಸಲಾಗಿದೆ. ಸಿಂಗ್ ಭಿನ್ನ ಹೆಸರಿನಲ್ಲಿ ಹಲವು ರಾಷ್ಟ್ರಗಳ ಪಾಸ್‌ಪೋರ್ಟ್ ಹೊಂದಿರುವ ಸಾಧ್ಯತೆಗಳು ಇವೆ ಎಂದು ಹೇಳಲಾಗಿದೆ. ಸಿಂಗ್ ಮಾರ್ಚ್ 18ರಿಂದ ತಲೆಮರೆಸಿಕೊಂಡಿದ್ದಾರೆ.

ಸಹಚರನ ಬಂಧನ

ಚಂಡೀಗಢ (ಪಿಟಿಐ): ಈ ಮಧ್ಯೆ ಇನ್ನೊಬ್ಬ ಸಹಚರ ವರಿಂದರ್ ಸಿಂಗ್ ಅಲಿಯಾಸ್ ಫೌಝಿಯನ್ನು ರಾಷ್ಟ್ರೀಯ ಭದ್ರತಾ ಕಾಯ್ದೆ(ಎನ್‌ಎಸ್‌ಎ) ಅಡಿಯಲ್ಲಿ ಅಮೃತಸರ ಪೊಲೀಸರು ಬಂಧಿಸಿದ್ದಾರೆ. ಈತನನ್ನು ಅಸ್ಸಾಂನ ದಿಬ್ರುಗಢ ಕಾರಾಗೃಹಕ್ಕೆ ಕಳುಹಿಸಲಾಗಿದೆ ಎಂದು ತಿಳಿಸಿದ್ದಾರೆ.

‘ವಾರಿಸ್ ಪಂಜಾಬ್ ದೇ’ ಸಂಘಟನೆಯ ಮುಖ್ಯಸ್ಥ ಅಮೃತ್‌ಪಾಲ್ ಮತ್ತು ಇತರ ಸದಸ್ಯರು ತಲೆಮರೆಸಿಕೊಂಡಿದ್ದು, ಮಾ.18ರಿಂದ ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ.

ಮೃತ್‌ಪಾಲ್ ಹೊಸ ಫೋಟೊ ಪತ್ತೆ: ಸಿಖ್ ಮೂಲಭೂತವಾದಿ ಧರ್ಮ ಪ್ರಚಾರಕ ಹಾಗೂ ಖಾಲಿಸ್ತಾನ ಪರ ಸಹಾನುಭೂತಿ ಹೊಂದಿರುವ ಅಮೃತ್‌ಪಾಲ್ ಸಿಂಗ್ ತನ್ನ ಸಹಚರ ಪಪಲ್‌ಪ್ರೀತ್ ಸಿಂಗ್‌ನೊಂದಿಗೆ ಇರುವ ಮತ್ತೊಂದು ಫೋಟೊ ಸಾಮಾಜಿಕ ಜಾಲತಾಣಗಳಲ್ಲಿ ಸೋಮವಾರ ಹರಿದಾಡುತ್ತಿದೆ.

ಪೊಲೀಸ್ ಕಾರ್ಯಾಚರಣೆ ಆರಂಭಿಸಿದ ಮರುದಿನ ತೆಗೆದ ಫೋಟೊ ಇದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಚಿತ್ರದಲ್ಲಿ ಅಮೃತ್‌ಪಾಲ್ ಸಿಂಗ್ ಜಾಕೆಟ್, ಕಂದು ಕೆಂಪು ಬಣ್ಣದ ಟರ್ಬನ್ ಮತ್ತು ಸನ್‌ಗ್ಲಾಸ್ ಧರಿಸಿದ್ದಾನೆ. ಪಾನೀಯದ ಬಾಟಲಿಯನ್ನು ಹಿಡಿದುಕೊಂಡಿದ್ದಾನೆ. ಸಹಚರ ಪಕ್ಕದಲ್ಲಿ ಕುಳಿತಿದ್ದಾನೆ.

ಪಪಲ್‌ಪ್ರೀತ್ ಸಿಂಗ್, ಅಮೃತ್ ಪಾಲ್ ಮಾರ್ಗದರ್ಶಕ ಎಂದು ಹೇಳಲಾಗುತ್ತದೆ. ಈತ ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐನೊಂದಿಗೆ ಸಂಪರ್ಕ ಹೊಂದಿದ್ದಾನೆ ಎಂಬ ಆರೋಪ ಇದೆ.

ಸಂಕ್ಷಿಪ್ತ ಸುದ್ದಿ

7 ಪ್ರಕರಣಗಳಲ್ಲಿ ಇಮ್ರಾನ್‌ಗೆ ಜಾಮೀನು

ಲಾಹೋರ್ (ಪಿಟಿಐ): ಪಾಕ್ ಮಾಜಿ ಪ್ರಧಾನಿ ಇಮ್ರಾನ್ ಖಾನ್ ವಿರುದ್ಧ ದಾಖಲಾಗಿದ್ದ ಏಳು ಪ್ರಕರಣಗಳಲ್ಲಿ ನ್ಯಾಯಾಲಯ ಸೋಮವಾರ ಮಧ್ಯಂತರ ಜಾಮೀನು ನೀಡಿತು.

ಭ್ರಷ್ಟಾಚಾರ ಪ್ರಕರಣದ ವಿಚಾರಣೆಗೆ ಈ ತಿಂಗಳ ಆರಂಭದಲ್ಲಿ ಲಾಹೋರ್‌ನಿಂದ ಇಲ್ಲಿನ ಫೆಡರಲ್ ನ್ಯಾಯಾಲಯಕ್ಕೆ ಆಗಮಿಸಿದಾಗ ನ್ಯಾಯಾಲಯದ ಸಂಕೀರ್ಣದಲ್ಲಿ ನಡೆದ ಘರ್ಷಣೆಗೆ ಸಂಬಂಧಿಸಿ ಈ ಪ್ರಕರಣಗಳು ದಾಖಲಾಗಿದ್ದವು.

ಇಮ್ರಾನ್ ವಕೀಲರ ಮೂಲಕ ಮಧ್ಯಂತರ ಜಾಮೀನು ಕೋರಿ ಅರ್ಜಿಯನ್ನು ಸಲ್ಲಿಕೆ ಮಾಡಿದ್ದರು.

ಸ್ಫೋಟ:7 ಜನರ ಶವಪತ್ತೆ

ವೆಸ್ಟ್ ರೀಡಿಂಗ್ (ಎಪಿ): ಪೆನ್ಸಿಲ್ವೇನಿಯಾದ ಚಾಕೊಲೆಟ್ ಕಾರ್ಖಾನೆಯಲ್ಲಿ ಶುಕ್ರವಾರ ಸಂಭವಿಸಿದ್ದ ಸ್ಫೋಟದಲ್ಲಿ ಮೃತಪಟ್ಟಿದ್ದ 7 ಜನರ ಶವಗಳನ್ನು ಪತ್ತೆ ಹಚ್ಚಲಾಗಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಸ್ಫೋಟದಿಂದ ಕಟ್ಟಡ ಪೂರ್ಣ ಹಾಳಾಗಿದ್ದು, ಅವಶೇಷಗಳಡಿ ಸಿಲುಕಿದವರಿಗಾಗಿ ಶೋಧ ಕಾರ್ಯ ಮುಂದುವರಿದಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ

ಆತ್ಮಹತ್ಯಾ ದಾಳಿ, 6 ಸಾವು

ಇಸ್ಲಾಮಾಬಾದ್ (ಎ.ಪಿ): ಕಾಬೂಲ್‌ನಲ್ಲಿ ವಿದೇಶಾಂಗ ಸಚಿವಾಲಯದ ಬಳಿ ಆತ್ಮಹತ್ಯಾ ದಾಳಿಕೋರನು ಬಾಂಬ್ ಸ್ಫೋಟಿಸಿದ್ದು, ಕನಿಷ್ಠ ಆರು ಮಂದಿ ಮೃತಪಟ್ಟಿದ್ದಾರೆ. ಮಗು ಸೇರಿದಂತೆ ಹಲವರು ಗಾಯಗೊಂಡಿದ್ದಾರೆ.
ಸಚಿವಾಲಯದ ಬಳಿ ಕಳೆದ ಒಂದು ವರ್ಷದಲ್ಲಿ ನಡೆಯುತ್ತಿರುವ ಎರಡನೇ ದಾಳಿ ಪ್ರಕರಣ ಇದಾಗಿದೆ. ಯಾವುದೇ ಸಂಘಟನೆಯು ಸದ್ಯ ದಾಳಿ ಹೊಣೆಯನ್ನು ಹೊತ್ತುಕೊಂಡಿಲ್ಲ.

2 ಕ್ಷಿಪಣಿಗಳ ಪರೀಕ್ಷಾರ್ಥ ಪ್ರಯೋಗ

ಸೋಲ್ (ಎ.ಪಿ): ಉತ್ತರ ಕೊರಿಯಾವು ಸೋಮವಾರ ಎರಡು ಖಂಡಾಂತರ ಕ್ಷಿಪಣಿಗಳ ಪರೀಕ್ಷಾರ್ಥ ಪ್ರಯೋಗವನ್ನು ನಡಸಿತು. ಸೇನಾ ಸಾಮರ್ಥ್ಯ ಬಿಂಬಿಸಲು ಶಸ್ತ್ರಾಸ್ತ್ರಗಳ ಪ್ರದರ್ಶನವನ್ನು ನಡೆಸಿದೆ.

ಇನ್ನೊಂದೆಡೆ, ದಕ್ಷಿಣ ಕೊರಿಯಾಗೆ ಬೆಂಬಲವಾಗಿ ನಿಂತಿರುವ ಅಮೆರಿಕವು, ಅದರ ವ್ಯಾಪ್ತಿಯ ಕಡಲ ಗಡಿಗೆ ಯುದ್ಧನೌಕೆಯನ್ನು ಕಳುಹಿಸಿದೆ.

ಉತ್ತರ ಕೊರಿಯಾ ಎರಡು ಕ್ಷಿಪಣಿಗಳನ್ನು ಪ್ರಯೋಗಿಸಿದ್ದು, ಅದು ಸುಮಾರು 370 ಕಿ.ಮೀ. ದೂರದ ಸಮುದ್ರಭಾಗದಲ್ಲಿ ಬಿದ್ದಿದೆ ಎಂದು ದಕ್ಷಿಣ ಕೊರಿಯಾದ ಸೇನಾ ಜಂಟಿ ಮುಖ್ಯಸ್ಥರು ಹೇಳಿದ್ದಾರೆ.

ಡಬ್ಲ್ಯುಪಿಎಲ್ ಟಿ20 ಟೂರ್ನಿ: ಬೆಳಕಿಗೆ ಬರದ ಹೊಸ ಪ್ರತಿಭೆಗಳು

ವಿದೇಶಿ ಆಟಗಾರ್ತಿಯರ ಪಾರಮ್ಯ

ಮುಂಬೈ (ಪಿಟಿಐ): ಭಾರತದ ಮಹಿಳಾ ಕ್ರಿಕೆಟ್‌ಗೆ ಹೊಸ ದಿಶೆ ತೋರಿರುವ ಚೊಚ್ಚಲ ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಟಿ20 ಟೂರ್ನಿ ಯಶಸ್ವಿಯಾಗಿ ಕೊನೆಗೊಂಡಿದೆ. ಐಪಿಎಲ್‌ನಂತೆ ಈ ಟೂರ್ನಿಯ ಭವಿಷ್ಯ ಕೂಡಾ ಉಜ್ವಲವಾಗಿದೆ ಎಂಬ ಭರವಸೆ ಮೂಡಿದೆ.

ಆದರೆ ಭಾನುವಾರ ಕೊನೆಗೊಂಡ ಟೂರ್ನಿಯಲ್ಲಿ ವಿದೇಶಿ ಆಟಗಾರ್ತಿಯರ ಪ್ರದರ್ಶನದ ಮುಂದೆ ಭಾರತದ ಆಟಗಾರ್ತಿಯರು ಅಲ್ಪ ಮಂಕಾಗಿ ಕಂಡುಬಂದರು. ಒಂದಿಬ್ಬರನ್ನು ಹೊರತುಪಡಿಸಿದರೆ, ಸ್ಥಳೀಯ ಪ್ರತಿಭೆಗಳು ತಮ್ಮ ಛಾಪು ಮೂಡಿಸಲು ವಿಫಲರಾದರು.

ಈ ಬಾರಿಯ ಎಲ್ಲ ಪಂದ್ಯಗಳೂ ಮುಂಬೈನ ಎರಡು ತಾಣಗಳಲ್ಲಿ ಆಯೋಜನೆಗೊಂಡವು. ಇಂಗ್ಲೆಂಡ್, ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾ ಮತ್ತು ವೆಸ್ಟ್ ಇಂಡೀಸ್‌ನ ಆಟಗಾರ್ತಿಯರು ಅಮೋಘ ಪ್ರದರ್ಶನದ ಮೂಲಕ ಮಿಂಚು ಹರಿಸಿದರು.

ಅತ್ಯಧಿಕ ರನ್ ಗಳಿಸಿದ ಅಗ್ರ ಐವರು ಬ್ಯಾಟರ್‌ಗಳಲ್ಲಿ ಭಾರತದ ಒಬ್ಬರು ಮಾತ್ರ ಇದ್ದಾರೆ. 281 ರನ್‌ಗಳನ್ನು ಕಲೆಹಾಕಿದ ಹರ್ಮನ್‌ಪ್ರೀತ್ ಕೌರ್ ನಾಲ್ಕನೇ ಸ್ಥಾನದಲ್ಲಿದ್ದಾರೆ. ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಾಯಕಿ ಮೆಗ್ ಲ್ಯಾನಿಂಗ್ ಅವರು 345 ರನ್‌ಗಳೊಂದಿಗೆ ಬ್ಯಾಟರ್‌ಗಳ ಪಟ್ಟಿಯಲ್ಲಿ ಅಗ್ರಸ್ಥಾನ ತಮ್ಮದಾಗಿಸಿಕೊಂಡರು.

ಮುಂಬೈ ಇಂಡಿಯನ್ಸ್ ತಂಡದ ಹೆಯಲಿ ಮ್ಯಾಥ್ಯೂಸ್ ಅವರು ಬ್ಯಾಟಿಂಗ್ ಮತ್ತು ಬೌಲಿಂಗ್‌ನಲ್ಲಿ ಮಿಂಚಿ ಈ ಟೂರ್ನಿಯನ್ನು ಸ್ಮರಣೀಯವನ್ನಾಗಿಸಿಕೊಂಡರು. ವೆಸ್ಟ್ ಇಂಡೀಸ್‌ನ ಆಲ್‌ರೌಂಡರ್ ಒಟ್ಟು 16 ವಿಕೆಟ್‌ಗಳನ್ನು ಪಡೆದರು. ಈ ಆರಂಭಿಕ ಆಟಗಾರ್ತಿ ಬ್ಯಾಟಿಂಗ್‌ನಲ್ಲೂ ಸಾಮರ್ಥ್ಯ ತೋರಿದ್ದಾರೆ.

ಭಾರತದ ಆಟಗಾರ್ತಿಯರಲ್ಲಿ ನಿರೀಕ್ಷೆ ಮೂಡಿಸಿದ್ದ ಆರ್‌ಸಿಬಿ ತಂಡದ ನಾಯಕಿ ಸ್ಮೃತಿ ಮಂದಾನ ಮತ್ತು ಡೆಲ್ಲಿ ಕ್ಯಾಪಿಟಲ್ಸ್‌ನ ಉಪನಾಯಕಿ ಜೆಮಿಮಾ ರಾಡ್ರಿಗಸ್ ಈ ಟೂರ್ನಿಯಲ್ಲಿ ಮಿಂಚಲು ವಿಫಲರಾದರು. ಅದೇ ರೀತಿ ರಾಷ್ಟ್ರೀಯ ತಂಡದಲ್ಲಿರುವ ಬೌಲರ್‌ಗಳೂ ನಿರಾಶೆ ಮೂಡಿಸಿದರು.

ಗಮನ ಸೆಳೆದ ಸೈಕಾ ಇಶಾಕ್: ದೇಸಿ ಕ್ರಿಕೆಟ್‌ನಲ್ಲಿ ಆಡುವ ಭಾರತದ ಆಟಗಾರ್ತಿಯರಲ್ಲಿ ಗಮನ ಸೆಳೆದದ್ದು ಸೈಕಾ ಇಶಾಕ್ ಮಾತ್ರ. ಮುಂಬೈ ಇಂಡಿಯನ್ಸ್ ತಂಡದ ಈ ಎಡಗೈ ಸ್ಪಿನ್ನರ್ ಒಟ್ಟು 15 ವಿಕೆಟ್‌ಗಳನ್ನು ಪಡೆದಿದ್ದಾರೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಶ್ರೇಯಾಂಕಾ ಪಾಟೀಲ್ ಮತ್ತು ಕನಿಕಾ ಅಹುಜಾ ಅವರು ಒಂದೆರಡು ಪಂದ್ಯಗಳಲ್ಲಿ ಗಮನ ಸೆಳೆದರು.

ಮೆಗ್ ಲ್ಯಾನಿಂಗ್

ಅತ್ಯುತ್ತಮ ಸಾಧನೆ (ಅಗ್ರ ಐವರು)				
ಬ್ಯಾಟಿಂಗ್				
ಆಟಗಾರ್ತಿ	ತಂಡ	ಪಂದ್ಯ	ಒಟ್ಟು ರನ್	ಗರಿಷ್ಠ
ಮೆಗ್ ಲ್ಯಾನಿಂಗ್	ಡೆಲ್ಲಿ ಕ್ಯಾಪಿಟಲ್ಸ್	9	345	72
ನಥಾಲಿ ಸಿವೆರ್	ಮುಂಬೈ ಇಂಡಿಯನ್ಸ್	10	332	72
ತಹಿಲಾ ಮೆಕ್‌ಗ್ರಾ	ಯುಪಿ ವಾರಿಯರ್ಸ್	9	302	90
ಹರ್ಮನ್‌ಪ್ರೀತ್	ಮುಂಬೈ ಇಂಡಿಯನ್ಸ್	10	281	65
ಹೆಯಲಿ ಮ್ಯಾಥ್ಯೂಸ್	ಮುಂಬೈ ಇಂಡಿಯನ್ಸ್	10	271	77
ಬೌಲಿಂಗ್				
ಆಟಗಾರ್ತಿ	ತಂಡ	ಪಂದ್ಯ	ಒಟ್ಟು ವಿಕೆಟ್	ಶ್ರೇಷ್ಠ
ಹೆಯಲಿ ಮ್ಯಾಥ್ಯೂಸ್	ಮುಂಬೈ ಇಂಡಿಯನ್ಸ್	10	16	5ಕ್ಕೆ 3
ಸೋಫಿ ಎಕ್ಸೆಲ್‌ಸ್ಟನ್	ಯುಪಿ ವಾರಿಯರ್ಸ್	9	16	13ಕ್ಕೆ 4
ಇಸಾಬೆಲ್ ವಾಂಗ್	ಮುಂಬೈ ಇಂಡಿಯನ್ಸ್	10	15	15ಕ್ಕೆ 4
ಅಮೆಲಿ ಕೆರ್	ಮುಂಬೈ ಇಂಡಿಯನ್ಸ್	10	15	22ಕ್ಕೆ 3
ಸೈಕಾ ಇಶಾಕ್	ಮುಂಬೈ ಇಂಡಿಯನ್ಸ್	10	15	11ಕ್ಕೆ 4

ಕಾಯುವಿಕೆ ಕೊನೆಗೊಂಡಿದೆ: ಹರ್ಮನ್

‘ಒಬ್ಬಳು ನಾಯಕಿಯಾಗಿ ತಂಡಕ್ಕೆ ಟ್ರೋಫಿ ಗೆದ್ದುಕೊಡಬೇಕೆಂದು ಸುದೀರ್ಘ ಅವಧಿಯಿಂದ ಕಾಯುತ್ತಿದ್ದೆ. ನನ್ನ ಕಾಯುವಿಕೆ ಕೊನೆಗೊಂಡಿದೆ. ಈ ಗೆಲುವು ವೈಯಕ್ತಿಕವಾಗಿಯೂ ವಿಶೇಷ ಅನುಭವ ನೀಡಿದೆ’ ಎಂದು ಚೊಚ್ಚಲ ಡಬ್ಲ್ಯುಪಿಎಲ್ ಗೆದ್ದ ಮುಂಬೈ ಇಂಡಿಯನ್ಸ್ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಹೇಳಿದ್ದಾರೆ.

ಬ್ರೆಬೋರ್ನ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದಿದ್ದ ಫೈನಲ್‌ನಲ್ಲಿ ಮುಂಬೈ ಇಂಡಿಯನ್ಸ್ ತಂಡ ಏಳು ವಿಕೆಟ್‌ಗಳಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಮಣಿಸಿತ್ತು. ಹರ್ಮನ್‌ಪ್ರೀತ್ ಅವರಿಗೆ ಭಾರತ ತಂಡದ ನಾಯಕಿಯಾಗಿ ಪ್ರಮುಖ ಟ್ರೋಫಿ ಗೆದ್ದುಕೊಡಲು ಆಗಿರಲಿಲ್ಲ.

ಕಬಡ್ಡಿ: ಹರಿಯಾಣ ತಂಡಗಳಿಗೆ ಟ್ರೋಫಿ

ಸವಣೂರು (ಹಾವೇರಿ ಜಿಲ್ಲೆ): ಪಟ್ಟಣದ ತಾಲ್ಲೂಕು ಕ್ರೀಡಾಂಗಣದಲ್ಲಿ ಕಳೆದ ಮೂರು ದಿನಗಳಿಂದ ನಡೆದ ರಾಷ್ಟ್ರಮಟ್ಟದ ಆಹ್ವಾನಿತ ‘ಸವಣೂರು ಕಬಡ್ಡಿ ಉತ್ಸವ-2023’ರಲ್ಲಿ ಹರಿಯಾಣದ ಎಸ್‌ವಿಎಂ ಮತ್ತು ಅಬ್ಬಾಸ್ ಶಿಕ್ಷಣ ಸಂಸ್ಥೆಯ ತಂಡಗಳು ಕ್ರಮವಾಗಿ ಪುರುಷ ಹಾಗೂ ಮಹಿಳಾ ವಿಭಾಗದಲ್ಲಿ ಟ್ರೋಫಿ ಗೆದ್ದುಕೊಂಡವು.

ಪುರುಷರ ವಿಭಾಗದಲ್ಲಿ ನಾಸಿಕ್ ಆರ್ಮಿ ತಂಡ ದ್ವಿತೀಯ, ತಮಿಳುನಾಡಿನ ದೊರೈಸಿಂಗಂ ತಂಡ ತೃತೀಯ ಮತ್ತು ಹಿಮಾಚಲಪ್ರದೇಶದ ಖೇಲೊ ಇಂಡಿಯಾ ತಂಡ ನಾಲ್ಕನೇ ಸ್ಥಾನ ಪಡೆದವು.

ಮಹಿಳಾ ವಿಭಾಗದಲ್ಲಿ ಹರಿಯಾಣದ ಗುರುಕುಲ ಅಕಾಡೆಮಿ ತಂಡ ದ್ವಿತೀಯ, ಪುಣೆಯ ಧರ್ಮವೀರ ತಂಡ ತೃತೀಯ ಸ್ಥಾನ ಗಳಿಸಿದವು.

ಟಿಟಿ: ಅರ್ಚನಾಗೆ ಚಿನ್ನ, ಕಂಚು

ಬೆಂಗಳೂರು: ಅರ್ಚನಾ ಕಾಮತ್ ಅವರು ಜಮ್ಮುವಿನಲ್ಲಿ ನಡೆದ 84ನೇ ರಾಷ್ಟ್ರೀಯ ಸೀನಿಯರ್ ಮತ್ತು ಅಂತರ ರಾಜ್ಯ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಮಿಶ್ರ ಡಬಲ್ಸ್ ವಿಭಾಗದಲ್ಲಿ ಚಿನ್ನ ಗೆದ್ದರು.

ಪಿಎಸ್‌ಪಿಬಿ ತಂಡವನ್ನು ಪ್ರತಿನಿಧಿಸಿದ ಬೆಂಗಳೂರಿನ ಅರ್ಚನಾ ಅವರು ಮಾನವ್ ಥಾಕರ್ ಜತೆಗೆ ಆಡಿ ಫೈನಲ್‌ನಲ್ಲಿ 11–5, 14–12, 11–3 ರಲ್ಲಿ ಬಂಗಾಳದ ಮೌಮಿತಾ ದತ್ತಾ–ಅಂಕುರ್ ಭಟ್ಟಾಚಾರ್ಯ ಅವರನ್ನು ಮಣಿಸಿದರು.

ಸಿಂಗಲ್ಸ್‌ನಲ್ಲಿ ಕಂಚು: ಅರ್ಚನಾ ಅವರು ಸಿಂಗಲ್ಸ್ ವಿಭಾಗದ ಸೆಮಿಫೈನಲ್‌ನಲ್ಲಿ 2–4 ರಲ್ಲಿ ಶ್ರೀಜಾ ಅಕುಲಾ ಕೈಯಲ್ಲಿ ಸೋತು ಕಂಚು ಪಡೆದರು. ಮೊದಲ ಮೂರು ಗೇಮ್‌ಗಳನ್ನು ಸೋತು ಆ ಬಳಿಕ ಮರುಹೋರಾಟ ನಡೆಸಿದರೂ ಅವರು 9-11, 3-11, 6-11, 11-9, 11-5, 7-11 ರಲ್ಲಿ ನಿರಾಶೆ ಅನುಭವಿಸಿದರು.

ಅರ್ಚನಾ ಅವರು ಪ್ರೀಕ್ವಾರ್ಟರ್ ಫೈನಲ್ ಮತ್ತು ಕ್ವಾರ್ಟರ್ ಫೈನಲ್‌ನಲ್ಲಿ ಕ್ರಮವಾಗಿ ತಮಿಳುನಾಡಿನ ಯಶಿನಿ ಶಿವಶಂಕರ್ ಹಾಗೂ ಬಂಗಾಳದ ಪೊಯಮಂತಿ ಬೈಸ್ಯ ಅವರನ್ನು ಸೋಲಿಸಿದ್ದರು.

ಟ್ರೋಫಿಯೊಂದಿಗೆ ಅರ್ಚನಾ ಕಾಮತ್

ಅಥ್ಲೆಟಿಕ್ಸ್: ಹಿಮಾ ಹಿಂದಿಕ್ಕಿದ ಅರ್ಚನಾ

ತಿರುವನಂತಪುರಂ (ಪಿಟಿಐ): ತಮಿಳುನಾಡಿನ ಅರ್ಚನಾ ಸುಶೀಂದ್ರನ್ ಸೋಮವಾರ ಇಲ್ಲಿ ಆರಂಭವಾದ ಎಎಫ್‌ಐ ಇಂಡಿಯನ್ ಗ್ರ್ಯಾನ್ ಪ್ರಿ –2 ಅಥ್ಲೆಟಿಕ್ಸ್‌ನಲ್ಲಿ 100 ಮೀಟರ್ಸ್ ಓಟದಲ್ಲಿ ಚಿನ್ನ ಗೆದ್ದರು. ಈ ಸ್ಪರ್ಧೆಯಲ್ಲಿ ಅವರು ಅಸ್ಸಾಂನ ಹಿಮಾ ದಾಸ್ ಅವರನ್ನು ಹಿಂದಿಕ್ಕಿದರು.

200 ಮೀಟರ್ ಓಟದಲ್ಲಿಯೂ ಅರ್ಚನಾ ಚಿನ್ನ ಗೆದ್ದರು. ಈ ಸ್ಪರ್ಧೆಯಲ್ಲಿ ಹಿಮಾ ಅನರ್ಹಗೊಂಡು ಹೊರನಡೆದರು.

100 ಮೀ ಓಟದಲ್ಲಿ ಅರ್ಚನಾ 11.52 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಹಿಮಾ ಅವರಿಗಿಂತ 0.22 ಸೆಕೆಂಡುಗಳಷ್ಟು ಅರ್ಚನಾ ಮುನ್ನಡೆ ಸಾಧಿಸಿದರು. ತಮಿಳುನಾಡಿನ ಓಟಗಾರ್ತಿ 200 ಮೀ ಓಟದಲ್ಲಿ 23.21 ಸೆಕೆಂಡುಗಳಲ್ಲಿ ಗುರಿ ಸಾಧಿಸಿದರು.

ರಾಷ್ಟ್ರೀಯ ಮಹಿಳಾ ಫುಟ್‌ಬಾಲ್ 29ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯರ ರಾಷ್ಟ್ರೀಯ ಫುಟ್‌ಬಾಲ್ ಚಾಂಪಿಯನ್‌ಷಿಪ್ ಮಾರ್ಚ್ 29ರಿಂದ ಇಲ್ಲಿ ನಡೆಯಲಿದೆ.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಪಂದ್ಯಗಳು ನಡೆಯಲಿದ್ದು, ಕರ್ನಾಟಕ ತಂಡವು ಗುಂಪು 4ರಲ್ಲಿ ಸ್ಥಾನ ಪಡೆದಿದೆ. ಮೊದಲ ಪಂದ್ಯದಲ್ಲಿ ರಾಜ್ಯ ತಂಡಕ್ಕೆ ಗುಜರಾತ್ ಸವಾಲು ಎದುರಾಗಲಿದೆ. ಮಾರ್ಚ್ 29ರಂದು ಈ ಹಣಾಹಣಿ ನಡೆಯಲಿದೆ.

ಟೂರ್ನಿಗೆ ಕರ್ನಾಟಕ ತಂಡ: ಐಶ್ವರ್ಯಾ, ಧನುಶ್ರೀ, ಏಂಜೆಲ್ ಮರಿಯಾ ಟಿ.ಎಸ್, ಮಾನಸಾ ಎಂ, ಜನನಿ ಡಿ, ಸಿಮ್ರಾನ್ ಭಾರ್ಗವ್, ಅರುಣಾ ಭಾಗ್, ಜಯಶ್ರೀ ಇ, ರೂಪಾಲಿ ಬೌರಿ, ತಾರಾ ಆನಂದ್, ವಿ.ಜಿ.ಲೇಖಶ್ರೀ, ಆರುಷಿ ಸಂತೋಷ್, ಮೈತ್ರೇಯಿ ಪಾಲಸಮುದ್ರಂ, ತನ್ವಿ ನಾಯರ್, ರಿವಾಕಾ ರಾಮ್‌ಜಿ, ತನ್ವಿ ಹಂಸ, ಸಣಜಿತಾ ನಿರೋಲಾ, ಮೊನಾಲಿಸಾ ಮರಾಂಡಿ, ಕಾವ್ಯಾ ಫಕ್ಕೀರಸ್ವಾಮಿ, ಋತು ಶ್ರೀನಂದನ್, ಸೋನಿಯಾ ಮರಕ್, ಅದಿತಿ ಜಾಧವ್.

ಕೋಚ್‌ಗಳು: ಅಮೂಲ್ಯ ಕಮಲ್, ರಕ್ಷಾ ಪನ್ವರ್, ಮ್ಯಾನೇಜರ್: ಸರಳಾ ಎನ್. ಸ್ವಾಮಿ

ಇಂದೋರ್ ಪಿಚ್ ಕಳಪೆ ಅಲ್ಲ!

ಇಂದೋರ್‌ನ ಹೋಳ್ಕರ್ ಕ್ರೀಡಾಂಗಣದಲ್ಲಿ ಆಸ್ಟ್ರೇಲಿಯಾ ವಿರುದ್ಧ ಪಂದ್ಯ ನಡೆದಿದ್ದ ಸಂದರ್ಭದಲ್ಲಿ ಪಿಚ್ ಪರಿಶೀಲಿಸಿದ್ದ ಭಾರತ ತಂಡದ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಹಾಗೂ ನಾಯಕ ರೋಹಿತ್ ಶರ್ಮಾ –ಪಿಟಿಐ ಚಿತ್ರ

ದುಬೈ (ಪಿಟಿಐ): ಭಾರತ ಮತ್ತು ಆಸ್ಟ್ರೇಲಿಯಾ ನಡುವಣ ಟೆಸ್ಟ್ ಕ್ರಿಕೆಟ್ ಪಂದ್ಯ ಆಯೋಜನೆಗೊಂಡಿದ್ದ ಇಂದೋರಿನ ಹೋಳ್ಕರ್ ಮೈದಾನದ ಪಿಚ್‌ಗೆ ನೀಡಿದ್ದ ಕಳಪೆ ರೇಟಿಂಗ್ ಬದಲಾಯಿಸಿರುವ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ‘ಸಾಮಾನ್ಯ ಗುಣಮಟ್ಟಕ್ಕಿಂತ ಕಡಿಮೆ’ ಎಂದು ಹೇಳಿದೆ.

ಕಳಪೆ ಎಂದು ರೇಟಿಂಗ್ ನೀಡಿದ್ದನ್ನು ಮರುಪರಿಶೀಲಿಸುವಂತೆ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಮನವಿ ಸಲ್ಲಿಸಿತ್ತು. ಅದಕ್ಕೆ ಸ್ಪಂದಿಸಿರುವ ಐಸಿಸಿ ಪರಿಷ್ಕರಣೆ ಮಾಡಿದೆ. ಪಂದ್ಯದ ರೆಫರಿ ಕ್ರಿಸ್ ಬ್ರಾಡ್ ಅವರು ನೀಡಿದ್ದ ವರದಿಯನ್ವಯ ಮೊದಲು ಕಳಪೆ ಎಂದು ರೇಟಿಂಗ್ ನೀಡಿ ಮೂರು ಅಂಕಗಳನ್ನು ಕಡಿತ ಮಾಡಲಾಗಿತ್ತು. ಈಗ ರೇಟಿಂಗ್ ಬದಲಾಗಿರುವುದರಿಂದ ಇಂದೋರ್ ಕ್ರೀಡಾಂಗಣಕ್ಕೆ ಒಂದು ಡಿಮೆರಿಟ್ ಪಾಯಿಂಟ್ ಆಗಲಿದೆ.

‘ಐಸಿಸಿ ಮೇಲ್ಮನವಿ ಸಮಿತಿಯು ಪಂದ್ಯಗಳ ವಿಡಿಯೊ ತುಣುಕುಗಳನ್ನು ಪರಿಶೀಲಿಸಿದ ನಂತರ ರೇಟಿಂಗ್ ನೀಡಿದೆ. ಈ ಸಮಿತಿಯಲ್ಲಿ ಐಸಿಸಿ ಮುಖ್ಯ ಕ್ರಿಕೆಟ್ ವ್ಯವಸ್ಥಾಪಕ ವಾಸೀಂ ಖಾನ್, ಪುರುಷರ ಕ್ರಿಕೆಟ್ ಸಮಿತಿ ಸದಸ್ಯ ರೋಜರ್ ಹಾರ್ಪರ್ ಇದ್ದಾರೆ’ ಎಂದು ಸೋಮವಾರ ಐಸಿಸಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಬಾರ್ಡರ್–ಗಾವಸ್ಕರ್ ಟ್ರೋಫಿ ಟೂರ್ನಿಯ ನಾಲ್ಕನೇ ಪಂದ್ಯ ನಡೆದಿದ್ದ ಅಹಮದಾಬಾದಿನ ನರೇಂದ್ರ ಮೋದಿ ಕ್ರೀಡಾಂಗಣದ ಪಿಚ್ ‘ಸಾಮಾನ್ಯ’ ರೇಟಿಂಗ್ ಪಡೆದಿದೆ. ಈ ಪಂದ್ಯವು ಐದು ದಿನಗಳನ್ನು ಪೂರೈಸಿತ್ತು. ಉಭಯ ತಂಡಗಳೂ ತಲಾ ಒಂದು ಪೂರ್ಣ ಇನಿಂಗ್ಸ್ ಆಡಿದ್ದವು. ಆದರೆ ಪಂದ್ಯ ಡ್ರಾ ಆಗಿತ್ತು. ಭಾರತವು 2–1ರಿಂದ ಸರಣಿ ಜಯಿಸಿತ್ತು. ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ಗೆ ಅರ್ಹತೆ ಗಳಿಸಿತ್ತು.

ಇಂದೋರ್ ಕ್ರೀಡಾಂಗಣದಲ್ಲಿ ನಡೆದಿದ್ದ ಮೂರನೇ ಟೆಸ್ಟ್‌ನಲ್ಲಿ ಆಸ್ಟ್ರೇಲಿಯಾ ತಂಡವು ಭಾರತವನ್ನು ಪರಾಭವಗೊಳಿಸಿತ್ತು. ಮೂರನೇ ದಿನವೇ ಪಂದ್ಯ ಅಂತ್ಯಗೊಂಡಿತ್ತು.

ಕೊಡವ ಕೌಟುಂಬಿಕ ಹಾಕಿ ಟೂರ್ನಿ

ಅಪ್ಪುಮಣಿಯಂಡ ತಂಡಕ್ಕೆ ಗೆಲುವು

ಪ್ರಜಾವಾಣಿ ವಾರ್ತೆ

ನಾಪೋಕ್ಲು (ಕೊಡಗು): ಗಣಪತಿ ಗಳಿಸಿದ ಹ್ಯಾಟ್ರಿಕ್ ಗೋಲುಗಳ ಬಲದಿಂದ ಅಪ್ಪುಮಣಿಯಂಡ ತಂಡವು ಕೊಡವ ಕೌಟುಂಬಿಕ ಹಾಕಿ ಟೂರ್ನಿಯಲ್ಲಿ ಅಮೋಘ ಜಯ ದಾಖಲಿಸಿತು.

ಚೆರಿಯಪರಂಬುವಿನ ಜನರಲ್ ಕೆ.ಎಸ್.ತಿಮ್ಮಯ್ಯ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಸೋಮವಾರದ ಪಂದ್ಯದಲ್ಲಿ ಅಪ್ಪುಮಣಿಯಂಡ ತಂಡದವರು 3–0 ಗೋಲುಗಳಿಂದ ಆಪಾಡಂಡ ತಂಡದವರನ್ನು ಮಣಿಸಿದರು.

ಚೆರುಮಂದಂಡ ತಂಡದವರು ಚಟ್ಟಂಗಡ ವಿರುದ್ಧ 3–0 ಗೋಲುಗಳ ಮೂಲಕ ಜಯ ಸಾಧಿಸಿದರು. ಚೆರುಮಂದಂಡ ತಂಡದ ಕವನ್ ಕಾರ್ಯಪ್ಪ ಅವರೂ ‘ಹ್ಯಾಟ್ರಿಕ್’ ಸಾಧನೆ ಮಾಡಿದರು.

ಮನೆಯಪಂಡ ತಂಡದವರು 2-1ರಲ್ಲಿ ತೆಕ್ಕಡ ತಂಡದವರ ವಿರುದ್ಧ ರೋಚಕ ಜಯ ಸಾಧಿಸಿದರೆ, ಬಿದ್ದಾಟಂಡ ತಂಡವು 1-0ರಿಂದ ಚಂದಪಂಡ ಎದುರು, ಕುಪ್ಪಂಡ ತಂಡವು 4-2ರಲ್ಲಿ ಮೂಡೇರ ತಂಡದ ಎದುರು ಹಾಗೂ ಮೇಕೇರಿರ ತಂಡದವರು 5-4ರಿಂದ ಪುಚ್ಚಿಮಾಡ ತಂಡದ ಎದುರು ಗೆಲುವು ಸಾಧಿಸಿದರು.

ಅಪ್ಪನೆರವಂಡ 3-1ರಲ್ಲಿ ಕಂಜಿತಂಡ ವಿರುದ್ಧ, ಕಲಿಯಂಡ 2-1ರಲ್ಲಿ ಮಲ್ಲಜ್ಜಿರ ವಿರುದ್ಧ, ಅರೆಯಡ ತಂಡವು 2-0ರಲ್ಲಿ ಚೇಯಂಡಿರ ವಿರುದ್ಧ, ಪಟ್ಟಡ ತಂಡದವರು 2-1ರಲ್ಲಿ ಮುಂಡ್ಯೋಳಂಡ ಎದುರು, ಐಚೆಟ್ಟಿರ ತಂಡವು 5-0 ಅಂತರದಿಂದ ಬಲ್ಲಂಡ ತಂಡದ ವಿರುದ್ಧ ಜಯ ಸಾಧಿಸಿದರು.

ಶಿವಚಾಳಿಯಂಡ ತಂಡವು ಪೇರಿಯಂಡ ತಂಡದವರನ್ನು 2-0 ಅಂತರದಿಂದ ಸೋಲಿಸಿದರೆ, ಚೆರಿಯಪಂಡ ತಂಡವು 3- 2ರಲ್ಲಿ ಪಾಂಡಂಡ ಎದುರು, ತಂಬುಕುತ್ತಿರ ತಂಡದವರು 3-0 ಅಂತರದಿಂದ ಚೆರಂಡ ತಂಡದವರನ್ನು ಮಣಿಸಿದರು.

ನಾಪೋಕ್ಲು ಸಮೀಪದ ಚೆರಿಯಪರಂಬುವಿನ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಕೊಡವ ಕೌಟುಂಬಿಕ ಹಾಕಿ ಟೂರ್ನಿ ಪಂದ್ಯದಲ್ಲಿ ಆಟಗಾರರ ಪೈಪೋಟಿ

ಬ್ಯಾಡ್ಮಿಂಟನ್: ಸಿಂಧು, ಶ್ರೀಕಾಂತ್ ಮೇಲೆ ನಿರೀಕ್ಷೆ

ಮ್ಯಾಡ್ರಿಡ್ (ಪಿಟಿಐ): ಹಳೆಯ ಲಯಕ್ಕೆ ಮರಳಲು ಪ್ರಯತ್ನಿಸುತ್ತಿರುವ ಪಿ.ವಿ. ಸಿಂಧು ಮತ್ತು ಕಿದಂಬಿ ಶ್ರೀಕಾಂತ್ ಅವರು ಮಂಗಳವಾರ ಇಲ್ಲಿ ಆರಂಭವಾಗಲಿರುವ ಮ್ಯಾಡ್ರಿಡ್ ಸ್ಪೇನ್ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಉತ್ತಮ ಪ್ರದರ್ಶನ ನೀಡುವ ವಿಶ್ವಾಸದಲ್ಲಿದ್ದಾರೆ.

ಸಿಂಧು ಅವರಿಗೆ ಇಲ್ಲಿ ಎರಡನೇ ಶ್ರೇಯಾಂಕ ನೀಡಲಾಗಿದ್ದು, ಅರ್ಹತಾ ಹಂತದಲ್ಲಿ ಗೆದ್ದು ಬಂದ ಆಟಗಾರ್ತಿಯರನ್ನು ಮೊದಲ ಸುತ್ತಿನಲ್ಲಿ ಎದುರಿಸಲಿದ್ದಾರೆ. ಈ ಋತುವಿನಲ್ಲಿ ಆಡಿದ ಹೆಚ್ಚಿನ ಟೂರ್ನಿಗಳಲ್ಲೂ ಸಿಂಧು, ಎರಡನೇ ಸುತ್ತು ದಾಟಲು ವಿಫಲರಾಗಿದ್ದಾರೆ.

ಮಹಿಳೆಯರ ಸಿಂಗಲ್ಸ್‌ನಲ್ಲಿ ಸಿಂಧು ಅಲ್ಲದೆ ಸೈನಾ ನೆಹ್ವಾಲ್, ಮಾಳವಿಕಾ ಬನ್ಸೋಡ್ ಮತ್ತು ಆಕರ್ಷಿ ಕಶ್ಯಪ್ ಅವರೂ ಭಾರತದ ಸವಾಲನ್ನು ಮುನ್ನಡೆಸಲಿದ್ದಾರೆ.

ಪುರುಷರ ಸಿಂಗಲ್ಸ್‌ನಲ್ಲಿ ಶ್ರೀಕಾಂತ್ ಮೊದಲ ಸುತ್ತಿನಲ್ಲಿ ಥಾಯ್ಲೆಂಡ್‌ನ ಸಿತಿಕೊಮ್ ತಮಸಿನ್ ಅವರ ಸವಾಲನ್ನು ಎದುರಿಸುವರು. ಮಿಥುನ್ ಮಂಜುನಾಥ್ ಮಲೇಷ್ಯಾದ ಎಂಗ್ ತ್ಸೆ ಯಾಂಗ್ ವಿರುದ್ಧ ಪೈಪೋಟಿ ನಡೆಸುವರು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,945
ಇಂದಿನ ಅಂತ್ಯ	16,985
▲	40
ದಿನದ ಗರಿಷ್ಠ	17,091

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹460
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹462

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1690 (1690)
ಸೋಯಾ (ರಿಫೈನ್ಡ್)	₹1030 (1030)
ಸೂರ್ಯಕಾಂತಿ (ರಿಫೈನ್ಡ್)	₹1072 (1072)
ಪಾಮೋಲಿನ್	₹932 (929)

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹144
ಆರ್‌ಎಸ್‌ಎಸ್-5	₹138
ಗುಡ್ ಲಾಟ್	₹130

(ಪ್ರತಿ ಕೆ.ಜಿಗೆ)

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು

1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹435-571
ದ್ವಿತಳಿ (ಬಿ.ವಿ)	₹236-

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1400-1800
ಮಧ್ಯಮ	₹1000-1500
ಸಣ್ಣ	₹500-1000

ಬಿಸಿಲೂರಾದ ಕಾಫಿನಾಡು • ಬತ್ತುತ್ತಿವೆ ಜಲಮೂಲಗಳು

ಉಷ್ಣಾಂಶ: ಕಾಫಿ ಬೆಳೆಗಾರರ ಆತಂಕ

• ಕೆ.ಎಸ್.ಗಿರೀಶ

ಮಡಿಕೇರಿ: ಕೊಡಗಿನಲ್ಲಿ ಈ ವರ್ಷ ಸಮರ್ಪಕವಾಗಿ ಮುಂಗಾರು ಪೂರ್ವ ಮಳೆಯಾಗದೇ ಕಾಫಿ ಬೆಳೆಗಾರರು ಆತಂಕದಲ್ಲಿದ್ದಾರೆ. ದಿನದಿಂದ ದಿನಕ್ಕೆ ಉಷ್ಣಾಂಶ ಏರುತ್ತಿದ್ದು, ಕೊಳವೆಬಾವಿ, ಕೆರೆಗಳಲ್ಲಿ ನೀರಿನ ಪ್ರಮಾಣ ಕಡಿಮೆಯಾಗುತ್ತಿದೆ. ಇದರಿಂದ ನೀರಿನ ಸೌಕರ್ಯ ಹೊಂದಿರುವ ಬೆಳೆಗಾರರೂ ಚಿಂತಿತರಾಗಿದ್ದಾರೆ.

ಸಾಮಾನ್ಯವಾಗಿ ಮಾರ್ಚ್ ತಿಂಗಳಿನಲ್ಲಿ ಮಳೆಯಾಗಬೇಕಿತ್ತು. ಕೆಲ ದಿನಗಳ ಹಿಂದೆ ಸುಂಟಿಕೊಪ್ಪ, ನಾಪೋಕ್ಲು ಹೋಬಳಿ ವ್ಯಾಪ್ತಿಯಲ್ಲಿ ಮಾತ್ರವೇ ಆಲಿಕಲ್ಲು ಮಳೆ ಸುರಿದಿತ್ತು. ಇನ್ನುಳಿದ ಬಹಳಷ್ಟು ಭಾಗಗಳಲ್ಲಿ ಮಳೆ ಬಿದ್ದಿಲ್ಲ.

ಕೆರೆ, ಕೊಳವೆಬಾವಿ ಸೇರಿದಂತೆ ಉತ್ತಮ ನೀರಿನ ಸೌಕರ್ಯ ಹೊಂದಿರುವ ಬೆಳೆಗಾರರು ಪರ್ಯಾಯವಾಗಿ ತುಂತುರು ಹನಿ ನೀರಾವರಿ ಪದ್ಧತಿಯಲ್ಲಿ (ಸ್ಪ್ರಿಂಕ್ಲರ್) ಕಾಫಿಗೆ ನೀರು ಸಿಂಪಡಿಸಿದ್ದಾರೆ. ಎಲ್ಲೆಲ್ಲಿ ಈ ಬಗೆಯಲ್ಲಿ ನೀರು ಸಿಂಪಡಿಸಲಾಗಿದೆಯೋ ಅಲ್ಲೆಲ್ಲ ಈಗ ಕಾಫಿ ಹೂ ಸಮೃದ್ಧವಾಗಿ ಅರಳಿದೆ. ಆದರೆ, ಇನ್ನುಳಿದ ಬೆಳೆಗಾರರು ಹಾಗೂ ಅರೇಬಿಕಾ ಕಾಫಿ ಬೆಳೆಯುವ ಹೆಚ್ಚಿನ ಮಂದಿ ಮಳೆಯ ನಿರೀಕ್ಷೆಯಲ್ಲಿದ್ದಾರೆ.

ಸ್ಪ್ರಿಂಕ್ಲರ್ ಮೂಲಕ ನೀರು ಒದಗಿಸಿದವರ ಕಾಫಿ ತೋಟದಲ್ಲಿ ಹೂ ಅರಳಿದ್ದರೂ ಉಷ್ಣಾಂಶ ದಿನೇ ದಿನೇ ಹೆಚ್ಚುತ್ತಿರುವುದರಿಂದ ಹೂ ಕಾಳುಗಟ್ಟುವುದಕ್ಕೂ ತೊಂದರೆಯಾಗಲಿದೆ. ಹಾಗಾಗಿ, ಅವರೂ ಆಕಾಶದತ್ತ ನೋಡುವಂತಾಗಿದೆ.

ಶ್ರೀಮಂಗಲದ ಕಾಫಿ ಬೆಳೆಗಾರ ಹರೀಶ್ ಮಾದಪ್ಪ ಪ್ರತಿಕ್ರಿಯಿಸಿ, ‘ಕೊಡಗಿನಲ್ಲಿ ಇಷ್ಟು ಬಿಸಿಲು, ಉಷ್ಣಾಂಶ ಇತ್ತೀಚಿನ ವರ್ಷಗಳಲ್ಲಿ ಕಂಡಿರಲಿಲ್ಲ. ಕೆರೆ, ಕೊಳವೆಬಾವಿಗಳಲ್ಲಿ ನೀರು ಬತ್ತಿ ಹೋಗುತ್ತಿವೆ. ನೀರಿನ ಸೌಕರ್ಯ ಹೊಂದಿರುವ ಕಾಫಿ ಬೆಳೆಗಾರರೂ ಕಂಗಾಲಾಗಿದ್ದಾರೆ. ಸದ್ಯ, ಉತ್ತಮ ಮಳೆ ಸುರಿಯಬೇಕಿದೆ’ ಎಂದು ಹೇಳಿದರು.

ಈ ಬಗ್ಗೆ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಕಾಫಿ ಮಂಡಳಿಯ ಉಪ ನಿರ್ದೇಶಕ ಚಂದ್ರಶೇಖರ್, ‘ಮಾರ್ಚ್ ತಿಂಗಳಿನಲ್ಲಿ ಈವರೆಗೆ ಮಳೆಯಾಗಬೇಕಿತ್ತು. ಕಾಫಿ ತೋಟಗಳಿಗೆ ಈಗ ಮಳೆಯಾಗದೇ ಹೋದರೆ ಕಾಫಿ ಹೂ ಅರಳುವುದಕ್ಕೆ ಸಮಸ್ಯೆಯಾಗಲಿದೆ. ಬಿಸಿಲಿನ ತಾಪವೂ ಏರುತ್ತಿದ್ದು, ಸದ್ಯ ಮಳೆ ಬೇಕಿದೆ’ ಎಂದು ಹೇಳಿದರು.

ಏ. 5ರವರೆಗೂ ಮಳೆ ನಿರೀಕ್ಷೆ ಇಲ್ಲ: ‘ಈ ತಿಂಗಳಿನಲ್ಲಿ ಮಳೆ ಬೀಳಬೇಕಿತ್ತು. ಆದರೆ, ನಿರೀಕ್ಷೆ ಫಲಿಸಲಿಲ್ಲ. ಏ. 5ರವರೆಗೂ ಮಳೆಯ ಮುನ್ಸೂಚನೆ ಇಲ್ಲ’ ಎಂದು ಗೋಣಿಕೊಪ್ಪಲಿನ ಕೃಷಿ ವಿಜ್ಞಾನ ಕೇಂದ್ರದ ಕೃಷಿ ಹವಾಮಾನ ವಿಷಯ ತಜ್ಞ ಹರೀಶ್ ಮಾಹಿತಿ ನೀಡಿದರು.

ಕೊಡಗು ಜಿಲ್ಲೆಯ ಹಾರಂಗಿ ಜಲಾಶಯದಲ್ಲಿ ಕಳೆದ ವರ್ಷ ಮಾರ್ಚ್ 27ರಂದು 2,848.71 ಅಡಿಗಳಷ್ಟು ನೀರಿತ್ತು. ಈ ಬಾರಿ 2,822.80 ಅಡಿಗಳಷ್ಟು ನೀರಿದೆ. ನದಿ ಮೂಲಗಳೂ ಬತ್ತುತ್ತಿವೆ.

‘ಮಾರ್ಚ್ ತಿಂಗಳಿನಲ್ಲಿ ಶೇ 88ರಷ್ಟು ಮಳೆ ಕೊರತೆಯಾಗಿದೆ’ ಎಂದು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಮೂಲಗಳು ತಿಳಿಸಿವೆ.

ಮುಖ್ಯಾಂಶಗಳು

- ಕೊಡಗಿನಲ್ಲಿ ಹೆಚ್ಚುತ್ತಿದೆ ಉಷ್ಣಾಂಶ
- ಏಪ್ರಿಲ್ 5ರವರೆಗೂ ಮಳೆ ನಿರೀಕ್ಷೆ ಇಲ್ಲ ಎಂದ ಹವಾಮಾನ ಇಲಾಖೆ

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹14500
ಎಸಿ	₹7700
ಆರ್‌ಪಿ	₹10250
ಆರ್‌ಸಿ	₹5160

ಮುಂಬೈ ಧಾರಣೆ

ಶೇಂಗಾ

27-3-2023

ಜಾವಾ 70/80(ಹೊಸ)	11650-11700
ಜಾವಾ 80/90(ಹೊಸ)	11050-11100
ದಪ್ಪ ಮಧ್ಯಪ್ರದೇಶ(ಹೊಸ)	11000-11100
ದಪ್ಪ ಗುಜರಾತ್(ಹೊಸ)	11900-12000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1700 (1700)
ಒಂದು ವಾರದ ಡೆಲಿವರಿ	1695 (1695)
ಸೋಯಾ ಕಚ್ಚಾ	940 (927)
ಪಾಮ್ ವಾರದ ಡೆಲಿವರಿ	930 (927)
ಸೂರ್ಯಕಾಂತಿ ಎಣ್ಣೆ ಕಚ್ಚಾ	910 (910)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

58,700 (59,100)

ಬೆಳ್ಳಿ ಕೆ.ಜಿ 69,400 (69,700)

ಆವರಣದಲ್ಲಿ ಶನಿವಾರದ ಧಾರಣೆ

‘ಹೆಚ್ಚಿನ ಮೊತ್ತದ ಕಾರ್ಪೊರೇಟ್ ಸಾಲದ ಮೇಲೆ ನಿಗಾಕ್ಕೆ ಸೂಚನೆ’

ಮುಂಬೈ (ರಾಯಿಟರ್ಸ್): ಕಾರ್ಪೊರೇಟ್ ವಲಯಕ್ಕೆ ಹೆಚ್ಚಿನ ಮೊತ್ತವನ್ನು ಸಾಲವಾಗಿ ನೀಡಿರುವ ಖಾತೆಗಳ ಮೇಲೆ ನಿಗಾ ಇಡುವಂತೆ ಕೇಂದ್ರ ಸರ್ಕಾರವು ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಿಗೆ ಸೂಚನೆ ನೀಡಿದೆ ಎಂದು ಬ್ಯಾಂಕಿಂಗ್ ಮೂಲಗಳು ಹೇಳಿವೆ.

ಕಾರ್ಪೊರೇಟ್ ವಲಯದ ಸಾಲದ ಖಾತೆಗಳ ಮರುಪಾವತಿ ಸಾಮರ್ಥ್ಯದ ಕುರಿತು ಮೌಲ್ಯಮಾಪನ ಪ್ರಕ್ರಿಯೆಯನ್ನು ಇನ್ನಷ್ಟು ಬಿಗಿಗೊಳಿಸುವುದು ಹೆಚ್ಚು ಸೂಕ್ತ ಎಂದು ಕೂಡ ಸರ್ಕಾರವು ಬ್ಯಾಂಕ್‌ಗಳಿಗೆ ಹೇಳಿದೆ.

ಸಾಲದ ಮೇಲಿನ ಬಡ್ಡಿ ದರ ಹೆಚ್ಚಾಗುತ್ತಿರುವ ಬೆನ್ನಲ್ಲೇ ವಹಿವಾಟಿನ ಮೇಲೆ ಆಗುವ ಪರಿಣಾಮಗಳು ಮತ್ತು ನಗದು ಸಾಮರ್ಥ್ಯ ಕಾಯ್ದುಕೊಳ್ಳುವ ಕುರಿತು ಮೇಲ್ವಿಚಾರಣೆ ನಡೆಸುವಂತೆಯೂ ಕೇಂದ್ರ ಸರ್ಕಾರವು ಬ್ಯಾಂಕ್‌ಗಳಿಗೆ ಸಲಹೆ ನೀಡಿದೆ ಎಂದು ಮೂಲಗಳು ತಿಳಿಸಿವೆ.

ಅಮೆರಿಕದಲ್ಲಿ ಕೆಲವು ಬ್ಯಾಂಕ್‌ಗಳು ದಿವಾಳಿ ಆಗಿರುವುದು ಜಾಗತಿಕ ಮಟ್ಟದಲ್ಲಿ ಬ್ಯಾಂಕ್‌ಗಳ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಶನಿವಾರವಷ್ಟೇ ಬ್ಯಾಂಕ್‌ಗಳ ಮುಖ್ಯಸ್ಥರೊಂದಿಗೆ ಮಾತುಕತೆ ನಡೆಸಿದ್ದು, ಅಲ್ಪಾವಧಿ ಮತ್ತು ದೀರ್ಘಾವಧಿಗೆ ಎದುರಾಗುವ ಜಾಗತಿಕ ಆರ್ಥಿಕ ಬಿಕ್ಕಟ್ಟನ್ನು ಎದುರಿಸುವ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ಕುರಿತು ಚರ್ಚಿಸಿದ್ದಾರೆ.

ಚಿನ್ನದ ದರ ₹ 640, ಬೆಳ್ಳಿ ₹700 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರ ಚಿನ್ನದ ದರ 10 ಗ್ರಾಂಗೆ ₹ 640ರಷ್ಟು ಇಳಿಕೆ ಕಂಡು ₹ 59,220ರಂತೆ ಮಾರಾಟವಾಯಿತು.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರ ಇಳಿಕೆ ಕಂಡಿರುವುದೇ ಇದಕ್ಕೆ ಕಾರಣ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ಹೇಳಿದೆ.



ಬೆಳ್ಳಿ ಧಾರಣೆ ಕೆ.ಜಿಗೆ ₹ 700ರಷ್ಟು ಕಡಿಮೆ ಆಗಿ ₹ 70,140ರಂತೆ ಮಾರಾಟ ಆಯಿತು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಒಂದು ಔನ್ಸ್‌ಗೆ (28.34 ಗ್ರಾಂ) 1,970 ಡಾಲರ್ ಮತ್ತು ಬೆಳ್ಳಿ ಧಾರಣೆ ಒಂದು ಔನ್ಸ್‌ಗೆ 23.10 ಡಾಲರ್‌ನಂತೆ ಮಾರಾಟ ಆಗಿದೆ.

2022ರಲ್ಲಿ ಶೇ 26ಕ್ಕೆ ಇಳಿಕೆ; ಆಸ್ತಿ ಸಲಹಾ ಸಂಸ್ಥೆ ಅನರಾಕ್ ವರದಿ

ಕೈಗೆಟಕುವ ಮನೆ: ತಗ್ಗಿದ ಮಾರಾಟ

• ವಿಜಯ್ ಜೋಷಿ

ಬೆಂಗಳೂರು: ಕೋವಿಡ್‌ಗೂ ಮೊದಲಿನ ಸಂದರ್ಭ ಹಾಗೂ ಕೋವಿಡ್ ನಂತರದ ಸಂದರ್ಭಕ್ಕೆ ಹೋಲಿಸಿದರೆ, ದೇಶದ ಏಳು ಪ್ರಮುಖ ನಗರಗಳಲ್ಲಿ ಕೈಗೆಟಕುವ ದರದ ಮನೆಗಳ ಮಾರಾಟ ಪ್ರಮಾಣದಲ್ಲಿ ಭಾರಿ ಇಳಿಕೆ ದಾಖಲಾಗಿದೆ.

2019ರಲ್ಲಿ ದೇಶದ ಏಳು ಪ್ರಮುಖ ನಗರಗಳಲ್ಲಿ ಮಾರಾಟವಾದ 2.61 ಲಕ್ಷ ಮನೆಗಳ ಪೈಕಿ ಕೈಗೆಟಕುವ ದರ ಮನೆಗಳ ಪ್ರಮಾಣವು ಶೇಕಡ 38ರಷ್ಟು ಆಗಿತ್ತು. ಆದರೆ 2022ರಲ್ಲಿ ಮಾರಾಟವಾದ ಒಟ್ಟು 3.64 ಲಕ್ಷ ಮನೆಗಳ ಪೈಕಿ ಕೈಗೆಟಕುವ ದರದ ಮನೆಗಳ ಪ್ರಮಾಣವು ಶೇ 26ಕ್ಕೆ ಇಳಿಕೆ ಆಗಿದೆ. ಆಸ್ತಿ ಸಲಹಾ ಸಂಸ್ಥೆ ಅನರಾಕ್ ಸಿದ್ಧಪಡಿಸಿರುವ ವರದಿಯಲ್ಲಿ ಈ ಅಂಕಿ–ಅಂಶ ಇದೆ.

ಕೈಗೆಟಕುವ ದರದ ಮನೆಗಳನ್ನು ಖರೀದಿಸುವ ವರ್ಗವು ಕೋವಿಡ್ ಸಾಂಕ್ರಾಮಿಕದ ಪರಿಣಾಮವಾಗಿ ತೀವ್ರ ತೊಂದರೆಗೆ ಸಿಲುಕಿದೆ. ಈ ವರ್ಗದ ಜನರು ಮನೆ ಖರೀದಿಸುವುದನ್ನು ಮುಂದೂಡಿ, ಬಾಡಿಗೆ ಮನೆಯಲ್ಲಿ ವಾಸಿಸುವುದನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ ಎಂದು ವರದಿ ಹೇಳಿದೆ.

₹ 40 ಲಕ್ಷ ಅಥವಾ ಅದಕ್ಕಿಂತ ಕಡಿಮೆ ಬೆಲೆಯ ಮನೆಗಳನ್ನು ‘ಕೈಗೆಟಕುವ ದರದ ಮನೆಗಳು’ ಎಂದು ವ್ಯಾಖ್ಯಾನಿಸಲಾಗಿದೆ.

ಅಗತ್ಯ ವಸ್ತುಗಳಾದ ಸಿಮೆಂಟ್, ಉಕ್ಕು ಬೆಲೆ ಹೆಚ್ಚಳ ಮತ್ತು ಕಾರ್ಮಿಕರ ಕೂಲಿ ಏರಿಕೆಯ ಪರಿಣಾಮವಾಗಿ ಡೆವಲಪರ್‌ಗಳಿಗೆ ಕೈಗೆಟಕುವ ದರದ ಮನೆಗಳ ಹೊಸ ಯೋಜನೆ ಆರಂಭಿಸುವುದು ಕಷ್ಟವಾಗುತ್ತಿದೆ.

ಮಧ್ಯಮ ಮತ್ತು ಪ್ರೀಮಿಯಂ ವರ್ಗದ ಮನೆಗಳಿಗೆ (₹ 40 ಲಕ್ಷದಿಂದ ₹ 1.50 ಕೋಟಿವರೆಗಿನವು) ಬೇಡಿಕೆ ಹೆಚ್ಚಿದೆ. ಈ ವರ್ಗದ ಮನೆಗಳಿಗೆ ಹೆಚ್ಚು ಬೇಡಿಕೆ ಬರುತ್ತಿರುವುದು ಐ.ಟಿ., ಐ.ಟಿ. ಆಧಾರಿತ ಉದ್ಯಮಗಳಲ್ಲಿ, ನವೋದ್ಯಮಗಳಲ್ಲಿ ಕೆಲಸ ಮಾಡುತ್ತಿರುವ ಮಿಲೆನಿಯಲ್‌ಗಳಿಂದ ಎಂದು ಅನರಾಕ್ ಹೇಳಿದೆ.

ಬೇಡಿಕೆ ಕಡಿಮೆ ಆಗುತ್ತಿರುವ ಕಾರಣ ಡೆವಲಪರ್‌ಗಳು ಕೈಗೆಟಕುವ ದರದ ಮನೆಗಳ ಯೋಜನೆ ಆರಂಭಿಸುತ್ತಿರುವುದು ಕೂಡ ಕಡಿಮೆ ಆಗಿದೆ. 2022ರಲ್ಲಿ ಏಳು ನಗರಗಳಲ್ಲಿ ಡೆವಲಪರ್‌ಗಳು 3.58 ಲಕ್ಷ ಮನೆಗಳ ನಿರ್ಮಾಣಕ್ಕೆ ಚಾಲನೆ ನೀಡಿದ್ದಾರೆ. ಇದರಲ್ಲಿ ಕೈಗೆಟಕುವ ದರದ ಮನೆಗಳ ಪ್ರಮಾಣ ಶೇ 20ರಷ್ಟು ಮಾತ್ರ. 2018ರಲ್ಲಿ ಈ ಪ್ರಮಾಣವು ಶೇ 40ರಷ್ಟು ಇತ್ತು.

‘ವ್ಯಾಖ್ಯಾನ ಬದಲಾಗಬೇಕು’: ಮನೆ ಖರೀದಿಸಲು ಬಯಸುವವರು 2–ಬಿಎಚ್‌ಕೆ ಮನೆಗಳನ್ನು ಹೆಚ್ಚಾಗಿ ಬಯಸುತ್ತಾರೆ. ಆದರೆ 2–ಬಿಎಚ್‌ಕೆ ಮನೆಗಳನ್ನು ಕೈಗೆಟಕುವ ದರದಲ್ಲಿ ಕಟ್ಟಲು ಈಗಿನ ಪರಿಸ್ಥಿತಿಯಲ್ಲಿ ಆಗುತ್ತಿಲ್ಲ. ಮನೆ ನಿರ್ಮಾಣಕ್ಕೆ ಅಗತ್ಯವಿರುವ ವಸ್ತುಗಳ ಬೆಲೆಯು ಶೇ 9ರಿಂದ ಶೇ 11ರಷ್ಟು ಹೆಚ್ಚಾಗಿದೆ. ವೆಚ್ಚ ಹೆಚ್ಚಳವನ್ನು ಗಮನದಲ್ಲಿ ಇರಿಸಿಕೊಂಡು, ‘ಕೈಗೆಟಕುವ ದರದ ಮನೆ’ಯ ವ್ಯಾಖ್ಯಾನವನ್ನು ಬದಲಿಸಬೇಕಾಗಿದೆ ಎಂದು ಪ್ರಾವಿಡೆಂಟ್ ಹೌಸಿಂಗ್ ಲಿಮಿಟೆಡ್ ಕಂಪನಿಯ ಸಿಒಒ ಮಲ್ಲಣ್ಣ ಸಾಸಲು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

ಹಣದುಬ್ಬರ ಹೆಚ್ಚಳವನ್ನು ಪರಿಗಣಿಸಿ, ₹ 60 ಲಕ್ಷ ಅಥವಾ ₹ 65 ಲಕ್ಷಕ್ಕಿಂತ ಕಡಿಮೆ ಬೆಲೆಯ ಮನೆಗಳನ್ನೆಲ್ಲ ಕೈಗೆಟಕುವ ದರದ ಮನೆಗಳು ಎಂಬ ವ್ಯಾಖ್ಯಾನದ ಅಡಿ ತರಬೇಕು ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು. ‘ಈ ಮೌಲ್ಯದ ಮನೆಗಳ ಮಾರಾಟವನ್ನು ಪರಿಗಣಿಸಿದರೆ, ಕೈಗೆಟಕುವ ದರದ ಮನೆಗಳ ಮಾರಾಟವು ಕಡಿಮೆ ಆಗಿಲ್ಲ’ ಎಂದು ಮಲ್ಲಣ್ಣ ಹೇಳಿದರು.

ಕೈಗೆಟಕುವ ದರದ ಮನೆಗಳಿಗೆ ಬೇಡಿಕೆಯು ದೊಡ್ಡ ಮಟ್ಟದಲ್ಲಿ ಕುಸಿದಿಲ್ಲ. ಆದರೆ, ತುಸು ಮಟ್ಟಿಗೆ ಕುಸಿದಿರುವುದು ನಿಜ. ಜಮೀನಿಗೆ ಭಾರಿ ಬೆಲೆ, ಅಗತ್ಯ ವಸ್ತುಗಳ ವೆಚ್ಚ ಹಾಗೂ ಕಾರ್ಮಿಕರ ವೇತನ ಹೆಚ್ಚಾಗಿರುವುದು ಈ ವಲಯಕ್ಕೆ ಸಮಸ್ಯೆಯಾಗಿ ಪರಿಣಮಿಸಿದೆ ಎಂದು ಭಾರತೀಯ ಬಿಲ್ಡರ್‌ಗಳ ಒಕ್ಕೂಟದ ವ್ಯವಸ್ಥಾಪನಾ ಸಮಿತಿಯ ಸದಸ್ಯ ಜಿ.ಎಂ. ರವೀಂದ್ರ ತಿಳಿಸಿದರು.

ಮಲ್ಲಣ್ಣ ಸಾಸಲು

ಜಿ.ಎಂ. ರವೀಂದ್ರ

ಏನು ಸಮಸ್ಯೆ?

- ದೊಡ್ಡ ನಗರಗಳಲ್ಲಿ ಜಮೀನಿನ ಬೆಲೆ ಹೆಚ್ಚಾಗಿದೆ. ಇಂತಹ ಜಮೀನಿನಲ್ಲಿ ಕೈಗೆಟಕುವ ದರದ ಮನೆಗಳನ್ನು ನಿರ್ಮಿಸಿ ಮಾರಾಟ ಮಾಡುವುದಕ್ಕಿಂತ, ದುಬಾರಿ ಬೆಲೆಯ ಮನೆ ನಿರ್ಮಿಸಿ ಮಾರಾಟ ಮಾಡುವುದು ಹೆಚ್ಚು ಲಾಭದಾಯಕ.
- ನಗರಗಳ ಹೊರವಲಯದಲ್ಲಿ ಜಮೀನು ಕಡಿಮೆ ಬೆಲೆಗೆ ಸಿಗುತ್ತದೆಯಾದರೂ ಅಲ್ಲಿ ಮೂಲಸೌಕರ್ಯಗಳ ಕೊರತೆ ಇರುತ್ತದೆ. ಮೂಲಸೌಕರ್ಯ ಚೆನ್ನಾಗಿಲ್ಲದ ಕಡೆಗಳಲ್ಲಿ ಕೈಗೆಟಕುವ ದರದ ಮನೆಗಳನ್ನು ನಿರ್ಮಿಸಿದರೆ ಖರೀದಿದಾರರು ಆಸಕ್ತಿ ತೋರುವುದಿಲ್ಲ.
- ಕೈಗೆಟಕುವ ದರದ ಮನೆಗಳನ್ನು ನಿರ್ಮಿಸುವ ಡೆವಲಪರ್‌ಗಳಲ್ಲಿ ಹೆಚ್ಚಿನವರು ಸಣ್ಣ ಪ್ರಮಾಣದವರು. ಅವರಿಗೆ ಸಾಲಕ್ಕೆ ಅಡಮಾನವಾಗಿ ಇರಿಸಲು ಹೆಚ್ಚು ಆಸ್ತಿ ಇರುವುದಿಲ್ಲ. ಹೀಗಾಗಿ ಅವರಿಗೆ ಬಂಡವಾಳ ಸಂಗ್ರಹದ ಸಮಸ್ಯೆ ಇದೆ.
- ಕೈಗೆಟಕುವ ದರದ ಮನೆಗಳ ಮಾರಾಟದಿಂದ ಬರುವ ಲಾಭದ ಪ್ರಮಾಣ ಕಡಿಮೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ		ಗೊರಬಲು	17106-31300	ಬಿಳಿಗೋಟು	24109-30700
ಕೋಕ	12500-25000	ರಾಶಿ	38689-45599	ಚಾಲಿ	33099-35999
ಹೊಸತು	22500-40000	ಸರಕು	45069-77810	ಕೆಂಪುಗೋಟು	28199-32361
ಹಳತು	48000-54500	**ಸಿದ್ದಾಪುರ**		ರಾಶಿ	42108-44599
ಸಾಗರ		ಬಿಳಿಗೋಟು	17699-32699	**ಯಲ್ಲಾಪುರ**	
ಬಿಳಿಗೋಟು	25300-30313	ಚಾಲಿ	33999-35599	ಬಿಳಿಗೋಟು	25250-32919
ಚಾಲಿ	32809-36500	ಕೋಕ	10300-31599	ಚಾಲಿ	33250-36460
ಕೋಕ	14699-27189	ಹೊಸಚಾಲಿ	30119-34899	ಕೋಕ	14742-28099
ಕೆಂಪುಗೋಟು	22989-34519	ಕೆಂಪುಗೋಟು	16100-34269	ಕೆಂಪುಗೋಟು	26899-33661
ರಾಶಿ	37199-45599	ರಾಶಿ	40099-46789	ರಾಶಿ	40219-48439
ಸಿಪ್ಪೆಗೋಟು	6490-18409	ತಟ್ಟಿಬೆಟ್ಟೆ	35299-42600	ತಟ್ಟಿಬೆಟ್ಟೆ	37290-43419
ಶಿವಮೊಗ್ಗ		**ಶಿರಸಿ**			
ಬೆಟ್ಟೆ	49540-52169	ಬೆಟ್ಟೆ	35199-41999		

ಕಾನೂನುಬಾಹಿರ ಕೃತ್ಯ ತಡೆಗೆ ಹೊಸ ಕ್ರಿಯಾಯೋಜನೆ

ಲಂಡನ್ (ಪಿಟಿಐ): ಮಾದಕವಸ್ತುಗಳಿಗೆ ಸಂಬಂಧಿಸಿದ ಅಪರಾಧಗಳು ಮತ್ತು ಕ್ರಿಮಿನಲ್ ಗುಂಪುಗಳ ಚಟುವಟಿಕೆಗಳ ತಡೆಗೆ ಬ್ರಿಟಿಷ್ ಪ್ರಧಾನಿ ರಿಷಿ ಸುನಕ್ ಸೋಮವಾರ ಹೊಸ ಕ್ರಿಯಾಯೋಜನೆ ಪ್ರಕಟಿಸಿದರು.

‘ತಕ್ಷಣವೇ ನ್ಯಾಯ’ ಕುರಿತ ಈ ಯೋಜನೆಯಲ್ಲಿ ಸಮಾಜ ವಿರೋಧಿ ಕೃತ್ಯದಲ್ಲಿ ತೊಡಗಿದ್ದವರಿಂದಲೇ ಅವರಿಂದಾದ ಹಾನಿ ದುರಸ್ತಿಗೂ ಕ್ರಮವಹಿಸುವುದು, ಪೊಲೀಸರಿಗೆ ಹೆಚ್ಚುವರಿ ಅಧಿಕಾರ ನೀಡುವುದು ಸೇರಿದೆ.



ರಿಷಿ ಸುನಕ್

ಟೆನಿಸ್: ಪ್ರಧಾನ ಸುತ್ತಿಗೆ ಫೈಸಲ್

ಮೈಸೂರು ಓಪನ್ ಟೂರ್ನಿ: ಮುಖ್ಯಸುತ್ತಿನ ಪಂದ್ಯಗಳು ಇಂದು ಆರಂಭ

ಪ್ರಜಾವಾಣಿ ವಾರ್ತೆ

ಮೈಸೂರು: ಭಾರತದ ಫೈಸಲ್ ಖಮರ್ ಸೋಮವಾರ ಆರಂಭವಾದ ಐಟಿಎಫ್–ಮೈಸೂರು ಓಪನ್ ಟೆನಿಸ್ ಟೂರ್ನಿಯ ಸಿಂಗಲ್ಸ್ ವಿಭಾಗದಲ್ಲಿ ಪ್ರಧಾನ ಸುತ್ತು ಪ್ರವೇಶಿಸಿದರು.

ಚಾಮರಾಜಪುರಂನ ಮೈಸೂರು ಟೆನಿಸ್ ಕ್ಲಬ್ (ಎಂಟಿಸಿ)ನಲ್ಲಿ ನಡೆದ ಅರ್ಹತಾ ಸುತ್ತಿನ ಪಂದ್ಯದಲ್ಲಿ ಫೈಸಲ್ ಅವರು 7–6, 7–6ರಲ್ಲಿ ಭಾರತದವರೇ ಆದ ಲಕ್ಷಿತ್ ಸೂದ್ ವಿರುದ್ಧ ಜಯ ಸಾಧಿಸಿದರು.

ಜಿದ್ದಾಜಿದ್ದಿನಿಂದ ಕೂಡಿದ ಪಂದ್ಯದಲ್ಲಿ ಬಲಿಷ್ಠ ಸರ್ವ್ ಹಾಗೂ ಗ್ರೌಂಡ್‌ಸ್ಟ್ರೋಕ್ ಹೊಡೆತಗಳ ಮೂಲಕ ಎದುರಾಳಿಯನ್ನು ಕಾಡಿದ ಫೈಸಲ್, 2 ಗಂಟೆ 2ನಿಮಿಷದಲ್ಲಿ ಗೆಲುವು ತಮ್ಮದಾಗಿಸಿಕೊಂಡರು. ಮೊದಲ ಸುತ್ತಿನ ಪಂದ್ಯದಲ್ಲಿ ರಿಷಿ ರೆಡ್ಡಿ ವಿರುದ್ಧ ಪೈಪೋಟಿ ನಡೆಸುವರು.

ಮತ್ತೊಂದು ಪಂದ್ಯದಲ್ಲಿ ಫರ್ದೀನ್ ಖಮರ್ ಅವರು 3–7, 7–6, 10–5ರಲ್ಲಿ ಥಾಯ್ಲೆಂಡ್‌ನ ಇಸರೊ ಪ್ರುಚ್ಯಾ ಅವರನ್ನು ಮಣಿಸಿ ಮುಖ್ಯಸುತ್ತಿಗೆ ಪ್ರವೇಶಿಸಿದರು. ಮೊದಲ ಸೆಟ್‌ನಲ್ಲಿ ಸೋತರೂ ಪುಟಿದೆದ್ದ ಫರ್ದೀನ್, 2 ಗಂಟೆ 9 ನಿಮಿಷದಲ್ಲಿ ಗೆಲುವು ಸಾಧಿಸಿದರು.

ದಕ್ಷಿಣ ಕೊರಿಯಾದ ಶಿನ್ ವೂಬಿನ್ 6–2, 6–3ರಲ್ಲಿ ಭಾರತದ ಭರತ್ ಕುಮಾರನ್ ಅವರನ್ನು ಮಣಿಸಿದರೆ, ಮಲೇಷ್ಯಾದ ಮಿತ್ಸುಕಿ ವೈಕಾಂಗ್ ಲಿಯಾಂಗ್ 6-4, 4-6, 10-7ರಲ್ಲಿ ಭಾರತದ ಅಭಿನವ್ ಷಣ್ಮುಗಂ ವಿರುದ್ಧ ಗೆದ್ದರು. 3 ಗಂಟೆ 53 ನಿಮಿಷ ಕಾಡಿದರು. ಭಾರತದ ರಣಜಿತ್ ಮುರುಗೇಶನ್, ಇಶಾಖ್ ಇಕ್ಬಾಲ್ ಅವರು ಕ್ರಮವಾಗಿ ಬೆಲ್ಜಿಯಂನ ರೊಮೈನ್ ಫಾಕನ್ ಮತ್ತು ಭಾರತದ ಸಂದೇಶ್ ದತ್ತಾತ್ರೇಯ ಅವರನ್ನು ಮೊದಲ ಸೆಟ್‌ನಲ್ಲಿಯೇ ಮಣಿಸಿ ಮುಖ್ಯ ಸುತ್ತಿಗೆ ಪ್ರವೇಶಿಸಿದರು.

ಸಿದ್ಧಾರ್ಥ ವಿಶ್ವಕರ್ಮ ಅವರು ದೀಪಕ್ ಅನಂತರಾಮು ವಿರುದ್ಧ 6–1, 6–2ರಲ್ಲಿ ಗೆಲುವು ಸಾಧಿಸಿದರೆ, ವಿಷ್ಣುವರ್ಧನ್ ಅವರು 6–1, 6–1ರಲ್ಲಿ ಯಶ್ ಚೌರಾಸಿಯಾ ಅವರನ್ನು ಮಣಿಸಿದರು. ಮುಖ್ಯಸುತ್ತಿಗೆ 6 ಮಂದಿ ಭಾರತೀಯ ಆಟಗಾರರು ಪ್ರವೇಶ ಪಡೆದರು.

ಮೈಸೂರು ಟೆನಿಸ್ ಕ್ಲಬ್ ಅಂಗಳದಲ್ಲಿ ಸೋಮವಾರ ಆರಂಭವಾದ ಐಟಿಎಫ್–ಮೈಸೂರು ಓಪನ್ ಟೂರ್ನಿಯಲ್ಲಿ ಭಾರತದ ಫೈಸಲ್ ಖಮರ್ ಆಟದ ವೈಖರಿ – ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ಮುಖ್ಯಾಂಶಗಳು

- ಎಂಟು ವರ್ಷಗಳ ಬಳಿಕ ಮೈಸೂರಿನಲ್ಲಿ ನಡೆಯುತ್ತಿರುವ ಟೂರ್ನಿ
- ಗಾಯದ ಕಾರಣ ಹಿಂದೆ ಸರಿದ ರಷ್ಯಾದ ಡಾನ್ಸ್ಕೊಯ್
- ಕಣದಲ್ಲಿ ಅಮೆರಿಕದ ಡಾಲಿ ಬ್ಲೆಂಚ್, ಕಜಕಸ್ತಾನದ ಲೊಮಕಿನ್

ಉದ್ಘಾಟನೆ ಇಂದು: ಎಂಟು ವರ್ಷಗಳ ನಂತರ ನಡೆಯುತ್ತಿರುವ ಐಟಿಎಫ್–ಮೈಸೂರು ಓಪನ್ ಟೂರ್ನಿಯ ಉದ್ಘಾಟನೆ ಮಂಗಳವಾರ ಬೆಳಿಗ್ಗೆ 9ಕ್ಕೆ ನಡೆಯಲಿದೆ. ನಂತರ ನಡೆಯುವ ಮುಖ್ಯ ಸುತ್ತಿನ ಪಂದ್ಯಗಳಲ್ಲಿ ಸೂರಜ್ ಪ್ರಬೋದ್, ರಿಷಿ ರೆಡ್ಡಿ, ಸಿದ್ಧಾರ್ಥ ರಾವತ್, ಕರಣ್ ಸಿಂಗ್ ಹಾಗೂ ಸಂದೇಶ್ ಸೇರಿದಂತೆ 8 ಮಂದಿ ಭಾರತೀಯ ಆಟಗಾರರು ಸೆಣಸಲಿದ್ದಾರೆ.

2017ರಲ್ಲಿ ರೋಜರ್ ಫೆಡರರ್ ಅವರನ್ನು ಸೋಲಿಸಿದ್ದ ರಷ್ಯಾದ ಡಾನ್ಸ್ಕೊಯ್ ಗಾಯದ ಸಮಸ್ಯೆಯಿಂದ ಟೂರ್ನಿಯಿಂದ ಹೊರನಡೆದಿದ್ದಾರೆ. ಅಮೆರಿಕದ ಡಾಲಿ ಬ್ಲೆಂಚ್, ಕಜಕಸ್ತಾನದ ಗ್ರಿಗೋರಿ ಲೊಮಕಿನ್ ಕಣದಲ್ಲಿದ್ದಾರೆ. ಸಿಂಗಲ್ಸ್ ಹಾಗೂ ಡಬಲ್ಸ್ ವಿಭಾಗದ ಪಂದ್ಯಗಳು ನಡೆಯಲಿವೆ.

ಪ್ಯಾರಾ ಬ್ಯಾಡ್ಮಿಂಟನ್ ಕರ್ನಾಟಕ ತಂಡಕ್ಕೆ ಒಂಬತ್ತು ಪದಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ತಂಡದವರು ಲಖನೌದಲ್ಲಿ ನಡೆದ 5ನೇ ರಾಷ್ಟ್ರೀಯ ಪ್ಯಾರಾ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಉತ್ತಮ ಪ್ರದರ್ಶನ ನೀಡಿ ಒಂಬತ್ತು ಪದಕಗಳನ್ನು ಗೆದ್ದುಕೊಂಡರು.

ಕೆ.ಎಂ. ಪಲ್ಲವಿ ಅವರು ಒಂದು ಚಿನ್ನ ಸೇರಿದಂತೆ ಮೂರು ಪದಕ ಗೆದ್ದರೆ, ಅಮ್ಮು ಮೋಹನ್ ಮೂರು ಬೆಳ್ಳಿ ಜಯಿಸಿದರು.

ಮಹಿಳೆಯರ ಡಬಲ್ಸ್‌ನಲ್ಲಿ ಪಲ್ಲವಿ ಮತ್ತು ಕೇರಳದ ಅಲ್ಫಿಯಾ ಜೇಮ್ಸ್ ಚಿನ್ನ ಗೆದ್ದುಕೊಂಡಿತು. ಫೈನಲ್‌ನಲ್ಲಿ 21–19, 21–18 ರಲ್ಲಿ ಕರ್ನಾಟಕದ ಅಮ್ಮು ಮೋಹನ್ ಮತ್ತು ಆಂಧ್ರ ಪ್ರದೇಶದ ರೂಪಾ ದೇವಿ ವಿರುದ್ಧ ಜಯಿಸಿತು. ಮಹಿಳೆಯರ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಪಲ್ಲವಿ 7–21, 8–21 ರಲ್ಲಿ ಆಂಧ್ರಪ್ರದೇಶದ ರೂಪಾ ಎದುರು ಸೋತು ಬೆಳ್ಳಿ ಪಡೆದರು.

ಪುರುಷರ ಸಿಂಗಲ್ಸ್‌ನಲ್ಲಿ ಮಂಜುನಾಥ್ ಚಿಕ್ಕಯ್ಯ ಕಂಚು ಗೆದ್ದರು. ಅವರು ಸೆಮಿಫೈನಲ್‌ನಲ್ಲಿ 8–21, 8–21 ರಲ್ಲಿ ಉತ್ತರ ಪ್ರದೇಶದ ಅಬು ಹುಬೈದಾ ಎದುರು ಪರಾಭವಗೊಂಡರು.

ಪರೀಕ್ಷಿತ್ ಪ್ರಸಾದ್ ಅವರು ಸೆಮಿಫೈನಲ್‌ನಲ್ಲಿ 14–21, 18–21 ರಲ್ಲಿ ಶಿವಂ ಯಾದವ್ ಕೈಯಲ್ಲಿ ಸೋತು ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಪುರುಷರ ಡಬಲ್ಸ್‌ನಲ್ಲಿ ಉತ್ತರ ಪ್ರದೇಶದ ರಾಹುಲ್ ಕುಮಾರ್ ಜತೆ ಆಡಿದ ಸುಮಿತ್ ಕುಮಾರ್ ಅವರು ಕಂಚು ಪಡೆದುಕೊಂಡರು.

ಕೆಕೆಆರ್‌ಗೆ ನಿತೀಶ್ ರಾಣಾ ನಾಯಕತ್ವ

ಕೋಲ್ಕತ್ತ (ಪಿಟಿಐ): ಎಡಗೈ ಬ್ಯಾಟರ್ ನಿತೀಶ್ ರಾಣಾ ಅವರನ್ನು ಕೋಲ್ಕತ್ತ ನೈಟ್ ರೈಡರ್ಸ್ ತಂಡದ ನಾಯಕರನ್ನಾಗಿ ಸೋಮವಾರ ನೇಮಕ ಮಾಡಲಾಗಿದೆ.

ಈ ಮೊದಲು ನಾಯಕರಾಗಿದ್ದ ಶ್ರೇಯಸ್ ಅಯ್ಯರ್ ಬೆನ್ನಿನ ಶಸ್ತ್ರಚಿಕಿತ್ಸೆಗೊಳಗಾಗಿದ್ದಾರೆ. ಆದ್ದರಿಂದ ಅವರು ಐಪಿಎಲ್ ಟೂರ್ನಿಯಲ್ಲಿ ಆಡುತ್ತಿಲ್ಲ. ಆದ್ದರಿಂದ ನಿತೀಶ್ ಅವರನ್ನು ನೇಮಕ ಮಾಡಲಾಗಿದೆ.

‘2018ರಿಂದ ಕೆಕೆಆರ್ ತಂಡದಲ್ಲಿರುವ ನಿತೀಶ್ ಹಲವು ಮಹತ್ವದ ಇನಿಂಗ್ಸ್‌ಗಳನ್ನು ಆಡಿದ್ದಾರೆ. ಅವರು ಮತ್ತು ಮುಖ್ಯ ಕೋಚ್ ಚಂದ್ರಕಾಂತ್ ಪಂಡಿತ್ ಅವರ ಮಾರ್ಗದರ್ಶನದಲ್ಲಿ ತಂಡವು ಉತ್ತಮ ಸಾಧನೆ ಮಾಡುವ ಭರವಸೆ ಇದೆ’ ಎಂದು ಕೆಕೆಆರ್ ಹೇಳಿಕೆಯಲ್ಲಿ ತಿಳಿಸಿದೆ.

ರಾಣಾ ಕೆಕೆಆರ್ ಪರವಾಗಿ 74 ಪಂದ್ಯಗಳನ್ನು ಆಡಿದ್ದಾರೆ. 1744 ರನ್ ಗಳಿಸಿದ್ದಾರೆ. ಈಚೆಗೆ ನಡೆದಿದ್ದ ಸೈಯದ್ ಮುಷ್ತಾಕ್ ಅಲಿ ಟಿ20 ಟೂರ್ನಿಯಲ್ಲಿ ನಿತೀಶ್ ದೆಹಲಿ ತಂಡವನ್ನು ಮುನ್ನಡೆಸಿದ್ದರು.

ನಿತೀಶ್ ರಾಣಾ

ಟಿ20 ಕ್ರಿಕೆಟ್: ಅಫ್ಗಾನಿಸ್ತಾನ ಸಾಧನೆ

ಶಾರ್ಜಾ (ಎಪಿ): ಅಫ್ಗಾನಿಸ್ತಾನ ತಂಡದವರು ಎರಡನೇ ಟಿ20 ಕ್ರಿಕೆಟ್ ಪಂದ್ಯದಲ್ಲಿ ಪಾಕಿಸ್ತಾನ ತಂಡವನ್ನು ಏಳು ವಿಕೆಟ್‌ಗಳಿಂದ ಮಣಿಸಿ ಸ್ಮರಣೀಯ ಸಾಧನೆ ಮಾಡಿದೆ.

ಈ ಗೆಲುವಿನ ಮೂಲಕ ಮೂರು ಪಂದ್ಯಗಳ ಸರಣಿಯಲ್ಲಿ 2–0 ರಲ್ಲಿ ಮುನ್ನಡೆ ಪಡೆದಿದೆ. ಅಫ್ಗಾನಿಸ್ತಾನ ತಂಡ, ಐಸಿಸಿ ರ‍್ಯಾಂಕಿಂಗ್ ಪಟ್ಟಿಯಲ್ಲಿ ಅಗ್ರ ಆರು ಸ್ಥಾನಗಳ ಒಳಗಿನ ತಂಡದ ವಿರುದ್ಧ ಸರಣಿ ಗೆದ್ದದ್ದು ಇದೇ ಮೊದಲು. ರಶೀದ್ ಖಾನ್ ನೇತೃತ್ವದ ತಂಡ ಮೊದಲ ಟಿ20 ಪಂದ್ಯವನ್ನು ಆರು ವಿಕೆಟ್‌ಗಳಿಂದ ಜಯಿಸಿತ್ತು.

ಭಾನುವಾರ ರಾತ್ರಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಪಾಕಿಸ್ತಾನ ನಿಗದಿತ ಓವರ್‌ಗಳಲ್ಲಿ 6 ವಿಕೆಟ್‌ಳಿಗೆ 130 ರನ್ ಗಳಿಸಿತು. ಇಮಾದ್ ವಸೀಂ (ಔಟಾಗದೆ 64, 57 ಎ.) ಮಾತ್ರ ಉತ್ತಮವಾಗಿ ಆಡಿದರು.

ಸಾಧಾರಣ ಗುರಿ ಬೆನ್ನಟ್ಟಿದ ಅಫ್ಗಾನಿಸ್ತಾನ ಮೂರು ವಿಕೆಟ್ ಕಳೆದುಕೊಂಡು 133 ರನ್ ಗಳಿಸಿ ಗೆದ್ದಿತು. ರಹ್ಮಾನುಲ್ಲಾ ಗುರ್ಬಾಜ್ (44 ರನ್, 49 ಎ) ಮತ್ತು ಇಬ್ರಾಹಿಂ ಜದ್ರಾನ್ (38 ರನ್, 40 ಎ) ಗೆಲುವಿನ ಹಾದಿ ಸುಗಮಗೊಳಿಸಿದರು.

ಸಂಕ್ಷಿಪ್ತ ಸ್ಕೋರ್: ಪಾಕಿಸ್ತಾನ 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 130 (ಇಮಾದ್ ವಸೀಂ ಔಟಾಗದೆ 64, ಶಾದಾಬ್ ಖಾನ್ 32, ಫಜಲ್‌ಹಕ್ ಫರೂಕಿ 19ಕ್ಕೆ 2) ಅಫ್ಗಾನಿಸ್ತಾನ 19.5 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 133 (ರಹ್ಮಾನುಲ್ಲಾ ಗುರ್ಬಾಜ್ 44, ಇಬ್ರಾಹಿಂ ಜದ್ರಾನ್ 38, ನಜೀಬುಲ್ಲಾ ಜದ್ರಾನ್ ಔಟಾಗದೆ 23, ಮೊಹಮ್ಮದ್ ನಬಿ ಔಟಾಗದೆ 14) ಫಲಿತಾಂಶ: ಅಫ್ಗಾನಿಸ್ತಾನಕ್ಕೆ 7 ವಿಕೆಟ್ ಗೆಲುವು

ರಹ್ಮಾನುಲ್ಲಾ ಗುರ್ಬಾಜ್

Honda Motorcycle & Scooter India Pvt. Ltd., Registered Office: Plot No. 1, Sector - 03, IMT Manesar, Distt. Gurugram, (Haryana) – 122050, India; **Website:** www.honda2wheelersindia.com; **Customer Care:** customercare@honda2wheelersindia.com

*ಹಣಕಾಸು ಸ್ಕೀಮ್ ಕೊಡುಗೆಗಳು ಆಯ್ದ ಆದ್ಯತೆಯ ಹಣಕಾಸು ಪಾಲುದಾರರ ಮೂಲಕ ಅವರ ಏಕಪಕ್ಷೀಯ ವಿವೇಚನೆಗೆ ಒಳಪಟ್ಟು ಗ್ರಾಹಕರ ಆಯ್ದ ಪ್ರೊಫೈಲ್ಗಳಿಗೆ ಆಯ್ದ ಮಾಡೆಲ್ಗಳ ಮೇಲೆ ಲಭ್ಯವಿದೆ ಮತ್ತು ಹಣಕಾಸು ಕಂಪನಿ ನೀತಿಗೆ ಒಳಪಟ್ಟಿರುತ್ತವೆ. ಹಣಕಾಸು ಸ್ಕೀಮ್‌ಗಳು ಮಾರ್ಚ್ 31, 2023ರ ವರೆಗೆ ಮಾತ್ರ ಆಯ್ದ ಡೀಲರ್‌ಶಿಪ್‌ಗಳಲ್ಲಿ ಲಭ್ಯವಿದೆ ಮತ್ತು ಮೊದಲೇ ನೋಟಿಸ್ ನೀಡದೇ ಯಾವುದೇ ಸಮಯದಲ್ಲಿ ಹಿಂಪಡೆಯಬಹುದಾಗಿದೆ. ಯಾವುದೇ ಎರಡು ಕೊಡುಗೆಗಳನ್ನು ಸೇರಿಸಲಾಗದು. ಚಿತ್ರದಲ್ಲಿ ಕಾಣಿಸುವ ಉತ್ಪನ್ನವು ಮಾರುಕಟ್ಟೆಯಲ್ಲಿ ಲಭ್ಯವಿರುವ ನಿಜವಾದ ಉತ್ಪನ್ನಕ್ಕಿಂತ ವಿಭಿನ್ನವಾಗಿರಬಹುದು. ಉತ್ಪನ್ನದಲ್ಲಿ ತೋರಿಸಿದ ಆಕ್ಸೆಸರಿಗಳು ಪ್ರಮಾಣಿತ ಸಲಕರಣೆಯ ಭಾಗವಿಲ್ಲ.

Honda Exclusive Authorised Dealerships: **Ananda Honda - BOMMANAHALLI:** 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; **Anekal Honda - ANEKAL:** 080-27830234, 9880417779; **City Honda - ST. JOHNS ROAD:** 08025139199, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397; **Haiku Honda - DOMLUR:** 49656565, 9342432156; **INDIRANAGAR:** 9343796289, 080 - 41133737; **Dhruvdesh Honda - MEKHRI CIRCLE:** 40500700, 9972237311; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; **Planet Honda - RAJAJINAGAR:** 08068898888, 9980927735; **PEENYA:** 08068898888, 9980927730; **SUNKADAKATTE:** 08068898888, 9980927728; **BASAWESHWAR NAGAR:** 08068898888, 9980927726; **Raja Honda - KORAMANGALA:** 08067329000,9035310055; **Prime Honda - VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; **Silicon Honda - RV ROAD:** 26574467/68, 9844502222; **BANSHANKARI:** 9844502444, 8722279009; **R.R. NAGAR:** 9964388333, 9071174800; **MONOTYPE:** 7353744400, **JAYANAGAR:** 8722801626; **Saphire Honda - JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; **VFM Honda - KR PURAM:** 49499299, 9071858885, 9071858881; **HENNUR ROAD:** 9108989817, 9108989818; **Tansi Honda - HOODI:** 080-45510000, 7259030091; **MARTHAHALLI:** 080-67166600, 7259030093; **VARTHUR RD:** 8105597877, 9686573013; **GUNJUR:** 9606450642, 9606450641; **Turbo Honda - DODDABALLAPURA:** 7022620885; **NELAMANAGALA:** 080-27722333, 7022008894; **Wings Honda - HOSKOTE:** 7676907272; **MALUR:** 7676155600; **TC PALYA:** 9590815959; **Sri Kausthub Honda - KOLAR:** 9900018515, 9900018516;; **KGF:** 08153-266606, 9900092115; **MULBAGAL:** 9008941044; **SRINIVASAPUR:** 8495956515; **Namma Honda - CHIKKABALLAPUR:** 9606060610, 9900071211; **CHINTAMANI:** 9606060620, 9606060690; **BAGEPALLI:** 9611596112, 9611596110; **Shankar Honda - GOWRIBIDANUR:** 9900007422/33; **SLN Honda - SHIDLAGATTA:** 9986160961; **Century Honda - TUMKUR:** 08162261939, 9620263388; **SIRA:** 9620267057, 9538392767; **GUBBI:** 9620267051; **Shantinath Honda - TUMKUR:** 08162279969, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; **Honey Honda - PAVAGADA:** 9535941215; **Annapoorna Honda - MADHUGIRI:** 9886627429; **Vignesh Honda - TIPTUR:** 9886711161; **TURUVEKERE:** 9448214014; **Sri Srinivasa Honda - CHIKKANAYAKANAHALLI:** 8722522221; **Prestige Honda - RAMNAGARA:** 9606490030; **KANAKAPURA:** 9606036053; **ART Honda - BIDADI:** 9945966771, 9164871007; **Springs Honda - KENGERI:** 9513771114; **Nideesh Honda - DEVANAHALLI:** 9108871999, 9686608579; **VIJAYAPURA:** 9108871999, 9731414444.

For Bulk/Institutional enquiries, please write us at: institutionalsales@honda2wheelersindia.com